ಶುಕ್ರವಾರ, ಡಿಸೆಂಬರ್ 9, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ರತ್ನನ್ ಪ್ರಪಂಚ'ದ ಉಡಾಳ್ ಬಾಬು ರಾವ್ ಇದೀಗ 'ಬಾಂಡ್ ರವಿ'ಯಾಗಿ ತೆರೆಗೆ ಬರುತ್ತಿದ್ದಾನೆ

ಶುಕ್ರವಾರ, ಡಿಸೆಂಬರ್ 9, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 339 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ತೆಂಗಿನ ಮರ ಹತ್ತುವವರಿಗೆ ವಿಮೆ 10
‘ದೇವದಾಸಿ ಮಕ್ಕಳಿಗೆ ತಂದೆ ಹೆಸರು ಕಡ್ಡಾಯವಲ್ಲ’ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,570	18,609	₹55,400 (ಬೆಂಗಳೂರು)	₹67,000 (ಬೆಂಗಳೂರು)	82.38

ಗುಜರಾತ್‌ನಲ್ಲಿ ಕಮಲ, ‘ಕೈ’ಗೆ ಹಿಮಾಚಲ

ಗುಜರಾತ್: ದಾಖಲೆ ಗೆಲುವು, 7ನೇ ಬಾರಿ ಬಿಜೆಪಿಗೆ ಅಧಿಕಾರ ● ಪೈಪೋಟಿ ನೀಡದ ಎಎಪಿ ● ಸಂಪ್ರದಾಯ ಉಳಿಸಿಕೊಂಡ ಕಣಿವೆ ರಾಜ್ಯ

● ಮಂಜುನಾಥ ಹೆಬ್ಬಾರ್

ಜನತಂತ್ರದ ಹಬ್ಬ 2022

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ತವರು ನೆಲ ಗುಜರಾತ್‌ನಲ್ಲಿ ಎದುರಾದ ಪ್ರತಿಕೂಲ ಸನ್ನಿವೇಶಗಳನ್ನೇ ಅನುಕೂಲಕಾರಿಯಾಗಿ ಪರಿವರ್ತಿಸಿಕೊಂಡ ಕಮಲ ಪಡೆಯು ಕಾಂಗ್ರೆಸ್ ಅನ್ನು ‘ಪಾತಾಳ’ಕ್ಕೆ ತಳ್ಳಿ ಗುರುವಾರ ಪ್ರಚಂಡ ದಿಗ್ವಿಜಯ ಸಾಧಿಸಿದೆ. ಕಣಿವೆ ರಾಜ್ಯ ಹಿಮಾಚಲ ಪ್ರದೇಶದಲ್ಲಿ ಜಯಭೇರಿ ಬಾರಿಸುವ ಮೂಲಕ ಕಾಂಗ್ರೆಸ್ ಮುಯ್ಯಿ ತೀರಿಸಿಕೊಂಡಿದೆ. ಮತ್ತೆರಡು ರಾಜ್ಯಗಳ ಚುಕ್ಕಾಣಿ ಹಿಡಿಯಬೇಕು ಎಂಬ ಆಮ್ ಆದ್ಮಿ ಪಕ್ಷದ (ಎಎಪಿ) ಮಹತ್ವಾಕಾಂಕ್ಷೆಗೆ ಮತದಾರರು ಮಣೆ ಹಾಕಿಲ್ಲ.

‘ನರೇಂದ್ರ ಮೋದಿ ಬ್ರ್ಯಾಂಡ್’ ಅನ್ನು ಬಲವಾಗಿ ನೆಚ್ಚಿಕೊಂಡು ‘ಗುಜರಾತ್ ಮಾದರಿ ಅಭಿವೃದ್ಧಿ’ ಹಾಗೂ ಜಾತಿ ಸಮೀಕರಣಕ್ಕೆ ಒತ್ತು ನೀಡಿ ರಾಷ್ಟ್ರೀಯತೆಯ ಮಂತ್ರ ಜಪಿಸಿದ ಬಿಜೆಪಿಯು ಗುಜರಾತ್‌ನಲ್ಲಿ ಸತತ ಏಳನೇ ಬಾರಿಗೆ ಅಧಿಕಾರದ ಗದ್ದುಗೆಗೆ ಏರಿದೆ. ಈ ಮೂಲಕ ಪಶ್ಚಿಮ ಬಂಗಾಳದಲ್ಲಿನ ಸಿಪಿಎಂ ನೇತೃತ್ವದ ಎಡರಂಗ ಸರ್ಕಾರದ ಸತತ ಏಳು ಚುನಾವಣೆಗಳ ಗೆಲುವಿನ ದಾಖಲೆಯನ್ನು ಸರಿಗಟ್ಟಿದೆ. ಗುಜರಾತ್‌ನಲ್ಲಿ ಮೊದಲ ಬಾರಿಗೆ ಶೇ 50ಕ್ಕಿಂತ ಹೆಚ್ಚು ಮತಗಳನ್ನು ಗಳಿಸಿದ ಹಿರಿಮೆಗೂ ಪಾತ್ರವಾಗಿದೆ. ಅಲ್ಲದೆ, ಕಾಂಗ್ರೆಸ್‌ನ ಮಾಧವಸಿನ್ಹ ಸೋಳಂಕಿ ನೇತೃತ್ವದಲ್ಲಿ ಕಾಂಗ್ರೆಸ್ 37 ವರ್ಷಗಳ ಹಿಂದೆ ಸ್ಥಾಪಿಸಿದ್ದ ಅತ್ಯಧಿಕ ಕ್ಷೇತ್ರಗಳ ಗೆಲುವಿನ ದಾಖಲೆಯನ್ನೂ (1985ರಲ್ಲಿ 149 ಕ್ಷೇತ್ರಗಳಲ್ಲಿ ಜಯ) ಪುಡಿಗಟ್ಟಿದೆ.

ಚುನಾವಣಾ ವೇಳಾಪಟ್ಟಿ ಪ್ರಕಟಕ್ಕೆ ಕೆಲವೇ ದಿನಗಳ ಮೊದಲು ಮೋರ್ಬಿ ತೂಗುಸೇತುವೆ ಕುಸಿದು 135 ಜನರು ಮೃತಪಟ್ಟಿದ್ದರು. ಇದರಿಂದ, ಬಿಜೆಪಿಗೆ ಭಾರಿ ಹಿನ್ನಡೆಯಾಗಲಿದೆ ಎಂಬ ಚರ್ಚೆಗಳು ನಡೆದಿದ್ದವು. ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆ ವ್ಯಾಪಕವಾಗಿತ್ತು. ಪ್ರಶ್ನೆ ಪತ್ರಿಕೆಗಳ ಸೋರಿಕೆಯಿಂದಾಗಿ ಗುಜರಾತ್ ಸರ್ಕಾರ ಮುಜುಗರಕ್ಕೆ ಒಳಗಾಗಿತ್ತು. ನದಿಗಳ ಜೋಡಣೆ ವಿರುದ್ಧ ಆದಿವಾಸಿಗಳು ಭಾರಿ ಹೋರಾಟ ನಡೆಸಿದ್ದರು. ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆಗಳ ಬಗ್ಗೆ ಜನರಲ್ಲಿ ಅಸಹನೆ ವ್ಯಕ್ತವಾಗಿತ್ತು. ಉತ್ತರ ಪ್ರದೇಶದಲ್ಲಿ ಪಕ್ಷ ಮರಳಿ ಗದ್ದುಗೆಗೆ ಏರಿದ ಬೆನ್ನಲ್ಲೇ ತವರು ರಾಜ್ಯದಲ್ಲಿ ಅಖಾಡಕ್ಕೆ ಇಳಿದ ನರೇಂದ್ರ ಮೋದಿ ಅವರು ‘ಅಭಿವೃದ್ಧಿ ಯೋಜನೆ’ಗಳ ಮೂಲಕ ಜನರ ಮನ ಗೆಲ್ಲುವ ಪ್ರಯತ್ನಕ್ಕೆ ಕೈ ಹಾಕಿದರು. ನಾಲ್ಕು ತಿಂಗಳಲ್ಲೇ ₹1.10 ಲಕ್ಷ ಕೋಟಿಯ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದರು.

ಆಡಳಿತ ವಿರೋಧಿ ಅಲೆಯನ್ನು ಮೆಟ್ಟಿ ನಿಲ್ಲಲು 42 ಹಾಲಿ ಶಾಸಕರಿಗೆ ಪಕ್ಷವು ಟಿಕೆಟ್ ನಿರಾಕರಿಸಿತು.

4ನೇ ಪುಟ ನೋಡಿ
ವಿಶೇಷ ಪುಟ 4

ಗುಜರಾತ್‌ನ ಗಾಂಧಿನಗರದಲ್ಲಿರುವ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಚೇರಿಯಲ್ಲಿ ಕಾರ್ಯಕರ್ತೆಯರು ಗುರುವಾರ ಸಂಭ್ರಮಿಸಿದರು (ಎಡಚಿತ್ರ) ಹಿಮಾಚಲ ಪ್ರದೇಶದ ಕುಲ್ಲುವಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು –ಪಿಟಿಐ ಚಿತ್ರಗಳು

ಚುನಾವಣಾ ಫಲಿತಾಂಶ



ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ

ನವದೆಹಲಿ: ಇತ್ತೀಚಿನ ವರ್ಷಗಳಲ್ಲಿ ಲೋಕಸಭೆ ಹಾಗೂ ವಿಧಾನಸಭಾ ಚುನಾವಣೆಗಳಲ್ಲಿ ಸೋಲಿನ ಮುಖವನ್ನೇ ಕಾಣುತ್ತಿದ್ದ ಕಾಂಗ್ರೆಸ್, ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಸಮಾಧಾನದ ನಿಟ್ಟುಸಿರು ಬಿಟ್ಟಿದೆ.

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ, ಮಾಜಿ ಮುಖ್ಯಮಂತ್ರಿ ವೀರಭದ್ರ ಸಿಂಗ್ ಪತ್ನಿ ಪ್ರತಿಭಾ ಸಿಂಗ್ ನೇತೃತ್ವದಲ್ಲಿ ರೂಪಿಸಿದ ತಂತ್ರಗಳು ಫಲ ಕೊಟ್ಟಿವೆ.

4ನೇ ಪುಟ ನೋಡಿ

‘12ಕ್ಕೆ ಭೂಪೇಂದ್ರ ಪ್ರಮಾಣವಚನ’

ಭೂಪೇಂದ್ರ ಪಟೇಲ್ ಮತ್ತೊಮ್ಮೆ ಗುಜರಾತ್ ಮುಖ್ಯಮಂತ್ರಿ ಗಾದಿ ಏರುವುದಕ್ಕೆ ಮುಹೂರ್ತ ನಿಗದಿಯಾಗಿದೆ.

ಇದೇ 12ರಂದು ಪಟೇಲ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಆರ್.ಪಾಟೀಲ ಸುದ್ದಿಗಾರರಿಗೆ ತಿಳಿಸಿದರು.

ಪದಗ್ರಹಣ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಸಹ ಭಾಗವಹಿಸಲಿದ್ದಾರೆ ಎಂದು ಅವರು ಹೇಳಿದರು. ಆದರೆ, ಈ ವಿಷಯವನ್ನು ಪಕ್ಷದ ಕೇಂದ್ರ ನಾಯಕತ್ವವು ಅಧಿಕೃತವಾಗಿ ಘೋಷಿಸಿಲ್ಲ.

ಅನಿಸಿಕೆ

ವಂಶಾಡಳಿತ ಹಾಗೂ ಭ್ರಷ್ಟಾಚಾರದ ವಿರುದ್ಧ ಜನ ಕೋಪಗೊಂಡಿದ್ದಾರೆ ಎಂಬುದನ್ನು ಈ ಚುನಾವಣೆ ಯಲ್ಲಿ ಬಿಜೆಪಿಗೆ ಸಿಕ್ಕಿರುವ ಬೆಂಬಲವು ಪ್ರತಿಬಿಂಬಿಸುತ್ತದೆ. ಹಿಮಾಚಲದಲ್ಲೂ ಬಿಜೆಪಿ ಮತಪ್ರಮಾಣವು ಬಹುಮತ ಪಡೆದ ಪಕ್ಷಕ್ಕಿಂತ ಶೇ 1ರಷ್ಟು ಮಾತ್ರ ಕಡಿಮೆಯಿದೆ

ನರೇಂದ್ರ ಮೋದಿ, ಪ್ರಧಾನಿ

ಹಿಮಾಚಲದಲ್ಲಿ ಪಕ್ಷದ ಗೆಲುವಿಗೆ ಪ್ರಿಯಾಂಕಾ ಗಾಂಧಿ ಅವರ ಪ್ರಚಾರ ಹಾಗೂ ರಾಹುಲ್ ಗಾಂಧಿ ಅವರ ‘ಭಾರತ್ ಜೋಡೊ’ ಯಾತ್ರೆಯೂ ಕಾರಣವಾಗಿವೆ. ಗುಜರಾತ್‌ನ ಸೋಲನ್ನು ಒಪ್ಪಿಕೊಳ್ಳುತ್ತೇವೆ. ನ್ಯೂನತೆಗಳನ್ನು ಸರಿಪಡಿಸಿಕೊಂಡು, ಸಿದ್ಧಾಂತದಲ್ಲಿ ರಾಜಿಯಾಗದೇ ಹೋರಾಟ ಮುಂದುವರಿಸುತ್ತೇವೆ

ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

ಓಲೈಕೆ ರಾಜಕಾರಣ, ಉಚಿತ ಕೊಡುಗೆ, ಪೊಳ್ಳು ಭರವಸೆ ನೀಡಿದವರನ್ನು ಗುಜರಾತ್ ಜನರು ತಿರಸ್ಕರಿಸಿದ್ದಾರೆ. ಜನಕಲ್ಯಾಣ ಮತ್ತು ಅಭಿವೃದ್ಧಿಗಾಗಿ ಕೆಲಸ ಮಾಡಿದ್ದಕ್ಕಾಗಿ ಪ್ರಧಾನಿ ಮೋದಿ ಅವರಿಗೆ ಅಭೂತಪೂರ್ವ ಗೆಲುವು ನೀಡಿದ್ದಾರೆ

ಅಮಿತ್ ಶಾ, ಕೇಂದ್ರ ಗೃಹಸಚಿವ

ನಿರ್ಣಾಯಕ ಗೆಲುವಿಗೆ ಕಾರಣರಾದ ಹಿಮಾಚಲ ಪ್ರದೇಶದ ಜನರಿಗೆ, ಕಠಿಣ ಪರಿಶ್ರಮ ವಹಿಸಿದ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರಿಗೆ ಧನ್ಯವಾದ. ನೀಡಿರುವ ಎಲ್ಲ ಭರವಸೆಗಳನ್ನು ಪಕ್ಷ ಶೀಘ್ರದಲ್ಲಿ ಈಡೇರಿಸಲಿದೆ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಎತ್ತಿನ ಹೊಳೆ ವೆಚ್ಚ ₹23,251 ಕೋಟಿಗೆ ಏರಿಕೆ

ಬೆಂಗಳೂರು: ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ವೆಚ್ಚವನ್ನು ₹23,251.66 ಕೋಟಿಗೆ ಪರಿಷ್ಕರಿಸಿದ್ದು, ಗುರುವಾರ ನಡೆದ ಸಚಿವ ಸಂಪುಟ ಸಭೆ ಪರಿಷ್ಕೃತ ಮೊತ್ತಕ್ಕೆ ಅನುಮೋದನೆ ನೀಡಿದೆ. 5

5 ನಗರಗಳಲ್ಲಿ ಬಹುಮಹಡಿ ವಿದ್ಯಾರ್ಥಿ ನಿಲಯಗಳ ನಿರ್ಮಾಣ

ಬೆಂಗಳೂರು: ಬೆಳಗಾವಿ, ಹುಬ್ಬಳ್ಳಿ, ಕಲಬುರಗಿ, ಮೈಸೂರು ಮತ್ತು ಮಂಗಳೂರಿನಲ್ಲಿ ತಲಾ 1,000 ವಿದ್ಯಾರ್ಥಿಗಳ ಸಾಮರ್ಥ್ಯದ ಬಹುಮಹಡಿ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಇದಕ್ಕಾಗಿ ₹ 412.80 ಕೋಟಿ ಅನುದಾನ ನೀಡಲಾಗುವುದು ಎಂದು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಎಚ್ಚರಿಕೆ

‘ಕೊಲಿಜಿಯಂ ವಿರುದ್ಧ ಟೀಕೆ ಹಿತಕರವಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ನ್ಯಾಯಮೂರ್ತಿಗಳ ನೇಮಕಕ್ಕಾಗಿ ಕೊಲಿಜಿಯಂ ವ್ಯವಸ್ಥೆ ರೂಪಿಸಿರುವುದು ಈ ನೆಲದ ಕಾನೂನು. ಇದರ ವಿರುದ್ಧ ಮಾಡಿರುವ ಟೀಕೆಗಳು ಹಿತಕರವಲ್ಲ’ ಎಂದು ಸುಪ್ರೀಂ ಕೋರ್ಟ್ ಗುರುವಾರ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಅಭಯ್ ಎಸ್. ಓಕಾ, ವಿಕ್ರಮ್‌ನಾಥ್ ಅವರಿದ್ದ ಪೀಠವು, ನ್ಯಾಯಮೂರ್ತಿಗಳ ನೇಮಕ ವಿಳಂಬದ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದೊಂದಿಗೆ ರಚನಾತ್ಮಕವಾದ ಪಾತ್ರ ವಹಿಸುವಂತೆ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರಿಗೆ ಸೂಚಿಸಿತು.

‘ನಮ್ಮ ಸಂವಿಧಾನವು ಕಾನೂನು ಜಾರಿಗೆ ತರುವ ಹಕ್ಕನ್ನು ಸಂಸತ್ತಿಗೆ ನೀಡಿದೆ. ಆದರೆ, ಆ ಕಾನೂನನ್ನು ಪರಿಶೀಲಿಸುವ ಅಧಿಕಾರವನ್ನು ನ್ಯಾಯಾಲಯಕ್ಕೆ ನೀಡಿದೆ. ಕಾನೂನಿನ ನಿರ್ಣಯಕ್ಕೆ ನಮ್ಮ ನ್ಯಾಯಾಲಯವು ಅಂತಿಮ ಮಧ್ಯಸ್ಥಿಕೆಯಾಗಿರಬೇಕು. ನ್ಯಾಯಾಲಯ ನಿರ್ಣಯಿಸುವ ಯಾವುದೇ ಕಾನೂನು ಸಂಬಂಧಿಸಿದ ಎಲ್ಲರಿಗೂ ಅನ್ವಯಿಸುತ್ತದೆ. ಅದನ್ನು ಎಲ್ಲರೂ ಪಾಲಿಸಬೇಕು’ ಎಂದು ಪೀಠ ಒತ್ತಿಹೇಳಿತು. ‘ಕೊಲಿಜಿಯಂ ವ್ಯವಸ್ಥೆಯ ವಿರುದ್ಧ ತಮ್ಮ ದೃಷ್ಟಿಕೋನ ವ್ಯಕ್ತಪಡಿಸುವ ಕೆಲವು ವಿಭಾಗಗಳು ಸಮಾಜದಲ್ಲಿವೆ. ಅದು ಈ ನೆಲದ ಕಾನೂನಿನ ಮುಂದೆ ನಡೆಯುವುದಿಲ್ಲ. ಕೊಲಿಜಿಯಂ ವಿರುದ್ಧದ ಟೀಕೆಗಳು ಸಹನೀಯವಾದುದಲ್ಲ’ ಎಂದು ಪೀಠ ಹೇಳಿತು.

‘ಸಂಸತ್ತು ಮಾಡಿದ ಕಾನೂನುಗಳನ್ನು ಒಪ್ಪದ ವರ್ಗಗಳೂ ಸಮಾಜದಲ್ಲಿವೆ. ಹಾಗೆಂದು, ಆ ಆಧಾರದ ಮೇಲೆ ಅಂತಹ ಕಾನೂನುಗಳನ್ನು ಜಾರಿಗೊಳಿಸುವುದನ್ನು ನ್ಯಾಯಾಲಯ ನಿಲ್ಲಿಸಬೇಕೇ? ಸಮಾಜದಲ್ಲಿ ಪ್ರತಿಯೊಬ್ಬರೂ ಯಾವ ಕಾನೂನು ಪಾಲಿಸಬೇಕು ಮತ್ತು ಯಾವುದನ್ನು ಪಾಲಿಸಬಾರದು ಎಂದು ನಿರ್ಧರಿಸುತ್ತಾ ಹೋದರೆ, ಆ ಕಾನೂನು ಮುರಿದು ಬೀಳುತ್ತದೆ’ ಎಂದು ಪೀಠ ಎಚ್ಚರಿಸಿತು.

ನ್ಯಾಯಮೂರ್ತಿಗಳ ನೇಮಕಕ್ಕೆ ಕೊಲಿಜಿಯಂ ಶಿಫಾರಸು ಮಾಡಿರುವ 19 ಹೆಸರುಗಳನ್ನು ಕೇಂದ್ರ ಸರ್ಕಾರ ಅನುಮೋದಿಸದೇ, ವಿಳಂಬ ನೀತಿ ಅನುಸರಿಸುತ್ತಿರುವುದರ ವಿರುದ್ಧ ಬೆಂಗಳೂರು ವಕೀಲರ ಸಂಘ ಸೇರಿ ಇತರರು ಸಲ್ಲಿಸಿರುವ ನ್ಯಾಯಾಂಗ ನಿಂದನೆಯ ಅರ್ಜಿಗಳ ವಿಚಾರಣೆಯನ್ನು ಪೀಠವು ನಡೆಸಿತು.

ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳ ನೇಮಕ ಮಾಡುವ ಕೊಲಿಜಿಯಂ ವಿರುದ್ಧ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ಪದೇ ಪದೇ ವಾಗ್ದಾಳಿ ನಡೆಸಿದ್ದರು.

ರಾಜ್ಯಸಭೆಯಲ್ಲಿ ಬುಧವಾರ ಉಪ ರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರೂ ತಮ್ಮ ಮೊದಲ ಭಾಷಣದಲ್ಲೇ ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ ಕಾಯ್ದೆಯನ್ನು (ಎನ್‌ಜೆಎಸಿ) ರದ್ದುಗೊಳಿಸಿದ ಸುಪ್ರಿಂ ಕೋರ್ಟ್ ತೀರ್ಪಿನ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದರು. ಅಲ್ಲದೆ, ಇತ್ತೀಚೆಗೆ ಸಿಜೆಐ ಡಿ.ವೈ. ಚಂದ್ರಚೂಡ್ ಅವರ ಸಮ್ಮುಖದಲ್ಲೇ ಕಾರ್ಯಕ್ರಮವೊಂದರಲ್ಲಿ ಎನ್‌ಜೆಎಸಿ ಕಾಯ್ದೆ ರದ್ದಾದ ಮೇಲೆ ಲೋಕಸಭೆಯಲ್ಲಿ ಈ ಬಗ್ಗೆ ಸದ್ದೇ ಕೇಳಲಿಲ್ಲ ಎಂದೂ ಧನ್‌ಕರ್ ಟೀಕಿಸಿದ್ದರು.

‘ಎನ್‌ಜೆಎಸಿ ಮಸೂದೆ ಪುನಃ ಮಂಡಿಸಲ್ಲ’

‘ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗದ (ಎನ್‌ಜೆಎಸಿ) ಮಸೂದೆಯನ್ನು ಪುನಃ ಮಂಡಿಸುವ ಯಾವುದೇ ಪ್ರಸ್ತಾವವಿಲ್ಲ’ ಎಂದು ಕೇಂದ್ರ ಸರ್ಕಾರ ಗುರುವಾರ ರಾಜ್ಯಸಭೆಯಲ್ಲಿ ಸ್ಪಷ್ಟಪಡಿಸಿದೆ.

ಸೂಕ್ತ ಬದಲಾಣೆಯೊಂದಿಗೆ ಎನ್‌ಜೆಎಸಿ ಮಸೂದೆಯನ್ನು ಪುನಃ ಮಂಡಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ಸಿಪಿಎಂನ ಜಾನ್ ಬ್ರಿಟಾಸ್ ಅವರ ಪ್ರಶ್ನೆಗೆ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ‘ಅಂತಹ ಯಾವುದೇ ಪ್ರಸ್ತಾವ ಇಲ್ಲ’ ಎಂದು ಲಿಖಿತವಾಗಿ ಉತ್ತರಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 11

ಗಡಿ ವಿವಾದ: ಬಸ್ ನಿಲ್ದಾಣದಲ್ಲಿ ಪೊಲೀಸ್ ಭದ್ರತೆ

ಮಹಾರಾಷ್ಟ್ರಕ್ಕೆ ಬಸ್ ಸಂಚಾರ ಆರಂಭ

ಪ್ರಜಾವಾಣಿ ವಾರ್ತೆ

ಬೆಳಗಾವಿ: ರಾಜ್ಯದಿಂದ ಮಹಾರಾಷ್ಟ್ರದ ವಿವಿಧ ನಗರ, ಪಟ್ಟಣಗಳಿಗೆ ಗುರುವಾರ ಬಸ್ ಸಂಚಾರ ಆರಂಭಗೊಂಡಿದೆ.

‘ಬೆಳಗಾವಿ ಸೇರಿ ವಿವಿಧ ವಿಭಾಗಗಳ ಬಸ್‌ಗಳು ಇಲ್ಲಿನ ಕೇಂದ್ರೀಯ ಬಸ್ ನಿಲ್ದಾಣದಿಂದ ಕೊಲ್ಹಾಪುರ, ನಾಸಿಕ್, ಮುಂಬೈ, ಪುಣೆ ಮತ್ತಿತರ ನಗರಗಳಿಗೆ ಸಂಚರಿಸುತ್ತಿವೆ. ಕೊಲ್ಹಾಪುರ ನಗರದೊಳಗೆ ಬಸ್‌ಗಳನ್ನು ಬಿಟ್ಟಿಲ್ಲ. ಅಲ್ಲಿನ ಬೈಪಾಸ್‌ವರೆಗಷ್ಟೇ ಹೋಗುತ್ತಿವೆ. ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕರ್ನಾಟಕಕ್ಕೆ ಬಸ್ ಸೇವೆ ಆರಂಭಿಸಿಲ್ಲ’ ಎಂದು ಎನ್‌ಡಬ್ಲ್ಯುಕೆಎಸ್‌ಆರ್‌ಟಿಸಿ ಬೆಳಗಾವಿ ವಿಭಾಗೀಯ ನಿಯಂತ್ರಣಾಧಿಕಾರಿ ಪಿ.ವೈ. ನಾಯಕ ‘ಪ್ರಜಾವಾಣಿ’ಗೆ ತಿಳಿಸಿದರು.

ಗಡಿ ವಿವಾದ ತಾರಕಕ್ಕೇರಿದ ಕಾರಣ, ಬುಧವಾರ ಬೆಳಿಗ್ಗೆಯಿಂದ ಕರ್ನಾಟಕ–ಮಹಾರಾಷ್ಟ್ರ ಮಧ್ಯೆ ಬಸ್ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಆದರೆ, ಬಸ್ ಸಂಚಾರ ಪುನರಾರಂಭವಾದ ಕಾರಣ ಪ್ರಯಾಣಿಕರು ನಿಟ್ಟುಸಿರು ಬಿಟ್ಟಿದ್ದಾರೆ. ಮುನ್ನೆಚ್ಚರಿಕೆ ದೃಷ್ಟಿಯಿಂದ ಬಸ್ ನಿಲ್ದಾಣದಲ್ಲಿ ಪೊಲೀಸ್ ಭದ್ರತೆ ಮುಂದುವರಿಸಲಾಗಿದೆ.

ಗ್ರಾ.ಪಂ. ವಿಸರ್ಜನೆ ಬೆದರಿಕೆ: ಪ್ರತಿರೋಧ

ಬೆಳಗಾವಿಯಿಂದ ಮುಂಬೈಗೆ ಸಂಚರಿಸಿದ ಕೆಎಸ್‌ಆರ್‌ಟಿಸಿ ಬಸ್

ವಿಜಯಪುರ: ‘ಮೂಲಸೌಕರ್ಯ ಕಲ್ಪಿಸದಿದ್ದರೆ ಕರ್ನಾಟಕ ಸೇರುತ್ತೇವೆ’ ಎಂದು ಠರಾವು ಪಾಸು ಮಾಡಿರುವ ಸೋಲಾಪುರ ಜಿಲ್ಲೆ ಅಕ್ಕಲಕೋಟ ತಾಲ್ಲೂಕಿನ 11 ಗ್ರಾಮ ಪಂಚಾಯಿತಿಗಳನ್ನು ವಿಸರ್ಜನೆ ಮಾಡುವುದಾಗಿ, ಗ್ರಾಮ ಪಂಚಾಯಿತಿ ನೌಕರರನ್ನು ಸೇವೆಯಿಂದ ವಜಾ ಮಾಡುವುದಾಗಿ ಮಹಾರಾಷ್ಟ್ರ ಸರ್ಕಾರ ಎಚ್ಚರಿಕೆ ನೀಡಿದೆ.

ಮಹಾರಾಷ್ಟ್ರ ಸರ್ಕಾರದ ಎಚ್ಚರಿಕೆಗೆ ಬಗ್ಗದ ಗಡಿನಾಡ ಕನ್ನಡಿಗರು ಈ ಸಂಬಂಧ ಅಕ್ಕಲಕೋಟ ತಾಲ್ಲೂಕಿನ ತಡವಳದಲ್ಲಿ ಗುರುವಾರ ಸಭೆ ನಡೆಸಿ, ಪ್ರತಿರೋಧ ವ್ಯಕ್ತಪಡಿಸಿದ್ದಾರೆ.

‘ಗ್ರಾಮ ಪಂಚಾಯಿತಿಗಳನ್ನು ವಿಸರ್ಜನೆ ಮಾಡಿದರೂ, ನೌಕರರನ್ನು ಸೇವೆಯಿಂದ ವಜಾ ಮಾಡಿದರೂ ನಮ್ಮ ನಿರ್ಧಾರದಿಂದ ಹಿಂದೆ ಸರಿಯುವ ಪ್ರಶ್ನೆ ಇಲ್ಲ. ಗಲ್ಲು ಶಿಕ್ಷೆ ನೀಡಿದರೂ ಹೆದರುವುದಿಲ್ಲ. ಮೊದಲು ಮೂಲ ಸೌಕರ್ಯ ಕಲ್ಪಿಸಿ. ಅದು ನಮ್ಮ ಹಕ್ಕಾಗಿದೆ’ ಎಂದು ಹೇಳಿದ್ದಾರೆ.

‘2002ರಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ 22 ಗ್ರಾಮಗಳ ಜನರು ಮೂಲ ಸೌಕರ್ಯ ನೀಡಿ ಇಲ್ಲವೇ, ಮಹಾರಾಷ್ಟ್ರಕ್ಕೆ ಸೇರುತ್ತೇವೆ ಎಂದು ನಿರ್ಧರಿಸಿದ್ದರು. ಅಂದಿನ ಕರ್ನಾಟಕ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಸರ್ಕಾರ ₹ 204 ಕೋಟಿ ಅನುದಾನ ನೀಡಿ, ಮೂಲಸೌಕರ್ಯಕ್ಕೆ ಆದ್ಯತೆ ನೀಡಿದ್ದರು. ಅದೇ ಮಾದರಿಯಲ್ಲೇ ಮಹಾರಾಷ್ಟ್ರ ಸರ್ಕಾರ ನಮ್ಮ ಭಾಗದ ಹಳ್ಳಿಗಳಿಗೆ ಮೂಲ ಸೌಕರ್ಯ ಒದಗಿಸಲು ಅಗತ್ಯ ಅನುದಾನ ಒದಗಿಸಬೇಕು’ ಎಂದು ಅಕ್ಕಲಕೋಟ ತಾಲ್ಲೂಕಿನ ಕನ್ನಡಿಗರು ಸಭೆ ನಡೆಸಿ, ಮಹಾರಾಷ್ಟ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಕೇಂದ್ರದ ಮೌನ ಸರಿಯಲ್ಲ: ಪವಾರ್

ಮುಂಬೈ (ಪಿಟಿಐ): ಕರ್ನಾಟಕ – ಮಹಾರಾಷ್ಟ್ರ ನಡುವಣ ಗಡಿ ವಿವಾದ ಉದ್ವಿಗ್ನಗೊಂಡಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಮೂಕಪ್ರೇಕ್ಷಕನಂತೆ ಇರುವುದು ಸರಿಯಲ್ಲ ಎಂದು ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಹೇಳಿದ್ದಾರೆ.

ಭಾಷಾ ಮಾಧ್ಯಮ ಮತ್ತು ಹೋರಾಟವನ್ನು ಹತ್ತಿಕ್ಕಲು ಅಧಿಕಾರ ದುರ್ಬಳಕೆ ಆದಾಗ ಆ ಬಗ್ಗೆ ಪ್ರತಿಕ್ರಿಯಿಸಲೇ ಬೇಕು. ಆದರೆ, ಕೇಂದ್ರ ಈ ವಿಷಯದಲ್ಲಿ ಕುರುಡಾಗಿದೆ ಎಂದರು. ‘ಲೋಕಸಭೆಯಲ್ಲಿ ಬುಧವಾರ ಸುಪ್ರಿಯಾ ಸುಳೆ ಈ ವಿಷಯ ಪ್ರಸ್ತಾಪಿಸಿದಾಗ, ಇದು ಇಲ್ಲಿ ಚರ್ಚಿಸುವ ವಿಷಯವಲ್ಲ ಎಂದು ಸ್ಪೀಕರ್ ಹೇಳಿದ್ದಾರೆ. ಸಂಸತ್ತು ಗಮನಿಸದಿದ್ದರೆ ಇನ್ಯಾರು ಗಮನಿಸಬೇಕು’ ಎಂದು ಪವಾರ್ ಪ್ರಶ್ನಿಸಿದರು.

ರೆಪ್ಕೊ ಬ್ಯಾಂಕ್ ಸಾಲಮೇಳ

ಬೆಂಗಳೂರು: ಕೇಂದ್ರ ಸರ್ಕಾರದ ಉದ್ಯಮವಾದ ರೆಪ್ಕೊ ಬ್ಯಾಂಕ್ ಬನಶಂಕರಿ ಶಾಖೆಯೂ ಡಿ. 5ರಿಂದ ಜನವರಿ 5 ರವರೆಗೆ ಸಾಲಮೇಳ ಆಯೋಜಿಸಿದೆ.

ಮನೆ ನಿರ್ಮಾಣ, ಖರೀದಿ, ನವೀಕರಣ, ವಾಣಿಜ್ಯ ಕಟ್ಟಡ ನಿರ್ಮಾಣ, ವ್ಯಾಪಾರಭಿವೃದ್ಧಿ ಹಾಗೂ ಇತರ ಅವಶ್ಯಕತೆಗಳಿಗೆ ಸ್ಥಿರಾಸ್ತಿಯ ಮೇಲೆ ₹5 ಲಕ್ಷ ಮೇಲ್ಪಟ್ಟ ಅಡಮಾನ ಸಾಲವನ್ನು ಕಡಿಮೆ ಬಡ್ಡಿ ದರದಲ್ಲಿ ನೀಡಲಾಗುತ್ತದೆ. ಸಾಲ ಸಂಸ್ಕರಣಾ ವೆಚ್ಚದಲ್ಲಿ ಶೇ 50ರಷ್ಟು ರಿಯಾಯಿತಿ ದೊರೆಯಲಿದೆ. ಚಿನ್ನಾಭರಣಗಳ ಮೇಲೆ ಪ್ರತಿ ಗ್ರಾಂ ಚಿನ್ನಕ್ಕೆ ₹3,750 ಸಾಲ ನೀಡಲಾಗುವುದು ಎಂದು ಬ್ಯಾಂಕ್ ಪ್ರಕಟಣೆ ತಿಳಿಸಿದೆ.

ಮತದಾರರ ಪಟ್ಟಿ: ಆಕ್ಷೇಪಣೆಗೆ ಅವಧಿ ಮುಕ್ತಾಯ

ಬೆಂಗಳೂರು: ಬಿಬಿಎಂಪಿ ಪ್ರಕಟಿಸಿದ್ದ ಮತದಾರರ ಕರಡು ಪಟ್ಟಿಗೆ ಆಕ್ಷೇಪಣೆ ಸಲ್ಲಿಸುವ ಅವಧಿ ಡಿ.8ರಂದು ಮುಗಿದಿದೆ. 28 ವಿಧಾನಸಭೆ ಕ್ಷೇತ್ರಗಳಲ್ಲಿ ಮನೆಮನೆ ಸಮೀಕ್ಷೆ ಕಾರ್ಯ ಚಾಲ್ತಿಯಲ್ಲಿದೆ ಎಂದು ಬಿಬಿಎಂಪಿ ಚುನಾವಣೆ ವಿಭಾಗದ ಸಹಾಯಕ ಆಯುಕ್ತ ತಿಳಿಸಿದ್ದಾರೆ.

ಚುನಾವಣಾ ಆಯೋಗದ ನಿರ್ದೇಶನದಂತೆ ನಡೆದಿರುವ ಮನೆಮನೆ ಸಮೀಕ್ಷೆ ಕಾರ್ಯ ಶೇ 73.64ರಷ್ಟು ಪ್ರಗತಿ ಸಾಧಿಸಿದೆ. ಎಲ್ಲ ವಲಯದ ಜಂಟಿ ಆಯುಕ್ತರು ಸಭೆ ನಡೆಸಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಕಾರ್ಯಚಟುವಟಿಕೆಗಳ ಮೇಲುಸ್ತುವಾರಿ ವಹಿಸುವಂತೆ ವಿಶೇಷ ಆಯುಕ್ತರು ತಿಳಿಸಿದ್ದಾರೆ.

ಕಾರ್ಯಾಗಾರ

ಬೆಂಗಳೂರು: ಲಲಿತಕಲಾ ಪರಿಷತ್, ದ ಅಕಾಡೆಮಿ ಟ್ರಸ್ಟ್ ಬೆಂಗಳೂರು, ನ್ಯಾಷನಲ್ ಕಾಲೇಜು, ನ್ಯಾಷನಲ್ ಪದವಿ ಪೂರ್ವ ಕಾಲೇಜು ಸಹಯೋಗದಲ್ಲಿ ನಾಟಕ ರಸಗ್ರಹಣ ಕಾರ್ಯಾಗಾರ ಡಿ.9 ಮತ್ತು ಡಿ.23ರಂದು ಜಯನಗರದ ಡಾ.ಎಚ್.ಎನ್.ಕಲಾಕ್ಷೇತ್ರದಲ್ಲಿ ಸಂಜೆ 4.30 ಗಂಟೆಗೆ ನಡೆಯಲಿದೆ.

ಡಿ.9ರಂದು 'ಕ್ಯೂಇಡಿ' ನಾಟಕವನ್ನು ಮೈಸೂರಿನ ಅರಿವು ರಂಗ ಪ್ರಸ್ತುತಪಡಿಸಲಿದೆ. 23ರಂದು 'ಅಬ್ದುಸ್‌ಸಲಾಮ್;ಒಂದು ವಿಚಾರಣೆ' ನಾಟಕ ಪ್ರದರ್ಶನಗೊಳ್ಳಲಿದೆ ಎಂದು ಲಲಿತಕಲಾ ಪರಿಷತ್ ತಿಳಿಸಿದೆ.

ಕೇಂದ್ರ ಸರ್ಕಾರದ ಫೇಮ್–2 ಯೋಜನೆ: ಸಚಿವ ಸಂಪುಟ ಸಭೆ ಒಪ್ಪಿಗೆ

ನಗರಕ್ಕೆ ಇನ್ನೂ 921 ಎಲೆಕ್ಟ್ರಿಕ್ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಫೇಮ್–2 ಯೋಜನೆಯಡಿ ಸಿಇಎಸ್‌ಎಲ್ ಮೂಲಕ ಹೊಸದಾಗಿ 921 ಹವಾ ನಿಯಂತ್ರಣ ರಹಿತ ಎಲೆಕ್ಟ್ರಿಕ್ ಬಸ್‌ಗಳನ್ನು ಬಿಎಂಟಿಸಿ ಕಾರ್ಯಾಚರಣೆ ನಡೆಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಬೆಂಗಳೂರಿಗೆ 921 ಬಸ್‌ಗಳನ್ನು ಕೇಂದ್ರ ಸರ್ಕಾರ ಹಂಚಿಕೆ ಮಾಡಿದ್ದು, ಸಹಾಯಧನವನ್ನೂ ನೀಡಲಿದೆ. ಈ ಬಸ್ಸುಗಳಿಗೆ ರಾಜ್ಯ ಸರ್ಕಾರವೂ ಧನಸಹಾಯ ನೀಡಲಿದೆ. ಇದನ್ನು ಬಳಸಿಕೊಂಡು ಬಿಎಂಟಿಸಿ ಈ ಬಸ್‌ಗಳನ್ನು ಸಿಇಎಸ್‌ಎಲ್ ಮೂಲಕ ಕಾರ್ಯಾಚರಣೆ ನಡೆಸಲಿದೆ ಎಂದು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಒಂದು ಬಸ್ಸಿಗೆ ₹1.50 ಕೋಟಿ ಬೆಲೆ ಇದೆ. ಕೇಂದ್ರ ಸರ್ಕಾರ ಪ್ರತಿಯೊಂದು ಬಸ್ಸಿಗೆ ₹39.08 ಲಕ್ಷ ಸಹಾಯಧನ ನೀಡುತ್ತದೆ. ಈ ಸಹಾಯಧನವನ್ನು ಬಸ್ ಒದಗಿಸುವ ಕಂಪನಿಗೆ ನೀಡಲಾಗುವುದು. ಉಳಿದ ಮೊತ್ತವನ್ನು ಕಂಪನಿಯೇ ಭರಿಸಿ ಬಸ್ ಖರೀದಿ ಮಾಡುತ್ತದೆ. ಬಿಎಂಟಿಸಿ ಪ್ರತಿ ಕಿ.ಮೀಗೆ ₹40 ನಿಗದಿ ಮಾಡಿದ್ದು, ಆ ಮೊತ್ತವನ್ನು ಸಿಇಎಸ್‌ಎಲ್‌ಗೆ ನೀಡಲಾಗುತ್ತದೆ. ಚಾಲಕನನ್ನು ಕಂಪನಿಯೇ ಒದಗಿಸುತ್ತದೆ. ಕಂಡಕ್ಟರ್ ಬಿಎಂಟಿಸಿಯವರೇ ಇರುತ್ತಾರೆ ಎಂದರು.

ಪ್ರಮುಖ ನಿರ್ಣಯಗಳು

- ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬೆಂಗಳೂರು ನಗರದ ಹೊರವಲಯದಲ್ಲಿರುವ ಉಪನಗರಗಳನ್ನು ಸಂಪರ್ಕಿಸುವಂತೆ ಪ್ರಸ್ತಾಪಿಸಿರುವ ಮಧ್ಯಂತರ ವರ್ತುಲ ರಸ್ತೆಯ ಗ್ರೇಡ್ ಸಪರೇಟರ್ ಮರುನಿಗದಿಪಡಿಸಲು ಒಪ್ಪಿಗೆ
- ನಗರದಲ್ಲಿ ಕಳೆದ ಮೇ ಇಂದ ಸೆಪ್ಟೆಂಬರ್‌ವರೆಗೆ ಸುರಿದ ಭಾರಿ ಮಳೆಯಿಂದ ಉಂಟಾದ ಪ್ರವಾಹದ ಹಾನಿಯನ್ನು ತಡೆಗಟ್ಟುವ ಕಾಮಗಾರಿಗಳ ಕ್ರಿಯಾಯೋಜನೆಗೆ ಘಟನೋತ್ತರ ಅನುಮೋದನೆ
- ಚಂದ್ರಾ ಲೇಔಟ್‌ನಲ್ಲಿ ಬಿಬಿಎಂಪಿ ನಿರ್ಮಿಸಿರುವ ಕನಕ ಭವನದ ಸುಮಾರು 2924.89 ಚದರ ಮೀಟರ್ ವಿಸ್ತೀರ್ಣದ ಕಟ್ಟಡವನ್ನು ಕಾಗಿನೆಲೆ ಮಹಾ ಸಂಸ್ಥಾನದ ಕನಕಪೀಠಕ್ಕೆ ಗುತ್ತಿಗೆ ಆಧಾರದ ಮೇಲೆ 30 ವರ್ಷಗಳಿಗೆ ಹಸ್ತಾಂತರಿಸಲು ಒಪ್ಪಿಗೆ.
- ಯಲಹಂಕ ತಾಲ್ಲೂಕು, ತಿಮ್ಮಸಂದ್ರ ಗ್ರಾಮದ ಸರ್ವೆ ನಂಬರ್ 19 ರಲ್ಲಿ 7 ಎಕರೆ ಜಮೀನನ್ನು ಕರ್ನಾಟಕ ರಾಜ್ಯ ಲಾನ್ ಟೆನಿಸ್ ಅಸೋಸಿಯೇಷನ್ ಇವರಿಗೆ ಅಂತರರಾಷ್ಟ್ರೀಯ ದರ್ಜೆ ಟೆನ್ನಿಸ್ ಕ್ರೀಡಾಂಗಣ ನಿರ್ಮಾಣಕ್ಕೆ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ಮಂಜೂರು.

ವೈವಿಧ್ಯತೆಯ ಸಂಯೋಜನೆಯೇ 'ಬ್ರ್ಯಾಂಡ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪರಂಪರೆ, ಕಲೆ, ಸಂಸ್ಕೃತಿ, ಎಂಜಿನಿಯರಿಂಗ್, ಆವಿಷ್ಕಾರ, ಸೃಜನಶೀಲತೆಯನ್ನು ಪರಸ್ಪರ ಸಂಯೋಜಿಸಬೇಕು. ಈ ಸಂಯೋಜನೆಯೇ ಬ್ರ್ಯಾಂಡ್ ಬೆಂಗಳೂರಿನ ವಿನ್ಯಾಸಗಳಾಗಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬೆಂಗಳೂರು ವಿನ್ಯಾಸಕಾರರ ಸಮುದಾಯ, ಜೈನ್ ವಿನ್ಯಾಸ ಶಾಲೆಯ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ 'ಭವಿಷ್ಯದ ವಿನ್ಯಾಸ' ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ನಾವಿನ್ಯತೆಯ ಸಾಧಕರು, ಅವರು ಬಿಂಬಿಸುವ ನಾವಿನ್ಯತಾ ಅನುಭವ ವಸ್ತು ಸಂಗ್ರಹಾಲಯವನ್ನು (ಇನ್ನೋವೇಷನ್ ಎಕ್ಸ್‌ಪೀರಿಯನ್ಸ್ ಮ್ಯೂಸಿಯಂ) ಎನ್‌ಜಿಇಎಫ್ ಕಾರ್ಖಾನೆ ವೃಕ್ಷೋದ್ಯಾನದ ಆವರಣದಲ್ಲಿ ಸ್ಥಾಪಿಸಲಾಗುವುದು. ಎಲ್ಲ ನಾವಿನ್ಯತೆ, ಆವಿಷ್ಕಾರಗಳ ಕುರಿತು ಮಾಹಿತಿ ನೀಡುವ ಅಂತರರಾಷ್ಟ್ರೀಯ ಮ್ಯೂಸಿಯಂ ರೀತಿ ಅಭಿವೃದ್ಧಿಪಡಿಸಲಾಗುವುದು. ಇದರಿಂದ ವಿದೇಶಿ ಪ್ರವಾಸೋದ್ಯಮಕ್ಕೂ ಪ್ರೋತ್ಸಾಹ ದೊರೆಯಲಿದೆ. ಯುವ ಆವಿಷ್ಕಾರ ನಿರತರು, ವಿನ್ಯಾಸಕಾರರಿಗೂ ಸ್ಫೂರ್ತಿಯಾಗಲಿದೆ ಎಂದು ವಿವರಿಸಿದರು.

ಬೆಂಗಳೂರಿನಲ್ಲಿ 400 ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಅಂಡ್ ಡಿ) ಕೇಂದ್ರಗಳಿವೆ. ವಿದೇಶಿ ಬಂಡವಾಳ ಹೂಡಿಕೆಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಅಭಿವೃದ್ಧಿಗೆ ಬಹಳ ಅವಕಾಶಗಳಿವೆ. ಬೆಂಗಳೂರಿನ ಅಭಿವೃದ್ಧಿಗೆ ಕೊಡುಗೆ ನೀಡುವಂತಹ ಸಕಾರಾತ್ಮಕತೆ ಎಲ್ಲರಲ್ಲೂ ಇರಬೇಕು. ಬೆಂಗಳೂರಿನ ಎಂ.ಜಿ. ರಸ್ತೆ, ಕಮರ್ಷಿಯಲ್ ಸ್ಟ್ರೀಟ್, ಬ್ರಿಗೇಡ್ ರಸ್ತೆ, ಮಲ್ಲೇಶ್ವರಂ, ಇಂದಿರಾನಗರದಂತಹ ಪ್ರದೇಶಗಳನ್ನು ಜನರಿಗೆ ಅನುಕೂಲವಾಗುವ, ಪರಂಪರೆ ಉಳಿಸುವ ರೀತಿ ಮರುವಿನ್ಯಾಸಗೊಳಿಸಬೇಕು. ಕೆರೆಗಳ ವಿನ್ಯಾಸ ಬದಲಿಸಬೇಕು ಎಂದು ಕೋರಿದರು.

ಐಟಿ, ಬಿಟಿ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ, ವಿನ್ಯಾಸ ಉದ್ಯಮವು ಬೆಂಗಳೂರು ನಗರದಲ್ಲಿ ಜಾಗತಿಕ ಗುಣಮಟ್ಟದೊಂದಿಗೆ ಬೇರೂರಬೇಕು. ವಿನ್ಯಾಸ ಕಲಿಕೆಯನ್ನು ಎನ್‌ಇಪಿ ಪಠ್ಯಕ್ರಮದ ಭಾಗವಾಗಿಸಲು ಚಿಂತಿಸಲಾಗುತ್ತಿದೆ ಎಂದರು.

ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ, ಸ್ಟಾರ್ಟಪ್ ವಿಷನ್ ಗ್ರೂಪ್ ಮುಖ್ಯಸ್ಥ ಪ್ರಶಾಂತ್ ಪ್ರಕಾಶ್, ಅಂತರರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ಸಮಿತಿ ಮುಖ್ಯಸ್ಥ ಟಾಮ್ ಜೋಸೆಫ್, ಗೀತಾ ನಾಯರ್ ಉಪಸ್ಥಿತರಿದ್ದರು.

ಬೆಂಗಳೂರು ವಿನ್ಯಾಸಕಾರರ ಸಮುದಾಯ ಬುಧವಾರ ಆಯೋಜಿಸಿದ್ದ 'ಭವಿಷ್ಯದ ವಿನ್ಯಾಸ' ಸಮ್ಮೇಳನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಾವಿನ್ಯತೆಯ ಆವಿಷ್ಕಾರಗಳ ಪ್ರದರ್ಶನ ವೀಕ್ಷಿಸಿದರು. ಸಚಿವರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ, ಸಿ.ಸಿ.ಪಾಟೀಲ, ಪ್ರಶಾಂತ್ ಪ್ರಕಾಶ್ ಇದ್ದಾರೆ

ಎಂಟು ನಗರ ಕೇಂದ್ರಗಳ ನಿರ್ಮಾಣ

ಬೆಂಗಳೂರಿನಲ್ಲಿ ಎಂಟು ದಿಕ್ಕಿನಲ್ಲೂ ಎಂಟು ನಗರ ಕೇಂದ್ರಗಳ ನಿರ್ಮಾಣಕ್ಕೆ ರೂಪುರೇಷೆ ಸಿದ್ಧಪಡಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಪ್ರತಿ ನಗರ ಕೇಂದ್ರಗಳಿಗೂ ಪೂರಕವಾಗಿ ರಸ್ತೆ, ರೈಲು ಅಭಿವೃದ್ಧಿಗೊಳಿಸಬಹುದು. ಈ ಯೋಜನೆಗೆ ಬೇಕಾದ ಸಲಹೆಗಳನ್ನು ವಿನ್ಯಾಸಕಾರರು ಒದಗಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಇಂದು

ಕರ್ನಾಟಕ ಮಿದುಳು ಆರೋಗ್ಯ ಕಾರ್ಯಕ್ರಮ: ಉದ್ಘಾಟನೆ: ಡಾ. ಕೆ. ಸುಧಾಕರ್, ಅತಿಥಿಗಳು: ವಿನೋದ್. ಕೆ. ಪೌಲ್, ಅಧ್ಯಕ್ಷತೆ: ಡಾ. ಪ್ರತಿಮಾ ಮೂರ್ತಿ, ಆಯೋಜನೆ ಮತ್ತು ಸ್ಥಳ: ಕನ್ವೆನ್ಷನ್ ಸೆಂಟರ್, ನಿಮ್ಹಾನ್ಸ್, ಬೆಳಿಗ್ಗೆ 10

ಯುವ ಸಂವಾದ: ವಿಕಾಸ್ ಕಿಶೋರ್ ಸುರಳ್ಕರ್, ಆಯೋಜನೆ: ಕರ್ನಾಟಕ ಸ್ಟೇಟ್ ಕಾಂಪಿಟೇಟಿವ್ ಎಕ್ಸಾಮಿನೇಷನ್ ಆಸ್ಪಿರೆಂಟ್ಸ್ ಅಸೋಸಿಯೇಷನ್, ಸ್ಥಳ: ಸಭಾಂಗಣ, ನಗರ ಕೇಂದ್ರಿಯ ಗ್ರಂಥಾಲಯ, ಪಶ್ಚಿಮವಲಯ, ಹಂಪಿನಗರ, ಬೆಳಿಗ್ಗೆ 10

ವಿಜ್ಞಾನ ಮೇಳ–2022: ಉದ್ಘಾಟನೆ: ಸಿ.ಎನ್. ಆರ್. ರಾವ್, ಅತಿಥಿಗಳು: ಆರ್. ಅಶೋಕ, ಎಚ್.ಆರ್. ನಾಗೇಂದ್ರ, ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಸ್ಥಳ: ಸುವರ್ಣ ಮಹೋತ್ಸವ ಕಟ್ಟಡ, ಪಿಇಎಸ್ ವಿಶ್ವವಿದ್ಯಾಲಯ, ಬನಶಂಕರಿ 3ನೇ ಹಂತ, ಬೆಳಿಗ್ಗೆ 10

ಕಲರ್ಸ್ ಆಫ್ ಡೆಕ್ಕನ್

'ಕಲರ್ಸ್ ಆಫ್ ಡೆಕ್ಕನ್' ಚಿತ್ರಗಳ ಪ್ರದರ್ಶನ: ಉದ್ಘಾಟನೆ: ಕೆ.ಎಸ್. ಅಪ್ಪಾಜಯ್ಯ, ಶಶಿಧರ್, ಎಂ.ಎಸ್. ಮೂರ್ತಿ, ಆಯೋಜನೆ: ಆರ್ಟ್2ಡೇ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 11

'ಕುರುಕ್ಷೇತ್ರ' ಪೌರಾಣಿಕ ನಾಟಕ ಪ್ರದರ್ಶನ: ಉದ್ಘಾಟನೆ: ಎಂ.ಎಸ್. ಶ್ರೀನಿವಾಸಯ್ಯ, ಅತಿಥಿಗಳು: ಎಂ.ಎಸ್. ಪ್ರಕಾಶ್, ಎಂ.ವಿ. ನಾಗರಾಜು, ರಾಜು ಪ್ರಸಾದ್, ಆಯೋಜನೆ: ದೃಶ್ಯ ರಂಗ ಕಲಾ ಸಂಘ, ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಮಧ್ಯಾಹ್ನ 2.30

ಪಿಐಎ ಎಂಎಸ್‌ಎಂಇ ಎಕ್ಸಲೆನ್ಸ್ ಅವಾರ್ಡ್–2022: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಡಿ. ವೀರೇಂದ್ರ ಹೆಗ್ಗಡೆ, ಸಿದ್ಧಲಿಂಗ ಸ್ವಾಮೀಜಿ, ಮಧುಸೂದನ್ ಸಾಯಿ, ಅತಿಥಿಗಳು: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಮಂಜುನಾಥ್ ಎಚ್., ಆಯೋಜನೆ: ಪೀಣ್ಯ ಕೈಗಾರಿಕಾ ಸಂಘ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರ ಕಾನ್ಫರೆನ್ಸ್ ಹಾಲ್, ತುಮಕೂರು ರಸ್ತೆ, ಮಧ್ಯಾಹ್ನ 3

ಗೀತ ಸಂಭ್ರಮ: ಅಧ್ಯಕ್ಷತೆ: ನಾರಾಯಣ ಘಟ್ಟ, ಅತಿಥಿಗಳು: ನೀಲಮ್ಮ, ಬಾಬು, ಗೀತ ಗಾಯನ: ರಾಜಶೇಖರ್ ನುಲಿ, ಸವಿತ ಗೊವೆಕರ್, ವಿಸ್ಮಯ ಬಾವಿಕಟ್ಟಿ, ಆಯೋಜನೆ: ಸುರಾಗ ಸಂಗೀತ ಅಕಾಡೆಮಿ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಕೃಷ್ಣ ಸೆಟ್ಟಿ ಅವರ ಚಿತ್ರಗಳ ಪ್ರದರ್ಶನ: ಸ್ಥಳ: ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ಅರಮನೆ ರಸ್ತೆ, ಸಂಜೆ 6

ಜಯರಾಮ್ ರಾಯಪುರ ಅವರ 'ಚಾವುಂಡರಾಯ' ನಾಟಕ ಕೃತಿ ಬಿಡುಗಡೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಕೃತಿ ಬಿಡುಗಡೆ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಹಂ.ಪ. ನಾಗರಾಜಯ್ಯ, ಎಚ್.ಎಸ್. ಶಿವಪ್ರಕಾಶ್, ಆಯೋಜನೆ: ಸಮಾಜಮುಖಿ, ಸ್ಥಳ: ಗಾಂಧಿಭವನ, ಕುಮಾರ ಪಾರ್ಕ್ ರಸ್ತೆ, ಸಂಜೆ 6



'ದೂತ ಘಟೋತ್ಕಚ' ನಾಟಕದ ದೃಶ್ಯ

ಮಹಾಕವಿ ಭಾಸನ 'ದೂತ ಘಟೋತ್ಕಚ' ನಾಟಕ ಪ್ರದರ್ಶನ: ನಿರ್ದೇಶನ: ಶಿವು ಹೊನ್ನಿಗನಹಳ್ಳಿ, ಅತಿಥಿಗಳು: ನೀಲಮ್ಮ, ಎಸ್. ವಿ. ಕೃಷ್ಣ ಶರ್ಮ, ವೈ.ಕೆ. ಸಂಧ್ಯಾ ಶರ್ಮ, ಕಲಾವತಿ, ಮಧುಸೂದನ್ ಜಿ., ವಸುಂಧರ ಎನ್. ದೇವರಾಜ್, ಇರಗಪ್ಪ, ಆಯೋಜನೆ: ಬಿಂಕ ಬಿನ್ನಾಣರು ರಂಗ ತಂಡ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6.30

ರೈಲು ಭೂಮಿ ಅಭಿವೃದ್ಧಿ ಪ್ರಾಧಿಕಾರ

(ಭಾರತ ಸರ್ಕಾರದ ರೈಲ್ವೆ ಸಚಿವಾಲಯ ಅಡಿಯಲ್ಲಿನ ಒಂದು ಶಾಸನಬದ್ಧ ಪ್ರಾಧಿಕಾರ)
ಯೂನಿಟ್ ನಂ. 702–ಬಿ, 7ನೇ ಮಹಡಿ, ಕನ್ನೆಕ್ಟಸ್ ಟವರ್–2, ಡಿಎಂಆರ್‌ಸಿ ಬಿಲ್ಡಿಂಗ್, ಅಜ್ಮೇರಿ ಗೇಟ್, ನವದೆಹಲಿ–110002. ಫೋನ್: +91–11–23232854, ಫ್ಯಾಕ್ಸ್: +91–11–23232835

ಇ–ಟೆಂಡರ್ ಮುಖಾಂತರ ಎನ್‌ಲಿಸ್ಟ್‌ಮೆಂಟ್‌ಗೆ ಮನವಿ
(ಆರ್‌ಎಫ್‌ಇ ನಂ. ಆರ್‌ಎಲ್‌ಡಿಎ/ಆರ್‌ಎಫ್‌ಇ/ಸಿಟಿ–49/2022 ದಿನಾಂಕ 06.12.2022)
(ಆರ್‌ಎಫ್‌ಇ ನಂ. ಆರ್‌ಎಲ್‌ಡಿಎ/ಆರ್‌ಎಫ್‌ಇ/ಸಿಟಿ–50/2022 ದಿನಾಂಕ 06.12.2022)

ಭಾರತದಾದ್ಯಂತ ಸ್ಥಿತಗೊಂಡಿರುವ ಭಾರತೀಯ ರೈಲ್ವೆಯ ವಿವಿಧ ಸೈಟ್‌ಗಳಿಗೆ/ರೈಲ್ವೆ ಕಾಲೋನಿಗಳಿಗೆ ಫೈನಾನ್ಶಿಯಲ್ ಮತ್ತು ಮಾರ್ಕೆಟಿಂಗ್ ಕನ್ಸಲ್ಟಂಟ್‌ಗಳ ಎಂಪ್ಯಾನೆಲ್‌ಮೆಂಟ್‌ಗಾಗಿ ಮನವಿ (ರೂ.300 ಕೋಟಿಗೂ ಅಧಿಕ ಮೌಲ್ಯದ ಸೈಟ್‌ಗಳಿಗಾಗಿ ಪ್ಯಾನೆಲ್–1) (ರೂ.50 ಕೋಟಿಯಿಂದ ರೂ.300 ಕೋಟಿವರೆಗಿನ ಮೌಲ್ಯದ ಸೈಟ್‌ಗಳಿಗಾಗಿ ಪ್ಯಾನೆಲ್–2)

ಆರ್‌ಎಫ್‌ಇ ಡಾಕ್ಯೂಮೆಂಟ್ ಶುಲ್ಕ (ಹಿಂದಿರುಗಿಸಲಾಗದು): ಪ್ರತಿ ಪ್ಯಾನೆಲ್‌ಗೆ ರೂ. 5,900/– (18% ಜಿಎಸ್‌ಟಿ ಸೇರಿ)
ಇಎಂಡಿ: ರೂ. 75,000/– (ಪ್ಯಾನೆಲ್–1) ಮತ್ತು ರೂ. 25,000/– (ಪ್ಯಾನೆಲ್–2)
ಆನ್‌ಲೈನ್‌ನಲ್ಲಿ ಇ–ಆರ್‌ಎಫ್‌ಇ ಸಲ್ಲಿಸುವ ಅಂತಿಮ ದಿನಾಂಕ: 16.01.2023 ರಂದು 15:00 ಗಂಟೆವರೆಗೆ.
ಇ–ಆರ್‌ಪಿಎಫ್‌ಇ ತೆರೆಯುವುದು : 17.01.2023 ರಂದು 15.30 ಗಂಟೆಗೆ
ಎರಡೂ ಪ್ಯಾನೆಲ್‌ಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಕನ್ಸಲ್ಟಂಟ್‌ಗಳು, ಎರಡೂ ಪ್ಯಾನೆಲ್‌ಗಳಿಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸತಕ್ಕದ್ದು.
ಸೂಚನೆ: ಈಗಾಗಲೆ ಎಂಪ್ಯಾನೆಲ್ ಆಗಿರುವವರು ಅರ್ಜಿ ಸಲ್ಲಿಸಬೇಕಾಗಿಲ್ಲ.
ಸದರಿ 'ಆರ್‌ಎಫ್‌ಇ' ಗಳಿಗೆ ಸಂಬಂಧಿತ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ www.rlda.indianrailways.gov.in ವೆಬ್‌ಸೈಟ್‌ಗೆ ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನ www.tenderwizard.in/RLDA ಪೋರ್ಟಲ್‌ನಲ್ಲಿರುವ 'ಇ–ಟೆಂಡರ್' ಶೀರ್ಷಿಕೆಗೆ ಭೇಟಿ ಕೊಡಿ.
ಯಾವುದೇ ಸ್ಪಷ್ಟೀಕರಣಗಳಿಗಾಗಿ ದಯವಿಟ್ಟು ಸಂಪರ್ಕಿಸಿ:–

ಡೆ. ಜನರಲ್ ಮ್ಯಾನೇಜರ್/ಪ್ರಾಜೆಕ್ಟ್–3, ಮೊ: 77039 18078, mgrmarketingrlda@gmail.com
ಎಕ್ಸಿಕ್ಯೂಟಿವ್ ಡೈರೆಕ್ಟರ್/ಫೈನಾನ್ಸ್, ದೂರವಾಣಿ ಸಂ.: 011–23232854, ಎಕ್ಸ್‌ಟೆನ್ಶನ್: 111 gmfinrlda@gmail.com
ಇ–ಬಿಡ್ ವಿಚಾರಣೆಗಳಿಗೆ: ಶ್ರೀ. ಸೂರಜ್ ಸಿಂಗ್, ಮೊ: 95996 53865, suraj@e-tenderwizard.com
ಸೂಚನೆ:– ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡು ಉಂಟಾದಲ್ಲಿ, ಅಂತಹುದನ್ನು ಆರ್‌ಎಲ್‌ಡಿಎ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
ಡೆ. ಜನರಲ್ ಮ್ಯಾನೇಜರ್/ಟೆಂಡರ್, (ಮೊ) 90131 64466

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ. CN/09/2022 ದಿನಾಂಕ: 03.12.2022

ಭಾರತದ ರಾಷ್ಟ್ರಪತಿಯವರ ಪರವಾಗಿ, ಕೆಳಗೆ ಸಹಿಮಾಡಿದವರು ಆರ್‌ಇಪಿಎಸ್ ಮೂಲಕ ಕೆಳಗಿನ ಸಾಮಗ್ರಿಗಳನ್ನು ಒದಗಿಸಲು ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರು ಮುಕ್ತಾಯಗೊಳ್ಳುವ ಸಮಯ: 14:00 ಗಂ.

ಕ್ರಸಂ.	ಟೆಂಡರು ಸಂ.	ಸಂಕ್ಷಿಪ್ತವಾದ ವಿವರ	ಪರಿಮಾಣ	ಟೆಂಡರು ತೆರೆಯುವ ದಿನಾಂಕ
1	95225708	4 ಕೋರ್ x 25 ಚ.ಮಿ.ಮೀ. 1100 ವೋಲ್ಟ್ ಗ್ರೇಡ್, ಸ್ಟಾಂಡರ್ಡ್ ಅಲ್ಯುಮಿನಿಯಂ ನಿರ್ವಾಹಕಗಳು, ಗ್ಯಾಲ್ವನೈಸ್ ಮಾಡಿದ ಸ್ಟೀಲ್ ಸ್ಟ್ರಿಪ್ ಆರ್ಮರ್ಡ್ ಎಕ್ಸ್‌ಎಲ್‌ಪಿಇ ಕೇಬಲ್ ಇತ್ಯಾದಿ.	18500 ಮೀಟರುಗಳು	26.12.2022
2	81221139	4 ಕೋರ್ x 70 ಚ.ಮಿ.ಮೀ. 1100 ವೋಲ್ಟ್ ಗ್ರೇಡ್, ಸ್ಟಾಂಡರ್ಡ್ ಅಲ್ಯುಮಿನಿಯಂ ನಿರ್ವಾಹಕಗಳು, ಗ್ಯಾಲ್ವನೈಸ್ ಮಾಡಿದ ಸ್ಟೀಲ್ ಸ್ಟ್ರಿಪ್ ಆರ್ಮರ್ಡ್ ಎಕ್ಸ್‌ಎಲ್‌ಪಿಇ ಕೇಬಲ್ ಇತ್ಯಾದಿ.	11000 ಮೀಟರುಗಳು	29.12.2022

ತಿದ್ದುಪಡಿ ಸೂಚನೆ–1

ಟೆಂಡರು ಸೂಚನೆ ಸಂ. CN/08/2022, ಟೆಂಡರು ಸೂಚನೆ ಸಂ. 95225643, ರಲ್ಲಿ ಕ್ರಸಂ. 4, ಅರ್ಹತಾ ನಿಬಂಧನೆಗಳು 2, 3, 4 ಮತ್ತು ಅರ್ಹತೆ, ಅನುವರ್ತನೆ ಮತ್ತು ಜವಾಬ್ದಾರಿ ಕ್ರಸಂ. 1 ವಿಶೇಷ ಅರ್ಹತಾ ಮಾನದಂಡವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/524/AAD/PRB/SWR/2022-23 ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ನಿರ್ಮಾಣ, ಬೆಂಗಳೂರು ದಂಡು

S.W.Railways | sw_rly | SWRRLY | southwesternrailway | SWRRLY

ಸಾರ್ವಜನಿಕ ಪ್ರಕಟನೆ

ನನ್ನ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಯಾವುದೇ ಬಗೆಯ ಋಣಭಾರಗಳಿಂದ ಮುಕ್ತವಾಗಿರುವ ಸ್ವತ್ತನ್ನು ನಂ. 2231, 3ನೇ ಮಹಡಿ, 11ನೇ ಮುಖ್ಯ ರಸ್ತೆ, 3ನೇ ಬ್ಲಾಕ್ ಪೂರ್ವ, ಜಯನಗರ, ಬೆಂಗಳೂರು–560 011 ಇಲ್ಲಿರುವ ಹಾಗೂ ಕಾರ್ಯನಿರ್ವಾಹಕ ಪಾಲುದಾರರಾದ ವೆಂಕಟೇಶ ಸಿ. ಮತ್ತು ಹೆಚ್ ಬಿ. ಜಯರಾಮ ಇವರಿಂದ ಪ್ರತಿನಿಧಿಸಲ್ಪಟ್ಟ ಮೆ|| ಮ್ಯಾಕ್ಸ್ ಕಾನ್‌ಕಾರ್ಡ್ ಡೆವಲಪರ್ಸ್‌ರವರಿಂದ ಖರೀದಿಸಲು/ಪಡೆದುಕೊಳ್ಳಲು ಬಯಸಿರುವರೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗುತ್ತಿದೆ. ಯಾವುದೇ ವ್ಯಕ್ತಿಗಳು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಲಾಗಿರುವ ಸ್ವತ್ತಿನ ಮೇಲೆ ಯಾವುದೇ ಕ್ಲೇಮು, ನ್ಯಾಯಾಲಯ ಅಥವಾ ನ್ಯಾಯಾಧೀಕರಣ ಅಥವಾ ಸರ್ಕಾರಿ ಅಥವಾ ಶಾಸನಬದ್ಧ ಪ್ರಾಧಿಕಾರಗಳ ಸಮ್ಮುಖದಲ್ಲಿ ಅಥವಾ ಉತ್ತರಾಧಿಕಾರ ಮಾರಾಟ, ವಿನಿಮಯ, ಅಡಮಾನ, ಧಾರಣಾಧಿಕಾರ, ಅಡವು, ಉಯಿಲು ದೆಸೆಯಿಂದ ಇತ್ಯರ್ಥ ಬಾಕಿ ಇದ್ದಲ್ಲಿ, ಅವುಗಳನ್ನು ಈ ನೋಟೀಸು ಪ್ರಕಟವಾದ ದಿನದಿಂದ ಹತ್ತು (10) ದಿನಗಳ ಒಳಗಾಗಿ ಪುರಾವೆಗಳ ದಸ್ತಾವೇಜುಗಳೊಂದಿಗೆ ಕೆಳ ಸಹಿಗಾರರಿಗೆ ಕಳುಹಿಸಬೇಕು. ಇಲ್ಲವಾದಲ್ಲಿ ಅಂತಹ ಕ್ಲೇಮುಗಳು ಉಲ್ಲೇಖಗಳಿಲ್ಲದೇ ವ್ಯವಹಾರವನ್ನು ಪೂರ್ಣಗೊಳಿಸಲಾಗುವುದು. ಅಂಥ ವ್ಯಕ್ತಿಗಳ ಕ್ಲೇಮುಗಳನ್ನು ಪರಿಣಿಸಲಾಗುವುದಿಲ್ಲ ಹಾಗೂ ಅವುಗಳಿಗೆ ನನ್ನ ಕಕ್ಷಿಗಾರರು ಬಾಧ್ಯರಾಗುವುದಿಲ್ಲ.

ಮೇಲೆ ಉಲ್ಲೇಖಿತ ಷೆಡ್ಯೂಲ್

ಹುಳಿಮಾವು ಗ್ರಾಮ ಬೇಗೂರು 3 ಹೋಬಳಿ ಬೆಂಗಳೂರು ದಕ್ಷಿಣ ತಾಲ್ಲೂಕು ಬೆಂಗಳೂರು ಇಲ್ಲಿ ಸ್ಥಿತವಿರುವ ಭೂಮಿಯ ವಿವರಣೆ :

ಸರ್ವೆ ನಂ.	ವಿಸ್ತೀರ್ಣ		ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
	ಎಕರೆ	ಗುಂಟೆ				
45	1	–	ಸರ್ವೆ ನಂ. 46/1	ಸರ್ವೆ ನಂ. 45ರ ಬಾಕಿ ಜಾಗ	ಸರ್ವೆ ನಂ. 46/1	ಸರ್ವೆ ನಂ. 45ರ ಬಾಕಿ ಜಾಗ
46/1	1	33	ಸರ್ವೆ ನಂ. 46/1ರ ಬೇರೆ ಜಾಗ	ಸರ್ವೆ ನಂ. 45	ಸರ್ವೆ ನಂ. 50/3 ಮತ್ತು 51	ಸರ್ವೆ ನಂ. 45
47/1	–	18	ಸರ್ವೆ ನಂ. 47/2	ಕಮ್ಮನಹಳ್ಳಿ ಗ್ರಾಮದ ಮುಖ್ಯ ರಸ್ತೆ	ಸರ್ವೆ ನಂ.47/1ರ ಬಾಕಿ ಜಾಗ	ಸರ್ವೆ ನಂ.47/1ರ ಬಾಕಿ ಜಾಗ
47/2	3	05	ಸರ್ವೆ ನಂ. 45 ಮತ್ತು 46/1	ಸರ್ವೆ ನಂ. 47/1 ಮತ್ತು 48/2	ಸರ್ವೆ ನಂ. 50/3	ಕಾಳೇನ ಅಗ್ರಹಾರ ಮತ್ತು ಗೊಟ್ಟಿಗೆರೆ ಗ್ರಾಮದ ಗಡಿ ಮತ್ತು ಸರ್ವೆ ನಂ.44
50/3 (ಸರ್ವೆ ನಂ. 50/3ಬಿ ಯಿಂದ 50/3ಇ ವರೆಗೆ)	1	06	ಸರ್ವೆ ನಂ. 51/1	ಸರ್ವೆ ನಂ. 49 ರಲ್ಲಿನ ಖರಾಬು ಜಮೀನು	ಸರ್ವೆ ನಂ. 50/2	ಸರ್ವೆ ನಂ. 50/3 ರಲ್ಲಿನ ಬಾಕಿ ಜಾಗ
51/1 (ಸರ್ವೆ ನಂ. 51/1ಎ ಯಿಂದ 51/1ಸಿ ವರೆಗೆ)	–	04	ಟಿ.ಆರ್. ಶ್ರೀನಿವಾಸ ರೆಡ್ಡಿ ಯವರ ಸರ್ವೆ ನಂ.51/2 ಇರುವ ಸ್ವತ್ತು	ಸರ್ವೆ ನಂ. 50/3	ಸರ್ವೆ ನಂ. 51/1ರಲ್ಲಿನ ಬಾಕಿ ಜಾಗ	ಸರ್ವೆ ನಂ. 46/1 ಮತ್ತು 46

ಸಹಿ
ಎಸ್.ಟಿ. ಪ್ರಶಾಂತ ಕುಮಾರ್
ಪಾಲುದಾರರು, ಫಾಕ್ಸ್ ಮಂಡಲ್ & ಅಸೋಸಿಯೇಟ್ಸ್
6/12, ಗುರಪ್ಪ ಅವೆನ್ಯೂ, ಪ್ರಿಮ್‌ರೋಸ್ ರಸ್ತೆ, ಬೆಂಗಳೂರು–560 025
ದೂ : +91 80 25595911 ಇ–ಮೇಲ್ : prashantha.kumar@foxmandal.in

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

REAL ESTATE SELLING

Commercial Building

Koramangala

HOTEL FOR Sale: 19 Rooms BDA Property 3 star construction 2.75 lac Rental income in Koramangala 3.50 CR- 9449521384/ 7259132674

REQUIRED

Land 8000 to 15000 sqft in Old Airport Road, New Airport Road, Marathalli Ring Road, Hosur Road, Bangalore-Nelamangala Road or any other major Roads for PETROL BUNK - Rent / Lease for 20 years with rent between Rs. 20/50. Building Tax will be paid by us.
Contact: 96861 75666 / 99451 55688
Email: gmsudev@yahoo.com

Commerical

HSR Layout

COMMERCIAL SITE for sale Bellandur main road, OPP to Bellandur central mall, Bellandur Contact; 9916333888

Flat

Frazer Town

SALE LUXURY 2250sft Flat On Spencer Road 3BHK 4Baths Large Balcony Complete Burma Teak Cabinetry and Wardrobes Marble Flooring One Carpark Lifts Swimming Pool Gym Backup Power Lush Garden Ample Setbacks Central High End Residential Area Genuine Buyers Contact: 9845284418

Malleshwaram

2 AND 3 BHK Flat for Sale at Malleshwaram Link Road 1 km From Mantri Mall Metro Station, OC Received Only Few Units Left Ready to Occupy Starts From 1.35 to 1.85CR Call: 9901556699

SALE 3BHK apartment 1755sqft (renovated) Renaissance Park-3, Malleshwaram West. 1.95 crores negotiable Contact: 9342139450

General

South

EXCELLENT 41×79 South facing site MPM Layout , Nagarabhavi Bangalore Broker excuse contact 9731439825

Sites

Hosur Road

SALE 1575 Sqft Sites at Begur. North Facing. 1km from Hosur Road Metro Station. Bank Loans: 7204020070

J P Nagar

BDA ALLOTTED SITE FOR-SALE, 4000 sqft, West-facing, Dollars Colony, J.P.Nagar, Bangalore. Contact: 9741874461/ 9900344753/ 6360566412

Vishweshwariah Layout

VISHWESHWARIAH LAYOUT BDA 2nd Block 30x40 North 80' Road Parallel and 6th Block Attach 40x40 BBMP A Katha Corner: 9964971895

Vidyaranyapura

BEST RESIDENTIAL SITE 30x40 FOR SALE NEAR VIDYARANYAPURA, BANGALORE NORTH. DIRECT FROM OWNER. CONTACT: 9845583070

Agricultural Land

Tumkur

SALE 47 Acres Agricultural Land in Sira Taluk, Tumakuru District. Clear Titles. Buyers Contact: 6360068977.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

Part-Time Jobs

PART TIME Job SMS Typing work Laptop, Sellphone, Simcard Company Provide (Reg. 1099) 9389525534/ 8433101939

Multiple Vacancy

REQUIRED TEAMLEADER, Telecaller, Field Executive For Bank Loan collection. Direct recruitment to company. 9620206756, 9620200756.

Marketing & Sales

URGENTLY REQUIRED Sales Executives For An Established UPVC Products For Bangalore Contact 7022723432

General

EXCLUSIVELY FOR Retired, Sr.Citizens, VRS, Pensioner's, Entrepreneurs, Homemaker's. Opportunity to Earn Income upto 1.5 Lac p.m. Contact:- 8861561347 /9686399918

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

AUTOMOTIVE

Four Wheelers Buying

Maruti

TN -02 -AW -9929 MARUTI Swift DzireZDI 2013 Make Accidental & Flood damaged vehicle for sale as on condition. ContactNo.9902333299

BUSINESS

Business to Business

Business

NRI INVESTMENT and Finance Introducing new purchase finance for Buying Houses, Flats, Plots upto 100% Loan Available on Low Interest for Low & Middle Income Group Contact- 7411265189

Business Offers

Finance

INVESTOR (3L) invited for upgrading and expanding running business. Regular monthly returns assured. Contact 9980883950

GREEN RESIDENTIAL 2 Lakh Investment Required Daily Collection Contact:- 8892501007/ 9606701007

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

DH Classifieds
BOOK YOUR AD on SATURDAY & GET 50% OFF* ON SUNDAY
*conditions apply
For more information contact:
9845114560 | 9901641752
9731810277 | 9886213331
080 - 45557163 / 164

30 art galleries 450 artists 4000 artworks 100 booths
INDIA ART FESTIVAL™ India's Contemporary Art Fair
Celebrating Contemporary Art !! at Palace Ground, Kings Court Gate No.5, Bellary Road, Bengaluru
08-09-10-11 December 2022
11.00 am - 8.30 pm
Parking free | Entry free

M: +91 8976044104-5-7
E: indiaartfestival@gmail.com

PERSONAL

Change of Name

CHANGE OF NAME
I, Raveendra Tangade, Residing at: Tangade Tota, Bhiradi, Raibag, Chinchali, Belgaum, Karnataka - 591 217 have changed my name to Ravindra B. Tangade, vide affidavit dated: 08.12.2022, before Notary L. Shankaranarayana, Bangalore. Henceforth, I shall be called as Ravindra B. Tangade only.

I, ANUPAMAA V, Major D/o Venugopal, residing at MC 2201, Golden Grand Apartment, Yeshwanthpur, Bangalore - 560022, have changed my name to Anupamaa Venugopal,vide affidavit dated 08.12.2022, sworn before notary S Ramesh Bengaluru, Henceforth i shall be called as Anupamaa Venugopal for all purposes

I, VIBHA NARAYAN D/o. Badri Narayan N.G R/at.#1403, Aparna Elina, Yeshwanthpur, Blr-22 wrongly mentioned my Date of Birth in my education Documents as 11-05-2000 instead of 11-09-2000, I hereby declaring my correct date of Birth is 11-09-2000, vide affidavit 08/12/2022 notary Vanajakshi R, Bengaluru.

I NAVEEN. M.C Residing At Flat No. 4A, 4th floor, No.5, Casaba Mansion, Thayappa Layout, 1st cross, J.C. Road, Bengaluru 560002 Have Changed my Minor Son's Name From NEIL KRISHNA.N To NEILKRISHNA CASABA Vide Affidavit Dated 08/12/2022 before Notary L. Shankaranarayana Bangalore.

I, C.K. VENKATE GOWDA, Residing at E24/4, 6th cross Nethajinagar, Chokkasandra T.Dasarahalli Bangalore-57 have changed my name as MANJEGOWDA vide affidavit dated 28/11/2022 before Notary V.Anjanappa Bangalore

I,RAKSHITH RAMUREDDY Residing at No.792/10,1st B Main, L.N.Colony, Yeshwanthapura, Bangalore-560022 would state that RAKSHITH RAMUREDDY and R.RAKSHITH are one and the same and I intend to continue and retain my name on future as RAKSHITH RAMUREDDY vide affidavit dated: 08.12.2022 before Notary: Chandrakala, Bangalore

CHANGE OF NAME
I, Susheela @ Sushila @ Susheelamma, R/at No. 27, 1st Cross, Gandhi Grama, New Pottery Town, Benson Town Post, Bangalore - 560 046, declare that all the above names pertain to me and henceforth I shall be known as Susheela, vide affidavit dated: 30.05.2022, before VI Addl. Chief Metropolitan Magistrate, Bangalore

I, SRINIVAS KUMAR. M, Residing at Flat #23, Tranqull Farms, Kuntenahalli, Aralumallige Road Jakkasandra Bangalore Rural-561203 have changed my name as M. SRINIVAS GOWDA, vide affidavit dated 6/12/2022 before Notary H.K.GOPALA GOWDA, Bengaluru North

NAGENDRA KUMAR, JC672036M, SUB/MT, Vill- Ganga Bigha, Telhara, Hilsa, Nalanda, Bihar changed Son's name JANMAYJAY SINHA to JANAMJAY SINHA, 07/12/2022, Notary K.V. Mani, Bangalore

I, RAMESH MAHESHWARI, S/o. Rameshwar Lal Bhutra, residing at C-062, Sobha Magnolia, Bannerghatta Road, Bangalore-560029. have changed my name to RAMESH BHUTRA for all future purpose vide affidavit dated 14-02-2022 sworn to before advocate and notary B.Chitra, Bangalore

I, KUSHI, D/o.R L SATHISH, Residing at No.37, Ramachandrapura, Hale Ooru, Vidyaranyapura Main Road,Ramachandrapura, Bengaluru- 560013 Have changed my name to KUSHI S vide affidavit dated 05.12.2022 sworn before notary:Chandrakala, Bangalore

I NAVEEN.M.C Residing At Flat No.4A, 4th floor, No.5, Casaba Mansion, Thayappa Layout, 1st cross, J.C. Road, Bengaluru 560002 Have Changed my Minor Son's Name From NINAAD KRISHNA.N To NINAADKRISHNA CASABA Vide Affidavit Dated 08/12/2022 before Notary L. Shankaranarayana Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

‘ಗ್ರೀನ್ ಆರ್ಕಿಡ್’ ಅಪಾರ್ಟ್‌ಮೆಂಟ್ ಮಾಡಿದ್ದ ಒತ್ತುವರಿ: 15 ವರ್ಷಗಳ ನಂತರ ಜಪ್ತಿ

₹12 ಕೋಟಿ ಮೌಲ್ಯದ ಆಸ್ತಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಅಪಾರ್ಟ್‌ಮೆಂಟ್‌ನವರು ಒತ್ತುವರಿ ಮಾಡಿಕೊಂಡು ಉದ್ಯಾನ ನಿರ್ಮಿಸಿದ್ದ ಜಾಗವನ್ನು ಬಿಡಿಎ ಅಧಿಕಾರಿಗಳು ಮರುವಶಕ್ಕೆ ಪಡೆದಿದ್ದಾರೆ.

ದೇವರಚಿಕ್ಕನಹಳ್ಳಿಯ ಬಿಟಿಎಂ ಲೇಔಟ್ 4ನೇ ಹಂತದ 2ನೇ ಬ್ಲಾಕ್ ಸರ್ವೆ ನಂ. 24/5ರಲ್ಲಿ ಎಂಟೂವರೆ ಗುಂಟೆ ಜಾಗದಲ್ಲಿ ‘ಗ್ರೀನ್ ಆರ್ಕಿಡ್’ ಎಂಬ ಖಾಸಗಿ ಅಪಾರ್ಟ್‌ಮೆಂಟ್ ಉದ್ಯಾನ ನಿರ್ಮಿಸಿತ್ತು. 15 ವರ್ಷಗಳಿಂದ ಹಲವು ಬಾರಿ ಈ ಜಾಗವನ್ನು ತೆರವುಗೊಳಿಸುವಂತೆ ಬಿಡಿಎ ಎಚ್ಚರಿಕೆ ನೀಡಿದ್ದರೂ ತೆರವು-ಗೊಳಿಸಿರಲಿಲ್ಲ. ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಕೂಡಲೇ ತೆರವಿಗೆ ಸೂಚನೆ ನೀಡಿದ್ದರು.

ಅಧ್ಯಕ್ಷರ ಸೂಚನೆ ಮತ್ತು ಆಯುಕ್ತ ಕುಮಾರ್ ನಾಯ್ಕ್ ಅವರ ಆದೇಶದ ಮೇರೆಗೆ ಗುರುವಾರ ಬಿಡಿಎ ಎಸ್‌ಟಿಎಫ್ ಮುಖ್ಯಸ್ಥ ನಂಜುಂಡೇಗೌಡ, ಡಿವೈಎಸ್ಪಿ ರವಿಕುಮಾರ್, ಇನ್‌ಸ್ಪೆಕ್ಟರ್ ಲಕ್ಷ್ಮಯ್ಯ, ಎಂಜಿನಿಯರ್ ಅಶೋಕ್ ಮತ್ತು ಪರುಶರಾಮ್ ಅವರು ಉದ್ಯಾನ ತೆರವುಗೊಳಿಸಿದರು.

‘ನಗರದಲ್ಲಿನ ಪ್ರಮುಖ ಬಡಾವಣೆಗಳಲ್ಲಿ ಬಿಡಿಎ ಜಾಗವನ್ನು ಅನೇಕ ಜನರು ಅತಿಕ್ರಮಣ ಮಾಡಿರುವುದು ನಮ್ಮ ತನಿಖೆಯಿಂದ ತಿಳಿದುಬಂದಿದೆ. ಇಂತಹ ಜಾಗಗಳನ್ನು ಹಂತಹಂತವಾಗಿ ತೆರವುಗೊಳಿಸಲಾಗುತ್ತದೆ’ ಎಂದು ಎಸ್.ಆರ್.ವಿಶ್ವನಾಥ್ ತಿಳಿಸಿದರು.

‘ಭೂಕಬಳಿಕೆದಾರರ ಬಗ್ಗೆ ಮಾಹಿತಿ ನೀಡುವಂತೆ ಸಾರ್ವಜನಿಕರಿಗೆ ಮನವಿ ಮಾಡಿಕೊಳ್ಳಲಾಗಿತ್ತು. ಈ ಬಗ್ಗೆ ಹಲವು ಮಾಹಿತಿ ಬಂದಿದೆ. ಅವುಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ’ ಎಂದರು.

‘ಗ್ರೀನ್ ಆರ್ಕಿಡ್’ ಅಪಾರ್ಟ್‌ಮೆಂಟ್ ಒತ್ತುವರಿ ಮಾಡಿಕೊಂಡಿದ್ದ ಜಾಗವನ್ನು ಗುರುವಾರ ಬಿಡಿಎ ಸಿಬ್ಬಂದಿ ತೆರವುಗೊಳಿಸಿದರು

ಬಿಡಿಎ: ಎಲೆಕ್ಟ್ರಾನಿಕ್ ರೂಪದಲ್ಲಿ ನಿವೇಶನದ ಅಳತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇನ್ನು ಮುಂದೆ ಬರವಣಿಗೆ ರೂಪದಲ್ಲಿ ನಿವೇಶನದ ವಿಸ್ತೀರ್ಣ ದಾಖಲೆಯನ್ನು ನೀಡುವುದಿಲ್ಲ. ‘ನಿಖರ ಅಳತೆ’ (ಸಿಡಿ) ಎಲೆಕ್ಟ್ರಾನಿಕ್ ರೂಪದಲ್ಲಿ ಇರಲಿದೆ. ಎರಡು ವರ್ಷದ ಹಿಂದಿನ ಯೋಜನೆ ಇದೀಗ ಜಾರಿಯಾಗಲಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆ ಕಾಮಗಾರಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಬಿಡಿಎ ಆಯುಕ್ತ ಜಿ. ಕುಮಾರ ನಾಯ್ಕ್ ಅಧಿಕಾರಿಗಳಿಗೆ ಈ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಸೂಚಿಸಿದ್ದಾರೆ. ಅಲ್ಲದೆ, ‘ನಿಖರ ಅಳತೆ’ ನೀಡುವ ಅಧಿಕಾರವನ್ನು ಕಾರ್ಯಪಾಲಕ ಎಂಜಿನಿಯರ್‌ಗಳಿಂದ ಹಿಂಪಡೆದು, ಮೂರು ಸದಸ್ಯರ ಸಮಿತಿಗೆ ವಹಿಸಲಾಗಿದೆ.

ಹೊಸ ಮತ್ತು ಹಳೆಯ ಎಲ್ಲ ಬಡಾವಣೆಗಳಿಗೂ ಈ ಹೊಸ ವ್ಯವಸ್ಥೆ ಅನ್ವಯವಾಗಲಿದೆ. ನಿವೇಶನ ವಿಸ್ತೀರ್ಣದೊಂದಿಗೆ ಸುತ್ತಮುತ್ತಲ ಗಡಿ ವಿವರ ಹೊಂದಿರುವ ‘ಸಿಡಿ’ ನಿವೇಶನಕ್ಕೆ ಅತಿ ಜರೂರಾದ ದಾಖಲೆಯಾಗಿದೆ.

‘2020ರಲ್ಲೇ ಎಲೆಕ್ಟ್ರಾನಿಕ್ ಸಿಡಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿತ್ತು. ಕಡ್ಡಾಯವಾಗಿದ್ದರೂ ಅದನ್ನು ಯಾರೂ ಬಳಸುತ್ತಿರಲಿಲ್ಲ. ಇದನ್ನೇ ನಾವು ಮರುಜಾರಿಗೊಳಿಸುತ್ತಿದ್ದೇವೆ’ ಎಂದು ಆಯುಕ್ತರು ಹೇಳಿದರು.

ಶರತ್ ಬಚ್ಚೇಗೌಡ ವಿರುದ್ಧ ಭಿನ್ನಮತ ಸ್ಫೋಟ

ಹೊಸಕೋಟೆ: ನಗರದ ಕಾಂಗ್ರೆಸ್ ಕಚೇರಿಯಲ್ಲಿ ಗುರುವಾರ ಕೆಪಿಸಿಸಿ ಕಾರ್ಯದರ್ಶಿ ಮುನಿಶಾಮಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಪಕ್ಷದ ಸಭೆಯಲ್ಲಿ ಶಾಸಕ ಶರತ್ ಬಚ್ಚೇಗೌಡ ಹಾಗೂ ಅವರ ಬೆಂಬಲಿಗರ ವಿರುದ್ಧ ಮೂಲ ಕಾಂಗ್ರೆಸ್ಸಿಗರ ಅಸಮಾಧಾನ ಸ್ಫೋಟಗೊಂಡಿತು.

ಸಭೆಯಲ್ಲಿ ಪಾಲ್ಗೊಂಡಿದ್ದ ಮುಖಂಡರು ಮತ್ತು ಕಾರ್ಯಕರ್ತರ ನಡುವೆ ವಾಗ್ವಾದವೂ ನಡೆಯಿತು. ಮುನಿಶಾಮಣ್ಣ ವಿರುದ್ಧವೂ ಆಕ್ರೋಶ ವ್ಯಕ್ತವಾದ ಹಿನ್ನೆಲೆಯಲ್ಲಿ ಕಾರ್ಯಕರ್ತರ ಪ್ರಶ್ನೆಗಳಿಗೆ ಅವರು ಉತ್ತರಿಸಲು ಅಸಹಾಯಕರಾದರು.

ಇತ್ತೀಚಿನ ದಿನಗಳಲ್ಲಿ ತಾಲ್ಲೂಕಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಚರ್ಚಿಸಲು ಸಭೆ ಕರೆಯಲಾಗಿತ್ತು. ಆರಂಭದಲ್ಲಿಯೇ ‘ಶಾಸಕ ಶರತ್ ಬಚ್ಚೇಗೌಡ ಮತ್ತು ಬೆಂಬಲಿಗರು ನಮ್ಮನ್ನು ಸರಿಯಾಗಿ ನಡೆಸಿಕೊಳ್ಳುತ್ತಿಲ್ಲ’ ಎಂದು ಮೂಲ ಕಾಂಗ್ರೆಸ್ಸಿಗರು ಆಕ್ಷೇಪ ವ್ಯಕ್ತಪಡಿಸಿದರು.

‘ಪಕ್ಷದ ಸಭೆಗಳಿಗೆ ನಮ್ಮನ್ನು ಕರೆಯುತ್ತಿಲ್ಲ. ನಮ್ಮ ಗಮನಕ್ಕೆ ತಾರದೆ ತಾಲ್ಲೂಕಿನ ಅನುಗೊಂಡನಹಳ್ಳಿ-ಯಲ್ಲಿ ಹೋಬಳಿ ಮಟ್ಟದ ಕಾಂಗ್ರೆಸ್ ಕಚೇರಿ ಪ್ರಾರಂಭಿಸಿದ್ದಾರೆ. ಅದು ಅನುಗೊಂಡನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಗಮನಕ್ಕೂ ಬಂದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಒಂದು ಹಂತದಲ್ಲಿ ಕೈ, ಕೈ ಮಿಲಾಯಿಸುವ ಹಂತಕ್ಕೆ ತಲುಪಿದಾಗ ಹಿರಿಯ ಮುಖಂಡರು ಸಮಾಧಾನಪಡಿಸಿದರು.



2022 ರ ಗುಜರಾತ್ ಚುನಾವಣೆಯಲ್ಲಿ ಬಿಜೆಪಿಗೆ ಭಾರಿ ಬಹುಮತದ ಜಯ!

‘ಪತ್ನಿ ಎರಡು ಕಾಯ್ದೆಗಳಡಿ ಜೀವನಾಂಶಕ್ಕೆ ಅರ್ಹಳು’

ಬೆಂಗಳೂರು: ‘ಕೌಟುಂಬಿಕ ಕಲಹ ಪ್ರಕರಣದಲ್ಲಿ, ಪತ್ನಿಯು ಪತಿಯಿಂದ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಹಾಗೂ ಹಿಂದೂ ವಿವಾಹ ಕಾಯ್ದೆಯಡಿ ಎರಡರಿಂದಲೂ ಜೀವನಾಂಶ ಪಡೆಯಲು ಅವಕಾಶವಿದೆ’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದ್ದು, ‘ಜೀವನಾಂಶದ ಪ್ರಮಾಣವನ್ನು ನ್ಯಾಯಾಲಯವೇ ಹೊಂದಾಣಿಕೆ ಮಾಡಬಹುದು’ ಎಂದು ಅಭಿಪ್ರಾಯಪಟ್ಟಿದೆ.

ಈ ಸಂಬಂಧ 34 ವರ್ಷದ ಪತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, ‘ಒಂದು ಕಾಯ್ದೆಯಡಿ ಜೀವನಾಂಶ ನೀಡಲಾಗಿದೆ ಎಂಬ ಕಾರಣಕ್ಕೆ ಮತ್ತೊಂದು ಕಾಯ್ದೆಯಡಿ ಜೀವನಾಂಶ ನೀಡಲಾಗದು ಎಂದು ಹೇಳಲು ಸಾಧ್ಯವಿಲ್ಲ. ಎರಡೂ ಕಾಯ್ದೆಯಡಿ ಜೀವನಾಂಶದ ಪ್ರಮಾಣವನ್ನು ನ್ಯಾಯಾಲಯವೇ ಹೊಂದಾಣಿಕೆ ಮಾಡಬೇಕು’ ಎಂದು ಪತಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.

ಪ್ರಕರಣವೇನು?: ಅರ್ಜಿದಾರ ಪತಿ 2018ರಲ್ಲಿ 28 ವರ್ಷದ ತರುಣಿಯನ್ನು ವಿವಾಹವಾಗಿದ್ದರು. ದಂಪತಿಗೆ ಸಂತಾನ ಇರಲಿಲ್ಲ. ಏತನ್ಮಧ್ಯೆ, ‘ಪತಿ ಕಿರುಕುಳ ನೀಡುತ್ತಿದ್ದಾರೆ’ ಎಂದು ಆರೋಪಿಸಿದ್ದ ಪತ್ನಿ 2020ರ ಡಿಸೆಂಬರ್ 11ರಲ್ಲಿ ಪತಿ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯಡಿ ದೂರು ದಾಖಲಿಸಿದ್ದರು.

ಈ ಪ್ರಕರಣದಲ್ಲಿ ಸ್ಥಳೀಯ ಕೌಟುಂಬಿಕ ನ್ಯಾಯಾಲಯವು ಜೀವನ ನಿರ್ವಹಣಾ ವೆಚ್ಚವೆಂದು ಪ್ರತಿ ತಿಂಗಳೂ ₹ 20 ಸಾವಿರ ನೀಡುವಂತೆ ಮಾಡಿದ್ದ ಪತ್ನಿಯ ಮಧ್ಯಂತರ ಮನವಿಯನ್ನು ಪುರಸ್ಕರಿಸಿತ್ತು. ಈ ಆದೇಶವನ್ನು ಪತಿ ಸೆಷನ್ಸ್ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ಸೆಷನ್ಸ್ ನ್ಯಾಯಾಲಯ ಇದನ್ನು ತಿರಸ್ಕರಿಸಿತ್ತು.

ಮೆಟ್ರೊ ನಿಲ್ದಾಣದಲ್ಲಿ ಪಕ್ಷಿಗಳ ಹಾಡು

ಬೆಂಗಳೂರು: ಮೆಜೆಸ್ಟಿಕ್ ಮೆಟ್ರೊ ರೈಲು ನಿಲ್ದಾಣದಲ್ಲಿ ಪಕ್ಷಿಗಳ ಕಲರವ ಆರಂಭವಾಗಿದೆ. ದಿ ಇಂಡಿಯನ್ ಮ್ಯೂಸಿಕ್ ಎಕ್ಸ್‌ಪೀರಿಯನ್ಸ್ ಮ್ಯೂಸಿಯಂ ಆಯೋಜಿಸಿರುವ ಈ ಪ್ರದರ್ಶನ ಮೆಟ್ರೊ ಪ್ರಯಾಣಿಕರನ್ನು ಸೆಳೆಯುತ್ತಿದೆ.

ಬೆಂಗಳೂರು ವಿನ್ಯಾಸ ಸಪ್ತಾಹದ ಅಂಗವಾಗಿ ಅಸೋಸಿಯೇಷನ್ ಆಫ್ ಡಿಸೈನರ್ಸ್ ಇಂಡಿಯಾ(ಎಡಿಐ) ಸಹಯೋಗದಲ್ಲಿ ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ ಆ್ಯಂಡ್ ಡಿಸೈನ್, ಬಿಎಂಆರ್‌ಸಿಎಲ್ ನಡೆಸುತ್ತಿರುವ ಪ್ರದರ್ಶನ ಡಿ.12ರವ-ರೆಗೆ ಬೆಳಿಗ್ಗೆ 9ರಿಂದ ರಾತ್ರಿ 9ರವರೆಗೆ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿರಲಿದೆ.

ಪ್ರಕೃತಿಯ ವೈಶಿಷ್ಟ್ಯಗಳಲ್ಲಿ ಬೆರಗುಗೊಳಿಸುವ ಛಾಯಚಿತ್ರಗಳು, ಚಿತ್ರಣಗಳು, ಪಕ್ಷಿಗಳ ನಾದಗಳಿಂದ ಪ್ರೇರಿತವಾದ ವಾದ್ಯಗಳ ಪ್ರದರ್ಶನ, ಕಿಯೋಸ್ಕ್‌ಗಳು, ಮಾನವ ಮತ್ತು ಪಕ್ಷಿಗಳ ನಡುವಿನ ಸಹಬಾಳ್ವೆಯ ಮಹತ್ವ ಎತ್ತಿ ಹಿಡಿಯುವ ಗ್ರಾಫಿಕ್ ಫಲಕಗಳನ್ನು ಇದು ಒಳಗೊಂಡಿದೆ ಎಂದು ದಿ ಇಂಡಿಯನ್ ಮ್ಯೂಸಿಕ್ ಎಕ್ಸ್‌ಪೀರಿಯನ್ಸ್ ತಿಳಿಸಿದೆ.

ಬೆಟ್ಟಹಲಸೂರು ಮೆಟ್ರೊ ನಿಲ್ದಾಣ ಮರು ಸೇರ್ಪಡೆ

ಬೆಂಗಳೂರು: ವಿಮಾನ ನಿಲ್ದಾಣ ಮೆಟ್ರೊ ರೈಲು ಮಾರ್ಗದಲ್ಲಿ ಕೈಬಿಡಲಾಗಿದ್ದ ಬೆಟ್ಟಹಲಸೂರು ನಿಲ್ದಾಣ ಮರು ಸೇರ್ಪಡೆಗೆ ಮಾತುಕತೆ ಆರಂಭವಾಗಿದೆ. ರಿಯಲ್ ಎಸ್ಟೇಟ್ ಕಂಪನಿ ಎಂಬೆಸ್ಸಿ ಗ್ರೂಪ್ ಜತೆ ಬಿಎಂಆರ್‌ಸಿಎಲ್ ಮತ್ತೊಮ್ಮೆ ಪತ್ರ ವ್ಯವಹಾರ ಆರಂಭಿಸಿದೆ.

ಈ ಮಾರ್ಗದ ಮೂಲ ಯೋಜನೆಯಲ್ಲಿ ಬೆಟ್ಟಹಲಸೂರು ನಿಲ್ದಾಣದ ಪ್ರಸ್ತಾಪ ಇರಲಿಲ್ಲ. ಎಂಬೆಸ್ಸಿ ಗ್ರೂಪ್ ಆಸಕ್ತಿ ತೋರಿದ್ದರಿಂದ ಬಾಗಲೂರು ಕ್ರಾಸ್ ಮತ್ತು ದೊಡ್ಡಜಾಲ ನಿಲ್ದಾಣಗಳ ನಡುವೆ ಬೆಟ್ಟಹಲಸೂರು ಮೆಟ್ರೊ ರೈಲು ನಿಲ್ದಾಣ ನಿರ್ಮಿಸಲು ಯೋಜನೆ ಬದಲಿಸಲಾಯಿತು. ಇದಕ್ಕೆ ₹140 ಕೋಟಿ ಹೂಡಿಕೆ ಮಾಡಲು ಎಂಬೆಸ್ಸಿ ಗ್ರೂಪ್ ಮುಂದೆ ಬಂದಿತ್ತು. ಈ ಸಂಬಂಧ ನಿಗಮದೊಂದಿಗೆ ಒಡಂಬಡಿಕೆಯೂ ನಡೆದಿತ್ತು.

ಬಳಿಕ ಎಂಬೆಸ್ಸಿ ಗ್ರೂಪ್ ನಿರಾಸಕ್ತಿ ವಹಿಸಿದ್ದರಿಂದ ಕೈಬಿಡಲು ಉದ್ದೇಶಿ-ಸಲಾಗಿತ್ತು. ಅಲ್ಲದೇ ಚಿಕ್ಕಜಾಲ ಬಳಿ ನಿಲ್ದಾಣ ನಿರ್ಮಿಸಲು ಬಿಎಂಆರ್‌ಸಿಎಲ್ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಇದೀಗ ಮತ್ತೆ ಎಂಬೆಸ್ಸಿ ಗ್ರೂಪ್‌ನಿಂದ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

‘ಪೂರಕ ಸ್ಪಂದನೆ ದೊರೆತಿರುವುದರಿಂದ ಈ ನಿಲ್ದಾಣವನ್ನು ಯೋಜನೆಯಲ್ಲಿ ಮರು ಸೇರ್ಪಡೆ ಮಾಡಲು ಚಿಂತಿಸಲಾಗಿದೆ. ಮತ್ತೊಮ್ಮೆ ಮಾತುಕತೆ ನಡೆಸಿ ಖಚಿತಪಡಿಸಿಕೊಳ್ಳ-ಲಾಗುವುದು’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ‘ಪ್ರಜಾವಾಣಿ’ಗೆ ಸ್ಪಷ್ಟಪಡಿ-ಸಿದರು.

ರೈತರ ಧರಣಿ ಕೇಂದ್ರ ಸರ್ಕಾರ ನಿಗದಿ ಮಾಡಿರುವ ಎಫ್‌ಆರ್‌ಪಿ ದರಕ್ಕೆ ಹೆಚ್ಚುವರಿಯಾಗಿ ಟನ್ ಕಬ್ಬಿಗೆ ₹50 ನೀಡಲು ಹೊರಡಿಸಿರುವ ಆದೇಶವನ್ನು ವಿರೋಧಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ರೈತರು ಗುರುವಾರ ಪ್ರತಿಭಟನೆ ನಡೆಸಿದರು -ಪ್ರಜಾವಾಣಿ ಚಿತ್ರ

ಮರ ಕಡಿಯಲು ಹೈಕೋರ್ಟ್ ಅಸ್ತು

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಹಾಗೂ ಹೊರವರ್ತುಲ ರಸ್ತೆಯಲ್ಲಿ ಹಾದು ಹೋಗುವ ನಮ್ಮ ಮೆಟ್ರೊ ಯೋಜನೆಗೆ ಅಡ್ಡಿಯಾಗುವ ಮರಗಳನ್ನು ಕಡಿಯುವುದಕ್ಕೆ ಸಲ್ಲಿಸಿದ್ದ ಆಕ್ಷೇಪಣೆಯನ್ನು ಹೈಕೋರ್ಟ್ ತಳ್ಳಿಹಾಕಿದ್ದು, ಮರಗಳನ್ನು ಕಡಿಯಲು ಬಿಎಂಆರ್‌ಸಿಎಲ್‌ಗೆ ಅನುಮತಿ ನೀಡಿದೆ.

ಈ ಸಂಬಂಧ ‘ಬೆಂಗಳೂರು ಎನ್ವಿರಾನ್‌ಮೆಂಟ್ ಟ್ರಸ್ಟ್’ ಮತ್ತು ದತ್ತಾತ್ರೇಯ ದೇವರೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠ, ‘ಮರ ಕತ್ತರಿಸುವುದನ್ನು ವಿರೋಧಿಸಲು ಸಮರ್ಥ ಕಾರಣಗಳಿಲ್ಲ. ಯೋಜನೆಯ ಕಾಮಗಾರಿ ಈಗಾಗಲೇ ಸಾಕಷ್ಟು ವಿಳಂಬವಾಗಿದ್ದು, ಯೋಜನೆ ಜಾರಿಗೆ ತಡೆ ನೀಡಲಾಗದು’ ಎಂದು ಹೇಳಿದೆ.

‘ಸ್ಮಾರ್ಟ್ ಪಾರ್ಕಿಂಗ್’ಗೆ ಮತ್ತೆ ಟೆಂಡರ್ ಕರೆದ ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಎಂಟೂ ವಲಯಗಳಲ್ಲಿ ಜಾರಿಗೆ ತರಲು ಯೋಜಿಸಿರುವ ‘ಪಾವತಿ ಪಾರ್ಕಿಂಗ್’ ವ್ಯವಸ್ಥೆಗೆ ಎರಡನೇ ಬಾರಿಗೆ ಟೆಂಡರ್ ಕರೆಯಲಾಗಿದೆ. ಈ ಬಾರಿ ಗುತ್ತಿಗೆ-ದಾರರಿಗೆ ಕೆಲವೊಂದು ವಿನಾಯಿತಿ ನೀಡಲಾಗಿದೆ.

‘ಸ್ಮಾರ್ಟ್ ಪಾರ್ಕಿಂಗ್’ ನಗರದಲ್ಲಿ ಒಟ್ಟಾರೆ 723 ರಸ್ತೆಗಳಲ್ಲಿ ಜಾರಿಗೆ ಬರಲಿದ್ದು, ಈ ಹಿಂದೆ ಅಕ್ಟೋಬರ್‌ನಲ್ಲಿ ಕರೆಯಲಾಗಿದ್ದ ಟೆಂಡರ್‌ನಲ್ಲಿ ಯಾರೂ ಭಾಗವಹಿಸಿರಲಿಲ್ಲ. ಇದೀಗ ಎರಡನೇ ಬಾರಿಗೆ ಟೆಂಡರ್ ಕರೆಯಲಾಗಿದೆ.

ಗುತ್ತಿಗೆದಾರರ ಒಟ್ಟಾರೆ ಆದಾಯವನ್ನು ಐದು ವರ್ಷದಿಂದ ಏಳು ವರ್ಷಗಳಿಗೆ ಹೆಚ್ಚಿಸಲಾಗಿದ್ದು, ಗುತ್ತಿಗೆ ಅವಧಿಯನ್ನು 10 ವರ್ಷಕ್ಕೆ ನಿಗದಿಪ-ಡಿಸಲಾಗಿದೆ. ಡಿ.16ರಂದು ಟೆಂಡರ್ ಸಲ್ಲಿಸಲು ಅಂತಿಮ ದಿನವಾಗಿದ್ದು, 17ರಂದು ಟೆಕ್ನಿಕಲ್ ಬಿಡ್ ನಡೆಯಲಿದೆ.

ಕೋವಿಡ್‌ನಿಂದ ವರಮಾನದ ಮೊತ್ತವನ್ನು ಬಹುತೇಕ ಗುತ್ತಿಗೆದಾರರು ಹೊಂದಿರಲಿಲ್ಲ. ಹೀಗಾಗಿ ಅದನ್ನು ಏಳು ವರ್ಷಕ್ಕೆ ಏರಿಸಲಾಗಿದೆ. ಇನ್ನು ಕೆಲವು ತಾಂತ್ರಿಕ ಮಟ್ಟವನ್ನು ಸಡಿಲಗೊಳಿಸಲಾಗಿದೆ. ರಸ್ತೆಗಳು ಮಾತ್ರ ಹಿಂದಿನಂತೆಯೇ 723 ಇರಲಿದ್ದು ಶುಲ್ಕ ಅದೇ ರೀತಿ ಇರಲಿದೆ ಎಂದು ಬಿಬಿಎಂಪಿ ಟ್ರಾಫಿಕ್ ಎಂಜಿನಿಯರಿಂಗ್ ಕೋಶದ (ಟಿಇಸಿ) ಎಂಜಿನಿಯರ್‌ಗಳು ಮಾಹಿತಿ ನೀಡಿದರು.

ರಸ್ತೆಗಳನ್ನು ಮೂರು ವರ್ಗವಾಗಿ ವಿಂಗಡಿಸಲಾಗಿದ್ದು, ದ್ವಿಚಕ್ರ ವಾಹನಕ್ಕೆ ಪ್ರತಿ ಗಂಟೆಗೆ ₹5ರಿಂದ ₹15 ಹಾಗೂ ಕಾರಿಗೆ ₹10ರಿಂದ ₹30 ಇರಲಿದೆ. ಬಿಬಿಎಂಪಿಗೆ ವಾರ್ಷಿಕವಾಗಿ ₹124 ಕೋಟಿ ವರಮಾನ ನಿರೀಕ್ಷಿಸಲಾಗಿದೆ.

ಉನ್ನತ ಶಿಕ್ಷಣ: ಪ್ರಕರಣಗಳ ಇತ್ಯರ್ಥಕ್ಕೆ ಅದಾಲತ್

ಬೆಂಗಳೂರು: ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಬಾಕಿ ಇರುವ ವ್ಯಾಜ್ಯಗಳು, ನ್ಯಾಯಾಲಯ ಪ್ರಕರಣಗಳ ಇತ್ಯರ್ಥಕ್ಕೆ ತಿಂಗಳಿಗೆ ಎರಡು ಲೋಕ ಅದಾಲತ್ ನಡೆಸಲು ಇಲಾಖೆ ನಿರ್ಧರಿಸಿದೆ.

ನಿವೃತ್ತಿ ಪಿಂಚಣಿ ಸೇರಿದಂತೆ ವಿವಿಧ ಪ್ರಕರಣಗಳ ಒಂದು ಸಾವಿರಕ್ಕೂ ಹೆಚ್ಚು ಕಡತಗಳು ವಿಲೇವಾರಿಯಾಗದೆ ಬಾಕಿ ಉಳಿದಿವೆ. ಹಲವು ಪ್ರಕರಣಗಳು ನ್ಯಾಯಾಲಯದ ಮೆಟ್ಟಿಲೇರಿರುವ ಕಾರಣ ತ್ವರಿತವಾಗಿ ಇತ್ಯರ್ಥವಾಗುತ್ತಿಲ್ಲ. ಈಗ ಇರುವ ಪ್ರಕರಣಗಳಲ್ಲಿ ಕೆಲವನ್ನು ಬಗೆಹರಿಸಲಾಗಿದೆ. ಉಳಿದ 856 ಪ್ರಕರಣಗಳ ಇತ್ಯರ್ಥಕ್ಕೆ ಪ್ರತಿ ತಿಂಗಳು ಎರಡು ಲೋಕ ಅದಾಲತ್ ಹಮ್ಮಿಕೊಳ್ಳಲಾಗುವುದು ಎಂದು ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದರು.

ಯುಯುಸಿಎಂಎಸ್ ಶೇ 90ರಷ್ಟು ಯಶಸ್ವಿ: ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, ಏಕೀಕೃತ ವಿಶ್ವವಿದ್ಯಾಲಯ ಕಾಲೇಜು ನಿರ್ವಹಣಾ ವ್ಯವಸ್ಥೆ (ಯುಯುಸಿಎಂಎಸ್) ಶೇ 90ರಷ್ಟು ಯಶಸ್ಸು ಕಂಡಿದೆ. 10ರಷ್ಟು ಲೋಪಗಳಿವೆ ಎಂದರು.

ಎಂಜಿನಿಯರಿಂಗ್ ಕಾಲೇಜುಗಳಿಗೆ ಮಂಡಳಿ: ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳ ಗುಣಮಟ್ಟ, ಸುಗಮನಿರ್ವಹಣೆಗೆ ಆಡಳಿತ ಮಂಡಳಿ ರಚಿಸಲಾಗುತ್ತಿದೆ. ಶೀಘ್ರ ಅಸ್ತಿತ್ವಕ್ಕೆ ಬರಲಿದೆ ಎಂದು ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಒಡೆತನ ವ್ಯಾಜ್ಯ: ಹಣ, ದಾಖಲೆ ಕಳ್ಳತನ ಆರೋಪದಡಿ ಎಫ್‌ಐಆರ್ ದಾಖಲು

ಮೋದಿ ಆಸ್ಪತ್ರೆಗೆ ಬೀಗ, ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೀಗ ಹಾಕಿರುವ ಡಾ. ಎಂ.ಸಿ. ಮೋದಿ ಕಣ್ಣಿನ ಆಸ್ಪತ್ರೆ ಆವರಣದಲ್ಲಿ ಉದ್ಯೋಗಿಗಳು ಪ್ರತಿಭಟನೆ ನಡೆಸಿದರು

ಬೆಂಗಳೂರು: ಡಾ. ಎಂ.ಸಿ. ಮೋದಿ ಕಣ್ಣಿನ ಆಸ್ಪತ್ರೆ ಒಡೆತನದ ವಿಚಾರವಾಗಿ ಸಂಬಂಧಿಕರ ನಡುವೆ ವ್ಯಾಜ್ಯ ಉಂಟಾಗಿದ್ದು, ಮೋದಿ ಅವರ ಅಣ್ಣನ ಮಗ ಸುಭಾಷ್ ಹಾಗೂ ಇತರರು ಆಸ್ಪತ್ರೆಗೆ ಬೀಗ ಹಾಕಿದ್ದಾರೆ. ಇದನ್ನು ಖಂಡಿಸಿ ಆಸ್ಪತ್ರೆಯ ಉದ್ಯೋಗಿಗಳು ಗುರುವಾರ ಪ್ರತಿಭಟನೆ ನಡೆಸಿದರು.

ಪದ್ಮಭೂಷಣ ಡಾ. ಎಂ.ಸಿ. ಮೋದಿ ಪಬ್ಲಿಕ್ ಟ್ರಸ್ಟ್ ಅಡಿಯಲ್ಲಿ ರಾಜಾಜಿನಗರದ ಪಶ್ಚಿಮ ಕಾರ್ಡ್ ರಸ್ತೆಯ 2ನೇ ಹಂತದಲ್ಲಿ ಆಸ್ಪತ್ರೆ ಸ್ಥಾಪಿಸಲಾಗಿದೆ. ಟ್ರಸ್ಟಿಗಳಾದ ಎಂ.ಸಿ. ಮೋದಿ, ಮಗ ಅಮರನಾಥ್ ಹಾಗೂ ಸೊಸೆ ಸುವರ್ಣಾ ತೀರಿಕೊಂಡ ನಂತರ ವಾರಸುದಾರರಿಲ್ಲದಿದ್ದರಿಂದ ಉದ್ಯೋಗಿಗಳೇ ಆಸ್ಪತ್ರೆ ಆಡಳಿತ ನಡೆಸುತ್ತಿದ್ದಾರೆ. ಇದರ ನಡುವೆಯೇ ಸಂಬಂಧಿಕರು ಎಂಬುದಾಗಿ ಹೇಳುತ್ತಿರುವ ಹಲವರು, ಆಸ್ಪತ್ರೆಯ ಒಡೆತನ ತಮ್ಮದಾಗಿಸಿಕೊಳ್ಳಲು ಯತ್ನಿಸುತ್ತಿದ್ದಾರೆ.

'ನಾನು ಟ್ರಸ್ಟಿ. ಆಸ್ಪತ್ರೆ ಒಡೆತನ ನನಗೆ ಸೇರಿದೆಂದು ಹೈಕೋರ್ಟ್ ಆದೇಶ ನೀಡಿದೆ' ಎಂಬುದಾಗಿ ಹೇಳಿ ಡಿ. 2ರಂದು ಸಂಜೆ ಆಸ್ಪತ್ರೆಗೆ ಬಂದಿದ್ದ ಸುಭಾಷ್ ಹಾಗೂ ಇತರರು, ಆಡಳಿತ ಮಂಡಳಿ ಕಚೇರಿಗೆ ಹೋಗಿದ್ದರು. ಒಡೆತನ ತಮ್ಮದೆಂದು ಉದ್ಯೋಗಿಗಳಿಗೆ ಹೇಳಿದ್ದರು.

ಅದಕ್ಕೆ ಒಪ್ಪದ ಉದ್ಯೋಗಿಗಳು, 'ಟ್ರಸ್ಟ್‌ಗೆ ವಾರಸುದಾರರು ಇಲ್ಲ. ನೀವು ಟ್ರಸ್ಟಿ ಎಂಬುದು ಸುಳ್ಳು. ನಿಮಗೆ ಇಲ್ಲಿ ಕುಳಿತುಕೊಳ್ಳಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದಿದ್ದರು' ಎಂದು ಮಹಾಲಕ್ಷ್ಮಿ ಲೇಔಟ್ ಠಾಣೆ ಮೂಲಗಳು ಹೇಳಿವೆ.

'ಮಾತಿನ ಚಕಮಕಿ ನಡೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಸುಭಾಷ್ ಹಾಗೂ ಇತರರು, ಆಸ್ಪತ್ರೆಗೆ ಬೀಗ ಹಾಕಿಕೊಂಡು ಸ್ಥಳದಿಂದ ಹೊರಟು ಹೋಗಿದ್ದಾರೆ. ಇದನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿರುವ ಉದ್ಯೋಗಿಗಳು, 'ನೂರಾರು ಕೋಟಿ ಮೌಲ್ಯದ ಆಸ್ಪತ್ರೆಯ ಆಸ್ತಿ ಕಬಳಿಸಲು ಹುನ್ನಾರ ನಡೆಸಿರುವ ಸುಭಾಷ್ ಹಾಗೂ ಇತರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂಬುದಾಗಿ ಒತ್ತಾಯಿಸುತ್ತಿದ್ದಾರೆ. ಆದರೆ, ಒಡೆತನದ ವ್ಯಾಜ್ಯ ನ್ಯಾಯಾಲಯದಲ್ಲಿ ಇರುವುದರಿಂದ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹಣ, ದಾಖಲೆ ಕಳ್ಳತನ ಆರೋಪ: 'ಸುಭಾಷ್ ಮೋದಿ, ಅವರ ಮಗ ಮಲ್ಲಿಕಾರ್ಜುನ್ ಹಾಗೂ ಸೊಸೆ ಪ್ರಿಯದರ್ಶಿನಿ ಆಸ್ಪತ್ರೆಗೆ ಅಕ್ರಮವಾಗಿ ಪ್ರವೇಶಿಸಿದ್ದಾರೆ. ಕೋಟಿಗೂ ಹೆಚ್ಚು ಹಣ ಹಾಗೂ ಟ್ರಸ್ಟ್‌ನ ದಾಖಲೆಗಳನ್ನು ಕದ್ದುಕೊಂಡು ಹೋಗಿದ್ದಾರೆ' ಎಂದು ಆರೋಪಿಸಿ ಮಾಜಿ ಸಚಿವರಾದ ಲೀಲಾದೇವಿ ಆರ್. ಪ್ರಸಾದ್ ಅವರು ಮಹಾಲಕ್ಷ್ಮಿ ಲೇಔಟ್ ಠಾಣೆಗೆ ದೂರು ನೀಡಿದ್ದಾರೆ. ಮೂವರೂ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಸುವರ್ಣಾಮೋದಿಅವರಸಂಬಂಧಿ ಎಂದು ಹೇಳಿಕೊಂಡಿರುವ ಲೀಲಾದೇವಿ ಪ್ರಸಾದ್ ಅವರು ಡಿ. 3ರಂದು ದೂರು ನೀಡಿದ್ದಾರೆ. ಹಣ ಹಾಗೂ ದಾಖಲೆ ಕಳ್ಳತನ ಪ್ರಕರಣ ದಾಖಲಾಗುತ್ತಿದ್ದಂತೆ ಸುಭಾಷ್ ಹಾಗೂ ಇತರರು ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ. ಜೊತೆಗೆ, ಆಸ್ಪತ್ರೆ ಬಳಿ ಭದ್ರತೆಗಾಗಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಆಸ್ಪತ್ರೆಗೆ ಬರುವ ರೋಗಿಗಳನ್ನು ಬೇರೆ ಆಸ್ಪತ್ರೆಗೆ ಕಳುಹಿಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಏನಿದು ಟ್ರಸ್ಟ್ ವ್ಯಾಜ್ಯ

'ಪ್ರಸಿದ್ಧ ನೇತ್ರ ತಜ್ಞರಾಗಿದ್ದ ಮುರಿಗೆಪ್ಪ ಚನ್ನವೀರಪ್ಪ ಮೋದಿ (ಎಂ.ಸಿ. ಮೋದಿ), 1995ರಲ್ಲಿ ಪದ್ಮಭೂಷಣ ಡಾ. ಎಂ.ಸಿ. ಮೋದಿ ಪಬ್ಲಿಕ್ ಟ್ರಸ್ಟ್ ಸ್ಥಾಪಿಸಿದ್ದರು. ಇದಕ್ಕೆ ಅವರೇ ಟ್ರಸ್ಟಿ ಆಗಿದ್ದರು. ಇದೇ ಟ್ರಸ್ಟ್ ಅಡಿ ಕಣ್ಣಿನ ಆಸ್ಪತ್ರೆ ಆರಂಭಿಸಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'2005ರಲ್ಲಿ ಎಂ.ಸಿ. ಮೋದಿ ಅವರು ತೀರಿಕೊಂಡರು. ಬಳಿಕ, ನೇತ್ರ ತಜ್ಞರಾಗಿದ್ದ ಅವರ ಮಗ ಅಮರನಾಥ್ ಹಾಗೂ ಸೊಸೆ ಸುವರ್ಣಾ ಟ್ರಸ್ಟಿಗಳಾಗಿ ಮುಂದುವರಿದಿದ್ದರು. ಅವರೇ ಆಸ್ಪತ್ರೆ ಆಡಳಿತ ನೋಡಿಕೊಳ್ಳುತ್ತಿದ್ದರು. 2012ರಲ್ಲಿ ಸುವರ್ಣಾ ಹಾಗೂ 2014ರಲ್ಲಿ ಅಮರನಾಥ್ ಸಹ ತೀರಿಕೊಂಡರು. ದಂಪತಿಗೆ ಮಕ್ಕಳು ಇರಲಿಲ್ಲ. ಹೀಗಾಗಿ, ಟ್ರಸ್ಟ್‌ಗೆ ವಾರಸುದಾರರು ಯಾರೂ ಇಲ್ಲದಂತಾಗಿತ್ತು' ಎಂದು ಮೂಲಗಳು ಹೇಳಿವೆ.

'ಆಸ್ಪತ್ರೆ ಉದ್ಯೋಗಿಗಳೇ ಆಸ್ಪತ್ರೆ ನಡೆಸಿಕೊಂಡು ಹೋಗುತ್ತಿದ್ದರು. ಆಡಳಿತವನ್ನು ಅವರೇ ನೋಡಿಕೊಳ್ಳುತ್ತಿದ್ದರು. ಸದ್ಯ ಆಸ್ಪತ್ರೆ ಜಾಗಕ್ಕೆ ನೂರಾರು ಕೋಟಿ ರೂಪಾಯಿ ಬೆಲೆ ಬಂದಿದೆ. ಹೀಗಾಗಿ, ಸಂಬಂಧಿಕರ ಕಣ್ಣು ಆಸ್ಪತ್ರೆ ಮೇಲೆ ಬಿದ್ದಿದೆ. ತಾನೂ ಟ್ರಸ್ಟಿ ಎಂಬುದಾಗಿ ಹೇಳುತ್ತಿರುವ ಸುಭಾಷ್, ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದಾರೆ. ಲೀಲಾದೇವಿ ಆರ್. ಪ್ರಸಾದ್ ಸಹ ಟ್ರಸ್ಟಿ ಎಂಬುದಾಗಿ ಹೇಳಿಕೊಂಡು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುವ ಮಾಹಿತಿ ಇದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಚಿಲುಮೆ ಪ್ರಕರಣ: ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ಮತದಾರರ ಮಾಹಿತಿಯನ್ನು ಅಕ್ರಮವಾಗಿ ಸಂಗ್ರಹಿಸಿ ದುರುಪಯೋಗ ಮಾಡಿಕೊಳ್ಳಲಾಗಿದೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಅಮಾನತುಗೊಂಡಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್, ಚಿಲುಮೆ ಸಂಸ್ಥೆಯ ಸಿಬ್ಬಂದಿ ಜ್ಯೋತಿಲಕ್ಷ್ಮೀ ಹಾಗೂ ಕೆಂಪೇಗೌಡ ಅವರಿಗೆ ನಿರೀಕ್ಷಣಾ ಜಾಮೀನು ನೀಡಲು ನಗರದ 66ನೇ ಹೆಚ್ಚುವರಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ನಿರಾಕರಿಸಿದೆ.

ಈ ಸಂಬಂಧ ಕೆ. ಶ್ರೀನಿವಾಸ್, ಸಿಬ್ಬಂದಿಗಳಾದ ಜ್ಯೋತಿ ಲಕ್ಷ್ಮೀ, ಕಂಪೇಗೌಡ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳನ್ನು ನ್ಯಾಯಾಧೀಶ ಸಿ.ಆರ್. ಹೇಮಂತ್ ಕುಮಾರ್ ವಜಾಗೊಳಿಸಿ ಆದೇಶಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗಲು ಹಲಸೂರು ಗೇಟ್ ಠಾಣಾಧಿಕಾರಿ ಕಳೆದ ವಾರ ಕೆ.ಶ್ರೀನಿವಾಸ್ ಅವರಿಗೆ ನೋಟಿಸ್ ಜಾರಿಗೊಳಿಸಿದ್ದರು. ವಿಚಾರಣೆಗೆ ಹಾಜರಾಗದ ಶ್ರೀನಿವಾಸ್ ಬಂಧನ ಭೀತಿಯಿಂದ ನಿರೀಕ್ಷಣಾ ಜಾಮೀನು ಕೋರಿ ಡಿಸೆಂಬರ್ 2ರಂದು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಕನ್ನಡಿಗರ ಮೇಲೆ ದಾಳಿ: ಪ್ರತಿಭಟನೆ

ಬೆಂಗಳೂರು: ಬೆಳಗಾವಿ ಗಡಿ ವಿವಾದವನ್ನು ಕೆಣಕಿ, ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ಸಂಸ್ಥೆಗಳ ಆಸ್ತಿ-ಪಾಸ್ತಿಗಳ ಮೇಲೆ ದಾಳಿ ನಡೆಸುತ್ತಿರುವ ಗೂಂಡಾಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು (ಟಿ.ಎ. ನಾರಾಯಣಗೌಡ ಬಣ) ಎಸ್‌ಬಿಎಂ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

'ಬೆಳಗಾವಿ ಗಡಿ ವಿವಾದ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯಲಿದ್ದು, ಮಹಾರಾಷ್ಟ್ರ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನೆಲದ ಕಾನೂನಿಗೆ ಗೌರವ ನೀಡಿ ತೀರ್ಪಿಗೆ ಕಾಯುವ ಬದಲು ಗಡಿ ಭಾಗದಲ್ಲಿ ಸಂಘರ್ಷ ಮೂಡಿಸಲು ಪ್ರಯತ್ನಿಸುತ್ತಿದೆ. ಬೆಳಗಾವಿಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ನಿಷೇಧಿಸಿ ಅಲ್ಲಿ ಶಾಂತಿ ಸ್ಥಾಪನೆಗೆ ಅಗತ್ಯ ಕ್ರಮಕೈಗೊಳ್ಳಬೇಕು' ಎಂದು ಕರವೇ ಆಗ್ರಹಿಸಿದೆ.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಹಾರಾಷ್ಟ್ರದ ಕನ್ನಡಿಗರ ರಕ್ಷಣೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಈ ಕುರಿತು ಪ್ರಧಾನಮಂತ್ರಿ ನರೇಂದ್ರ ಮೋದಿ ಮಧ್ಯಪ್ರವೇಶಕ್ಕೆ ಆಗ್ರಹಿಸಿ ಗಡಿ ವಿವಾದವನ್ನು ಬಗೆಹರಿಸಬೇಕು' ಎಂದು ಕರವೇ ಮನವಿ ಪತ್ರದಲ್ಲಿ ತಿಳಿಸಿದೆ.

ವಿಜ್ಞಾನಿ ಡಾ.ವಿ.ಕೆ.ಅತ್ರೆ ಅಭಿಮತ

ವಿಚಾರ ಸಂಕಿರಣದಲ್ಲಿ ಉತ್ಪಾದನೆ, ಕಚ್ಚಾವಸ್ತುಗಳು, ವಿನ್ಯಾಸ, 3ಡಿ ಪ್ರಿಂಟಿಂಗ್ ಕುರಿತು ಕಾರ್ಯಾಗಾರ, 38 ಮಳಿಗೆಗಳಿದ್ದು, 350ಕ್ಕೂ ಹೆಚ್ಚು ತಜ್ಞರು ಭಾಗಿ

ಉದ್ಯೋಗಾವಕಾಶ ಹೆಚ್ಚಿಸಿದ ತಂತ್ರಜ್ಞಾನ ಕ್ಷೇತ್ರ

ಬೆಂಗಳೂರು: ತಂತ್ರಜ್ಞಾನದ ಬೆಳವಣಿಗೆಯಿಂದ ಉದ್ಯೋಗವಕಾಶಗಳು ಹೆಚ್ಚಾಗಿವೆ. ಭಾರತ ಇಂದು ಉತ್ಪನ್ನಗಳನ್ನು ರಫ್ತು ಮಾಡುವಷ್ಟು ಸ್ವಾವಲಂಬನೆ ಸಾಧಿಸಿದೆ ಎಂದು ವಿಜ್ಞಾನಿ ಡಾ.ವಿ.ಕೆ.ಅತ್ರೆ ಹೇಳಿದರು.

ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯ, ಅಮೆರಿಕನ್ ಸೊಸೈಟಿ ಆಫ್ ಮೆಕಾನಿಕಲ್ ಎಂಜಿನಿಯರ್ಸ್ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ 'ಎಎಸ್‌ಎಂಇ ಇಂಡಿಯಾ ಎಎಂ 3ಡಿ ಏರೋ-2022' ವಿಚಾರ ಸಂಕಿರಣ ಮತ್ತು ವಸ್ತುಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ತಂತ್ರಜ್ಞಾನ ಬೆಳೆದಂತೆ ಹೂಡಿಕೆ, ಉದ್ಯೋಗವಕಾಶಗಳು ಹೆಚ್ಚಾಗಿವೆ. ಇದರಿಂದ ಮೇಕ್ ಇನ್ ಇಂಡಿಯಾ ಸಾಧ್ಯವಾಗಿದೆ. ಬಹುತೇಕ ಉತ್ಪಾದನೆಗಳು ಭಾರತದಲ್ಲೇ ಸಿದ್ಧವಾಗುತ್ತಿವೆ. ಇದರಿಂದ ಸ್ವದೇಶಿ ನಿರ್ಮಿತ ಎಲ್‌ಸಿಎಚ್ ರೂಪಿಸಿದ್ದೇವೆ ಎಂದರು.

'ಸಂಶೋಧನೆಗಳು ಕಾಗದಗಳಲ್ಲೇ ಉಳಿಯಬಾರದು. ಕಾರ್ಯರೂಪಕ್ಕೆ ಬಂದಾಗ ಹೊಸ ಆವಿಷ್ಕಾರ ಸಾಧ್ಯ. ವಿದ್ಯಾರ್ಥಿಗಳು ವೈಮಾನಿಕ ಕ್ಷೇತ್ರದ ಕಡೆಗೂ ಆಲೋಚಿಸಬೇಕು' ಎಂದರು.

ಆಧುನಿಕ ತಂತ್ರಜ್ಞಾನ ಸಾಧನಗಳನ್ನು ಬಳಸಿಕೊಂಡು ಸಿವಿಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಗುಣಮಟ್ಟ, ಕ್ರಿಯಾಶೀಲತೆ ಕಾರ್ಯಕ್ಷಮತೆ ಸಾಧಿಸುವಲ್ಲಿ ಹೆಚ್ಚಿನ ಸಂಶೋಧನೆಗಳು ನಡೆಯಬೇಕಿದೆ. ಯುವ ಜನರ ಪ್ರತಿಭೆ ಗುರುತಿಸಿ ನಮ್ಮಲ್ಲೇ ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕಿದೆ. ಪ್ರತಿಭಾ ಪಲಾಯನ ತಡೆಯಬೇಕಿದೆ ಎಂದು ಅಭಿಪ್ರಾಯಪಟ್ಟರು.

ಬೋಯಿಂಗ್ ಅಡೆಕ್ಟಿವ್ ಮ್ಯಾನಿಫ್ಯಾಕ್ಚರಿಂಗ್ ಉಪಾಧ್ಯಕ್ಷ ಡಾ.ಮಿಲೆಸ್ಸಾ ಓರ್ಮಿ ಮಾತನಾಡಿದರು. ಬೋಯಿಂಗ್ ಕಂಪನಿ ಉಪಾಧ್ಯಕ್ಷ ಸ್ಟೀವ್ ಚಿಶೋಲಂ, ಎಎಸ್‌ಎಂಇ ಸಿಇಒ ಥಾಮಸ್ ಕೋಸ್ಟಬೇಲ್, ಗೋಕುಲ ಎಜುಕೇಷನ್ ಫೌಂಡೇಷನ್ ಉಪಾಧ್ಯಕ್ಷ ಎಂ.ಆರ್.ಸೀತಾರಾಂ, ಕಾರ್ಯದರ್ಶಿ ಎಂ.ಆರ್.ರಾಮಯ್ಯ, ಪ್ರಾಂಶುಪಾಲ ಡಾ.ಎನ್.ವಿ.ಆರ್. ನಾಯ್ಡು ಇದ್ದರು.

ಅನಾವರಣಗೊಂಡ ಕಲಾ ಪ್ರಪಂಚ

ದೇಶದ ಪ್ರಮುಖ ಕಲಾವಿದರ 4 ಸಾವಿರಕ್ಕೂ ಅಧಿಕ ಕಲಾಕೃತಿಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಕಲ್ಪನೆಗಳಿಗೆ ಜೀವ ತುಂಬಿದ ಕಲಾವಿದರು, ವರ್ಣ ಸ್ಪರ್ಶದ ಮೂಲಕ ಇಲ್ಲಿನ ಅರಮನೆ ಮೈದಾನದಲ್ಲಿ ಕಲಾ ಪ್ರಪಂಚವನ್ನು ಅನಾವರಣ ಮಾಡಿದ್ದಾರೆ.

ಇಂಡಿಯಾ ಆರ್ಟ್ ಫೆಸ್ಟಿವಲ್‌ನ ನಗರದ ಎರಡನೇ ಆವೃತ್ತಿಗೆ ಗುರುವಾರ ಚಾಲನೆ ದೊರೆತಿದ್ದು, ಪ್ರದರ್ಶನದಲ್ಲಿರುವ 4 ಸಾವಿರಕ್ಕೂ ಅಧಿಕ ಕಲಾಕೃತಿಗಳು ಕಲಾಸಕ್ತರನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಗಿವೆ. ಅರಳಿನಿಂತ ಬಣ್ಣ ಬಣ್ಣದ ಹೂವುಗಳು, ಗರ್ಜಿಸುತ್ತಿರುವ ಸಿಂಹ, ಧ್ಯಾನ ನಿರತ ಗೌತಮ ಬುದ್ಧ, ರಾಜ ಗಾಂಭೀರ್ಯದಲ್ಲಿ ಹೆಜ್ಜೆ ಹಾಕುತ್ತಿರುವ ಆನೆ, ನಿದ್ದೆಗೆ ಜಾರಿರುವ ಮಗು... ಹೀಗೆ ಕಲಾವಿದರು ತಮ್ಮ ಕಲ್ಪನೆಗಳು ಹಾಗೂ ಸುತ್ತಮುತ್ತಲಿನ ಅಚ್ಚರಿಗಳಿಗೆ ಜೀವ ತುಂಬಿದ್ದಾರೆ.

ಉತ್ಸವಕ್ಕೆ ಭೇಟಿ ನೀಡಿದ ಕಲಾ ರಸಿಕರು ದೇಶದ ವಿವಿಧ ಭಾಗಗಳಿಂದ ಬಂದ ಕಲಾವಿದರನ್ನು ಭೇಟಿ ಮಾಡಿ, ಕಲಾಕೃತಿಗಳ ಬಗ್ಗೆ ಮಾಹಿತಿ ಪಡೆದರು. ತೈಲವರ್ಣ, ಅಕ್ರಲಿಕ್ ಸೇರಿ ವಿವಿಧ ಪ್ರಕಾರದ ಕಲಾಕೃತಿಗಳು ನೋಡುಗರ ಕಣ್ಮನ ತಣಿಸಿದವು.

ಶಕ್ತಿ ಬರ್ಮನ್, ಯೂಸುಫ್ ಅರಕ್ಕಲ್, ಲಾಲು ಪ್ರಸಾದ್ ಶಾ, ಎಸ್.ಜಿ. ವಾಸುದೇವ್, ಲಕ್ಷ್ಮಣ್ ಏಲೆ, ಗುರುದಾಸ್ ಶೆಣೈ, ಲಕ್ಷ್ಮ ಗೌಡ್, ಜತಿನ್ ದಾಸ್, ಜೋಗೆನ್ ಚೌಧರಿ, ಮನು ಪ್ರಕಾಶ್, ಎನ್.ಎಸ್. ಹರ್ಷ, ಪಿ.ಜ್ಞಾನ, ಸೀಮಾ ಕೊಹ್ಲಿ ಸೇರಿ ಕಲಾ ಕ್ಷೇತ್ರದ ಪ್ರಮುಖರ ಕಲಾಕೃತಿಗಳನ್ನೂ ಉತ್ಸವದಲ್ಲಿ ನೋಡಬಹುದಾಗಿದೆ. ₹ 20 ಲಕ್ಷ ಮೌಲ್ಯದ ಕಲಾಕೃತಿಗಳೂ ಲಭ್ಯವಿವೆ. ಇಷ್ಟವಾದ ಕಲಾಕೃತಿಗಳನ್ನು ನೇರವಾಗಿ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ. ಸಿಂಗಪುರದ ಕಲಾವಿದರೂ ಭಾಗವಹಿಸಿದ್ದಾರೆ. ಯುವ ಪ್ರತಿಭೆಗಳಿಗೂ ಉತ್ಸವದಲ್ಲಿ ಅವಕಾಶ ನೀಡಲಾಗಿದೆ.

ಪುಣೆಯ ಕಲಾವಿದ ಎಂ. ನಾರಾಯಣ ಅವರು ಕುದುರೆಗಳನ್ನೇ ಕೇಂದ್ರವಾಗಿರಿಸಿಕೊಂಡು ಕಲಾಕೃತಿಗಳನ್ನು ರಚಿಸಿದ್ದಾರೆ. ಧನ್ಯಾ ದಾಸ್ ಮತ್ತು ಕಲ್ಯಾಣಿ ರವಿಶಂಕರ್ ಅವರು ರಾಧಾ–ಕೃಷ್ಣರನ್ನು ಚಿತ್ರಿಸಿದ್ದಾರೆ. ಸುನೀತಾ ಕೃಷ್ಣ ಮತ್ತಿತರರು ಸಾಂಸ್ಕೃತಿಕ ವೈವಿಧ್ಯತೆ ಹಾಗೂ ಧಾರ್ಮಿಕ ಆಚರಣೆಗಳ ಚಿತ್ರ ರಚಿಸಿದ್ದಾರೆ. ಮುಂಬೈನ ಮೋನಿಕಾ ಫುಲೆ ಅವರು ತಾಯಿ–ಮಗುವಿನ ವಾತ್ಸಲ್ಯದ ಬಗ್ಗೆ ರಚಿಸಿದ ಕಲಾಕೃತಿ ಗಮನ ಸೆಳೆಯುತ್ತಿದೆ.

ಈ ಪ್ರದರ್ಶನವು ಇದೇ 11ರವರೆಗೆ ಬೆಳಿಗ್ಗೆ 11ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಅರಮನೆ ಮೈದಾನದ ಕಿಂಗ್ಸ್ ಕೋರ್ಟ್‌ನಲ್ಲಿ ನಡೆಯಲಿದೆ. ಸಾರ್ವಜನಿಕರಿಗೆ ಪ್ರವೇಶ ಉಚಿತ ಇರಲಿದೆ.

ಕಲಾರಸಿಕರು ಕುತೂಹಲದಿಂದ ಕಲಾಕೃತಿಗಳನ್ನು ವೀಕ್ಷಿಸಿದರು


ಉತ್ತಮ ಕಲಾಕೃತಿಗಳಿಗೆ ಯಾವಾಗಲೂ ಬೇಡಿಕೆ ಇರುತ್ತದೆ. ಕಲಾಕೃತಿಗಳನ್ನು ಖರೀದಿಸಲು ಜನರು ಆಸಕ್ತಿ ತೋರುತ್ತಿದ್ದಾರೆ. ವಯಸ್ಸಾದಂತೆ ಕಲಾವಿದ ಪರಿಪಕ್ವನಾಗುತ್ತಾನೆ

ಎಂ. ನಾರಾಯಣ, ಕಲಾವಿದ, ಪುಣೆ

ವಿವಿಧ ಅಳತೆಯ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಇರಿಸಲಾಗಿದ್ದು, ಜನರಿಂದ ಪ್ರಶಂಸೆ ವ್ಯಕ್ತವಾಗುತ್ತಿದೆ. ಬಾಲ್ಯದ ನೆನಪುಗಳನ್ನು ಕೇಂದ್ರವಾಗಿರಿಕೊಂಡು ಚಿತ್ರಿಸಿದ್ದೇನೆ.

ಮೋನಿಕಾ ಫುಲೆ, ಕಲಾವಿದೆ, ಮುಂಬೈ

ಬೆಂಗಳೂರು ರೇಸ್

ಯುಕಾನ್ ಗೆಲ್ಲುವ ನಿರೀಕ್ಷೆ

ವಿ.ವೇಣುಗೋಪಾಲ್ ಮೆಮೋರಿಯಲ್ ಟ್ರೋಫಿ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಯುಕಾನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಬ್ಲಾಕ್ ವೆಲ್ವೆಟ್ 2, ಕ್ಯಾಷ್ ಔಟ್ 5, ಪರ್ಫೆಕ್ಟ್ ಹಲೊ 8
2ನೇ ರೇಸ್: ಸೋಸಿಯೆಬಲ್ 9, ಸ್ಟಾರ್ಸ್ ಎಬೌವ್ 2, ಗೋಲ್ಡ್ ಗ್ರೇ 5
3ನೇ ರೇಸ್: ಟಚ್ ಆಫ್ ಗ್ರೇ 5, ಆರ್ಟ್ ಗ್ಯಾಲರಿ 1, ಇನ್ ದಿ ಲೈಟ್ 3
4ನೇ ರೇಸ್: ಯುಕಾನ್ 2, ಎಟರ್ನಲ್ ಪ್ರಿನ್ಸೆಸ್ 6, ಸ್ಯಾಫೈರ್ 8
5ನೇ ರೇಸ್: ಡ್ರಾಗನ್ ಗೋಲ್ಡ್ 1, ಹೋಪ್ ಐಲ್ಯಾಂಡ್ 2, ಇಕೊ ಫ್ರೆಂಡ್ಲಿ 4
6ನೇ ರೇಸ್: ಮಾಂಟೆಲಿನಾ 3, ಕಿಂಗ್ಸ್ ಸ್ಟೀಚ್ 2, ಒಸಿರಿಸ್ 1
7ನೇ ರೇಸ್: ಮೈಟಿ ಸ್ವಾಲೊ 5, ಕುಲ್ಲಮ್ 3, ರೋಮನ್ ಪವರ್ 6

ಉತ್ತಮ ಬೆಟ್: ಡ್ರಾಗನ್ ಗೋಲ್ಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಚಿತ್ರಾವಳಿ

ನಗರದ ಜೆ.ಎಸ್. ಪದವಿಪೂರ್ವ ಕಾಲೇಜಿನಲ್ಲಿ ಬುಧವಾರ ನಡೆದ 'ಇಸ್ರೊ ಮತ್ತು ಬಾಹ್ಯಾಕಾಶ ವಿಜ್ಞಾನ' ಕಾರ್ಯಾಗಾರವನ್ನು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ್ ಎಸ್. ಎಂ., ಉದ್ಘಾಟಿಸಿದರು. ಇಸ್ರೊ ವಿಜ್ಞಾನಿ ಎಚ್.ಎಲ್. ಶ್ರೀನಿವಾಸ್, ಕಾಲೇಜಿನ ನಿರ್ದೇಶಕ ಜಯರಾಮ್ ಶೆಟ್ಟಿ, ಸುಲತಾ ಜೆ. ಶೆಟ್ಟಿ, ನಿಧೀಶ್ ಶೆಟ್ಟಿ, ವಿಜಯಲಕ್ಷ್ಮಿ ಎನ್.ಕೆ., ಇದ್ದರು.

ವರ್ತೂರು ಕೆರೆ ಮೇಲಿನ ರಸ್ತೆಯಲ್ಲಿ ಹಸಿತ್ಯಾಜ್ಯ ವಿಂಗಡಣೆಯನ್ನು ಬಿಬಿಎಂಪಿ ಗುರುವಾರದಿಂದ ಸ್ಥಗಿತಗೊಳಿಸಿದೆ. 'ಪ್ರಜಾವಾಣಿ'ಯಲ್ಲಿ ಗುರುವಾರ 'ವರ್ತೂರು ಕೆರೆಗೆ ದ್ರವ ತ್ಯಾಜ್ಯ' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ಈ ಬಗ್ಗೆ ಘನತ್ಯಾಜ್ಯ ವಿಭಾಗದ ಜಂಟಿ ಆಯುಕ್ತರು ಎಂಜಿನಿಯರ್‌ಗಳಿಗೆ ಸೂಚನೆ ನೀಡಿ, ಕಸದ ವಾಹನಗಳನ್ನು ಅಲ್ಲಿ ನಿಲ್ಲಿಸದಂತೆ ತಾಕೀತು ಮಾಡಿದ್ದಾರೆ. ಆ ಸ್ಥಳವನ್ನು ಬಿಬಿಎಂಪಿ ಸಿಬ್ಬಂದಿ ಸ್ವಚ್ಛಗೊಳಿಸಿದ್ದಾರೆ

ಕೇಂದ್ರ ಸಂಗೀತ ನಾಟಕ ಅಕಾಡಮಿ ವತಿಯಿಂದ 'ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ' ಪಡೆದ ಡ್ರಮ್ ವಾದಕ ಬಿ.ಎಸ್. ಅರುಣ್ ಕುಮಾರ್ ಅವರಿಗೆ ನಗರದಲ್ಲಿ ಗಾಯಕರು ಅಭಿನಂದಿಸಿದರು. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ ಆನೂರು ಅನಂತ ಕೃಷ್ಣ ಶರ್ಮಾ, ವಿದ್ವಾನ್ ಎಸ್.ವಿ. ಗಿರಿಧರ್, ಬಾಲಿ ಹಾಗೂ ಬಿ.ವಿ. ಶ್ರೀನಿವಾಸ್ ಇದ್ದಾರೆ.

ಪ್ರಶಸ್ತಿಗೆ ವನಿತಾ ತೊರವಿ ಆಯ್ಕೆ

ವನಿತಾ ಎನ್. ತೊರವಿ

ಬೆಂಗಳೂರು: ಮಕ್ಕಳ ಹಕ್ಕುಗಳ ಜಾಗೃತಿ ಮತ್ತು ರಕ್ಷಣೆ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ವಿಜಯಪುರದ ವನಿತಾ ಎನ್. ತೊರವಿ ಅವರನ್ನು 2022ನೇ ಸಾಲಿನ 'ಗ್ಲೋಬಲ್ ಹ್ಯೂಮನ್ ರೈಟ್ಸ್ ಪ್ರೊಟೆಕ್ಷನ್' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ಪ್ರದಾನ ಸಮಾರಂಭ ನವದೆಹಲಿಯಲ್ಲಿ ಡಿ. 10ರಂದು ನಡೆಯಲಿದೆ ಎಂದು ಭಾರತೀಯ ಮಾನವ ಹಕ್ಕುಗಳ ಸಂಸ್ಥೆಯ ನಿರ್ದೇಶಕ ರಾಹುಲ್ ರಾಯ್ ಅವರು ತಿಳಿಸಿದ್ದಾರೆ.

ರಾಜ್ಯ ಮಕ್ಕಳ ಹಕ್ಕುಗಳ ಆಯೋಗದಲ್ಲಿ ಎರಡು ಅವಧಿಗೆ ಕೆಲಸ ಮಾಡಿರುವ ತೊರವಿ ಅವರನ್ನು ಅಂತರರಾಷ್ಟ್ರೀಯ ಮಾನವ ಹಕ್ಕುಗಳ ವೀಕ್ಷಣಾಲಯ (ಐಎಚ್‌ಆರ್‌ಒ) ಇತ್ತೀಚೆಗೆ 'ಮಕ್ಕಳ ಹಕ್ಕುಗಳ ಜಾಗತಿಕ ರಾಯಭಾರಿ' ಸಂಸ್ಥೆಗೆ ನಾಮನಿರ್ದೇಶನ ಮಾಡಿದೆ.

ಯೋಗದಲ್ಲಿ ವಿಶ್ವ ದಾಖಲೆ

ಎಂ. ಸವಿತಾ ರಾಣಿ

ಬೆಂಗಳೂರು: ಅಂತರರಾಷ್ಟ್ರೀಯ ಯೋಗದಿನದಂದು ನೀರಿನಲ್ಲಿ ಯೋಗಾಸನದ ವಿವಿಧ ಭಂಗಿಗಳನ್ನು ಪ್ರದರ್ಶನ ಮಾಡಿದ್ದ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತರಬೇತಿ ಮತ್ತು ಉದ್ಯೋಗ ವಿಭಾಗದ ಮುಖ್ಯಸ್ಥೆ ಎಂ. ಸವಿತಾ ರಾಣಿ ಅವರಿಗೆ 'ಲಂಡನ್‌ನ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್' ಪ್ರಮಾಣಪತ್ರ ಲಭಿಸಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ನೀರಿನಲ್ಲಿ ತೇಲುತ್ತಲೇ ಯೋಗ ಮಾಡುತ್ತಾ ರಾಷ್ಟ್ರಧ್ವಜ ಎತ್ತಿ ಹಿಡಿದು ಗೌರವ ಸಲ್ಲಿಸಿದ್ದರು.

ಮಾನವ– ಚಿರತೆ ಸಂಘರ್ಷ ತಡೆಗೆ 'ಗುಬ್ಬಿ' ಸೂತ್ರ

ಬೆಂಗಳೂರು: ರಾಜ್ಯದಲ್ಲಿ ಮಾನವ-ಚಿರತೆ ಮಧ್ಯದ ಸಂಘರ್ಷ ತಡೆಯಲು ವನ್ಯಜೀವಿ ತಜ್ಞ ಡಾ.ಸಂಜಯ್ ಗುಬ್ಬಿ ಹಲವು ಸೂತ್ರಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ.

1972ರ ನಂತರದ ವನ್ಯಜೀವಿ ಸಂರಕ್ಷಣಾ ಕಾಯ್ದೆ ಮತ್ತಿತರ ಕಟ್ಟಳೆಗಳಿಂದ ಕೆಲ ವನ್ಯಜೀವಿಗಳ ಪ್ರಭೇದ ಹೆಚ್ಚಾಗಿವೆ. ಅಧ್ಯಯನದ ಪ್ರಕಾರ ರಾಜ್ಯದಲ್ಲಿ 2,500 ಚಿರತೆಗಳಿವೆ. 29 ಜಿಲ್ಲೆಗಳಲ್ಲಿ ಚಿರತೆಗಳ ಉಪಸ್ಥಿತಿ ದಾಖಲಾಗಿವೆ. ಇವು ದೊಡ್ಡ ಕಾಡು, ಕುರುಚಲು ಕಾಡು, ಹುಲ್ಲುಗಾವಲುಗಳಲ್ಲೂ ಜೀವಿಸುತ್ತವೆ. ಒಂದು ಚಿರತೆಗೆ ದಿನಕ್ಕೆ ಸರಾಸರಿ 4 ಕೆ.ಜಿ. ಆಹಾರದ ಅವಶ್ಯಕತೆ ಇರುತ್ತದೆ. ಮೊಲ, ಹಂದಿ, ಮೇಕೆ, ಕುರಿ, ನಾಯಿಗಳನ್ನು ತಿನ್ನುತ್ತವೆ. ಅವು ಜೀವಿಸುವ ಸ್ಥಳ, ಸೇವಿಸುವ ಆಹಾರದ ಕಾರಣಕ್ಕಾಗಿ ಹೆಚ್ಚಿನ ಸಂಘರ್ಷಕ್ಕೆ ದಾರಿ ಮಾಡಿಕೊಟ್ಟಿದೆ ಎಂದು ವಿವರಿಸಿದ್ದಾರೆ.

ರಾಜ್ಯದ ರಾಮನಗರ, ತುಮಕೂರು, ಮಂಡ್ಯ, ಮೈಸೂರು, ಹಾಸನ, ಕೊಪ್ಪಳ, ಬಳ್ಳಾರಿ, ಕೋಲಾರ ಜಿಲ್ಲೆಗಳಲ್ಲಿ ನಡೆಯುತ್ತಿರುವ ಗಣಿಗಾರಿಕೆಯಿಂದ ಅವುಗಳ ಆವಾಸಸ್ಥಾನಕ್ಕೆ ಧಕ್ಕೆಯಾಗುತ್ತಿದೆ. ಇದರಿಂದ ಅವು ಕಬ್ಬಿನಗದ್ದೆ, ಜೋಳದ ಹೊಲ, ನೀಲಗಿರಿ ತೋಪುಗಳಿಗೆ ತಮ್ಮ ನೆಲೆ ಬದಲಾಯಿಸುತ್ತಿವೆ. ಇದರಿಂದ ರಾಜ್ಯದ 700ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಮಾನವ–ಚಿರತೆ ಸಂಘರ್ಷಕ್ಕೆ ದಾರಿಮಾಡಿಕೊಟ್ಟಿದೆ ಎಂದು ವಿಶ್ಲೇಷಿಸಿದ್ದಾರೆ.

ಮಾನವ–ವನ್ಯಜೀವಿ ಸಂಘರ್ಷ ತಡೆಯಲು ಅರಣ್ಯ ಇಲಾಖೆಯಲ್ಲಿ ಪ್ರತ್ಯೇಕ ವಿಭಾಗ ತೆರೆಯಬೇಕು. ಗಾಯಗೊಂಡ ಚಿರತೆಗಳ ಆರೈಕೆಗೆ ಕನಿಷ್ಠ ಮೂರು ಪುನರ್‌ವಸತಿ ಕೇಂದ್ರಗಳನ್ನು ತೆರೆಯಬೇಕು. ಮೃತಪಟ್ಟ ಕುಟುಂಬಗಳಿಗೆ ₹ 15 ಲಕ್ಷ ಹಾಗೂ ನೀಡುವ ಮಾಸಾಶನ ₹ 6 ಸಾವಿರಕ್ಕೆ ಹೆಚ್ಚಿಸಬೇಕು ಎಂದು ಸಲಹೆ ನೀಡಿದ್ದಾರೆ.

ಬೈಕ್ ಸಾಹಸ ಬೆಂಗಳೂರಿನ ಎಎಸ್‌ಸಿ ಕೇಂದ್ರ ಮತ್ತು ಕಾಲೇಜಿನ (ಎಎಸ್‌ಸಿ) 262ನೇ ಸ್ಥಾಪನಾ ದಿನ ಮತ್ತು 11ನೇ ಪುನರ್ ಮಿಲನದ ಕಾರ್ಯಕ್ರಮದ ಅಂಗವಾಗಿ ಗುರುವಾರ 'ಟಾರ್ನೆಡೋಸ್' ತಂಡದ ಯೋಧರು ಬೈಕ್ ಸಾಹಸ ಪ್ರದರ್ಶಿಸಿದರು

ಪ್ರಜಾವಾಣಿ ಚಿತ್ರ: ರಂಜು ಪಿ

ವಿವಿಧ ಪ್ರಶಸ್ತಿ, ಪುರಸ್ಕಾರಗಳ ಪ್ರದಾನ ಸಮಾರಂಭ • ಕನ್ನಡ ಗೆಳೆಯರ ಬಳಗದಿಂದ ಆಯೋಜನೆ

ಸಂಶೋಧಕರದು ಅಪ್ರಿಯ ಸತ್ಯಗಳ ಕ್ಷೇತ್ರ: ಗೊರುಚ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಶೋಧಕರು ಅಪ್ರಿಯ ಸತ್ಯಗಳನ್ನು ಹೇಳಬೇಕಾದ ಅನಿವಾರ್ಯತೆ ಎದುರಾದಾಗ ಭಾವೋದ್ವೇಗಕ್ಕೆ ಒಳಗಾಗದೆ ವಸ್ತುನಿಷ್ಠ ಅಧ್ಯಯನವನ್ನು ನಡೆಸಬೇಕು' ಎಂದು ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಹೇಳಿದರು.

ಕನ್ನಡ ಗೆಳೆಯರ ಬಳಗ ಬುಧವಾರ ಶೇಷಾದ್ರಿಪುರಂ ಕಾಲೇಜಿನಲ್ಲಿ ಆಯೋಜಿಸಿದ್ದ ವಿವಿಧ ಪ್ರಶಸ್ತಿ ಮತ್ತು ಪುರಸ್ಕಾರಗಳ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಕನ್ನಡದ ಹೆಸರಿನಲ್ಲಿ ನಾಡಿನಲ್ಲಿ ನೂರಾರು ಸಂಘಟನೆಗಳಿವೆ. ಆದರೆ, ಕನ್ನಡ ಗೆಳೆಯರ ಬಳಗವು ನೆರೆ, ಬರ ಪರಿಸ್ಥಿತಿಗಳಲ್ಲಿ ಮಾನವೀಯ ಕೆಲಸಗಳನ್ನು ಮಾಡುತ್ತ ಬಂದಿದೆ.ಬಳಗವು ಕನ್ನಡದ ಕೆಲಸಗಳಿಗೆ ನಿಜವಾದ ಘನತೆಯನ್ನು ತಂದುಕೊಟ್ಟಿದೆ' ಎಂದರು.

ಸಂಶೋಧಕ ಆರ್. ಶೇಷಶಾಸ್ತ್ರಿ ಮಾತನಾಡಿ, 'ಚಿದಾನಂದ ಮೂರ್ತಿ ಅವರು ಕನ್ನಡದ ಹಿತಕ್ಕಾಗಿ ಸಾತ್ವಿಕ ರೋಷದಿಂದ ತಾರ್ಕಿಕವಾಗಿ ಕೆಲಸ ಮಾಡಿದ ಅನುಪಮ ವಿದ್ವಾಂಸರಾಗಿದ್ದರು' ಎಂದು ಸ್ಮರಿಸಿದರು.

ಬಿಬಿಎಂಪಿ ಉಪ ಆಯುಕ್ತ ಡಾ.ಕೆ ಮುರಳೀಧರ, ಕನ್ನಡ ಗೆಳೆಯರ ಬಳಗದ ಸಂಚಾಲಕ ಬಾ. ಹ. ಉಪೇಂದ್ರ, ಕೇಂದ್ರೀಯ ಸದನ ಕನ್ನಡ ಸಂಘದ ಅಧ್ಯಕ್ಷ ಮ.ಚಂದ್ರಶೇಖರ ಇದ್ದರು.

ಪ್ರಶಸ್ತಿ ಪ್ರದಾನ: ಪ್ರೊ.ಲಕ್ಷ್ಮಣ ತೆಲಗಾವಿ, ಡಾ.ದೇವರಕೊಂಡಾ ರೆಡ್ಡಿ, ಡಾ.ಎಚ್.ಎಸ್. ಗೋಪಾಲರಾವ್ ಅವರಿಗೆ ಕ್ರಮವಾಗಿ 2020, 2021, 2022ನೇ ಸಾಲಿನ ಡಾ.ಎಂ ಚಿದಾನಂದಮೂರ್ತಿ ಕನ್ನಡ ಸಂಸ್ಕೃತಿ ಪ್ರಶಸ್ತಿ, ಬಾ.ಹ. ರಮಾಕುಮಾರಿ ಅವರಿಗೆ ಕನ್ನಡ ಅರವಿಂದ ಪ್ರಶಸ್ತಿ, ಸೈಮಬ್ ಬಾರ್ತಲೋಮಿಯೊ ಅವರಿಗೆ ಕನ್ನಡ ಚಿರಂಜೀವಿ ಪ್ರಶಸ್ತಿ, ವಿದುಷಿ ಶಾಮಲಾ ಪ್ರಕಾಶ್ ಅವರ 'ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಂಗೀತದ ಸಾಹಚರ್ಯ' ಕೃತಿಗೆ ಹಾಮಾನಾ ಕನ್ನಡ ಜಾಗೃತಿ ಪುಸ್ತಕ ಬಹುಮಾನ, ಶಶಿಧರ ಹಾಲಾಡಿ ಮತ್ತು ಜ್ಞಾನಶ್ರೀ ಅವರಿಗೆ ಕ್ರಮವಾಗಿ 'ಚಿತ್ತ ಹರಿದತ್ತ' ಮತ್ತು 'ಭವ್ಯ ಭಾರತದ ರಾಣಿಯರು' ಕೃತಿಗಳಿಗೆ ಸಮಾಧಾನಕರ ಬಹುಮಾನ, ರು.ಬಸಪ್ಪ ಅವರ 'ಕನ್ನಡ ಚಳವಳಿಯ ಪುಟಗಳಿಂದ' ಕೃತಿಗೆ ವಿಶೇಷ ಬಹುಮಾನಗಳನ್ನು ಪ್ರದಾನ ಮಾಡಲಾಯಿತು.

ಜತೆಗೆ 2021-22ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಹೆಚ್ಚು ಅಂಕ ಗಳಿಸಿದ ಎಂ. ವರ್ಷಿಣಿ, ಎ.ಜ್ಯೋತಿ, ಎಸ್. ವಾಣಿ, ಎಚ್ ಎಸ್ ವಂದನಾ, ಎನ್. ಕೋಮಲ, ಎಂ.ರಕ್ಷಿತ, ಟಿ.ಎಂ. ಲಕ್ಷ್ಮೀ, ಎಚ್.ಎಸ್. ದೀಕ್ಷಿತಾ, ಬಿ. ಶ್ರುತಿ, ಎಂ. ಶಿವರಾಜ್ ಅವರಿಗೆ ಸನ್ಮಾನಿಸಿ, ನಗದು ಬಹುಮಾನ ವಿತರಿಸಲಾಯಿತು.

ಅಲ್ಲದೆ, ಇಂಗ್ಲಿಷ್ ಮಾಧ್ಯಮದಲ್ಲಿ ಓದಿ, ಕನ್ನಡ ಭಾಷೆ ವಿಷಯದಲ್ಲಿ ಅತ್ಯಧಿಕ ಅಂಕ ಗಳಿಸಿದ ಒಂಬತ್ತು ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕೂಡ್ಲಿಗಿ ತಾಲ್ಲೂಕಿನ ನಾಗಲಾಪುರ ಸರಕಾರಿ ಶಾಲೆಗೆ ಕನ್ನಡ ಗೆಳೆಯರ ಬಳಗದಿಂದ ₹20 ಸಾವಿರ ಆರ್ಥಿಕ ನೆರವು ನೀಡಲಾಯಿತು.

ನಗರದಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಸಂಶೋಧಕರಾದ ಡಾ.ದೇವರಕೊಂಡಾ ರೆಡ್ಡಿ, ಡಾ.ಎಚ್.ಎಸ್. ಗೋಪಾಲರಾವ್, ಪ್ರೊ.ಲಕ್ಷ್ಮಣ ತೆಲಗಾವಿ ಅವರಿಗೆ 'ಚಿದಾನಂದಮೂರ್ತಿ ಕನ್ನಡ ಸಂಸ್ಕೃತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಗೊ.ರು. ಚನ್ನಬಸಪ್ಪ, ವೂಡೇ ಪಿ. ಕೃಷ್ಣ, ಡಾ.ಆರ್ ಶೇಷಶಾಸ್ತ್ರಿ, ರಾ.ನಂ. ಚಂದ್ರಶೇಖರ್ ಇದ್ದರು.

ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ಕೃತ್ಯ ● ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಬೆದರಿಕೆ

ವಿಡಿಯೊ ಚಿತ್ರೀಕರಿಸಿ ಬ್ಲ್ಯಾಕ್‌ಮೇಲ್: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ (ಪಿ.ಜಿ) ವಾಸವಿದ್ದ ಯುವತಿಯರ ಅರೆಬೆತ್ತಲೆ ವಿಡಿಯೊ ಚಿತ್ರೀಕರಿಸಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪಿ ಎಂ. ನಿರಂಜನ್ ಎಂಬಾತನನ್ನು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪುದುಚೇರಿಯ ನಿರಂಜನ್, ನಾಲ್ಕು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ. ಬೊಮ್ಮನಹಳ್ಳಿ ಬಳಿಯ ಯುವತಿಯರ ಪೇಯಿಂಗ್ ಗೆಸ್ಟ್ ಕಟ್ಟಡವೊಂದರಲ್ಲಿ ಕೆಲಸಕ್ಕೆ ಸೇರಿದ್ದ. ಅದೇ ಕಟ್ಟಡದಲ್ಲಿ ವಾಸವಿದ್ದ ಯುವತಿಯರ ಅರೆಬೆತ್ತಲೆ ವಿಡಿಯೊ ಚಿತ್ರೀಕರಿಸುತ್ತಿದ್ದ ಈತ, ತನ್ನೊಂದಿಗೆ ಲೈಂಗಿಕವಾಗಿ ಸಹಕರಿಸುವಂತೆ ಒತ್ತಾಯಿಸುತ್ತಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಇತ್ತೀಚೆಗೆ ಯುವತಿಯೊಬ್ಬರ ಸ್ನಾನದ ವಿಡಿಯೊವನ್ನು ಆರೋಪಿ ಚಿತ್ರೀಕರಿಸಿದ್ದ. ಅದನ್ನು ಯುವತಿಯ ಮೊಬೈಲ್‌ಗೆ ಕಳುಹಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವುದಾಗಿ ಬೆದರಿಸಿದ್ದ. ಈ ಬಗ್ಗೆ ಯುವತಿ ದೂರು ನೀಡಿದ್ದರು. ನಂತರ, ಯುವತಿ ಮೂಲಕವೇ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಸ್ಥಳವೊಂದಕ್ಕೆ ಕರೆಸಿಕೊಂಡು ಬಂಧಿಸಲಾಗಿದೆ’ ಎಂದು ತಿಳಿಸಿವೆ.

ಮುಖ್ಯಾಂಶಗಳು

- ಮಾಲೀಕರ ನಂಬಿಕೆ ಗಳಿಸಿ ಕೃತ್ಯ
- ಚಾವಣಿಯಿಂದ ವಿಡಿಯೊ ಚಿತ್ರೀಕರಣ
- 20ಕ್ಕೂ ಹೆಚ್ಚು ಯುವತಿಯರಿಗೆ ಬ್ಲ್ಯಾಕ್‌ಮೇಲ್

ಮಾಲೀಕರ ನಂಬಿಕೆ ಗಳಿಸಿ ಕೃತ್ಯ: ‘ಪೇಯಿಂಗ್ ಗೆಸ್ಟ್ ಕಟ್ಟಡದ ಮಾಲೀಕರ ಎದುರು ಚೆನ್ನಾಗಿ ಕೆಲಸ ಮಾಡುತ್ತಿದ್ದ ಆರೋಪಿ, ಅವರ ನಂಬಿಕೆ ಗಳಿಸಿದ್ದ. ಸ್ವಚ್ಛತೆ ಹಾಗೂ ನಿರ್ವಹಣೆ ನೆಪದಲ್ಲಿ ಕಟ್ಟಡದ ಕೊಠಡಿಗಳಲ್ಲಿ ಆರೋಪಿ ಸುತ್ತಾಡುತ್ತಿದ್ದ. ಹೀಗಾಗಿ, ಯುವತಿಯರ ವಿಡಿಯೊವನ್ನು ಹೇಗೆ ಚಿತ್ರೀಕರಿಸಬಹುದು ಎಂಬುದು ಆರೋಪಿಗೆ ತಿಳಿದಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಚಾವಣಿಯಿಂದ ವಿಡಿಯೊ ಚಿತ್ರೀಕರಣ: ‘ಯಾರಿಗೂ ಗೊತ್ತಾಗದಂತೆ ಕಟ್ಟಡದ ಚಾವಣಿಯಲ್ಲಿ ಓಡಾಡುತ್ತಿದ್ದ ಆರೋಪಿ, ಕಿಟಕಿಗಳ ಮೂಲಕ ಯುವತಿಯರ ಅರೆಬೆತ್ತಲೆ ವಿಡಿಯೊ ಚಿತ್ರೀಕರಿಸುತ್ತಿದ್ದ.

ಎಂ. ನಿರಂಜನ್

ಯುವತಿಯರು ಸ್ನಾನ ಮಾಡುವ ಹಾಗೂ ಬಟ್ಟೆ ಬದಲಿಸುವ ವಿಡಿಯೊಗಳನ್ನು ಈತ ಚಿತ್ರೀಕರಿಸಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆ್ಯಪ್ ಬಳಸಿ ಸಂದೇಶ: ‘ಕಟ್ಟಡದ ನೋಂದಣಿ ಪುಸ್ತಕದಲ್ಲಿ ಯುವತಿಯರ ಮೊಬೈಲ್ ಸಂಖ್ಯೆ ನಮೂದಾಗಿರುತ್ತಿತ್ತು. ಅದರ ಮೂಲಕ ಯುವತಿಯರ ಮೊಬೈಲ್ ಸಂಖ್ಯೆ ತಿಳಿದುಕೊಳ್ಳುತ್ತಿದ್ದ ಆರೋಪಿ, ಅಪರಿಚಿತ ಸಂಖ್ಯೆಯಿಂದ ಬ್ಲ್ಯಾಕ್‌ಮೇಲ್ ಸಂದೇಶ ಕಳುಹಿಸುತ್ತಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆ್ಯಪ್ ಬಳಸುತ್ತಿದ್ದ ಆರೋಪಿ, ಅಸಲಿ ಸಂಖ್ಯೆಯನ್ನು ಮರೆಮಾಚಿ ನಕಲಿ ಸಂಖ್ಯೆ ಮೂಲಕ ಯುವತಿಯರಿಗೆ ಸಂದೇಶ ಕಳುಹಿಸುತ್ತಿದ್ದ. ಹೀಗಾಗಿ, ಆರೋಪಿ ಸುಳಿವು ಯಾರಿಗೂ ಸಿಗುತ್ತಿರಲಿಲ್ಲ. ‘ನಿಮ್ಮ ಅರೆಬೆತ್ತಲೆ ವಿಡಿಯೊ ನನ್ನ ಬಳಿ ಇದೆ. ನೀವು ನನ್ನ ಜೊತೆ ಲೈಂಗಿಕವಾಗಿ ಸಹಕರಿಸಬೇಕು. ನಾನು ಕರೆದ ಕಡೆ ಬರಬೇಕು. ಇಲ್ಲದಿದ್ದರೆ, ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ’ ಎಂದು ಸಂದೇಶದಲ್ಲಿ ಬರೆಯುತ್ತಿದ್ದ.’

‘20ಕ್ಕೂ ಹೆಚ್ಚು ಯುವತಿಯರ ವಿಡಿಯೊಗಳನ್ನು ಆರೋಪಿ ಚಿತ್ರೀಕರಿಸಿರುವುದು ಗೊತ್ತಾಗಿದೆ. ಮರ್ಯಾದೆಗೆ ಹೆದರಿದ್ದ ಕೆಲ ಯುವತಿಯರು, ಆರೋಪಿ ಹೇಳಿದಂತೆ ಕೇಳಿದ್ದಾರೆ. ಅಂಥ ಯುವತಿಯರನ್ನು ಹಲವೆಡೆ ಕರೆದೊಯ್ದಿದ್ದ ಆರೋಪಿ, ಲೈಂಗಿಕವಾಗಿ ಬಳಸಿಕೊಂಡಿದ್ದಾನೆ. ಕೆಲವರಿಂದ ಹಣ ಸಹ ಪಡೆದಿದ್ದಾನೆ. ಸಂತ್ರಸ್ತ ಯುವತಿಯರಿಂದ ಹೇಳಿಕೆ ಪಡೆಯಲು ಪ್ರಯತ್ನಿಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮದನಪಲ್ಲಿ ರೌಡಿ, ಚಾಲಕನ ಮೇಲೆ ಗುಂಡಿನ ದಾಳಿ

ಬೆಂಗಳೂರು: ಕೆ.ಆರ್.ಪುರ ಠಾಣೆ ವ್ಯಾಪ್ತಿಯಲ್ಲಿ ರೌಡಿ ಶಿವಶಂಕರ್ ರೆಡ್ಡಿ (29) ಹಾಗೂ ಕಾರು ಚಾಲಕ ಅಶೋಕ ರೆಡ್ಡಿ (33) ಮೇಲೆ ಗುಂಡಿನ ದಾಳಿ ನಡೆದಿದ್ದು, ಆಂಧ್ರಪ್ರದೇಶದಿಂದ ಬಂದಿದ್ದ ತಂಡ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ.

ಅಶೋಕ ರೆಡ್ಡಿ

ಶಿವಶಂಕರ್ ರೆಡ್ಡಿ

‘ಆಂಧ್ರಪ್ರದೇಶದ ಶಿವಶಂಕರ್, ಕೆ.ಆರ್. ಪುರದ ಕೆ. ಸೊನ್ನೇನಹಳ್ಳಿ ಹ್ಯಾಪಿ ಗಾರ್ಡನ್ ಬಡಾವಣೆ ಬಳಿ ಅಪಾರ್ಟ್‌ಮೆಂಟ್ ಸಮುಚ್ಚಯವೊಂದನ್ನು ಕಟ್ಟಿಸುತ್ತಿದ್ದ. ಇದರ ಕಾಮಗಾರಿ ವೀಕ್ಷಣೆಗೆಂದು ಚಾಲಕ ಅಶೋಕ ಜೊತೆ ಗುರುವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ಸ್ಥಳಕ್ಕೆ ಬಂದಿದ್ದ’ ಎಂದು ಪೊಲೀಸರು ಹೇಳಿದರು.

‘ಎರಡು ಬೈಕ್‌ನಲ್ಲಿ ಬಂದಿದ್ದ ದುಷ್ಕರ್ಮಿಗಳು, ರಸ್ತೆಬದಿ ನಿಂತಿದ್ದ ಶಿವಶಂಕರ್ ಹಾಗೂ ಅಶೋಕ ಮೇಲೆ ನಾಲ್ಕು ಸುತ್ತು ಗುಂಡು ಹಾರಿಸಿ ಪರಾರಿಯಾಗಿದ್ದಾರೆ. ಗುಂಡೇಟಿನಿಂದ ಗಾಯಗೊಂಡಿರುವ ಶಿವಶಂಕರ್ ಹಾಗೂ ಅಶೋಕ ಅವರನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಗ್ಯದಲ್ಲಿ ಸುಧಾರಣೆ ಕಂಡುಬರುತ್ತಿರುವುದಾಗಿ ವೈದ್ಯರು ಹೇಳುತ್ತಿದ್ದಾರೆ’ ಎಂದು ತಿಳಿಸಿದರು.

ಕೊಲೆ ಆರೋಪಿ: ‘ಅಪರಾಧ ಹಿನ್ನೆಲೆಯುಳ್ಳ ಶಿವಶಂಕರ್ ರೆಡ್ಡಿ, ಆಂಧ್ರಪ್ರದೇಶದಲ್ಲಿ ನಡೆದಿದ್ದ ಎರಡು ಕೊಲೆ ಪ್ರಕರಣದ ಆರೋಪಿ. ಜೊತೆಗೆ, ಹಲವು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಈತನ ಹೆಸರು ಮದನಪಲ್ಲಿ ಠಾಣೆಯ ರೌಡಿ ಪಟ್ಟಿಯಲ್ಲಿತ್ತು’ ಎಂದು ಪೊಲೀಸರು ಹೇಳಿದರು.

‘ಶಿವಶಂಕರ್ ಹಾಗೂ ಅಶೋಕ, ಬೆಂಗಳೂರಿನಲ್ಲೂ ಆಸ್ತಿ ಮಾಡಿದ್ದಾರೆ. ಪಾಲುದಾರಿಕೆಯಲ್ಲಿ ಹ್ಯಾಪಿ ಗಾರ್ಡನ್ ಬಡಾವಣೆಯಲ್ಲಿ ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಿಸುತ್ತಿದ್ದರೆಂದು ಗೊತ್ತಾಗಿದೆ. ಇಬ್ಬರೂ ಸೇರಿ ಸ್ಥಳಕ್ಕೆ ಬಂದಿದ್ದಾಗ ಗುಂಡಿನ ದಾಳಿ ನಡೆದಿದೆ’ ಎಂದು ಅವರು ತಿಳಿಸಿದರು.

‘ಆಂಧ್ರಪ್ರದೇಶದಿಂದ ಬಂದಿದ್ದ ಎದುರಾಳಿ ತಂಡದವರೇ, ರೌಡಿ ಶಿವಶಂಕರ್‌ನನ್ನು ಹತ್ಯೆ ಮಾಡಲು ಯತ್ನಿಸಿರುವ ಮಾಹಿತಿ ಇದೆ. ಮೂರು ವಿಶೇಷ ತಂಡಗಳನ್ನು ರಚಿಸಲಾಗಿದ್ದು, ಆರೋಪಿಗಳ ಪತ್ತೆಗೆ ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ರ‍್ಯಾಪಿಡ್ ರಸ್ತೆ’ ಸಾಮರ್ಥ್ಯ ಸಾಬೀತಾಗಲಿ: ಸಿ.ಎಂ

ಬೆಂಗಳೂರು: ವೆಚ್ಚ ಕಡಿಮೆ ಹಾಗೂ ಸಾಮರ್ಥ್ಯ ಸಾಬೀತುಪಡಿಸಿದರೆ ‘ರ‍್ಯಾಪಿಡ್ ರಸ್ತೆ’ ತಂತ್ರಜ್ಞಾನವನ್ನು ನಗರದ ಇತರೆ ಭಾಗದಲ್ಲೂ ಅಳವಡಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ದೇಶದಲ್ಲೇ ಪ್ರಥಮ ಬಾರಿಗೆ ಹಳೆ ಮದ್ರಾಸ್ ರಸ್ತೆಯ ಇಂದಿರಾನಗರ 100 ಅಡಿ ರಸ್ತೆ ಜಂಕ್ಷನ್‌ನಲ್ಲಿ ಅನುಷ್ಠಾನಗೊಳಿಸಿರುವ ಪ್ರಾಯೋಗಿಕ ‘ರ‍್ಯಾಪಿಡ್ ರಸ್ತೆ’ಗೆ ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ಪ್ರೀಕಾಸ್ಟ್ ಪೋಸ್ಟ್ ಟೆನ್ಷನಿಂಗ್ ಕಾಂಕ್ರೀಟ್ ಪೇವ್‌ಮೆಂಟ್’ ತಂತ್ರಜ್ಞಾನದಿಂದ ಪ್ಯಾನಲ್‌ಗಳನ್ನು ಅಳವಡಿಸಿ ‘ರ‍್ಯಾಪಿಡ್ ರಸ್ತೆ’ಯನ್ನು ಪ್ರಾಯೋಗಿಕವಾಗಿ ನಿರ್ಮಿಸಲಾಗಿದೆ. ಉತ್ತಮ ರಸ್ತೆಗಳ ಜೊತೆಗೆ ವೆಚ್ಚವೂ ಕಡಿಮೆಯಿರುವುದು ಬಹಳ ಮುಖ್ಯ. ಈ ಕುರಿತು ವರದಿಗಳು ಬಂದ ನಂತರ ಮುಂದಿನ ನಿರ್ಣಯ ಕೈಗೊಳ್ಳಲಾಗುವುದು’ ಎಂದರು.

‘ಈ ರಸ್ತೆಗಳ ಮೇಲೆ 20 ಟನ್‌ಗೂ ಹೆಚ್ಚಿನ ಭಾರದ ವಾಹನಗಳು ಸಂಚರಿಸಿದಾಗ ಆಗುವ ಪರಿಣಾಮವನ್ನು ಪರಿಶೀಲಿಸಬೇಕಿದೆ. ಜೊತೆ, ನಮ್ಮ ನಿಗದಿತ ದರಕ್ಕೆ (ಎಸ್‌ಆರ್) ಹೋಲಿಕೆಯಾಗಬೇಕು’ ಎಂದರು.

‘ನಗರದಲ್ಲಿ ರಸ್ತೆ ನಿರ್ಮಾಣ ಸಂದರ್ಭದಲ್ಲಿ ಹಲವು ಸಮಸ್ಯೆಗಳು ಎದುರಾಗುತ್ತಿವೆ. ವೈಟ್‌ಟಾಪಿಂಗ್ ಮಾಡುವಾಗ ಬಹಳ ಸಮಯ ತೆಗೆದುಕೊಳ್ಳುತ್ತಿದೆ. ಸಂಚಾರ ವ್ಯವಸ್ಥೆಯನ್ನು ಸುಧಾರಿಸಬೇಕು, ದಟ್ಟಣೆ ಉಂಟಾಗದಂತೆ ನೋಡಿಕೊಳ್ಳಬೇಕು. ಅಲ್ಲದೆ, ಸೌಲಭ್ಯಗಳನ್ನು ಅಳವಡಿಸುವಾಗ ವೈಟ್ ಟಾಪಿಂಗ್ ರಸ್ತೆಯನ್ನು ಅಗೆಯುವುದು ಕಷ್ಟ. ಹೀಗಾಗಿ, ಪ್ರೀಕಾಸ್ಟ್ ಸ್ಲ್ಯಾಬ್ ರಸ್ತೆಗಳು ಉಪಯೋಗಕರ’ ಎಂದರು.

‘ರ‍್ಯಾಪಿಡ್ ರಸ್ತೆ ತಂತ್ರಜ್ಞಾನದಿಂದ ಪ್ರೀಕಾಸ್ಟ್ ಸ್ಲ್ಯಾಬ್ ಗಳನ್ನು ತಯಾರಿಸಿ, ಆಂತರಿಕ ಜಾಯಿಂಟ್ ಹಾಕಿ, ಬಲಗೊಳಿಸಿ, ರಸ್ತೆಯನ್ನು ಪ್ರಾಯೋಗಿಕವಾಗಿ 500 ಮೀ. ಪೈಕಿ 375 ಮೀಟರ್ ಉದ್ದದ ರಸ್ತೆ ನಿರ್ಮಾಣವಾಗಿದೆ. ಅದನ್ನು ಪರಿಶೀಲಿಸಿದ್ದು, ಹಲವು ಸೂಚನೆಗಳನ್ನು ನೀಡಿದ್ದೇನೆ. 20 ಟನ್ ಮೇಲಿರುವ ವಾಹನಗಳನ್ನು ಸತತವಾಗಿ ಸಂಚಾರ ಮಾಡಿಸಿ, ವಿಶ್ಲೇಷಣೆ ಮಾಡಬೇಕಿದೆ. ಭಾರಿ ವಾಹನಗಳ ಚಲನೆಯಿಂದ ಆಗುವ ಪರಿಣಾಮಗಳ ಬಗ್ಗೆ ಸಂಪೂರ್ಣ ವರದಿ ಬೇಕೆಂದು ಸೂಚಿಸಿದ್ದೇನೆ. ಅಂತಿಮವಾಗಿ ಕಾಮಗಾರಿಯು ಕ್ಷಿಪ್ರವಾಗಿ ಆಗಬೇಕು, ಗುಣಮಟ್ಟವಿರಬೇಕು ಹಾಗೂ ವೆಚ್ಚವೂ ಸೂಕ್ತವಾಗಿರಬೇಕು’ ಎಂದರು.

‘ಪ್ರಾಯೋಗಿಕವಾಗಿ ಈ ಯೋಜನೆ ಅನುಷ್ಠಾನಗೊಂಡಿದ್ದು, ಕಡಿಮೆ ವೆಚ್ಚದಲ್ಲಿ ಆಗುವುದಾದರೆ, ಬೆಂಗಳೂರಿನಲ್ಲಿ ಎಲ್ಲೆಲ್ಲಿ ವೈಟ್ ಟಾಪಿಂಗ್, ಸಂಚಾರ ದಟ್ಟಣೆಯುಳ್ಳ, ಕ್ಷಿಪ್ರವಾಗಿ ರಸ್ತೆಯಾಗಬೇಕಿರುವ ಸ್ಥಳಗಳಲ್ಲಿ ಇದನ್ನು ಅಳವಡಿಸಬಹುದು’ ಎಂದರು.

ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ, ಶಾಸಕ ಎಸ್. ರಘು, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಇದ್ದರು.

ಸಂಚಾರ ಪೊಲೀಸರಿಂದ ವರದಿ; ಬಿಬಿಎಂಪಿಯಿಂದ ತೆರವು ಶುರು

ನಗರದಲ್ಲಿ 427 ಅವೈಜ್ಞಾನಿಕ ರಸ್ತೆ ಉಬ್ಬು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಮುಖ್ಯ ಹಾಗೂ ಉಪಮುಖ್ಯ ರಸ್ತೆಗಳಲ್ಲಿರುವ 427 ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ಬೆಂಗಳೂರು ನಗರ ಸಂಚಾರ ಪೊಲೀಸರು ಗುರುತಿಸಿದ್ದು, ಅವುಗಳ ತೆರವಿಗೆ ಸಲಹೆ ನೀಡಿದೆ.

ಬೆಂಗಳೂರು ನಗರದಲ್ಲಿ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಪೊಲೀಸರು ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದು, ಇದರಲ್ಲಿ ರಸ್ತೆ ಉಬ್ಬು ತೆರವು ಒಂದಾಗಿದೆ.

ನಗರದ ದಕ್ಷಿಣ ವಲಯದಲ್ಲಿ ಅತಿಹೆಚ್ಚು ಅವೈಜ್ಞಾನಿಕ ರಸ್ತೆ ಉಬ್ಬುಗಳಿದ್ದು, ಬೊಮ್ಮನಹಳ್ಳಿ, ದಾಸರಹಳ್ಳಿ ವಲಯ ನಂತರ ಸ್ಥಾನದಲ್ಲಿವೆ. ರಾಜರಾಜೇಶ್ವರಿನಗರ ವಲಯದಲ್ಲಿ ಅತಿ ಕಡಿಮೆ ಅವೈಜ್ಞಾನಿಕ ರಸ್ತೆ ಉಬ್ಬುಗಳಿವೆ.

ಹೊಸ ತರಗುಪೇಟೆಯಲ್ಲಿ ಅವೈಜ್ಞಾನಿಕ ರಸ್ತೆ ಉಬ್ಬನ್ನು ತೆರವುಗೊಳಿಸಿರುವ ಬಿಬಿಎಂಪಿ ಡಾಂಬಾರು ಹಾಕಿದೆ

ನಗರ ಸಂಚಾರ ಪೊಲೀಸರು ಠಾಣಾವಾರು ಮುಖ್ಯ ಮತ್ತು ಉಪಮುಖ್ಯ ರಸ್ತೆಗಳಲ್ಲಿರುವ ಅವೈಜ್ಞಾನಿಕ ರಸ್ತೆಗಳನ್ನು ಗುರುತಿಸಿ, ಬಿಬಿಎಂಪಿಗೆ ವರದಿ ನೀಡಿದ್ದಾರೆ.



ಇನ್ನು ಬಿಬಿಎಂಪಿ ತನ್ನ ವಲಯವಾರು ವಿಂಗಡಿಸಿ ಅವುಗಳ ತೆರವಿಗೆ ಕ್ರಮ ಕೈಗೊಂಡಿದೆ.

ವಾರ್ಡ್‌ನಲ್ಲಿ ಹೆಚ್ಚು: ‘ರಸ್ತೆ ಉಬ್ಬುಗಳು ವಾರ್ಡ್ ರಸ್ತೆಗಳಲ್ಲೂ ಅಧಿಕವಾಗಿವೆ. ಹಲವೆಡೆ ಮನಬಂದಂತೆ ಉಬ್ಬುಗಳನ್ನು ಹಾಕಲಾಗಿದೆ. ಇದೀಗ ವಾರ್ಡ್ ಮಟ್ಟದಲ್ಲಿ ಡಾಂಬರು ಹಾಕುವ ಕೆಲಸ ನಡೆಯುತ್ತಿದ್ದು, ಸ್ಥಳೀಯರ ಆಗ್ರಹದ ಮೇರೆಗೆ ಡಾಂಬರು ಹಾಕುವವರೇ ಉಬ್ಬುಗಳನ್ನು ಹಾಕುತ್ತಿದ್ದಾರೆ. ಎಂಜಿನಿಯರ್‌ಗಳ ಅನುಮತಿಯನ್ನೂ ಪಡೆಯುತ್ತಿಲ್ಲ. ಹೀಗಾಗಿ ಇಂತಹ ಉಬ್ಬುಗಳನ್ನೂ ತೆರವುಗೊಳಿಸಬೇಕು’ ಎಂದು ರಾಜರಾಜೇಶ್ವರಿ ನಗರದ ಶ್ರೀನಿವಾಸ್, ಜಗದೀಶ್, ಕೃಷ್ಣಭಟ್ ಆಗ್ರಹಿಸಿದರು.

ರಸ್ತೆ ಗುಂಡಿ: ನಗರದಲ್ಲಿ 1300ಕ್ಕೂ ಹೆಚ್ಚು ರಸ್ತೆ ಗುಂಡಿಗಳಿರುವ ಬಗ್ಗೆಯೂ ಸಂಚಾರ ಪೊಲೀಸರು ವರದಿ ನೀಡಿದ್ದಾರೆ. ರಸ್ತೆ ಗುಂಡಿ ಮುಚ್ಚುವ ಕಾಮಗಾರಿ ಈಗಾಗಲೇ ನಡೆಯುತ್ತಿದ್ದು, ಸದ್ಯದಲ್ಲಿಯೇ ಗುಂಡಿಮುಕ್ತ ರಸ್ತೆಗಳನ್ನಾಗಿ ಮಾಡಲಾಗುತ್ತದೆ ಎಂದು ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ತಿಳಿಸಿದರು.

ಜಂಕ್ಷನ್‌ಗಳಲ್ಲಿ ಕ್ಯಾಮೆರಾ: ಒಂದೇ ದಿನ 10 ಸಾವಿರ ಪ್ರಕರಣ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಸಂಪರ್ಕರಹಿತವಾಗಿ ದಂಡ ವಿಧಿಸಲು ನಗರದ 50 ಜಂಕ್ಷನ್‌ಗಳಲ್ಲಿ ಕೃತಕ ಬುದ್ಧಿಮತ್ತೆ ಸಂಚಾರ ನಿರ್ವಹಣಾ ವ್ಯವಸ್ಥೆಯಡಿ (ಐಟಿಎಂಎಸ್) ಆಧುನಿಕ ಕ್ಯಾಮೆರಾ ಅಳವಡಿಸಲಾಗಿದ್ದು, ಗುರುವಾರ ಒಂದೇ ದಿನದಲ್ಲಿ 10 ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ.

‘ಸಂಚಾರ ನಿಯಮ ಉಲ್ಲಂಘನೆಯನ್ನು ಫೋಟೊ ಸಮೇತ ಪತ್ತೆ ಹಚ್ಚಿ ದಂಡ ವಿಧಿಸಲು ಅನುಕೂಲವಾಗಲೆಂದು 50 ಜಂಕ್ಷನ್‌ಗಳಲ್ಲಿ 250 ಕೃತಕ ಬುದ್ಧಿಮತ್ತೆ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಗುರುವಾರ ಬೆಳಿಗ್ಗೆಯಿಂದಲೇ ದಂಡ ವಿಧಿಸುವ ಪ್ರಕ್ರಿಯೆ ಆರಂಭವಾಗಿದೆ’ ಎಂದು ವಿಶೇಷ ಕಮಿಷನರ್ (ಸಂಚಾರ) ಎಂ.ಎ. ಸಲೀಂ ತಿಳಿಸಿದರು.

‘ದಿನದ 24 ಗಂಟೆ ಹಾಗೂ ವರ್ಷದ 365 ದಿನಗಳೂ ಕ್ಯಾಮೆರಾಗಳು ಕಾರ್ಯ ನಿರ್ವಹಿಸಲಿವೆ. ಅತೀ ವೇಗದ ಚಾಲನೆ, ಸಿಗ್ನಲ್ ಜಂಪ್, ಜಿಬ್ರಾ ಕ್ರಾಸಿಂಗ್, ಹೆಲ್ಮೆಟ್ ರಹಿತ ಚಾಲನೆ, ತ್ರಿಬಲ್ ರೈಡಿಂಗ್ ಹಾಗೂ ಚಾಲನೆ ವೇಳೆ ಮೊಬೈಲ್ ಬಳಕೆ ಮಾಡುವವರ ಫೋಟೊಗಳು ಕ್ಯಾಮೆರಾದಲ್ಲಿ ಸೆರೆ ಆಗಲಿವೆ.

ನಂತರ, ಐಟಿಎಂಎಸ್ ಮೂಲಕ ಸಂಬಂಧಪಟ್ಟ ವಾಹನಗಳ ಹೆಸರಿನಲ್ಲಿ ದಂಡದ ನೋಟಿಸ್ ಸಿದ್ಧವಾಗಲಿದೆ. ಬಳಿಕ, ವಾಹನಗಳ ಮಾಲೀಕರ ಮೊಬೈಲ್‌ಗೆ ದಂಡದ ನೋಟಿಸ್ ಸಂದೇಶ ಹೋಗಲಿದೆ’ ಎಂದರು.

‘ಸಂಚಾರ ಸಿಬ್ಬಂದಿ ಕ್ಯಾಮೆರಾಗಳ ಮೂಲಕ ಉಲ್ಲಂಘನೆ ಫೋಟೊ ತೆಗೆಯುವ ವ್ಯವಸ್ಥೆ ಇದೆ. ಬಹುತೇಕ ಸಿಬ್ಬಂದಿ, ಫೋಟೊ ಕ್ಲಿಕ್ಕಿಸುವುದರಲ್ಲೇ ಸಮಯ ಹೋಗುತ್ತಿದೆ. ಇದೇ ಕಾರಣಕ್ಕೆ ಕೃತಕ ಬುದ್ಧಿಮತ್ತೆ ಕ್ಯಾಮೆರಾಗಳನ್ನು ದಂಡ ವಿಧಿಸುವ ಪ್ರಕ್ರಿಯೆಗೆ ಬಳಸಲಾಗುತ್ತಿದೆ. ಇದರಿಂದಾಗಿ ಹೆಚ್ಚಿನ ಸಿಬ್ಬಂದಿಗಳನ್ನು ಸಂಚಾರ ನಿಯಂತ್ರಣಕ್ಕೆ ಬಳಸಲು ಅನುಕೂಲವಾಗಲಿದೆ’ ಎಂದು ಸಲೀಂ ತಿಳಿಸಿದರು.

ಕಳ್ಳತನ: ಐವರ ಬಂಧನ

ಬೆಂಗಳೂರು: ರಾಜ್ಯದ ಹಲವೆಡೆ ದ್ವಿಚಕ್ರ ವಾಹನ ಕಳ್ಳತನ ಮಾಡಿದ್ದ ಐವರು ಆರೋಪಿಗಳನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರಾಮನಗರ ಕನಕಪುರದ ಕರಿಕಲ್ಲು ದೊಡ್ಡಿಯ ಲಕ್ಕಿ ಕೆ. ಕುಮಾರ್ ಅಲಿಯಾಸ್ ಗುಂಡ (22), ಶ್ರೀನಿವಾಸ್ ಅಲಿಯಾಸ್ ಬೀಡಿ (20), ಸೈಫ್ ಪಾಷಾ (20), ದುರ್ಗಚಂದ್ರ ಅಲಿಯಾಸ್ ಮೆಡ್ಡ (23) ಹಾಗೂ ವಿ. ಸುಹಾಸ್ (22) ಬಂಧಿತರು. ಇವರಿಂದ ₹ 7.80 ಲಕ್ಷ ಮೌಲ್ಯದ 10 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕಾಮಾಕ್ಷಿಪಾಳ್ಯದ ಬಾಳಯ್ಯನ ಕೆರೆ ರಸ್ತೆಯಲ್ಲಿ ಸಿಬ್ಬಂದಿ ಕರ್ತವ್ಯದಲ್ಲಿದ್ದರು. ಅನುಮಾನಾಸ್ಪದವಾಗಿ ದ್ವಿಚಕ್ರ ವಾಹನದಲ್ಲಿ ಸುತ್ತಾಡುತ್ತಿದ್ದ ಕೆಲ ಆರೋಪಿಗಳನ್ನು ತಡೆದು ಪರಿಶೀಲನೆ ನಡೆಸಿದ್ದರು. ವಾಹನದ ದಾಖಲೆ ನೀಡಿರಲಿಲ್ಲ. ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆ ನಡೆಸಿದಾಗ, ಹಲವೆಡೆ ಕಳ್ಳತನ ಮಾಡಿರುವುದಾಗಿ ತಪ್ಪೊಪ್ಪಿಕೊಂಡರು’ ಎಂದು ತಿಳಿಸಿದರು.

‘ಲಕ್ಕಿ, ಶ್ರೀನಿವಾಸ್ ಹಾಗೂ ಸೈಫ್ ಪಾಷಾನನ್ನು ಮಾತ್ರ ಆರಂಭದಲ್ಲಿ ಬಂಧಿಸಲಾಗಿತ್ತು. ಅವರು ನೀಡಿದ್ದ ಮಾಹಿತಿ ಆಧರಿಸಿ, ಮಂಡ್ಯ ಜಿಲ್ಲಾ ಕಾರಾಗೃಹದಲ್ಲಿದ್ದ ದುರ್ಗಚಂದ್ರ ಹಾಗೂ ಸುಹಾಸ್‌ನನ್ನು ಬಾಡಿ ವಾರೆಂಟ್ ಮೇಲೆ ಬಂಧಿಸಲಾಯಿತು. ಇವರಿಬ್ಬರು ಕೊಲೆ ಯತ್ನ ಆರೋಪದಡಿ ಹಲವು ದಿನಗಳ ಹಿಂದೆ ಜೈಲು ಸೇರಿದ್ದರು.’

‘ಕಳ್ಳತನ ಮಾಡಲೆಂದು ಆರೋಪಿಡಗಳು ತಂಡ ಕಟ್ಟಿಕೊಂಡಿದ್ದರು. ಕಾಮಾಕ್ಷಿಪಾಳ್ಯ, ಬನಶಂಕರಿ, ಪರಪ್ಪನ ಅಗ್ರಹಾರ, ಕೆ.ಆರ್.ಪುರ, ಕನಕಪುರ, ರಾಮನಗರ, ಶಿವಮೊಗ್ಗ ಹಾಗೂ ಮಾಲೂರು ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ದ್ವಿಚಕ್ರ ವಾಹನ ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

ವಿದ್ಯಾರ್ಥಿ, ಉದ್ಯೋಗಿಗಳಿಗೆ ಡ್ರಗ್ಸ್: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಐಟಿ- ಬಿಟಿ ಕಂಪನಿಗಳ ಉದ್ಯೋಗಿಗಳಿಗೆ ಡ್ರಗ್ಸ್ ಮಾರುತ್ತಿದ್ದ ನಾಲ್ವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಮಾರತ್ತಹಳ್ಳಿ ಹಾಗೂ ಮೈಕೊ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕ ಕಾರ್ಯಾಚರಣೆ ನಡೆಸಲಾಗಿದೆ. ಆರೋಪಿಗಳಾದ ಆದೇಶ್, ವಸೀಂ, ಸೈಯದ್ ಹಾಗೂ ನೈಜೀರಿಯಾ ಪ್ರಜೆಯೊಬ್ಬರನ್ನು ಬಂಧಿಸಲಾಗಿದೆ. ಇವರಿಂದ ₹ 22 ಲಕ್ಷ ಮೌಲ್ಯದ ಗಾಂಜಾ, ಎಂಡಿಎಂಎ, ಕೊಕೇನ್ ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ತಿಳಿಸಿದರು.

‘ಆದೇಶ್, ವಸೀಂ ಹಾಗೂ ಸೈಯದ್ ಮೂವರು ಸೇರಿಕೊಂಡು ತಮ್ಮದೇ ತಂಡ ಕಟ್ಟಿಕೊಂಡಿದ್ದರು. ಸ್ಥಳೀಯ ಡ್ರಗ್ಸ್ ಪೆಡ್ಲರ್‌ಗಳಿಂದ ಗಾಂಜಾ ಖರೀದಿಸುತ್ತಿದ್ದರು. ನೈಜೀರಿಯಾ ಪ್ರಜೆಗಳಿಂದ ಎಂಡಿಎಂಎ, ಕೊಕೇನ್ ಹಾಗೂ ಇತರೆ ಡ್ರಗ್ಸ್ ಪಡೆಯುತ್ತಿದ್ದರು. ಅದನ್ನೇ ಪರಿಚಯಸ್ಥರಿಗೆ ಮಾರಿ, ಅಕ್ರಮವಾಗಿ ಹಣ ಸಂಪಾದಿಸುತ್ತಿದ್ದರು’ ಎಂದು ತಿಳಿಸಿದರು.

‘ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಐಟಿ–ಬಿಟಿ ಕಂಪನಿಗಳ ಉದ್ಯೋಗಿಗಳ ಜೊತೆ ಆರೋಪಿಗಳು ಒಡನಾಟ ಹೊಂದಿದ್ದರು. ಅವರೆಲ್ಲರಿಗೂ ನಿರಂತರವಾಗಿ ಡ್ರಗ್ಸ್ ಪೂರೈಸುತ್ತಿದ್ದರು. ಡ್ರಗ್ಸ್ ಖರೀದಿಸುತ್ತಿದ್ದ ಗ್ರಾಹಕರ ಬಗ್ಗೆಯೂ ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದು ಹೇಳಿದರು.

‘ಎಂಡಿಎಂಎ 100 ಗ್ರಾಂ.ಗೆ 10 ಸಾವಿರ ಹಾಗೂ ಕೊಕೇನ್ 1 ಗ್ರಾಂ.ಗೆ 12 ಸಾವಿರಕ್ಕೆ ಮಾರಲಾಗುತ್ತಿತ್ತು. ಕೆಲ ಪಾರ್ಟಿಗಳಿಗೂ ಆರೋಪಿಗಳು ಡ್ರಗ್ಸ್ ಪೂರೈಕೆ ಮಾಡುತ್ತಿದ್ದ ಮಾಹಿತಿ ಇದೆ. ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ಸ್ನೇಹಿತನ ಕೊಲೆ: ಆರೋಪಿ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಪುಟ್ಟೇನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಬಸವರಾಜ್ (25) ಅವರನ್ನು ಕತ್ತು ಕೊಯ್ದು ಕೊಲೆ ಮಾಡಿದ್ದ ಆರೋಪಿ ಅಭಿಜಿತ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಗದಗಿನ ಬಸವರಾಜ್ ಹಾಗೂ ಕನಕಪುರದ ಅಭಿಜಿತ್, ಇಬ್ಬರೂ ಪೇಟಿಂಗ್ ಕೆಲಸ ಮಾಡುತ್ತಿದ್ದರು. ನಿತ್ಯವೂ ಒಟ್ಟಿಗೆ ರಾತ್ರಿ ಮದ್ಯದ ಪಾರ್ಟಿ ಮಾಡುತ್ತಿದ್ದರು. ಇದೇ ಸಂದರ್ಭದಲ್ಲೇ ಕ್ಷುಲ್ಲಕ ಕಾರಣಕ್ಕೆ ಜಗಳ ಮಾಡಿಕೊಳ್ಳುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಡಿ. 6ರಂದು ರಾತ್ರಿ ಇಬ್ಬರ ನಡುವೆ ಪುನಃ ಜಗಳವಾಗಿತ್ತು. ಇದರಿಂದ ಸಿಟ್ಟಾದ ಅಭಿಜಿತ್, ಬಸವರಾಜ್ ಅವರ ಕತ್ತು ಕೊಯ್ದು ಕೊಲೆ ಮಾಡಿ ಪರಾರಿಯಾಗಿದ್ದ. ತನಿಖೆ ಕೈಗೊಂಡಿದ್ದ ವಿಶೇಷ ತಂಡ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ’ ಎಂದು ತಿಳಿಸಿದರು.

‘ನನಗೆ ಹಾಗೂ ನನ್ನ ಪತ್ನಿ ಬಗ್ಗೆ ಬಸವರಾಜ್ ಅವಾಚ್ಯವಾಗಿ ಮಾತನಾಡುತ್ತಿದ್ದ. ಹಲವು ಬಾರಿ ಎಚ್ಚರಿಕೆ ನೀಡಿದರೂ ಬುದ್ಧಿ ಕಲಿತಿರಲಿಲ್ಲ. ಇದೇ ಕಾರಣಕ್ಕೆ ಆತನನ್ನು ಕೊಲೆ ಮಾಡಿದ್ದೇನೆ’ ಎಂಬುದಾಗಿ ಆರೋಪಿ ಅಭಿಜಿತ್ ಹೇಳಿಕೆ ನೀಡಿದ್ದಾನೆ’ ಎಂದು ಪೊಲೀಸರು ಹೇಳಿದರು.

ಮೋಜು– ಮಸ್ತಿಗೆ ಹಣ ಹೊಂದಿಸಲು ಕಳ್ಳತನ

ಬೆಂಗಳೂರು: ನಗರದ ಹಲವೆಡೆ ದ್ವಿಚಕ್ರ ವಾಹನ ಹಾಗೂ ಮೊಬೈಲ್ ಕಳ್ಳತನ ಮಾಡಿದ್ದ ಇಬ್ಬರು ಆರೋಪಿಗಳನ್ನು ವಿದ್ಯಾರಣ್ಯಪುರ ಪೊಲೀಸರು ಬಂಧಿಸಿದ್ದಾರೆ.

‘ಸೈಯದ್ ವಸೀಂ (27) ಹಾಗೂ ಅನೀಸ್ ಅಲಿಯಾಸ್ ಅನ್ವರ್ (24) ಬಂಧಿತರು. ಇವರಿಂದ ₹ 1.37 ಲಕ್ಷ ಮೌಲ್ಯದ ದ್ವಿಚಕ್ರ ವಾಹನ ಹಾಗೂ ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಠಾಣೆ ವ್ಯಾಪ್ತಿಯ ರಾಮಚಂದ್ರಪುರದಲ್ಲಿ ಡಿ. 4ರಂದು ಸುತ್ತಾಡಿದ್ದ ಆರೋಪಿಗಳು, ನಿವಾಸಿಯೊಬ್ಬರ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದರು. ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯ ಹಾಗೂ ಇತರೆ ಪುರಾವೆಗಳನ್ನು ಆಧರಿಸಿ ಆರೋಪಿಗಳನ್ನು ಪತ್ತೆ ಮಾಡಲಾಗಿದೆ.’

‘ಮೋಜು–ಮಸ್ತಿ ಮಾಡಲು ಅಗತ್ಯವಿದ್ದ ಹಣ ಹೊಂದಿಸಲು ಆರೋಪಿಗಳು ಕಳ್ಳತನ ಮಾಡುತ್ತಿದ್ದರು. ಭಾರತಿನಗರ, ಮಾದನಾಯಕನಹಳ್ಳಿ ಠಾಣೆ ವ್ಯಾಪ್ತಿಯಲ್ಲೂ ಕೃತ್ಯ ಎಸಗಿದ್ದರು’ ಎಂದು ಪೊಲೀಸರು ತಿಳಿಸಿದರು.

ಒಂಟಿಯಾಗಿ ಸುತ್ತಾಡುವವರ ಸುಲಿಗೆ: ಮೂವರ ಬಂಧನ

ಬೆಂಗಳೂರು: ರಸ್ತೆಯಲ್ಲಿ ಒಂಟಿಯಾಗಿ ಸುತ್ತಾಡುವವರನ್ನು ಅಡ್ಡಗಟ್ಟಿ ಸುಲಿಗೆ ಮಾಡುತ್ತಿದ್ದ ಮೂವರು ಆರೋಪಿಗಳನ್ನು ರಾಜಗೋಪಾಲನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪವನ್‌ಕುಮಾರ್ (25), ರಂಗನಾಥ್ ಅಲಿಯಾಸ್ ರಂಗ (22) ಹಾಗೂ ಗೌತಮ್ (22) ಬಂಧಿತರು. ಇವರಿಂದ ₹ 6.50 ಲಕ್ಷ ಮೌಲ್ಯದ 21 ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ರಾಜಗೋಪಾಲನಗರ ಚಾಮುಂಡಿಪುರದ ನಿವಾಸಿಯೊಬ್ಬರು ನ. 21ರಂದು ರಾತ್ರಿ ಮನೆ ಸಮೀಪದಲ್ಲಿ ನಡೆದುಕೊಂಡು ಹೊರಟಿದ್ದರು. ಬೈಕ್‌ನಲ್ಲಿದ್ದ ಬಂದಿದ್ದ ಆರೋಪಿಗಳು, ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಸಂಬಂಧ ದಾಖಲಾದ ಪ್ರಕರಣದ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ತಿಳಿಸಿದರು.

‘ದ್ವಿಚಕ್ರ ವಾಹನ ಕದಿಯುತ್ತಿದ್ದ ಆರೋಪಿಗಳು, ಅದರಲ್ಲೇ ನಗರದಲ್ಲಿ ಸುತ್ತಾಡುತ್ತಿದ್ದರು. ರಸ್ತೆಯಲ್ಲಿ ಒಂಟಿಯಾಗಿ ಸುತ್ತಾಡುವವರನ್ನು ಹಿಂಬಾಲಿಸಿ ಮೊಬೈಲ್ ಸುಲಿಗೆ ಮಾಡಿ ಪರಾರಿಯಾಗುತ್ತಿದ್ದರು. ಕೃತ್ಯಕ್ಕೆ ಬಳಸಿದ್ದ ಎರಡು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಹೇಳಿದರು.

ರಾಷ್ಟ್ರೀಯ ಕಿಸಾನ್ ಸಂಘ ಪ್ರತಿಭಟನೆ

ಅಕ್ರಮ ಬಡಾವಣೆ: ರೈತರ ಜಮೀನುಗಳಿಗೆ ತೊಂದರೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಅಕ್ರಮ ಬಡಾವಣೆಗಳಿಂದ ಉಂಟಾಗಿರುವ ಸಮಸ್ಯೆ ಬಗೆಹರಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಷ್ಟ್ರೀಯ ಕಿಸಾನ್ ಸಂಘದ ಪದಾಧಿಕಾರಿಗಳು ತಾಲ್ಲೂಕು ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ವೇಳೆ ಮಾತನಾಡಿದ ರಾಷ್ಟ್ರೀಯ ಕಿಸಾನ್ ಸಂಘದ ಕಾರ್ಯದರ್ಶಿ ಕೆ.ಭೀಮಯ್ಯ, 'ಹಲವು ಅಕ್ರಮ ಬಡಾವಣೆಗಳು ನಿರ್ಮಾಣದಿಂದ ಅಕ್ಕಪಕ್ಕದ ರೈತರ ಜಮೀನುಗಳಿಗೆ ತೊಂದರೆಯಾಗುತ್ತಿದೆ. ಚಕ್ಕುಬಂದಿಯಲ್ಲಿ ವ್ಯತ್ಯಾಸವಾಗುತ್ತಿದೆ. ಜಮೀನುಗಳಿಗೆ ದಾರಿ ಇಲ್ಲದಂತಾಗುತ್ತಿದೆ. ಮಧ್ಯವರ್ತಿಗಳು ಕಿರುಕುಳ ನೀಡುತ್ತಿದ್ದಾರೆ ಮತ್ತು ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿ ನಷ್ಟವಾಗುತ್ತಿದೆ. ಇದನ್ನು ತಡೆಯುವಲ್ಲಿ ನೊಂದಣಾಧಿಕಾರಿಗಳು ಮತ್ತು ಕಂದಾಯ ಇಲಾಖೆ ವಿಫಲವಾಗಿದೆ’ ಎಂದು ದೂರಿದರು.

ವಿವಿಧ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿ ರಾಷ್ಟ್ರೀಯ ಕಿಸಾನ್ ಸಂಘಟನೆ ಕಾರ್ಯಕರ್ತರು ನೆಲಮಂಗಲದ ತಾಲ್ಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

‘ನೆಲಮಂಗಲ, ಮಲ್ಲಾಪುರ, ಬಿನ್ನಮಂಗಲ ಕೆರೆಗಳನ್ನು ಹಲವು ವರ್ಷಗಳಿಂದ ಸಂರಕ್ಷಿಸದೆ ಪಟ್ಟಣದ ಮಲ, ಮೂತ್ರ ಬಿಟ್ಟು ಹಾಳು ಮಾಡಿದ್ದಾರೆ. ಕೆರೆಗಳ ಅಭಿವೃದ್ಧಿಗೆ ಹಣ ಬಿಡುಗಡೆಯಾಗಿದೆ ಎಂದಿದ್ದ ಅಧಿಕಾರಿಗಳು ಹಣ ಎಲ್ಲಿ ಖರ್ಚು ಮಾಡಿದ್ದಾರೆ, ಕೆರೆಗಳು ದುರ್ನಾತ ಬೀರುತ್ತಿವೆ. ಹಲವು ಬಾರಿ ಮನವಿ, ಪ್ರತಿಭಟನೆ ಮಾಡಿದರೂ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದರು.

ಅಧ್ಯಕ್ಷ ವಿಜಯಕುಮಾರ್ ಮಾತನಾಡಿ, ‘ಭೂದಾಖಲೆಗಳಲ್ಲಿ ಉದ್ದೇಶಪೂರ್ವಕವಾಗಿ ಹೆಸರುಗಳನ್ನು ಹಾಗೂ ಇತರ ದಾಖಲೆಗಳನ್ನು ತಪ್ಪಾಗಿ ನಮೂದಿಸಿ, ಅದನ್ನು ಸರಿಪಡಿಸಿಕೊಳ್ಳಲು ಉಪವಿಭಾಗಾಧಿಕಾರಿಗಳ ಬಳಿ ರೈತರು ಅಲೆದಾಡುವಂತಾಗಿದೆ’ ಎಂದರು.

ಗಣೇಶ್‌ರಾವ್, ಕಾರ್ಯಾಧ್ಯಕ್ಷ ಎಸ್. ಕೆ.ಆನಂದ್ ಇದ್ದರು.

ಗುಜರಾತ್‌ನಲ್ಲಿ ಕಾಂಗ್ರೆಸ್ ಸ್ಥಿತಿ ಶೋಚನೀಯ: 'ಕೈ' ಮುಖಂಡರಲ್ಲಿ ಉತ್ಸಾಹ ಮೂಡಿಸಿದ ಹಿಮಾಚಲ

ಗೆಲುವು ಮರೆಮಾಚಿದ ಸೋಲು

• ಶೆಮಿನ್ ಜಾಯ್

ನವದೆಹಲಿ: ಗುಜರಾತ್ ವಿಧಾನಸಭೆಯಲ್ಲಿ ವಿರೋಧ ಪಕ್ಷದ ಸ್ಥಾನವನ್ನೂ ಕಳೆದುಕೊಳ್ಳುವ ಸ್ಥಿತಿಗೆ ಕುಸಿದಿರುವ ಕಾಂಗ್ರೆಸ್‌ಗೆ, ಹಿಮಾಚಲ ಪ್ರದೇಶದಲ್ಲಿನ ಗೆಲುವು ಸಮಾಧಾನದ ಸಂಗತಿಯಾಗಿದೆ. 2018ರ ಬಳಿಕ ನಡೆದ 18 ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಸೋತಿರುವ ಕಾಂಗ್ರೆಸ್‌ಗೆ ಈ ಅವಧಿಯಲ್ಲಿ ದೊರೆತ ಮೊದಲ ಗೆಲುವು ಇದು.

ಪಕ್ಷವು ಅಸ್ತಿತ್ವವನ್ನೇ ಕಳೆದುಕೊಳ್ಳುವಂತಹ ಸ್ಥಿತಿಯಲ್ಲಿರುವಾಗ ಈ ಗೆಲುವು ಕಾಂಗ್ರೆಸ್ ನಾಯಕರಿಗೆ ಹೊಸ ಉತ್ಸಾಹವನ್ನು ನೀಡಿದೆ. 'ಕಾಂಗ್ರೆಸ್‌ಮುಕ್ತ ಭಾರತ' ನಿರ್ಮಾಣ ಮಾಡಬೇಕು ಎಂಬ ಬಿಜೆಪಿ, ಅದರಲ್ಲೂ ಪ್ರಧಾನಿ ನರೇಂದ್ರ ಮೋದಿ ಆಕಾಂಕ್ಷೆಗೆ ಈ ಗೆಲುವು ತಕ್ಷಣಕ್ಕೆ ತಡೆ ನೀಡಿದೆ. ಆದರೆ, ಗುಜರಾತ್‌ನಲ್ಲಿನ ಹೀನಾಯ ಸೋಲು ಈ ಗೆಲುವಿನ ಮಹತ್ವವನ್ನು ಮರೆಮಾಚಿದೆ.

ಗುಜರಾತ್‌ನಲ್ಲಿನ ಸೋಲು ಕಾಂಗ್ರೆಸ್‌ಗೆ ಅತ್ಯಂತ ದೊಡ್ಡ ಪೆಟ್ಟು. ಬಿಜೆಪಿಯನ್ನು ಚುನಾವಣೆಯಲ್ಲಿ ಎದುರಿಸುವಲ್ಲಿ ಮತ್ತು ವಿರೋಧ ಪಕ್ಷಗಳ ಒಕ್ಕೂಟವನ್ನು ಮುನ್ನಡೆಸುವಲ್ಲಿ ಕಾಂಗ್ರೆಸ್ ಸಮರ್ಥವಲ್ಲ ಎಂಬ ಸಂಕಥನವನ್ನು ಈ ಸೋಲು ಮತ್ತಷ್ಟು ಗಟ್ಟಿಗೊಳಿಸಿದೆ.

1990ರ ನಂತರ ಗುಜರಾತ್‌ನಲ್ಲಿ ನಡೆದ ಪ್ರತಿ ವಿಧಾನಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ತನ್ನ ಸ್ಥಾನವನ್ನು ಉತ್ತಮಪಡಿಸಿಕೊಳ್ಳುತ್ತಲೇ ಬಂದಿತ್ತು. 1990ರಲ್ಲಿ 33 ಸ್ಥಾನ ಮತ್ತು ಶೇ 30.74ರಷ್ಟು ಮತಗಳಿಂದ, ಅದರ ಬಲ 2017ರಲ್ಲಿ 77 ಸ್ಥಾನಗಳು ಮತ್ತು ಶೇ 41.44ರಷ್ಟು ಮತಗಳ ಮಟ್ಟದಷ್ಟು ಕಾಂಗ್ರೆಸ್ ಬಲಾಢ್ಯವಾಗಿತ್ತು. ಆದರೆ, 2022ರ ಈ ಚುನಾವಣೆ ಪಕ್ಷದ ಈವರೆಗಿನ ಎಲ್ಲಾ ಚುನಾವಣಾ ಸಾಧನೆಗಳನ್ನು ತಲೆಕೆಳಗು ಮಾಡಿದೆ. ಸದ್ದುಗದ್ದಲವಿಲ್ಲದ ಪ್ರಚಾರ, ದಿಕ್ಕೇ ಇಲ್ಲದಂತಹ ನಾಯಕತ್ವ ಮತ್ತು ಎಎಪಿಯ ಪ್ರವೇಶವು ಕಾಂಗ್ರೆಸ್ ಅನ್ನು 17 ಸ್ಥಾನಗಳಿಗೆ ಮತ್ತು ಅದರ ಮತ ಪ್ರಮಾಣವನ್ನು ಶೇ 27ರಷ್ಟಕ್ಕೆ ಕುಗ್ಗಿಸಿದೆ.

'ಜನಾಭಿಪ್ರಾಯವನ್ನು ಸ್ವೀಕರಿಸುತ್ತೇವೆ ಮತ್ತು ಪಕ್ಷವು ವಿಫಲವಾದದ್ದು ಎಲ್ಲಿ ಎಂಬುದನ್ನು ಪರಾಮರ್ಶಿಸುತ್ತೇವೆ. ಪಕ್ಷವನ್ನು ಮತ್ತೆ ಸಂಘಟಿಸುತ್ತೇವೆ' ಎಂದು ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

2014 ಮತ್ತು 2019ರ ಲೋಕಸಭಾ ಚುನಾವಣೆಗಳಲ್ಲಿ ಗುಜರಾತ್ ಜನರು ಕಾಂಗ್ರೆಸ್ ಅನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದರೂ, ಪಕ್ಷವು ರಾಜ್ಯ ರಾಜಕಾರಣದಲ್ಲಿ ಪ್ರಮುಖ ಪಾಲುದಾರನಾಗಿತ್ತು. ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಪ್ರಬಲ ಎದುರಾಳಿ ಆಗಿತ್ತು. 2002ರ ವಿಧಾನಸಭಾ ಚುನಾವಣೆಯ ನಂತರ ಪ್ರತಿ ಚುನಾವಣೆಯಲ್ಲೂ ಕಾಂಗ್ರೆಸ್ ಶೇ 40ಕ್ಕಿಂತಲೂ ಹೆಚ್ಚು ಮತಗಳನ್ನು ಪಡೆದಿದೆ. ಆದರೆ, ಈ ಬಾರಿ ಬಿಜೆಪಿಯೇತರ ಮತಗಳು ಕಾಂಗ್ರೆಸ್‌ನಿಂದ ದೂರ ಸರಿದಿವೆ.

ಈ ಬಾರಿ ಕಾಂಗ್ರೆಸ್ ಶೇ 27ರಷ್ಟು ಮತ ಪಡೆದಿದ್ದರೆ, ಎಎಪಿ ಶೇ 12.9ರಷ್ಟು ಮತ ಪಡೆದಿದೆ. ಎರಡನ್ನೂ ಸೇರಿಸಿದರೆ ಶೇ 40ರಷ್ಟು ಮತಗಳಾಗುತ್ತವೆ. ಕಾಂಗ್ರೆಸ್‌ನ ಮತಗಳು ಎಎಪಿಯತ್ತ ಸರಿದಿರುವುದನ್ನು ಇದು ತೋರಿಸುತ್ತದೆ. ಬಿಜೆಪಿಯೇ ಅಧಿಕಾರಕ್ಕೆ ಬರುತ್ತದೆ ಎಂದು ಗೊತ್ತಿದ್ದರೂ ಬಿಜೆಪಿಯೇತರ ಮತದಾರರು ಕಾಂಗ್ರೆಸ್‌ನ ಆಚೆಗೆ ಪರ್ಯಾಯವನ್ನು ಎದುರು ನೋಡುತ್ತಿರುವುದನ್ನು ಇದು ತೋರಿಸುತ್ತದೆ.

ಕ್ಷತ್ರಿಯ, ಹರಿಜನ, ಆದಿವಾಸಿ ಮತ್ತು ಮುಸ್ಲಿಂ (ಕೆಎಚ್‌ಎಎಂ) ಮತದಾರರ ಸಮೀಕರಣದಲ್ಲಿ ಕಾಂಗ್ರೆಸ್ 1985ರಲ್ಲಿ ಈವರೆಗಿನ ಅತ್ಯಂತ ದೊಡ್ಡ (149 ಸ್ಥಾನಗಳು) ಗೆಲುವನ್ನು ಸಾಧಿಸಿತ್ತು. ಆದರೆ, ಈ ಬಾರಿ ಈ ತಂತ್ರ ಕೈಕೊಟ್ಟಿದೆ. ಪಕ್ಷದ ನಾಯಕ ರಾಹುಲ್ ಗಾಂಧಿ ಭಾರತ್ ಜೋಡೊ ಯಾತ್ರೆಯಲ್ಲಿ ನಿರತರಾಗಿದ್ದರು ಮತ್ತು ರಾಜ್ಯದಲ್ಲಿ ಪ್ರಚಾರ ನಡೆಸಿದ್ದು ಒಂದು ದಿನ ಮಾತ್ರ. ಮನೆ–ಮನೆ ಭೇಟಿ ನೀಡುತ್ತಿದ್ದೇವೆ ಎಂದು ಕಾಂಗ್ರೆಸ್ ಹೇಳಿದ್ದರೂ, ಮತದಾರರು ಇದರಿಂದ ಪ್ರಭಾವಿತರಾದಂತೆ ಕಾಣುತ್ತಿಲ್ಲ. ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಈ ವಾದವನ್ನು ತಳ್ಳಿಹಾಕುತ್ತಾರೆ.

ಈ ಫಲಿತಾಂಶ ನಿರಾಶಾದಾಯಕವಾಗಿರುವುದು ನಿಜ. ಆದರೆ ಬಿಜೆಪಿ, ಎಎಪಿ ಮತ್ತು ಎಐಎಂಐಎಂಗಳು ಒಟ್ಟಾಗಿ ಕಾಂಗ್ರೆಸ್ ಎದುರು ಕಣಕ್ಕೆ ಇಳಿದಿದ್ದವು. ರಾಜ್ಯ ಮತ್ತು ಕೇಂದ್ರದ ಎಲ್ಲಾ ಸಂಸ್ಥೆಗಳನ್ನು ಬಿಜೆಪಿ ಬಳಸಿಕೊಂಡಿತು. ನಮಗೆ ದೊರೆತಿರುವ ಮತಗಳ ಪ್ರಮಾಣವು, ನಾವು ಮತ್ತೆ ಪಕ್ಷವನ್ನು ಕಟ್ಟಬಹುದು ಎಂಬ ವಿಶ್ವಾಸ ಮೂಡಿಸುತ್ತದೆ. ಗುಜರಾತ್‌ನಲ್ಲಿ ನಾವು ಮಾತ್ರವೇ ಪರ್ಯಾಯ ಎಂದು ಜೈರಾಮ್ ರಮೇಶ್ ಹೇಳಿದ್ದಾರೆ.

ಗುಜರಾತ್ · ಹಿಮಾಚಲ ಪ್ರದೇಶ





ಮೊರ್ಬಿಯಲ್ಲಿ ಬಿಜೆಪಿ ಅಭ್ಯರ್ಥಿ ಜಯಭೇರಿ

- ಗುಜರಾತ್ ಚುನಾವಣೆಗೆ ಒಂದು ತಿಂಗಳ ಹಿಂದೆ ಸೇತುವೆ ದುರಂತದಲ್ಲಿ 135 ಜನರು ಸಾವಿಗೀಡಾಗಿದ್ದ ಮೊರ್ಬಿಯಲ್ಲಿ ಬಿಜೆಪಿ ಗೆದ್ದಿದೆ. ಕಾಂತಿಲಾಲ್ ಅವರು 62,079 ಮತಗಳಿಂದ ಜಯ ಸಾಧಿಸಿದ್ದಾರೆ
- ಹಿಮಾಚಲ ಪ್ರದೇಶದಲ್ಲಿ ಒಂದೂ ಕ್ಷೇತ್ರ ಗೆಲ್ಲುವಲ್ಲಿ ಎಎಪಿ ವಿಫಲವಾಗಿದ್ದು, ಡಾಲ್‌ಹೌಸಿ, ಚೋಪಲ್, ಅಕ್ರಿ, ಚಂಬಾ ಕಸುಮ್ಟಿ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳಿಗೆ 'ನೋಟಾ'ಗಿಂತಲೂ ಕಡಿಮೆ ಮತಗಳು ಸಿಕ್ಕಿವೆ
- ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಜೈರಾಮ್ ಠಾಕೂರ್ ಅವರ ಸಂಪುಟದ 8 ಸಚಿವರು ಸೋತಿದ್ದಾರೆ
- ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್‌ನಿಂದ ಗೆದ್ದಿರುವ ಅಭ್ಯರ್ಥಿಗಳ ಸಭೆಯನ್ನು ಶುಕ್ರವಾರ ಕರೆಯಲಾಗಿದೆ ಸಿಎಲ್‌ಪಿ ನಾಯಕನ ಆಯ್ಕೆ ನಡೆಯುವ ಸಾಧ್ಯತೆಯಿದೆ
- ವಿಧಾನಸಭೆಯಲ್ಲಿ ಕನಿಷ್ಠ ಶೇ 10ರಷ್ಟು ಸ್ಥಾನಗಳನ್ನು ಹೊಂದಿರುವ ಪಕ್ಷಕ್ಕೆ ಅಧಿಕೃತ ಪ್ರತಿಪಕ್ಷದ ಮಾನ್ಯತೆ ಸಿಗುತ್ತದೆ. 182 ಸದಸ್ಯಬಲದ ಗುಜರಾತ್ ವಿಧಾನಸಭೆಯಲ್ಲಿ ಪ್ರತಿಪಕ್ಷದ ಸ್ಥಾನಕ್ಕೆ 19 ಶಾಸಕರ ಅಗತ್ಯವಿದೆ. ಆದರೆ, ಕಾಂಗ್ರೆಸ್ ಗೆದ್ದಿರುವುದು 17 ಕಡೆ ಮಾತ್ರ





ಗುಜರಾತ್ ಫಲಿತಾಂಶ ಆಡಳಿತದ ಪರ ಅಲೆಗೆ ಸಾಕ್ಷಿ. ರಾಜ್ಯದ ಮುಂದಿನ ಚುನಾವಣೆಯಲ್ಲಿ ಈ ಫಲಿತಾಂಶವು ಸಕಾರಾತ್ಮಕ ಪರಿಣಾಮ ಬೀರಲಿದೆ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಒಂದು ರಾಜ್ಯದ ಫಲಿತಾಂಶದ ಗಾಳಿ ಇನ್ನೊಂದು ರಾಜ್ಯಕ್ಕೆ ಬೀಸುವುದಿಲ್ಲ. ಕರ್ನಾಟಕದಲ್ಲಿ ಸೋಲುತ್ತೇವೆ ಎಂಬುದು ಬಿಜೆಪಿಗೂ ಗೊತ್ತಿದೆ
ಸಿದ್ದರಾಮಯ್ಯ, ವಿಧಾನಸಭೆಯ ವಿರೋಧ ಪಕ್ಷದ ನಾಯಕ

ಗುಜರಾತ್‌ನಲ್ಲಿ ಬಿಜೆಪಿ ಗೆಲುವು ಕಂಡಿರುವುದು ರಾಜ್ಯದ ಚುನಾವಣೆಯ ದಿಕ್ಸೂಚಿಯಲ್ಲ. ಅಲ್ಲಿ ಬಿಜೆಪಿ ಗೆಲುವು ನಿರೀಕ್ಷಿತವಾಗಿತ್ತು
ಎಚ್.ಡಿ. ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಇಡೀ ವ್ಯವಸ್ಥೆಯನ್ನು ನಿರ್ದಿಷ್ಟವಾಗಿ ಒಂದು ರಾಜ್ಯಕ್ಕೆ ಬಳಸಲಾಗಿತ್ತು. ಹೀಗಾಗಿ ಗುಜರಾತ್ ಚುನಾವಣಾ ಫಲಿತಾಂಶ ನಿರೀಕ್ಷಿತ. ಈ ಫಲಿತಾಂಶವು ದೇಶದ ಚಿತ್ರಣವನ್ನು ಬಿಂಬಿಸುವುದಿಲ್ಲ
ಶರದ್ ಪವಾರ್, ಎನ್‌ಸಿಪಿ ಮುಖ್ಯಸ್ಥ

ಎಎಪಿಗೆ ರಾಷ್ಟ್ರೀಯ ಪಕ್ಷದ ಮನ್ನಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಅಮೋಘ ಸಾಧನೆ ತೋರಿರುವ ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) ರಾಷ್ಟ್ರೀಯ ಪಕ್ಷದ ಮಾನ್ಯತೆ ದೊರೆಯುವುದು ಖಾತರಿಯಾಗಿದೆ. ಇದರೊಂದಿಗೆ ಈ ಸ್ಥಾನಮಾನಕ್ಕೆ ಭಾಜನವಾದ ದೇಶದ ಒಂಬತ್ತನೇ ಪಕ್ಷ ಎಂಬ ಹಿರಿಮೆಯನ್ನು ಆಪ್ ತನ್ನದಾಗಿಸಿಕೊಳ್ಳಲಿದೆ.

ನಾಲ್ಕು ರಾಜ್ಯಗಳಲ್ಲಿ 'ರಾಜ್ಯ ಪಕ್ಷ'ದ ಮನ್ನಣೆ ಗಳಿಸುವ ಪಕ್ಷಕ್ಕೆ ರಾಷ್ಟ್ರೀಯ ಪಕ್ಷದ ಸ್ಥಾನಮಾನ ದೊರೆಯಲಿದೆ. ಐದು ಸ್ಥಾನಗಳನ್ನು ಗೆಲ್ಲುವ ಜೊತೆಗೆ ಸರಿಸುಮಾರು ಶೇ 13ರಷ್ಟು ಮತ ಪಡೆದಿರುವ ಎಎಪಿಗೆ ಗುಜರಾತ್‌ನಲ್ಲಿ ರಾಜ್ಯ ಪಕ್ಷದ ಸ್ಥಾನಮಾನ ದೊರೆಯುವುದು ನಿಶ್ಚಯವಾಗಿದೆ. ಇದರೊಂದಿಗೆ ನಾಲ್ಕು ರಾಜ್ಯಗಳಲ್ಲಿ ಈ ಸ್ಥಾನಮಾನ ಪಡೆದಂತಾಗಲಿದೆ. ದೆಹಲಿ ಹಾಗೂ ಪಂಜಾಬ್‌ನಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿರುವ ಈ ಪಕ್ಷ ಗೋವಾದಲ್ಲಿ ಇಬ್ಬರು ಶಾಸಕರನ್ನು ಹೊಂದಿದೆ.

ಸದ್ಯ ಬಿಜೆಪಿ, ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಎನ್‌ಸಿಪಿ, ಸಿಪಿಐ (ಎಂ), ಸಿಪಿಐ, ಬಿಎಸ್‌ಪಿ ಹಾಗೂ ನ್ಯಾಷನಲ್ ಪೀಪಲ್ಸ್ ಪಾರ್ಟಿ (ಎನ್‌ಪಿಪಿ) ರಾಷ್ಟ್ರೀಯ ಪಕ್ಷದ ಮಾನ್ಯತೆ ಹೊಂದಿವೆ.

ಚುನಾವಣಾ ಆಯೋಗವು ರಾಷ್ಟ್ರೀಯ ಪಕ್ಷದ ಮಾನ್ಯತೆ ಅಧಿಕೃತಗೊಳಿಸಿದ ಬಳಿಕ ಎಎಪಿಯು 'ಪೊರಕೆ' ಚಿಹ್ನೆಯೊಂದಿಗೆ ದೇಶದಾದ್ಯಂತ ಚುನಾವಣಾ ಕಣಕ್ಕಿಳಿಯಬಹುದಾಗಿದೆ. ಆಗ 'ಪೊರಕೆ'ಯ ಚಿಹ್ನೆಯನ್ನು ಬೇರೆ ಯಾರಿಗೂ ನೀಡಲಾಗುವುದಿಲ್ಲ.

ಹಿಮಾಚಲದಲ್ಲಿ ಪಕ್ಷಕ್ಕೆ ಹೆಚ್ಚಿನ ಲಾಭವಾಗುವುದಿಲ್ಲ ಎಂಬುದನ್ನು ಅರಿತಿದ್ದ ಎಎಪಿಯು ಗುಜರಾತ್ ಚುನಾವಣೆಯತ್ತ ಹೆಚ್ಚಿನ ಗಮನ ಹರಿಸಿತ್ತು. ಇದರಿಂದ ಪಕ್ಷಕ್ಕೆ ಅಧಿಕ ಪ್ರಯೋಜನವಾಗಿದೆ. ದೆಹಲಿ ಮಹಾನಗರ ಪಾಲಿಕೆ ಚುನಾವಣೆ ನಡೆಯದೇ ಇದ್ದಿದ್ದರೆ ಗುಜರಾತ್‌ನಲ್ಲಿ ಪಕ್ಷದ ಸಾಧನೆ ಮತ್ತಷ್ಟು ಉತ್ತಮವಾಗಿರುತ್ತಿತ್ತು ಎಂದು ಪಕ್ಷದ ನಾಯಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನಾವು ರಾಷ್ಟ್ರೀಯ ಪಕ್ಷದ ಮನ್ನಣೆ ಗಳಿಸಲಿದ್ದೇವೆ. ಗುಜರಾತ್ ಜನ ಪಕ್ಷವನ್ನು ರಾಷ್ಟ್ರೀಯ ಪಕ್ಷವನ್ನಾಗಿಸಿದ್ದಾರೆ. ಕೆಲವೇ ಕೆಲವು ಪಕ್ಷಗಳಿಗೆ ಈ ಮಾನ್ಯತೆ ಲಭಿಸಿದೆ
ಅರವಿಂದ ಕೇಜ್ರಿವಾಲ್, ಎಎಪಿ ಮುಖ್ಯಸ್ಥ

ಘಟಾನುಘಟಿಗಳ ಗೆಲುವು–ಸೋಲು

ಗುಜರಾತ್

ಭೂಪೇಂದ್ರ ಪಟೇಲ್ – ಬಿಜೆಪಿ
ಹಾರ್ದಿಕ್ ಪಟೇಲ್ – ಬಿಜೆಪಿ
ಜಿಗ್ನೇಶ್ ಮೇವಾನಿ – ಕಾಂಗ್ರೆಸ್
ಅಲ್ಪೇಶ್ ಠಾಕೂರ್ – ಬಿಜೆಪಿ
ರಿವಾ ಜಡೇಜಾ – ಬಿಜೆಪಿ
ಇಸುದಾನ್ ಗಢವಿ – ಎಎಪಿ
ಗೋಪಾಲ್ ಇಟಾಲಿಯಾ – ಎಎಪಿ

ಹಿಮಾಚಲ ಪ್ರದೇಶ

ಜಯರಾಮ್ ಠಾಕೂರ್ – ಬಿಜೆಪಿ
ವಿಕ್ರಮಾದಿತ್ಯ ಸಿಂಗ್ – ಕಾಂಗ್ರೆಸ್
ಸುರೇಶ್ ಭಾರದ್ವಾಜ್ – ಬಿಜೆಪಿ

'ಬಿಜೆಪಿಗೆ ಅರ್ಥವಾಗದ ಹಿಮಾಚಲ ಪ್ರದೇಶ'

ವಿಶ್ಲೇಷಣೆ
ರಮೇಶ್ ಕೆ.ಚೌಹಾಣ್

ಹಿಮಾಚಲದಲ್ಲಿ ಅಧಿಕಾರ ಉಳಿಸಿಕೊಳ್ಳುತ್ತೇವೆ ಎಂದು ಬಿಜೆಪಿ ಭಾರಿ ವಿಶ್ವಾಸ ವ್ಯಕ್ತಪಡಿಸಿತ್ತಾದರೂ, ರಾಜ್ಯದಲ್ಲಿ ಅಧಿಕಾರಕ್ಕೆ ಬರುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದೆ. ಪಕ್ಷದೊಳಗಿನ ಬಿಕ್ಕಟ್ಟಿನ ನಡುವೆಯೂ ಬಿಜೆಪಿಯ 'ಡಬಲ್ ಎಂಜಿನ್ ಸರ್ಕಾರ'ವನ್ನು ತಡೆಯುವಲ್ಲಿ ಕಾಂಗ್ರೆಸ್ ಯಶಕಂಡಿದೆ. ಹಲವು ಸಂಗತಿಗಳು ಇದಕ್ಕೆ ಕಾರಣವಾಗಿವೆ.

ರಾಷ್ಟ್ರೀಯ ವಿಚಾರಗಳು ರಾಜ್ಯ ವಿಧಾನಸಭೆ ಚುನಾವಣೆಯ ವಿಷಯವಾಗುವುದಿಲ್ಲ. ಹಿಮಾಚಲ ಪ್ರದೇಶ ಚುನಾವಣೆಯಲ್ಲೂ ಬಿಜೆಪಿ ರಾಷ್ಟ್ರೀಯ ವಿಚಾರಗಳನ್ನೇ ಮುಂದು ಮಾಡಿತು. ಪ್ರಧಾನಿ ನರೇಂದ್ರ ಮೋದಿ, ಅವರ ಪ್ರಭಾವಳಿ, ನಾಯಕತ್ವ ಮತ್ತು ಜನಪ್ರಿಯತೆಯನ್ನು ಬಿಜೆಪಿ ಅತ್ಯಂತ ಸಂಘಟನಾತ್ಮಕವಾಗಿ ಪ್ರಚಾರದಲ್ಲಿ ಬಳಸಿಕೊಂಡಿತು. ರಾಷ್ಟ್ರೀಯ ಭದ್ರತೆ ಬಿಜೆಪಿ ಚುನಾವಣೆಯ ವಿಷಯವಾಗಿತ್ತು. ಜತೆಗೆ ಡಬಲ್ ಎಂಜಿನ್ (ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ಸರ್ಕಾರ) ಸರ್ಕಾರವಿದ್ದರೆ ಜನರಿಗೆ ಒಳ್ಳೆಯದು ಎಂಬ ಭಾವನೆ ಮೂಡಿಸಲು ಬಿಜೆಪಿ ಯತ್ನಿಸಿತು.

ಆದರೆ, ಚುನಾವಣೆಯಲ್ಲಿ ಬಿಜೆಪಿ ನೀಡಿದ ಆಶ್ವಾಸನೆಗಳೆಲ್ಲವೂ ಧ್ರುವೀಕರಣದ ಉದ್ದೇಶದ್ದಾಗಿದ್ದವು. ಏಕರೂಪ ನಾಗರಿಕ ಸಂಹಿತೆಯನ್ನು ತರುತ್ತೇವೆ ಎಂದು ಬಿಜೆಪಿ ಹೇಳಿತು. ಈ ಆಶ್ವಾಸನೆ ರಾಜ್ಯದಲ್ಲಿ ಚುನಾವಣೆಯ ವಿಷಯವೇ ಆಗಲಿಲ್ಲ. ಏಕೆಂದರೆ ಏಕರೂಪ ನಾಗರಿಕ ಸಂಹಿತೆಯನ್ನು ಸಂಸತ್ತಿನಲ್ಲಿ ಮಸೂದೆ ಹೊರಡಿಸುವ ಮೂಲಕ ಜಾರಿಗೆ ತರಬೇಕು. ರಾಜ್ಯದಲ್ಲಿ ಚುನಾವಣೆ ಗೆಲ್ಲುವ ಮೂಲಕ ಇದನ್ನು ತರಲು ಸಾಧ್ಯವಿಲ್ಲ ಎಂಬುದು ಮೊದಲ ವಿಚಾರ. ಯಾರನ್ನು ಗುರಿ ಮಾಡಿ ಇಂತಹ ಆಶ್ವಾಸನೆ ನೀಡಲಾಗುತ್ತಿದೆ ಎಂಬುದು ಎರಡನೇ ವಿಚಾರ. ಇವುಗಳ ಜತೆಯಲ್ಲಿ ವಕ್ಫ್ ಆಸ್ತಿಗಳ ಕುರಿತು ತನಿಖೆ ನಡೆಸಲಾಗುತ್ತದೆ ಎಂದೂ ಬಿಜೆಪಿ ಘೋಷಿಸಿತ್ತು. ಆದರೆ, ಈ ರೀತಿಯ ಧಾರ್ಮಿಕ ಧ್ರುವೀಕರಣ ಮಾಡಲು ಇದು ಉತ್ತರ ಪ್ರದೇಶವಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಲು ಬಿಜೆಪಿ ವಿಫಲವಾಗಿದೆ. ಏಕೆಂದರೆ, ಹಿಮಾಚಲ ಪ್ರದೇಶದಲ್ಲಿ ಶೇ 94ರಷ್ಟು ಜನರು ಹಿಂದೂಗಳೇ ಆಗಿದ್ದಾರೆ. ಧ್ರುವೀಕರಣ ನಡೆಸಲು ಬೇರೆ ಸಮುದಾಯಗಳೇ ಇಲ್ಲ. ಹೀಗಾಗಿಯೇ ಬಿಜೆಪಿಯ ಈ ಆಶ್ವಾಸನೆಗಳನ್ನು ಜನರು ತಿರಸ್ಕರಿಸಿದ್ದಾರೆ.

ವಿದ್ಯಾರ್ಥಿನಿಯರಿಗೆ ಸೈಕಲ್ ಮತ್ತು ಸ್ಕೂಟರ್ ನೀಡುತ್ತೇವೆ ಎಂದು ಹೇಳಿ, ಮಹಿಳೆಯರನ್ನು ಓಲೈಸಲೂ ಬಿಜೆಪಿ ಯತ್ನಿಸಿತು. ರಾಜ್ಯದಲ್ಲಿ ಸಾರಿಗೆ ಸಂಪರ್ಕ ಅಷ್ಟು ಸರಳವಾಗಿಲ್ಲ ಎಂಬುದು ಇಡೀ ರಾಜ್ಯದಲ್ಲಿ ಓಡಾಡಿದರೆ ಅರಿವಾಗುತ್ತದೆ. ಏಕೆಂದರೆ, ರಾಜ್ಯದ ಹಲವು ಶಾಲೆಗಳಿಗೆ ರಸ್ತೆಯೇ ಇಲ್ಲ. ಹೀಗಿದ್ದಾಗ ಸೈಕಲ್ ಸವಾರಿ ಮಾಡುವುದಾದರೂ ಹೇಗೆ? ಇರುವ 12ರಲ್ಲಿ ಎಷ್ಟು ಜಿಲ್ಲೆಗಳಲ್ಲಿ ಈ ಆಶ್ವಾಸನೆ ಉಪಯೋಗಕ್ಕೆ ಬರಲಿದೆ?

ಇನ್ನೊಂದೆಡೆ ಕಾಂಗ್ರೆಸ್ ಹಳೆ ಪಿಂಚಣಿ ವ್ಯವಸ್ಥೆಯನ್ನು ವಾಪಸ್ ತರುವ ಆಶ್ವಾಸನೆ ನೀಡಿತು. ಇದು ಚುನಾವಣೆಗೆ ತಿರುವು ನೀಡಿದ ಘೋಷಣೆ.

ಹಿಮಾಚಲ ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷೆ ಪ್ರತಿಭಾ ಸಿಂಗ್ ಅವರು ಪಕ್ಷದ ಗೆಲುವಿನ ಬಳಿಕ ಮಾಧ್ಯಮಗೋಷ್ಠಿ ನಡೆಸಲು ಗುರುವಾರ ಶಿಮ್ಲಾಕ್ಕೆ ಬಂದರು. ಕಾಂಗ್ರೆಸ್ ಅಭ್ಯರ್ಥಿಗಳಾದ ಹರೀಶ್ ಜನಾರ್ಥ ಮತ್ತು ವಿಕ್ರಮಾದಿತ್ಯ ಸಿಂಗ್ ಜೊತೆಗೆ ಇದ್ದರು – ಪಿಟಿಐ ಚಿತ್ರ

18–60 ವರ್ಷದ ಮಹಿಳೆಯರಿಗೆ ತಿಂಗಳಿಗೆ ₹1500 ಮಾಸಾಶನ ನೀಡುತ್ತೇವೆ ಎಂದು ಹೇಳುವ ಮೂಲಕ, ರಾಜ್ಯದ ಮಹಿಳೆಯರನ್ನು ಕಾಂಗ್ರೆಸ್ ಓಲೈಸಿತು. ಇದು ಕಾರ್ಯಸಾಧುವೇ ಅಥವಾ ಇಲ್ಲವೇ ಎಂಬುದು ನಂತರದ ವಿಚಾರ. ಆದರೆ, ಬೆಲೆ ಏರಿಕೆಯಿಂದ ಬಸವಳಿದಿರುವ ಮಹಿಳೆಯರನ್ನು ತಲುಪುವಲ್ಲಿ ಈ ಘೋಷಣೆ ನೆರವಾಗಿದ್ದಂತೂ ಹೌದು. ಸೇಬಿನ ಕಾರ್ಟನ್‌ಗಳ ಮೇಲೆ ವಿಧಿಸಲಾಗಿರುವ ಜಿಎಸ್‌ಟಿಯನ್ನು ರದ್ದುಪಡಿಸುವುದಾಗಿ ಕಾಂಗ್ರೆಸ್ ಹೇಳಿತು. ರಾಜ್ಯದ 15–20 ಕ್ಷೇತ್ರಗಳಲ್ಲಾದರೂ ಇದು ಸೇಬು ಬೆಳೆಗಾರರನ್ನು ಪ್ರಭಾವಿಸಿದೆ. 300 ಯೂನಿಟ್‌ವರೆಗೆ ಉಚಿತ ವಿದ್ಯುತ್, ಐದು ಲಕ್ಷ ಉದ್ಯೋಗ, ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಅಗ್ನಿವೀರ ಯೋಜನೆ ರದ್ದುಪಡಿಸುತ್ತೇವೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಘೋಷಿಸಿದ್ದು ಮತದಾರರನ್ನು ಪ್ರಭಾವಿಸಿದೆ.

ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲು ಯಾವುದೇ ಜನಪ್ರಿಯ ನಾಯಕರು ಕಾಂಗ್ರೆಸ್‌ನಲ್ಲಿ ಇರಲಿಲ್ಲ. ವೀರಭದ್ರ ಸಿಂಗ್ ಅವರ ನಿಧನಾನಂತರ ಪಕ್ಷವನ್ನು ಮುನ್ನಡೆಸುವುದು ಯಾರು ಎಂಬ ಪ್ರಶ್ನೆ ಎದುರಾಗಿತ್ತು. ಇದು ದೊಡ್ಡ ಬಿಕ್ಕಟ್ಟಿನಂತಾಗುವ ಮೊದಲೇ, ವೀರಭದ್ರ ಅವರ ಪತ್ನಿ ಪ್ರತಿಭಾ ಸಿಂಗ್ ಅವರಿಗೆ ಪಕ್ಷದ ಮುಂದಾಳತ್ವ ನೀಡಲಾಯಿತು. ಬಣ ರಾಜಕಾರಣವಿದ್ದರೂ, ಪಕ್ಷದ ಈ ನಿರ್ಧಾರವು ಸಂಭಾವ್ಯ ಬಿಕ್ಕಟ್ಟನ್ನು ತಡೆಯಿತು. ಅಭ್ಯರ್ಥಿಗಳ ಆಯ್ಕೆಯು, ಭಿನ್ನಾಭಿಪ್ರಾಯವನ್ನು ತಣ್ಣಗಾಗಿಸಿತು.

ಲೇಖಕ: ಹಿಮಾಚಲ ಪ್ರದೇಶ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ

ಹಿಮಾಚಲ: ಸಿ.ಎಂ ರೇಸ್‌ನಲ್ಲಿ ಮೂವರು

ನವದೆಹಲಿ (ಪಿಟಿಐ): ಹಿಮಾಚಲ ಪ್ರದೇಶದ ಮುಖ್ಯಮಂತ್ರಿಗೆ ಗಾದಿಗೆ ವಿರೋಧ ಪಕ್ಷದ ನಾಯಕರಾಗಿದ್ದ ಮುಕೇಶ್ ಅಗ್ನಿಹೋತ್ರಿ, ಪ್ರಚಾರ ಸಮಿತಿಯ ಅಧ್ಯಕ್ಷರಾಗಿದ್ದ ಸುಖ್ವಿಂದರ್ ಸಿಂಗ್ ಸುಖು ಹಾಗೂ ರಾಜ್ಯ ಘಟಕದ ಅಧ್ಯಕ್ಷೆ ಪ್ರತಿಭಾ ಸಿಂಗ್ ಅವರ ಹೆಸರು ಮುಂಚೂಣಿಯಲ್ಲಿದೆ.

ಪಕ್ಷದ ರಾಜ್ಯ ಉಸ್ತುವಾರಿ ರಾಜೀವ್ ಶುಕ್ಲಾ ಅವರ ನೇತೃತ್ವದಲ್ಲಿ ಪಕ್ಷದ ಶಾಸಕರ ಸಭೆ ಶುಕ್ರವಾರ ನಡೆಯಲಿದೆ. ಮುಖ್ಯಮಂತ್ರಿಯ ಆಯ್ಕೆ ಅಧಿಕಾರವನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಿಗೆ ನೀಡುವ ಒಂದು ಸಾಲಿನ ತೀರ್ಮಾನವನ್ನು ಸಭೆಯಲ್ಲಿ ಅಂಗೀಕರಿಸಲಾಗುತ್ತದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಶಿಮ್ಲಾಕ್ಕೆ ತೆರಳುವಂತೆ ಛತ್ತೀಸಗಢದ ಮುಖ್ಯಮಂತ್ರಿ ಭೂಪೇಶ ಬಘೇಲ್ ಅವರಿಗೆ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೂಚಿಸಿದ್ದಾರೆ ಎಂದೂ ಮೂಲಗಳು ಹೇಳಿವೆ.

ಪ್ರತಿಭಾ ಅವರು ರಾಜ್ಯದಾದ್ಯಂತ ಬಿರುಸಿನ ಪ್ರಚಾರ ಕೈಗೊಂಡಿದ್ದರು. ಸಂಸದೆಯಾಗಿರುವ ಅವರ ಪರವಾಗಿ ಪಕ್ಷದ ಶಾಸಕರು ಒಲವು ತೋರುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ. ಪ್ರತಿಭಾ ಅವರು, ವೀರಭದ್ರ ಸಿಂಗ್ ಅವರ ಪತ್ನಿ. ಈ ಅಂಶವೂ ಅವರಿಗೆ ಪೂರಕವಾಗುವ ಸಾಧ್ಯತೆ ಇದೆ.

ಪ್ರತಿಭಾ ಅವರ ಮಗ ವಿಕ್ರಮಾದಿತ್ಯ ಸಿಂಗ್ ಅವರು ಶಿಮ್ಲಾ ಗ್ರಾಮಾಂತರ ಕ್ಷೇತ್ರದಿಂದ ಈ ಬಾರಿ ಆಯ್ಕೆಯಾಗಿದ್ದಾರೆ. ಇವರೂ ಕೂಡ ಮುಖ್ಯಮಂತ್ರಿ ಸ್ಥಾನದ ರೇಸ್‌ನಲ್ಲಿದ್ದಾರೆ. ಆದರೆ ಈ ಸ್ಥಾನಕ್ಕೆ ಪರಿಗಣಿಸಲು ಅವರು ತೀರಾ ಚಿಕ್ಕವರು ಎನ್ನುವುದು ಹಲವರ ಅಭಿಪ್ರಾಯ.

ತಮ್ಮ ಕೆಲಸ ಪರಿಗಣಿಸಿ ಪಕ್ಷದ ಹೈಕಮಾಂಡ್ ತಮ್ಮನ್ನು ಆಯ್ಕೆ ಮಾಡಬಹುದು ಎಂಬ ವಿಶ್ವಾಸದಲ್ಲಿ ಮುಕೇಶ್, ಸುಖ್ವಿಂದರ್ ಇದ್ದಾರೆ.

ಒಂದಾದ ಅಖಿಲೇಶ್–ಶಿವಪಾಲ್

ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಹಾಗೂ ಅವರ ಚಿಕ್ಕಪ್ಪ ಹಾಗೂ ಪ್ರಗತಿಶೀಲ ಸಮಾಜವಾದಿ ಪಕ್ಷದ (ಲೋಹಿಯಾ) ಸಂಸ್ಥಾಪಕ ಶಿವಪಾಲ್ ಯಾದವ್ ಮತ್ತೆ ಒಂದಾಗಿದ್ದಾರೆ. ಎಸ್‌ಪಿ ಜೊತೆ ಶಿವಪಾಲ್ ಅವರ ಪಕ್ಷ ವಿಲೀನವಾಗಿದೆ.

ಅತ್ತ ಡಿಂಪಲ್ ಯಾದವ್ ಅವರು ಮೈನ್‌ಪುರಿಯಲ್ಲಿ ಭಾರಿ ಗೆಲುವು ದಾಖಲಿಸುತ್ತಿದ್ದಂತೆಯೇ, ಇತ್ತ ಇಟಾವಾ ಜಿಲ್ಲೆಯ ಸೈಫೈನಲ್ಲಿ ಶಿವಪಾಲ್ ಅವರನ್ನು ಅಖಿಲೇಶ್ ಭೇಟಿಯಾಗಿ ಎಸ್‌ಪಿ ಧ್ವಜ ನೀಡಿದರು. ಶಿವಪಾಲ್ ಅವರ ಕಾರಿನ ಮೇಲೆ ಎಸ್‌ಪಿ ಧ್ವಜವನ್ನು ಹಾಕಲಾಗಿತ್ತು. ಶಿವಪಾಲ್ ಅವರು ತಮ್ಮ ಟ್ವಿಟರ್ ಖಾತೆಯ ಪ್ರೊಫೈಲ್‌ನಲ್ಲಿ 'ಎಸ್‌ಪಿ ನಾಯಕ' ಎಂದು ಬದಲಿಸಿದ್ದಾರೆ.

ಉಪಚುನಾವಣೆ: ಮಿಶ್ರಫಲ

ಪ್ರಜಾವಾಣಿ ವಾರ್ತೆ

ಡಿಂಪಲ್ ಯಾದವ್

ಲಖನೌ: ಒಂದು ಲೋಕಸಭಾ ಕ್ಷೇತ್ರ ಹಾಗೂ ಆರು ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯು ಬಿಜೆಪಿ ಹಾಗೂ ವಿರೋಧಪಕ್ಷಗಳಿಗೆ ಮಿಶ್ರ ಫಲ ನೀಡಿದೆ. ಕುಟುಂಬದ ಭದ್ರನೆಲೆ ಮೈನ್‌ಪುರಿ ಲೋಕಸಭಾ ಕ್ಷೇತ್ರವನ್ನು ಉಳಿಸಿಕೊಳ್ಳುವಲ್ಲಿ ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್ ಯಶಸ್ವಿಯಾಗಿದ್ದಾರೆ. ಅಖಿಲೇಶ್ ಪತ್ನಿ ಡಿಂಪಲ್ ಯಾದವ್ ಅವರು ಭಾರಿ ಮತಗಳ ಅಂತರದಿಂದ ಗೆದ್ದಿದ್ದಾರೆ. ಬಿಜೆಪಿ ಅಭ್ಯರ್ಥಿ ರಾಘುರಾಜ್ ಸಿಂಗ್ ಶಖ್ಯ ಅವರನ್ನು 2.88 ಲಕ್ಷ ಮತಗಳಿಂದ ಡಿಂಪಲ್ ಸೋಲಿಸಿದ್ದಾರೆ.

ಆದರೆ ಪಕ್ಷದ ಮತ್ತೊಂದು ಭದ್ರನೆಲೆ ಹಾಗೂ ಆಜಂ ಖಾನ್ ಅವರ ತವರು ರಾಂಪುರ ವಿಧಾನಸಭಾ ಕ್ಷೇತ್ರವನ್ನು ಉಳಿಸಿಕೊಳ್ಳುವಲ್ಲಿ ಎಸ್‌ಪಿ ವಿಫಲವಾಗಿದೆ. ಬಿಜೆಪಿಯ ಆಕಾಶ್ ಸಕ್ಸೇನಾ ಅವರು 24 ಸಾವಿರ ಮತಗಳಿಂದ ಕ್ಷೇತ್ರವನ್ನು ಗೆದ್ದುಕೊಂಡಿದ್ದಾರೆ. ರಾಂಪುರದಲ್ಲಿ ಬಿಜೆಪಿ ಕೈಹಿಡಿದ ಮತದಾರರು, ಜಾಟರ ನಾಡಿನಲ್ಲಿ ಕೈಬಿಟ್ಟಿದ್ದಾರೆ. ಎಸ್‌ಪಿ–ಆರ್‌ಎಲ್‌ಡಿ ಅಭ್ಯರ್ಥಿ ಮದನ್ ಭಯ್ಯಾ ಅವರು ಖತೌಲಿ ವಿಧಾನಸಭಾ ಕ್ಷೇತ್ರವನ್ನು ಬಿಜೆಪಿಯಿಂದ ಕಸಿದುಕೊಂಡಿದ್ದಾರೆ.

- ಆಡಳಿತಾರೂಢ ಕಾಂಗ್ರೆಸ್ ಪಕ್ಷವು ಛತ್ತೀಸಗಢದ ಭಾನುಪ್ರತಾಪಪುರ ಹಾಗೂ ರಾಜಸ್ಥಾನದ ಸರ್ದಾರ್‌ಶಹರ್ ವಿಧಾನಸಭೆ ಕ್ಷೇತ್ರಗಳನ್ನು ಉಳಿಸಿಕೊಂಡಿದೆ
- ಒಡಿಶಾದ ಆಡಳಿತಾರೂಢ ಬಿಜು ಜನತಾದಳವು ಪಾದಂಪುರ ಕ್ಷೇತ್ರವನ್ನು ಪುನಃ ಗೆದ್ದುಕೊಳ್ಳುವಲ್ಲಿ ಯಶಸ್ವಿಯಾಗಿದೆ
- ಬಿಹಾರದ ಕುರ್ಹಾನಿ ಕ್ಷೇತ್ರದಲ್ಲಿ ಜೆಡಿಯು ಅಭ್ಯರ್ಥಿಯನ್ನು ಬಿಜೆಪಿ ಪರಾಭವಗೊಳಿಸಿದೆ.

ಗೆಲುವಿನ ಹಾರ

ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿದ ಬಳಿಕ ನವದೆಹಲಿಯಲ್ಲಿರುವ ಪಕ್ಷದ ಕೇಂದ್ರ ಕಚೇರಿಯಲ್ಲಿ ಗುರುವಾರ ಸಂಭ್ರಮಾಚರಣೆ ನಡೆಯಿತು. ರಕ್ಷಣಾ ಸಚಿವ ರಾಜನಾಥ ಸಿಂಗ್, ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಗೃಹ ಸಚಿವ ಅಮಿತ್ ಶಾ ಅವರಿಗೆ ಈ ವೇಳೆ ಹೂವಿನ ಹಾರ ಹಾಕಲಾಯಿತು – ಪಿಟಿಐ ಚಿತ್ರ

ಗುಜರಾತ್‌ನಲ್ಲಿ ಕಮಲ, 'ಕೈ'ಗೆ ಹಿಮಾಚಲ

ಒಂದನೇ ಪುಟದಿಂದ...

'ಕೈ' ಪಾಳಯದ ಮೂವತ್ತು ಶಾಸಕರನ್ನು (ಮೂರು ವರ್ಷಗಳಲ್ಲಿ 17 ಮಂದಿ ಮತ್ತು ಚುನಾವಣಾ ಪೂರ್ವದಲ್ಲಿ 13 ಮಂದಿ) ಸೆಳೆದು ಕಣಕ್ಕೆ ಇಳಿಸಿತು. ಟಿಕೆಟ್ ಹಂಚಿಕೆಯಲ್ಲಿ 'ಖಾಪ್' (ಕ್ಷತ್ರಿಯ–ದಲಿತ (ಹರಿಜನ)–ಆದಿವಾಸಿ–ಪಾಟೀದಾರ್) ಸೂತ್ರ ಅಳವಡಿಸಿಕೊಂಡಿತು. ದಶಕಗಳಿಂದ 'ಕೈ' ಮೇಲೆ ಹೆಚ್ಚಿನ ಪ್ರೀತಿ ತೋರುತ್ತಿದ್ದ ಆದಿವಾಸಿಗಳ ಮೇಲೆ ಕೇಸರಿ ಪಡೆಯು ಈ ಸಲ ಭಾವನಾತ್ಮಕ ಅಸ್ತ್ರ ಪ್ರಯೋಗಿಸಿತು. ಆದಿವಾಸಿಗಳನ್ನು ದೇಶದ ಉನ್ನತ ಹುದ್ದೆಗೆ (ರಾಷ್ಟ್ರಪತಿ) ಏರಿಸಿದ ಪಕ್ಷ ತಮ್ಮದು ಎಂಬುದನ್ನು ನರೇಂದ್ರ ಮೋದಿ ಚುನಾವಣಾ ಕಣದಲ್ಲಿ ಪದೇ ಪದೇ ಪ್ರಸ್ತಾಪಿಸಿದರು. ಮೋದಿ ಅವರು 35ಕ್ಕೂ ಅಧಿಕ ರ್‍ಯಾಲಿಗಳಲ್ಲಿ ಪಾಲ್ಗೊಂಡು ಅಭಿವೃದ್ಧಿ ಹಾಗೂ ರಾಷ್ಟ್ರೀಯತೆಯ ಮಂತ್ರ ಜಪಿಸಿದರು. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ 'ರಾವಣನ ಹೋಲಿಕೆ' ಹೇಳಿಕೆಯನ್ನೂ ಬಿಜೆಪಿ ಪ್ರಬಲ ಹತಾರವನ್ನಾಗಿ ಮಾಡಿಕೊಂಡಿತು. 'ಮೋದಿ ಭಾಯಿ' ಅವರಿಗೆ ಕಾಂಗ್ರೆಸ್ ಅವಮಾನ ಮಾಡಿದೆ ಎಂದು ಹೇಳಿ ಮತ ಕ್ರೋಡೀಕರಣಕ್ಕೆ ಮುಂದಾಯಿತು.

2017ರ ಚುನಾವಣೆಯಲ್ಲಿ ಬಿಜೆಪಿ ಬೆವರುವಂತೆ ಮಾಡಿದ್ದ ಕಾಂಗ್ರೆಸ್ ಈ ಸಲ ಚುನಾವಣೆಗೆ ಮುನ್ನವೇ ಶಸ್ತ್ರತ್ಯಾಗ ಮಾಡಿತ್ತು. ತಮ್ಮ ಭವಿಷ್ಯ ಭದ್ರ ಮಾಡಿಕೊಳ್ಳಲು ಯುವ ಮುಂದಾಳುಗಳಾದ ಹಾರ್ದಿಕ್ ಪಟೇಲ್ ಹಾಗೂ ಅಲ್ಪೇಶ್ ಠಾಕೂರ್ ಕಾಂಗ್ರೆಸ್ ಪಕ್ಷದಿಂದ ಹೊರ ನಡೆದು ಮೋದಿ ನೆರಳಲ್ಲಿ ಆಶ್ರಯ ಪಡೆದರೆ, 'ಭಾರತ್ ಜೋಡೋ ಯಾತ್ರೆ'ಯಲ್ಲಿದ್ದ ರಾಹುಲ್ ಗಾಂಧಿ ಅವರು ಕಾಟಾಚಾರಕ್ಕೆ ಒಮ್ಮೆ ಮಾತ್ರ ಗುಜರಾತ್‌ನಲ್ಲಿ ಪ್ರಚಾರ ಮಾಡಿದರು. ಪ್ರಬಲ ಎದುರಾಳಿಗಳು ಕಣದಲ್ಲಿದ್ದ ಕಾರಣ ದಲಿತ ನಾಯಕ ಜಿಗ್ನೇಶ್ ಮೇವಾನಿ ಅವರು ತಮ್ಮ ಕ್ಷೇತ್ರಕ್ಕೆ ಹೆಚ್ಚು ಸಮಯ ಮೀಸಲಿಡಬೇಕಾಯಿತು.

ಕಾಂಗ್ರೆಸ್‌ನ ಮತ ಗಳಿಕೆ ಪ್ರಮಾಣ ಯಾವತ್ತೂ ಶೇ 30ಕ್ಕಿಂತ ಕೆಳಕ್ಕೆ ಇಳಿದಿರಲಿಲ್ಲ. ಬಿಜೆಪಿ ವಿರೋಧಿ ಮತಗಳೆಲ್ಲ 'ಕೈ' ಬುಟ್ಟಿಗೆ ಬೀಳುತ್ತಿತ್ತು. ಈ ಸಲ ಎಎಪಿ ಪ್ರವೇಶದಿಂದಾಗಿ ರಾಜಕೀಯ ಸಮೀಕರಣ ಬದಲಾಯಿತು. ಎಎಪಿಯು 5 ಸ್ಥಾನಗಳಲ್ಲಷ್ಟೇ ಗೆಲುವು ಸಾಧಿಸಿದರೂ ಪಡೆದ ಮತ ಪ್ರಮಾಣ ಶೇ 12.9ರಷ್ಟು. ಆ ಪಕ್ಷವು ಕಾಂಗ್ರೆಸ್‌ನ ಮತಗಳನ್ನು ದೊಡ್ಡ ಪ್ರಮಾಣದಲ್ಲಿ ಕಿತ್ತುಕೊಂಡಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಕಳೆದ ಚುನಾವಣೆಯಲ್ಲಿ ಬಿಜೆಪಿ 99 ಸ್ಥಾನಗಳಲ್ಲಿ ಗೆದ್ದು ಶೇ 49.44 ಮತಗಳನ್ನು ಪಡೆದಿತ್ತು. ಈ ಸಲ ಬಿಜೆಪಿ ಮತ ಪ್ರಮಾಣ ಶೇ 3ರಷ್ಟು ಹೆಚ್ಚಾಗಿದೆ. ಗೆದ್ದ ಕ್ಷೇತ್ರಗಳ ಸಂಖ್ಯೆ 156ಕ್ಕೆ ಜಿಗಿದಿದೆ. ತ್ರಿಕೋನ ಸ್ಪರ್ಧೆಯಿಂದ ಬಿಜೆಪಿಗೆ ಹೆಚ್ಚು ಅನುಕೂಲವಾಗಿದೆ ಎಂದು ವಿಶ್ಲೇಷಕರು ಅಭಿಪ್ರಾಯಪಡುತ್ತಾರೆ.

ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ

ಒಂದನೇ ಪುಟದಿಂದ...

ಆಡಳಿತ ವಿರೋಧಿ ಅಲೆಯಿಂದಾಗಿ ಬಿಜೆಪಿ ಕಣಿವೆ ರಾಜ್ಯದಲ್ಲಿ ಕೊಚ್ಚಿಹೋಗಿದೆ. 'ಕಮಲಕ್ಕೆ ಮತ ನೀಡಿದರೆ ನನಗೆ ಮತ ಹಾಕಿದಂತೆ' ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಭಾವನಾತ್ಮಕ ಮಾತುಗಳಿಗೂ ಆ ರಾಜ್ಯದ ಜನರು ಮಣೆ ಹಾಕಿಲ್ಲ. ಸೇನೆಯಲ್ಲಿ ಅಗ್ನಿವೀರರ ನೇಮಕಕ್ಕೆ ಹಿಮಾಚಲ ಪ್ರದೇಶದಲ್ಲಿ ದೊಡ್ಡ ಮಟ್ಟದಲ್ಲಿ ಪ್ರತಿರೋಧ ವ್ಯಕ್ತವಾಗಿತ್ತು. ಈ ವಿಷಯ ಸಹ ಪ್ರಮುಖ ಚುನಾವಣಾ ವಿಚಾರವಾಗಿತ್ತು.

ಸೇಬು ಬೆಳೆಗಾರರ ಹೋರಾಟ ಹಾಗೂ ಆಡಳಿತ ವಿರೋಧಿ ಅಲೆ ಸಹ ಬಿಜೆಪಿಗೆ ಮುಳುವಾಗಿದೆ. ಪ್ರಧಾನಿ ಅವರ ಅಭಿವೃದ್ಧಿ ಯೋಜನೆಗಳ ಘೋಷಣೆ ತಂತ್ರಕ್ಕೆ ಹೆಚ್ಚಿನ ಫಲ ಸಿಕ್ಕಿಲ್ಲ. ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ತವರು ರಾಜ್ಯದಲ್ಲೇ ಕಮಲ ಪಾಳಯಕ್ಕೆ ಮುಖಭಂಗವಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಎದುರಿಸಿದ ಮೊದಲ ಚುನಾವಣೆ ಇದು. ಗುಜರಾತ್‌ನಲ್ಲಿ ಪಕ್ಷ ದಯನೀಯವಾಗಿ ಸೋತರೂ ಹಿಮಾಚಲ ಪ್ರದೇಶದ ಗೆಲುವಿನಿಂದ ಅವರು ಸಮಾಧಾನಪಟ್ಟುಕೊಳ್ಳಬಹುದು. ಮುಂಬರುವ ಕರ್ನಾಟಕ ವಿಧಾನಸಭಾ ಚುನಾವಣೆಗೆ ಕಾರ್ಯತಂತ್ರ ರೂಪಿಸಲು ಈ ಅನುಭವ ನೆರವಾಗಬಹುದು ಎಂಬ ಚರ್ಚೆ ಕಾಂಗ್ರೆಸ್ ವಲಯದಲ್ಲಿ ಆರಂಭವಾಗಿದೆ.

75,400 ಟನ್ ಮಲೇಷ್ಯಾ ಮರಳು ವಿತರಣೆಯೇ ಆಗಿಲ್ಲ!

ಪ್ರಜಾವಾಣಿ ವಾರ್ತೆ

ಮಂಗಳೂರು: ಮರಳು ಕೊರತೆ ನೀಗಿಸಲು ಕೆಲ ವರ್ಷಗಳ ಹಿಂದೆ ಮಲೇಷ್ಯಾದಿಂದ ಆಮದು ಮಾಡಿಕೊಂಡಿರುವ 75,400 ಟನ್ ಮರಳು ವಿತರಣೆ ಆಗದೆ ಹಾಗೇ ಉಳಿದಿದೆ!

ಎಂ.ಆರ್. ರವಿಕುಮಾರ್

'ಎನ್ಎಂಪಿಎ ಆವರಣದಲ್ಲಿ 75,400 ಟನ್ ಮರಳು ಸಂಗ್ರಹ ಇರುವ ವಿಷಯ ನನಗೂ ಅಚ್ಚರಿ ಮೂಡಿಸಿದೆ. ಇದು ಎಂ–ಸ್ಯಾಂಡ್ ಅಲ್ಲವಾಗಿದ್ದರೂ, ಅದಕ್ಕೆ ಸಮಾನ ಉತ್ತಮ ಗುಣಮಟ್ಟ ಹೊಂದಿದೆ. 10 ಟನ್‌ಗೆ ₹ 10 ಸಾವಿರ ದರಕ್ಕೆ ಖರೀದಿದಾರರಿಗೆ ಪೂರೈಕೆ ಮಾಡಲಾಗುವುದು. ಇದಲ್ಲದೆ, ಜಿಲ್ಲೆಯ ವಿವಿಧ ಕಡೆಗಳಲ್ಲಿ ವಶಪಡಿಸಿಕೊಂಡಿರುವ 1,000 ಟನ್ ಮರಳು ಲಭ್ಯವಿದೆ. ಆ ಮರಳನ್ನು ಕೂಡಾ ಲೋಡ್ ಒಂದಕ್ಕೆ ₹ 7,000 ದರದಲ್ಲಿ ನೀಡಲಾಗುವುದು' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ರವಿಕುಮಾರ್ ಎಂ.ಆರ್. ಮಾಹಿತಿ ನೀಡಿದರು.

ನಂತರ ಲಿಖಿತ ಹೇಳಿಕೆ ಬಿಡುಗಡೆ ಮಾಡಿದ ಜಿಲ್ಲಾಧಿಕಾರಿ, ಆಮದು ಮರಳು ಪಡೆಯಲು ಆಕರ್ ಎಂಟರ್‌ಪ್ರೈಸಸ್, ನವಮಂಗಳೂರು ಬಂದರು, ಪಣಂಬೂರು (9113907389) ಇಲ್ಲಿ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಆಕರ್ ಎಂಟರ್‌ಪ್ರೈಸಸ್ ಸಂಸ್ಥೆಯು ಮಲೇಷ್ಯಾದಿಂದ 1 ಲಕ್ಷ ಟನ್ ಮರಳನ್ನು ಆಮದು ಮಾಡಿಕೊಂಡು ನವಮಂಗಳೂರು ಬಂದರಿನಲ್ಲಿ ದಾಸ್ತಾನು ಇರಿಸಿತ್ತು. ಇದಕ್ಕೆ ಸಂಬಂಧಿಸಿ ಹೈಕೋರ್ಟ್‌ಗೆ ಸಲ್ಲಿಕೆಯಾಗಿದ್ದ ರಿಟ್ ಅರ್ಜಿಗೆ 2019ರ ಫೆ. 11ರಂದು ನೀಡಿದ ಮಧ್ಯಂತರ ಆದೇಶದಂತೆ, ಹೊರ ರಾಜ್ಯಗಳಿಗೆ ಮರಳು ಸಾಗಣೆ ಪರವಾನಗಿ ವಿತರಿಸಲು ಕ್ರಮವಹಿಸುವಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರು 2019ರ ಏ. 12ರಂದು ಪತ್ರದಲ್ಲಿ ತಿಳಿಸಿದ್ದಾರೆ. ಅದರಂತೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು 2019 ಜೂನ್ 11ರಂದು ಎನ್ಎಂಪಿಎದಲ್ಲಿ ದಾಸ್ತಾನು ಮಾಡಿರುವ 1 ಲಕ್ಷ ಟನ್ ಮರಳನ್ನು ಹೊರ ರಾಜ್ಯಗಳಿಗೆ ಸಾಗಣೆ ಮಾಡಲು ಅನುಮತಿ ನೀಡಿತ್ತು. ಆ ಪೈಕಿ 75,400 ಟನ್ ಮರಳು ಉಳಿದಿದೆ ಎಂದು ವಿವರಿಸಿದ್ದಾರೆ.

ಮೈಸೂರಿನ ರಂಗಾಯಣದಲ್ಲಿ 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ' ಪ್ರಯುಕ್ತ ಗುರುವಾರ ಆರಂಭವಾದ 'ಜಾನಪದೋತ್ಸವ'ದಲ್ಲಿ ಕೆರೆಮನೆ ಶಿವಾನಂದ ಹೆಗಡೆ ನೇತೃತ್ವದ 'ಇಡಗುಂಜಿ ಮೇಳ' ಪ್ರದರ್ಶಿಸಿದ 'ಪಂಚವಟಿ' ಯಕ್ಷಗಾನ ಪ್ರಸಂಗದ ದೃಶ್ಯ – ಪ್ರಜಾವಾಣಿ ಚಿತ್ರ/ ಅನೂಪ್ ರಾಘ.ಟಿ

5 ನಗರಗಳಲ್ಲಿ ಬಹುಮಹಡಿ ವಿದ್ಯಾರ್ಥಿ ನಿಲಯ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ, ಹುಬ್ಬಳ್ಳಿ, ಕಲಬುರಗಿ, ಮೈಸೂರು ಮತ್ತು ಮಂಗಳೂರಿನಲ್ಲಿ ತಲಾ 1,000 ವಿದ್ಯಾರ್ಥಿಗಳ ಸಾಮರ್ಥ್ಯದ ಬಹು ಮಹಡಿ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಇದಕ್ಕಾಗಿ ₹ 412.80 ಕೋಟಿ ಅನುದಾನ ನೀಡಲಾಗುವುದು ಎಂದು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಮುಖ ನಗರಗಳಲ್ಲಿ ವಿದ್ಯಾರ್ಥಿನಿಲಯ ಸಮುಚ್ಚಯ ನಿರ್ಮಿಸುವ ಈ ಯೋಜನೆಯನ್ನು ಕಳೆದ ಬಜೆಟ್‌ನಲ್ಲಿ ಪ್ರಕಟಿಸಲಾಗಿತ್ತು ಎಂದೂ ಅವರು ಹೇಳಿದರು.

ಪ್ರಮುಖ ನಿರ್ಣಯಗಳು:

- ಶಿವಮೊಗ್ಗದ ಇರುವಕ್ಕಿಯಲ್ಲಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ಯಾಂಪಸ್ ಮತ್ತು ಕೇಂದ್ರ ಸ್ಥಾನ ಅಭಿವೃದ್ಧಿಪಡಿಸುವ ಕಾಮಗಾರಿಯ ಪರಿಷ್ಕೃತ ಯೋಜನಾ ಮೊತ್ತ ₹169.47 ಕೋಟಿ ಆಡಳಿತಾತ್ಮಕ ಅನುಮೋದನೆ
- ₹345.50 ಕೋಟಿ ವೆಚ್ಚದಲ್ಲಿ 'ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ' ಜಾರಿಗೆ ಘಟನೋತ್ತರ ಅನುಮೋದನೆ.
- ಕರ್ನಾಟಕ ವಿದ್ಯುತ್ ನಿಗಮ 2022–23 ನೇ ಸಾಲಿಗೆ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಂದ ₹3,000 ಕೋಟಿ ಸಾಲ ಪಡೆಯಲು ಸರ್ಕಾರದ ಖಾತರಿ.
- ರಾಜ್ಯದಲ್ಲಿ ಖಾಸಗಿ ಹೂಡಿಕೆ ಆಧಾರದ ಮೇಲೆ ಗ್ರಿಡ್ ಬೆಂಬಲಿತ 1,000 ಮೆ.ವ್ಯಾ ಪಂಪ್ಡ್ ಹೈಡ್ರೋ ಸ್ಟೋರೇಜ್ ವಿದ್ಯುತ್ ಯೋಜನೆಯನ್ನು ವಿದ್ಯುತ್ ಕಾಯ್ದೆ 2003 ಕಲಂ 63 ರ ಅಡಿ ಪಿಸಿಕೆಎಲ್ ಸಂಸ್ಥೆಯಿಂದ ₹4,000 ಕೋಟಿ ಅಂದಾಜು ಮೊತ್ತದಲ್ಲಿ ಅನುಷ್ಠಾನಕ್ಕೆ ಒಪ್ಪಿಗೆ.
- ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು ಆಸ್ಪತ್ರೆಯನ್ನು 100 ಹಾಸಿಗೆಗಳಿಂದ 250 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ₹26.50 ಕೋಟಿ.
- ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಅನ್ನು ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಅಮರಾವತಿ ಗ್ರಾಮದ ಜಂಗಮಕೋಟೆಯಲ್ಲಿ ಆಡಳಿತಾತ್ಮಕ ಮತ್ತು ಶೈಕ್ಷಣಿಕ ವಿಭಾಗದ ಕಟ್ಟಡ ನಿರ್ಮಾಣಕ್ಕೆ ಮೊದಲ ಹಂತದ ಕಾಮಗಾರಿಯನ್ನು ₹88 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಒಪ್ಪಿಗೆ.
- 'ಆಜಾದಿ ಕಾ ಅಮೃತ್ ಮಹೋತ್ಸವ್' ಆಚರಣೆ ಅಂಗವಾಗಿ ಕೇಂದ್ರ ಸರ್ಕಾರ ನಿಗದಿ ಮಾಡಿರುವ ಮಾರ್ಗಸೂಚಿ ಅನ್ವಯ ಒಟ್ಟು 42 ಅರ್ಹ ನಿರ್ದಿಷ್ಟ ವರ್ಗದ ಶಿಕ್ಷಾ ಬಂದಿಗಳನ್ನು ಗಣರಾಜ್ಯೋತ್ಸವದ ವಿಶೇಷ ಮಾಫಿಯೊಂದಿಗೆ ಬಿಡುಗಡೆಗೆ ಒಪ್ಪಿಗೆ.
- ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನ ನಾರಾಯಣಪುರ ಬಲದಂಡೆ ನಾಲೆಯ ಉಪಕಾಲುವೆಯ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ₹253.94 ಕೋಟಿ ಅಂದಾಜು ಮೊತ್ತದ 6 ಏತ ನೀರಾವರಿಗಳಿಗೆ ಒಪ್ಪಿಗೆ.

ಪರಿಷ್ಕೃತ ವೆಚ್ಚಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ • ಭೂಸ್ವಾಧೀನ ವೆಚ್ಚ ಮೂರು ಪಟ್ಟು ಹೆಚ್ಚಳ

ಎತ್ತಿನಹೊಳೆ ವೆಚ್ಚ ₹23,251 ಕೋಟಿಗೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ವೆಚ್ಚವನ್ನು ₹23,251.66 ಕೋಟಿಗೆ ಪರಿಷ್ಕರಿಸಿದ್ದು, ಗುರುವಾರ ನಡೆದ ಸಚಿವ ಸಂಪುಟ ಸಭೆ ಪರಿಷ್ಕೃತ ಮೊತ್ತಕ್ಕೆ ಅನುಮೋದನೆ ನೀಡಿದೆ.

ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು.

2012 ರಲ್ಲಿ ಯೋಜನೆಯ ಆರಂಭಿಕ ವೆಚ್ಚ ₹8,323.50 ಕೋಟಿ ಇತ್ತು. ಬಳಿಕ ₹12,912.36 ಕೋಟಿಗೆ ಪರಿಷ್ಕರಿಸಲಾಗಿತ್ತು. ಯೋಜನೆಯ ವೆಚ್ಚ ಹೆಚ್ಚಳವಾಗಲು ಸಿವಿಲ್ ಕಾಮಗಾರಿಗಳ ಸಾಮಗ್ರಿಗಳಾದ ಸಿಮೆಂಟ್, ಉಕ್ಕು, ಮರಳು ಮುಂತಾದವುಗಳ ದರ ಹೆಚ್ಚಾಗಿರುವುದು ಒಂದು ಕಾರಣವಾದರೆ, ಭೂಸ್ವಾಧೀನಕ್ಕಾಗಿ ಕೊಡಬೇಕಾದ ಪರಿಹಾರ ಮೊತ್ತವೂ ಮಾರ್ಗಸೂಚಿ ದರಕ್ಕಿಂತ ನಾಲ್ಕು ಪಟ್ಟು ಹೆಚ್ಚಾಗಿದೆ. ಇದೇ ಬಹು ದೊಡ್ಡ ಹೊರೆಯಾಗಿದೆ. 2013 ರಲ್ಲಿ ಭೂಸ್ವಾಧೀನ ಕಾಯ್ದೆ ಬಂದ ನಂತರ ಸ್ವಾಧೀನ ವೆಚ್ಚ ಮೂರು ಪಟ್ಟು ಹೆಚ್ಚಾಯಿತು ಎಂದರು.

ಅಲ್ಲದೆ, ದೊಡ್ಡಬಳ್ಳಾಪುರ ಮತ್ತು ಕೊರಟಗೆರೆಗಳಲ್ಲಿ ಭೂಸ್ವಾಧೀನ ವೆಚ್ಚ ವ್ಯತ್ಯಾಸ ಇರುವುದರಿಂದ ಭೂಮಿ ಕೊಡಲು ರೈತರು ಒಪ್ಪುತ್ತಿಲ್ಲ. ತಮಗೂ ಅದೇ ಮೊತ್ತ ನೀಡಬೇಕು ಎಂದು ರೈತರು ಪಟ್ಟು ಹಿಡಿದಿದ್ದಾರೆ ಎಂದು ಮಾಧುಸ್ವಾಮಿ ಹೇಳಿದರು.

ಯಾವುದೇ ಯೋಜನೆಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗದೇ ಇದ್ದರೆ ಯೋಜನಾ ವೆಚ್ಚವೂ ಹೆಚ್ಚಾಗುತ್ತಾ ಹೋಗುತ್ತದೆ. ಅಂದಿನ ಖರ್ಚು–ವೆಚ್ಚಕ್ಕೆ ಅನುಗುಣವಾಗಿ ಪರಿಷ್ಕರಣೆ ಮಾಡಲೇಬೇಕಾಗುತ್ತದೆ. 2013 ರ ಭೂಸ್ವಾಧೀನ ಕಾಯ್ದೆಯ ಪರಿಹಾರವನ್ನು ಕೊಟ್ಟು, ನಾವು ಎಷ್ಟೇ ತ್ವರಿತಗತಿಯಲ್ಲಿ ಕಾರ್ಯ ನಿರ್ವಹಿಸಿದರೂ ಸ್ವಾಧೀನಕ್ಕೆ ಆರರಿಂದ ಏಳು ತಿಂಗಳು ಬೇಕಾಗುತ್ತದೆ. ಇವೆಲ್ಲ ಕಾರಣಗಳಿಂದ ಯೋಜನಾ ವೆಚ್ಚ ಸಹಜವಾಗಿ ಹೆಚ್ಚಾಗುತ್ತದೆ. ಈ ಬಗ್ಗೆ ಸಿದ್ದರಾಮಯ್ಯ, ಯಡಿಯೂರಪ್ಪ, ಕುಮಾರಸ್ವಾಮಿ ಯಾರು ಏನೇ ಮಾತನಾಡಿದರೂ ಅಷ್ಟೇ ಎಂದರು.

6 ಟಿಎಂಸಿ ನೀರು ಸಂಗ್ರಹ ಮಾಡುವ ಜಲಾಶಯ ನಿರ್ಮಾಣಕ್ಕೆ ತೊಡಕು ಉಂಟಾಗಿರುವುದರಿಂದ ರೈತರ ಜತೆ ಮಾತುಕತೆ ಮಾಡುವ ಉದ್ದೇಶ ಸರ್ಕಾರಕ್ಕಿದೆ. ಮಾತುಕತೆಯ ಬಳಿಕವೇ ಜಲಾಶಯ ನಿರ್ಮಾಣದ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಮಾಧುಸ್ವಾಮಿ ತಿಳಿಸಿದರು.

ಶಾಶ್ವತ ಹಂಚಿಕೆ: ರಾಜ್ಯದ ನಾಲ್ಕೂ ಸಾರಿಗೆ ಸಂಸ್ಥೆಗಳ ದರ್ಜೆ–3 ಮೇಲ್ವಿಚಾರಕ ಸಿಬ್ಬಂದಿ, ದರ್ಜೆ–2 ಮತ್ತು ದರ್ಜೆ–1 (ಕಿರಿಯ ಶ್ರೇಣಿ) ಅಧಿಕಾರಿಗಳನ್ನು ಆಯಾ ಸಾರಿಗೆ ಸಂಸ್ಥೆಗಳಿಗೆ ಶಾಶ್ವತ ಹಂಚಿಕೆ ಮಾಡಿ, ದರ್ಜೆ–1 (ಹಿರಿಯ ಶ್ರೇಣಿ) ಮತ್ತು ಮೇಲ್ಪಟ್ಟ ವೃಂದಗಳ ನಿರ್ವಹಣೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಮುಂದುವರಿಸಲು ತೀರ್ಮಾನಿಸಲಾಗಿದೆ.

ಕರ್ನಾಟಕ ಯುವನೀತಿ–22 ಕ್ಕೆ ಒಪ್ಪಿಗೆ

ಬೆಂಗಳೂರು: ರಾಜ್ಯದಲ್ಲಿ ಯುವ ಜನರ ಸಮಗ್ರ ಅಭಿವೃದ್ಧಿಯನ್ನು ಸಕ್ರಿಯಗೊಳಿಸುವುದು ಮತ್ತು ರಚನಾತ್ಮಕ ಸಾಮಾಜಿಕ ಬದಲಾವಣೆ ತಂದು ಯುವ ಜನರನ್ನು ಸಶಕ್ತರನ್ನಾಗಿಸುವ ಉದ್ದೇಶ ಹೊಂದಿರುವ ಕರ್ನಾಟಕ ಯುವ ನೀತಿ–22ಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಯುವ ನೀತಿ ರೂಪಿಸಲು ರಾಜ್ಯ ಸರ್ಕಾರ ರಚಿಸಿದ್ದ ಡಾ.ಆರ್. ಬಾಲಸುಬ್ರಹ್ಮಣ್ಯಂ ಅಧ್ಯಕ್ಷತೆಯ ಸಮಿತಿಯು ಈ ಕುರಿತು ಶಿಫಾರಸು ಮಾಡಿತ್ತು.

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ ಈ ವಿಷಯ ತಿಳಿಸಿದರು.

ಯುವ ಜನರ ಸುಸ್ಥಿರ ಅಭಿವೃದ್ಧಿಗಾಗಿ 2030 ರ ಕಾರ್ಯ ಸೂಚಿಯೊಂದಿಗೆ ಯುವ ನೀತಿಯು ಎಂಟು ವರ್ಷಗಳ ಅವಧಿಗೆ ಅಂದರೆ, 2030 ರವರೆಗೆ ಕಾರ್ಯ ನಿರ್ವಹಿಸಲಿದೆ ಎಂದರು.

ಉದ್ದೇಶಗಳು:

- ಹೆಚ್ಚು ಹೆಚ್ಚು ವಿದ್ಯಾವಂತರೂ ಮತ್ತು ಪರಿಣಿತ ಯುವ ಜನರನ್ನು ರೂಪಿಸಲು ಶಿಕ್ಷಣ ಮತ್ತು ತರಬೇತಿಯ ಪ್ರತಿ ಹಂತದಲ್ಲಿ ದಾಖಲಾತಿ ಮತ್ತು ಸಾಧನೆಯ ಮಟ್ಟವನ್ನು ಹೆಚ್ಚಿಸುವುದು.
- ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದು ಮತ್ತು ಯುವ ಜನರು ಭವಿಷ್ಯದ ಸವಾಲುಗಳನ್ನು ಎದುರಿಸಲು ಸಿದ್ಧಗೊಳಿಸಲು ಅವರಿಗೆ ತರಬೇತಿ ನೀಡುವುದು.
- ಸ್ವಯಂ ಉದ್ಯೋಗವನ್ನು ಪ್ರೋತ್ಸಾಹಿಸಲು ಯುವ ಜನ ಉದ್ಯಮಶೀಲರಿಗೆ/ ಉದ್ಯಮಿಗಳಿಗೆ ಆರ್ಥಿಕ ಬೆಂಬಲ ಮತ್ತು ಮಾರ್ಗದರ್ಶನ ನೀಡುವುದು.
- ಯುವ ಜನರ ಆರೋಗ್ಯ ಮತ್ತು ಯೋಗಕ್ಷೇಮವನ್ನು ಸುಧಾರಿಸಲು ಯುವ ಜನರ ಪೋಷಣೆ, ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯ ಮತ್ತು ಮಾನಸಿಕ ಆರೋಗ್ಯದ ಮೇಲೆ ಕೇಂದ್ರೀಕರಿಸುವುದು.
- ರಾಜ್ಯದ ಶ್ರೀಮಂತ ಮತ್ತು ವೈವಿಧ್ಯಮಯ ಕಲಾತ್ಮಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಲು ಯುವ ಜನರಲ್ಲಿ ಅರಿವು ಮೂಡಿಸಲು ಮತ್ತು ತೊಡಗಿಸಿಕೊಳ್ಳಲು ಮಾರ್ಗಗಳನ್ನು /ವಿಧಾನಗಳನ್ನು ಅಭಿವೃದ್ಧಿಪಡಿಸುವುದು.
- ನಾಯಕತ್ವ ಗುಣಗಳನ್ನು ಬೆಳೆಸುವ ಮೂಲಕ ಯುವಜನರು ನಾಗರಿಕ ಮತ್ತು ರಾಜಕೀಯ ಭಾಗವಹಿಸುವಿಕೆಯನ್ನು ಸಕ್ರಿಯಗೊಳಿಸುವುದು

ನಾಗರಿಕ ಸೇವಾ ನಿಯಮ ತಿದ್ದುಪಡಿ ಪ್ರಸ್ತಾವ ಮುಂದಕ್ಕೆ

ಧರ್ಮ, ಜನಾಂಗ, ಪ್ರದೇಶ, ಭಾಷೆ, ಕೋಮುಭಾವನೆಗಳನ್ನು ಕೆರಳಿಸುವ ಸಂಘ– ಸಂಸ್ಥೆ ಮತ್ತು ಸಂಘಟನೆಗಳ ಜತೆ ಸರ್ಕಾರಿ ನೌಕರರು ಕೈ ಜೋಡಿಸುವುದನ್ನು ನಿಷೇಧಿಸಲು ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳಿಗೆ ತಿದ್ದುಪಡಿ ಮಾಡುವ ವಿಷಯವನ್ನು ಸಂಪುಟ ಸಭೆ ಮುಂದೂಡಿದೆ.

'ಕರಡು ಪ್ರಸ್ತಾವ ಸರಿಯಾಗಿಲ್ಲ. ಕೆಲವು ಸಮಸ್ಯೆಗಳು ಇರುವುದರಿಂದ ಕಾರ್ಯಸೂಚಿಯನ್ನು ಮುಂದಕ್ಕೆ ಹಾಕಲಾಯಿತು' ಎಂದು ಸಚಿವ ಮಾಧುಸ್ವಾಮಿ ತಿಳಿಸಿದರು.

ಜಾತಿ, ಧರ್ಮ, ಭಾಷೆ ಆಧಾರದಲ್ಲಿ ರಚನೆಗೊಂಡ ಸಂಘಟನೆಗಳು, ತಮ್ಮ ಉದ್ದೇಶಗಳ ಈಡೇರಿಕೆಗಾಗಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತವೆ. ಇದು ವಿವಿಧ ಸಮುದಾಯಗಳ ನಡುವೆ ಕೋಮು ದ್ವೇಷ ಮತ್ತು ಅಸೂಯೆಗೆ ಪ್ರಚೋದನೆ ನೀಡುವುದರಿಂದ ನಿಯಮಕ್ಕೆ ತಿದ್ದುಪಡಿ ಮಾಡಲು ಸರ್ಕಾರ ನಿರ್ಧರಿಸಿತ್ತು.

ಜಾನಪದ ಸಮ್ಮೇಳನ ಇಂದು, ನಾಳೆ

ಮಂಡ್ಯ: ರಾಜ್ಯ ಜಾನಪದ ಪರಿಷತ್ ವತಿಯಿಂದ ನಗರದ ಅಂಬೇಡ್ಕರ್ ಭವನದ ಆವರಣದಲ್ಲಿ ಡಿ.9ರಿಂದ 2 ದಿನ ರಾಜ್ಯ ಮಟ್ಟದ ಜಾನಪದ ಸಮ್ಮೇಳನ ನಡೆಯಲಿದೆ.

ಸಮ್ಮೇಳನದ ಅಂಗವಾಗಿ ಜಾನಪದ ತೇರಿನ ಮೆರವಣಿಗೆ ಜಿಲ್ಲೆಯಾದ್ಯಂತ ನಡೆಯುತ್ತಿದ್ದು ಶುಕ್ರವಾರ ಅಂಬೇಡ್ಕರ್ ಭವನ ತಲುಪಲಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ 15ಕ್ಕೂ ಹೆಚ್ಚು ಕಲಾ ತಂಡಗಳು ಸಮಾವೇಶದಲ್ಲಿ ಭಾಗವಹಿಸಲಿವೆ.

ಚಾಮರಾಜನಗರ ಜಿಲ್ಲೆಯ ಗೊರವರ ಕುಣಿತ, ಬೆಳಗಾವಿಯ ದಟ್ಟಿ ಕುಣಿತ, ಬಳ್ಳಾರಿಯ ಹಗಲುವೇಷ, ಚಿಕ್ಕಮಗಳೂರಿನ ಮಹಿಳೆಯರ ವೀರಗಾಸೆ, ಹಾಸನ ಜಿಲ್ಲೆಯ ಚಿಟ್ ಮೇಳ, ದಾವಣಗೆರೆಯ ಲಂಬಾಣಿ ನೃತ್ಯ ಸೇರಿ ವಿವಿಧ ಭಾಗದ ಜಾನಪದ ಕಲೆಗಳು ಅನಾವರಣಗೊಳ್ಳಲಿವೆ.

ಸಮ್ಮೇಳನದ ಅಧ್ಯಕ್ಷ ಡಾ.ರಾಮೇಗೌಡ (ರಾಗೌ) ಅವರ ಮೆರವಣಿಗೆ ಬೆಳಿಗ್ಗೆ 9 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಆರಂಭಗೊಂಡು ಅಂಬೇಡ್ಕರ್ ಭವನ ತಲುಪಲಿದೆ. ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಸಮ್ಮೇಳನಕ್ಕೆ ಚಾಲನೆ ನೀಡಲಿದ್ದಾರೆ. ಆದಿ ಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ಶುಕ್ರವಾರ ಮಧ್ಯಾಹ್ನ 2 ಗಂಟೆಗೆ 'ಹಿರಿಯೋರ ನೆನದೇವ್ರೋ; ವಿದ್ವಾಂಸರು ಮತ್ತು ಕಲಾವಿದರ ಸ್ಮರಣೆ' ಗೋಷ್ಠಿ ನಡೆಯಲಿದೆ. ಸಂಜೆ 4 ಗಂಟೆಗೆ 'ಜನಪದ ಕಲೆ; ಕಲಾ ವಿದರ ಮುಂದಿನ ಪಾಡು' ಗೋಷ್ಠಿ ನಡೆ ಯಲಿದೆ. ಡಿ.10ರಂದು ಬೆಳಿಗ್ಗೆ 10ಕ್ಕೆ 'ಜನಪದ ಕಾವ್ಯಗಳ ರಸಗ್ರಹಣ ವ್ಯಾಖ್ಯಾನ ಮತ್ತು ಗಾಯನ' ಗೋಷ್ಠಿ ನಡೆಯಲಿದೆ.

ಕರ್ನಾಟಕಕ್ಕೆ ಸೇರಿಸಿ: ಗಡಿ ಗ್ರಾಮಸ್ಥರ ಆಗ್ರಹ

ಪ್ರಜಾವಾಣಿ ವಾರ್ತೆ

ಬೀದರ್: 'ಮಹಾರಾಷ್ಟ್ರದ ಸಚಿವರು ಬೆಳಗಾವಿಗೆ ಭೇಟಿ ಕೊಡುವ ಬದಲು ಗಡಿಯಲ್ಲಿರುವ ಗ್ರಾಮಕ್ಕೆ ಭೇಟಿ ಕೊಟ್ಟು ಜನರ ಸಮಸ್ಯೆಗಳನ್ನು ಪರಿಹರಿಸಬೇಕು. ಗ್ರಾಮಾಭಿವೃದ್ಧಿ ಸಾಧ್ಯವಾಗದಿದ್ದರೆ ಗ್ರಾಮವನ್ನು ಕರ್ನಾಟಕಕ್ಕೆ ಸೇರಿಸಬೇಕು' ಎಂದು ಮಹಾರಾಷ್ಟ್ರದ ಲಾತೂರ್ ಜಿಲ್ಲೆಯ ದೇವಣಿ ತಾಲ್ಲೂಕಿನ ಬೋಂಬಳಿ(ಎಂ) ಗ್ರಾಮಸ್ಥರು ಆಗ್ರಹಿಸಿದ್ದಾರೆ.

'ಕರ್ನಾಟಕದ ಗಡಿಯಿಂದ 'ಬೋಂಬಳಿ' ಗ್ರಾಮವು 500 ಮೀಟರ್ ಅಂತರದಲ್ಲಿದೆ. ಭಾಲ್ಕಿ ವಿಧಾನಸಭಾ ಕ್ಷೇತ್ರ ಅಭಿವೃದ್ಧಿಯಾಗಿದೆ. ಆದರೆ, ಮಹಾರಾಷ್ಟ್ರ ಸರ್ಕಾರ ನಮ್ಮ ಗ್ರಾಮಕ್ಕೆ ಒಂದು ಶಾಲೆಯನ್ನೂ ಮಂಜೂರು ಮಾಡಿಲ್ಲ' ಎಂದು ಅವರು ತಿಳಿಸಿದರು.

'ಬೋಂಬಳಿ(ಎಂ) ಪ್ರತ್ಯೇಕ ಗ್ರಾಮ ಪಂಚಾಯಿತಿ ಮಾಡಬೇಕು. ಸೌಲಭ್ಯ ಕಲ್ಪಿಸಬೇಕು. ಬೇಡಿಕೆಗಳನ್ನು ಈಡೇರಿಸದಿದ್ದರೆ, ಜಿಲ್ಲಾಧಿಕಾರಿ ಕಚೇರಿ ಎದುರು ಆಮರಣ ಉಪವಾಸ ಸತ್ಯಾಗ್ರಹ ಮಾಡುತ್ತೇವೆ. ಅಭಿವೃದ್ಧಿ ದೃಷ್ಟಿಯಿಂದ ಕರ್ನಾಟಕಕ್ಕೆ ಹೋಗಲು ಸಿದ್ಧರಿದ್ದೇವೆ' ಎಂದು 74 ಮಂದಿ ಸಹಿ ಹಾಕಿ ಲಾತೂರ್ ಜಿಲ್ಲಾಧಿಕರಿಗೆ ಮನವಿಪತ್ರ ಸಲ್ಲಿಸಿದ್ದಾರೆ.

ಪ್ರತಿಭಟನೆ: ಬೆಳಗಾವಿ ಗಡಿಯಲ್ಲಿ ಮಹಾರಾಷ್ಟ್ರದ ಬಸ್‌ಗಳಿಗೆ ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿದ್ದನ್ನು ವಿರೋಧಿಸಿ ಮಹಾರಾಷ್ಟ್ರ ನವ ನಿರ್ಮಾಣ ಸೇನೆ ಸಂಘಟನೆಯ ಕಾರ್ಯಕರ್ತರು ಲಾತೂರ್ ಜಿಲ್ಲೆಯ ನಿಲಂಗಾದಲ್ಲಿ ಕರ್ನಾಟಕದ ಬಸ್‌ಗಳಿಗೆ ಭಗವಾ ಧ್ವಜ ಹಚ್ಚಿ ಪ್ರತಿಭಟನೆ ನಡೆಸಿದರು. ಕರ್ನಾಟಕದ ಬಸ್‌ಗಳನ್ನು ತಡೆದು ಆಕ್ರೋಶ ವ್ಯಕ್ತಪಡಿಸಿದರು.

ಗಡಿ ವಿವಾದ ಚರ್ಚೆಗೆ ಅವಕಾಶ ನಿರಾಕರಣೆ

ನವದೆಹಲಿ (ಪಿಟಿಐ): ಕರ್ನಾಟಕ-ಮಹಾರಾಷ್ಟ್ರ ನಡುವಣ ಗಡಿ ವಿವಾದ ವಿಷಯವು ಗುರುವಾರ ರಾಜ್ಯಸಭೆಯಲ್ಲಿ ಪ್ರಸ್ತಾಪವಾಯಿತು. ಆದರೆ, ಈ ವಿಷಯದ ಚರ್ಚೆಗೆ ಅಧ್ಯಕ್ಷರು ಅವಕಾಶವನ್ನು ನೀಡಲಿಲ್ಲ.

ಸಭಾಪತಿ ಜಗದೀಪ್ ಧನ್‌ಕರ್ ಅವರು, 'ಗಡಿ ವಿಷಯದ ಚರ್ಚೆಗೆ ಅವಕಾಶ ಕೋರಿ ನಿಯಮ 267ರ ಅಡಿ ನನಗೆ ನೋಟಿಸ್ ಬಂದಿದೆ. ಅದು ಸಮರ್ಪಕವಾಗಿಲ್ಲದ್ದರಿಂದ ಚರ್ಚೆಗೆ ಅವಕಾಶ ನೀಡುವುದಿಲ್ಲ' ಎಂದು ತಿಳಿಸಿದರು.

ದಿನದ ನಿಗದಿತ ಕಲಾಪವನ್ನು ಬದಿಗೊತ್ತಿ ಆದ್ಯತೆ ಮೇರೆಗೆ ಉಲ್ಲೇಖಿತ ವಿಷಯದ ಚರ್ಚೆಗೆ ಅವಕಾಶ ಕಲ್ಪಿಸಬೇಕು ಎಂದು ಕೋರಿ ನಿಯಮ 267ರಡಿ ಅರ್ಜಿ ಸಲ್ಲಿಸಲಾಗುತ್ತದೆ. ನೋಟಿಸ್ ಸಲ್ಲಿಸಿದ್ದ ಶಿವಸೇನೆಯ (ಉದ್ಧವ್ ಠಾಕ್ರೆ ಬಣ) ಪ್ರಿಯಾಂಕಾ ಚತುರ್ವೇದಿ ಅವರು, 'ಕರ್ನಾಟಕ–ಮಹಾರಾಷ್ಟ್ರ ಗಡಿ ವಿಷಯ ಮುಖ್ಯವಾದುದು. ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗಬೇಕು' ಎಂದು ಪ್ರತಿಪಾದಿಸಿದರು.

'ಉಲ್ಲೇಖಿತ ನಿಯಮದಡಿ ಚರ್ಚೆಗೆ ತೆಗೆದುಕೊಳ್ಳಬೇಕಾದ ಅಗತ್ಯ ಕಾಣಿಸುತ್ತಿಲ್ಲ. ನಿಯಮಾನುಸಾರ ನೋಟಿಸ್ ನೀಡಿ. ಬಳಿಕ ಪರಿಗಣಿಸೋಣ. ವ್ಯವಸ್ಥಿತವಾಗಿ ಚರ್ಚೆಯಾಗಲಿ' ಎಂದು ಸಭಾಪತಿ ಹೇಳಿದರು.

ರಥೋತ್ಸವ ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಪೌರಾಣಿಕ ಕ್ಷೇತ್ರ ಗೊಡಚಿಯಲ್ಲಿ ಗುರುವಾರ ವೀರಭದ್ರೇಶ್ವರ ರಥೋತ್ಸವ ವೈಭವಯುತವಾಗಿ ನೆರವೇರಿತು –ಪ್ರಜಾವಾಣಿ ಚಿತ್ರ

ಕನ್ನಡಿಗರ ರಕ್ಷಣೆಗೆ ಕ್ರಮ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕದ ನೀತಿ ಸ್ಪಷ್ಟವಾಗಿದ್ದು, ಮಹಾರಾಷ್ಟ್ರದಲ್ಲಿ ಕನ್ನಡಿಗರು ಮತ್ತು ಅವರ ಆಸ್ತಿಪಾಸ್ತಿ ರಕ್ಷಣೆಗೆ ಅಗತ್ಯ ಕ್ರಮವಹಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಕನ್ನಡಿಗರ ರಕ್ಷಣೆಗೆ ಸಂಬಂಧಿಸಿದಂತೆ ಮಹಾರಾಷ್ಟ್ರ ಡಿಜಿಪಿ ಮತ್ತು ಮುಖ್ಯಕಾರ್ಯದರ್ಶಿಯವರೊಂದಿಗೂ ಮಾತನಾಡಿದ್ದೇನೆ ಎಂದರು.

ಶರಾವತಿ ಸಂತ್ರಸ್ತರ 6 ದಶಕಗಳ ಕನಸು ಸಾಕಾರಕ್ಕೆ ಹೈಕೋರ್ಟ್ ನಿರ್ದೇಶನ

ಶೆಟ್ಟಿಹಳ್ಳಿ, ಚಿತ್ರಶೆಟ್ಟಿಹಳ್ಳಿ: ಬೆಳಕಿನತ್ತ ಮೊದಲ ಹೆಜ್ಜೆ

• ವೆಂಕಟೇಶ್ ಜಿ.ಎಚ್.

ಶಿವಮೊಗ್ಗ: ತಾಲ್ಲೂಕಿನ ಶೆಟ್ಟಿಹಳ್ಳಿ ಅಭಯಾರಣ್ಯ ವ್ಯಾಪ್ತಿಯ ಶೆಟ್ಟಿಹಳ್ಳಿ ಹಾಗೂ ಚಿತ್ರಶೆಟ್ಟಿಹಳ್ಳಿ ಗ್ರಾಮಗಳಿಗೆ ಹೈಕೋರ್ಟ್ ನಿರ್ದೇಶನದಂತೆ ಭೂಗತ ಕೇಬಲ್ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಲು ಮೆಸ್ಕಾಂ ಮುಂದಾಗಿದೆ. ನಾಗರಿಕ ಸೌಕರ್ಯ ಪಡೆಯಬೇಕು ಎಂಬ ಶರಾವತಿ ಮುಳುಗಡೆ ಸಂತ್ರಸ್ತರ ಆರು ದಶಕಗಳ ಕನಸು ನನಸಾಗುವ ಕಾಲ ಈಗ ಕೂಡಿಬಂದಿದೆ.

1960ರಲ್ಲಿ ಶರಾವತಿ ವಿದ್ಯುತ್ ಯೋಜನೆಗೆ ಲಿಂಗನಮಕ್ಕಿ ಅಣೆಕಟ್ಟೆ ನಿರ್ಮಾಣದ ವೇಳೆ ಸರ್ಕಾರವು ಅಲ್ಲಿನ ಮುಳುಗಡೆ ಸಂತ್ರಸ್ತರನ್ನು ಕರೆತಂದು ಶೆಟ್ಟಿಹಳ್ಳಿ ಹಾಗೂ ಚಿತ್ರಶೆಟ್ಟಿಹಳ್ಳಿಯಲ್ಲಿ ಪುನರ್ವಸತಿ ಕಲ್ಪಿಸಿತ್ತು. ದಟ್ಟಕಾಡಿನ ನಡುವೆ 110ಕ್ಕೂ ಹೆಚ್ಚು ಕುಟುಂಬಗಳು ನೆಲೆಗೊಂಡಿದ್ದವು.

ಮೂಲಸೌಕರ್ಯದ ಬೇಡಿಕೆ: 'ನಮ್ಮ ಅಜ್ಜ, ಅಪ್ಪಂದಿರನ್ನು ಇಲ್ಲಿಗೆ ಲಾರಿಗಳಲ್ಲಿ ತುಂಬಿಕೊಂಡು ಬಂದು ಬಿಡಲಾಗಿತ್ತು. ನಂತರ ನಮ್ಮ ಕಡೆಗೆ ಯಾರೂ (ಸರ್ಕಾರ) ತಿರುಗಿ ಕೂಡ ನೋಡಲಿಲ್ಲ. ರಸ್ತೆ, ವಿದ್ಯುತ್ ಸೌಕರ್ಯ ಕಲ್ಪಿಸಿ ಎಂಬ ಬೇಡಿಕೆಗೆ ಆಗ ಮನ್ನಣೆ ಸಿಕ್ಕಿರಲಿಲ್ಲ' ಎಂದು ಸಾಗರ ತಾಲ್ಲೂಕಿನ ಸಾಲಗಳಲೆಯಿಂದ ಬಂದು ನೆಲೆಸಿರುವ ಸಂತ್ರಸ್ತ ಕುಟುಂಬದ ಗಣಪತಿ ನಾಯ್ಕ ತಿಳಿಸಿದರು.

ಪ್ರಜಾವಾಣಿ ವಿಶೇಷ

'ಮುಂದೆ 1984ರಲ್ಲಿ ನಮ್ಮ ಬೇಡಿಕೆಗೆ ಸ್ಪಂದನೆ ದೊರೆತು ಊರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕೆಇಬಿಯವರು ಕಂಬ ಹಾಕಿದ್ದರು. ಆದರೆ, ಇದು ಅಭಯಾರಣ್ಯದ ವ್ಯಾಪ್ತಿಯಾದ ಕಾರಣ ಅರಣ್ಯ ಇಲಾಖೆ ಅನುಮತಿ ನೀಡಿರಲಿಲ್ಲ' ಎಂದು ನೆನಪಿಸಿಕೊಂಡರು.

ದೇಣಿಗೆ ಸಂಗ್ರಹಿಸಿ ಹೋರಾಟ: 'ವಿದ್ಯುತ್, ರಸ್ತೆ, ಆಸ್ಪತ್ರೆ ಸೇರಿ ನಾಗರಿಕ ಸೌಲಭ್ಯ ಪಡೆಯಲು 2014ರಲ್ಲಿ ಹೈಕೋರ್ಟ್ ಮೊರೆ ಹೋಗಿದ್ದೆವು. ನಮ್ಮ ಅಳಲಿಗೆ ಮನ್ನಣೆ ನೀಡಿದ ನ್ಯಾಯಾಲಯ, ಅರಣ್ಯ ಸಂರಕ್ಷಣೆ ಕಾಯ್ದೆ ಉಲ್ಲಂಘನೆಯಾಗದಂತೆ ಸೌಕರ್ಯ ಕಲ್ಪಿಸಲು 2016ರ ಏಪ್ರಿಲ್ 13ರಂದು ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಅದಕ್ಕೆ ಈಗ ಚಾಲನೆ ದೊರೆತಿದೆ' ಎಂದು ವಕೀಲರೂ ಆದ ಶೆಟ್ಟಿಹಳ್ಳಿ ನಿವಾಸಿ ದೇವರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

'ನ್ಯಾಯಾಲಯದಲ್ಲಿ ಹೋರಾಟ ನಡೆಸಲು ಅಗತ್ಯವಾದ ಖರ್ಚು ನಿಭಾಯಿಸಲು ಊರಿನಲ್ಲಿ ದೇಣಿಗೆ ಸಂಗ್ರಹಿಸಿದ್ದೆವು' ಎಂದು ಅವರು ಹೇಳಿದರು.

ಶಿವಮೊಗ್ಗ ತಾಲ್ಲೂಕಿನ ಶೆಟ್ಟಿಹಳ್ಳಿ ಅಭಯಾರಣ್ಯ ವ್ಯಾಪ್ತಿಯ ಚಿತ್ರಶೆಟ್ಟಿಹಳ್ಳಿ ಮುಖ್ಯರಸ್ತೆಯ ನೋಟ —ಪ್ರಜಾವಾಣಿ ಚಿತ್ರ: ಶಿವಮೊಗ್ಗ ನಾಗರಾಜ್

₹ 3.60 ಕೋಟಿ ವೆಚ್ಚದಲ್ಲಿ ಅಳವಡಿಕೆ

ವಿದ್ಯುತ್ ಸಂಪರ್ಕ ಕಲ್ಪಿಸಲು ₹ 3.60 ಕೋಟಿ ವೆಚ್ಚದಲ್ಲಿ 11.5 ಕಿ.ಮೀ ದೂರದ ಭೂಗತ ಕೇಬಲ್ ಅಳವಡಿಕೆಗೆ ಡಿ. 11ರಂದು ಉಸ್ತುವಾರಿ ಸಚಿವ ಕೆ.ಸಿ. ನಾರಾಯಣಗೌಡ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಗ್ರಾಮ ಪಂಚಾಯಿತಿ ಸದಸ್ಯೆ ಕಮಲಾಕ್ಷಿ ಉಮಾಪತಿ ನೇತೃತ್ವದಲ್ಲಿ ಊರಿನವರು ಕಾರ್ಯಕ್ರಮದ ಸಿದ್ಧತೆಯಲ್ಲಿ ತೊಡಗಿದ್ದಾರೆ.

ವಿದ್ಯುತ್ ಸಂಪರ್ಕದ ಕೇಬಲ್ ಅಳವಡಿಕೆಗೆ ಮೆಸ್ಕಾಂ ಜಾಗ ಗುರುತಿಸಿದೆ. ನಿಯಮಾವಳಿ ಅನ್ವಯ ಕೆಲಸ ನಡೆದಿದೆಯೇ ಎಂಬುದನ್ನು ವನ್ಯಜೀವಿ ಮಂಡಳಿ ಪರಿಶೀಲಿಸಲಿದೆ

ಬಿ. ಸುರೇಶ್, ಎಸಿಎಫ್, ವನ್ಯಜೀವಿ ವಿಭಾಗ, ಶೆಟ್ಟಿಹಳ್ಳಿ ಅಭಯಾರಣ್ಯ

ನಾಡಿಗೆ ಬೆಳಕು ಕೊಡಲು ನೆಲೆ ಕಳೆದುಕೊಂಡವರು ನಾವು. ಈಗ ವಿದ್ಯುತ್ ಕೊಡುತ್ತಿರುವುದು ನಮ್ಮೂರಿಗೆ ಕಣ್ಣು ಕೊಟ್ಟಂತಾಗಿದೆ ಅಣ್ಣಪ್ಪ,

ಶೆಟ್ಟಿಹಳ್ಳಿ ಗ್ರಾಮದ ಮುಖಂಡ

RED DOT SALE

Upto 50%off

#LIVENOW

ಸಲ್ವಾರ್ ಸೂಟ್‌ಗಳು • ಸೀರೆಗಳು • ಕುರ್ತಾಗಳು • ಕುರ್ತಾ ಸೆಟ್‌ಗಳು • ಡ್ರೆಸ್ ಮೆಟೀರಿಯಲ್‌ಗಳು • ಟ್ಯೂನಿಕ್‌ಗಳು • ಕಫ್ತಾನ್‌ಗಳು

ಬೆಳಗಾವಿ | ಬಳ್ಳಾರಿ | ಬೆಂಗಳೂರು | ದಾವಣಗೆರೆ | ಧಾರವಾಡ | ಗುಲಬರ್ಗಾ | ಹೊಸಪೇಟೆ | ಹುಬ್ಬಳ್ಳಿ
ಮಂಗಳೂರು | ಮೈಸೂರು | ಶಿವಮೊಗ್ಗ | ತುಮಕೂರು | ಉಡುಪಿ | ವಿಜಯಪುರ

Follow us on: sochstories | For franchising opportunities, email us at franchise@soch.com

ಬಾಂಡ್ ರವಿ
ಪ್ರಮೋದ್

‘ಸಲಾರ್’ನಲ್ಲಿ ಪ್ರಮೋದ್ ಪ್ರಪಂಚ

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಅಭಿಲಾಷ್ ಪಿ.ಎಸ್

> ‘ರತ್ನನ್ ಪ್ರಪಂಚ’ ಖ್ಯಾತಿಯ ಪ್ರಮೋದ್ ಸದ್ಯ ‘ಬಾಂಡ್ ರವಿ’ಯಾಗಿ ತೆರೆಗೆ ಬಂದಿದ್ದಾರೆ. ಅತ್ತ ಪ್ಯಾನ್ ಇಂಡಿಯಾ ಸಿನಿಮಾ ‘ಸಲಾರ್’ ಕೋಟೆಗೂ ಹೆಜ್ಜೆ ಇಟ್ಟಿರುವ ಪ್ರಮೋದ್ ಸಿನಿಪಯಣ ಕನಸಿನಂತೆ ಸಾಗುತ್ತಿದೆ...

• ಪ್ರಮೋದ್ ಸಿನಿಪಯಣ ಕನಸಿನ ರೀತಿ ಸಾಗುತ್ತಿದೆ ಅಲ್ಲವೇ?

ಹೌದು... ಅಂದುಕೊಂಡಿದ್ದೆಲ್ಲವೂ ನನಸಾಗುತ್ತಿದೆ. ಅಂದುಕೊಳ್ಳದೇ ಇದ್ದ ಹೊಸ ಅವಕಾಶಗಳೂ ಕೈಸೇರುತ್ತಿವೆ. ಐದಾರನೇ ತರಗತಿಯಿಂದಲೇ ಬಣ್ಣದ ಕನಸಿನ ಮೂಟೆ ಹೊತ್ತು ಮದ್ದೂರಿನ ಸಣ್ಣ ಹಳ್ಳಿಯಿಂದ ಬೆಂಗಳೂರಿನಲ್ಲಿ ಇಳಿದವನಿಗೆ, ಎದುರಾಗಿದ್ದು ಅಡೆತಡೆಗಳೇ...ಈ ಕ್ಷೇತ್ರ ನನಗೆ ಸರಿಹೋಗುವುದಿಲ್ಲವೇನೋ ಎನ್ನುವ ಮಟ್ಟಿಗೆ ನಂಬಿಕೆ ಕಳೆದುಕೊಂಡುಬಿಟ್ಟಿದ್ದೆ. ಮೊದಮೊದಲಿಗೆ ನನ್ನ ಪಾತ್ರವನ್ನು ನೋಡುತ್ತಿದ್ದವರು ಹೊಗಳುತ್ತಿದ್ದರೇ ಹೊರತು ಕೆಲಸ ಕೊಡುತ್ತಿರಲಿಲ್ಲ. ನನಗೆ ಕೆಲಸವಷ್ಟೇ ಗೊತ್ತಿತ್ತು, ಯಾವುದೇ ಗಿಮಿಕ್ ಬರುತ್ತಿರಲಿಲ್ಲ. ಹೀಗೆಂದುಕೊಳ್ಳುತ್ತಿರುವಾಗ ಸಿಕ್ಕಿದ್ದೇ ‘ಪ್ರೀಮಿಯರ್ ಪದ್ಮಿನಿ’ ಹಾಗೂ ‘ರತ್ನನ್ ಪ್ರಪಂಚ’ ಸಿನಿಮಾ ಪಾತ್ರಗಳು. ಇವು ನನ್ನ ಯೋಚನೆಯನ್ನೇ ಬದಲಾಯಿಸಿದವು. ಶ್ರದ್ಧೆಯಿಂದ, ನಂಬಿಕೊಂಡ ಕೆಲಸವನ್ನು ಮಾಡಿದರೆ ಸಾಕು ಮಿಕ್ಕಿದ್ದನ್ನು ಪ್ರಕೃತಿ, ಸಮಯವೇ ನಿರ್ಧರಿಸುತ್ತದೆ ಎನ್ನುವುದನ್ನು ತಿಳಿದುಕೊಂಡೆ. ನಾನೇ ಸಿನಿಮಾಗಳನ್ನು ಆಯ್ಕೆ ಮಾಡಿಕೊಳ್ಳುವ ಹಂತಕ್ಕೆ ಬಂದಿದ್ದೇನೆ. ಈ ಪಾತ್ರಕ್ಕೆ ನೀವೇ ಬೇಕು ಎಂದು ಕೇಳುವ ವಾತಾವರಣ ನಿರ್ಮಾಣವಾಗಿದೆ. ಸದ್ಯ ನನ್ನ ಸಿನಿಜೀವನ ಈ ಹಂತದ ಪಥದಲ್ಲಿದೆ.

• ‘ಬಾಂಡ್ ರವಿ’ ಸಿನಿಮಾ ಮೇಲೆ ಏಕಿಷ್ಟು ನಂಬಿಕೆ?

ಈ ಸಿನಿಮಾದಲ್ಲಿನ ನನ್ನ ಪಾತ್ರ ವಿಭಿನ್ನವಾಗಿದೆ. ‘ರತ್ನನ್ ಪ್ರಪಂಚ’ ಸಿನಿಮಾದಲ್ಲಿ ನನ್ನ ಪಾತ್ರ ಮಾಸ್ ಆಗಿ ಕಂಡರೂ, ಬಹಳ ಮೃದು ಹೃದಯದ ವ್ಯಕ್ತಿತ್ವ ಆತನದು. ಈ ಪಾತ್ರವನ್ನು ಜನರು ಮೆಚ್ಚಿಕೊಂಡರು. ಪ್ರೇಕ್ಷಕರು ಎಲ್ಲ ಭಾವನೆಗಳೂ ಮಿಶ್ರಣ ಹೊಂದಿದ ಪಾತ್ರಗಳನ್ನು ಇಷ್ಟಪಡುತ್ತಾರೆ ಎಂದು ಆ ಸಂದರ್ಭದಲ್ಲಿ ನನಗೆ ಅನಿಸಿತು. ಇಂತಹ ಒಂದು ಅವಕಾಶ ನನಗೆ ‘ಬಾಂಡ್ ರವಿ’ಯಲ್ಲಿ ಲಭಿಸಿತು. ನಟನೆಗೆ ಹೆಚ್ಚಿನ ಅವಕಾಶವಿರುವ, ಮಾಸ್ ಆಗಿ ಕಾಣಿಸಿಕೊಳ್ಳುವ ಪಾತ್ರ ಇಲ್ಲಿದೆ. ಜೊತೆಗೆ ಪಾತ್ರದ ವೇರಿಯೇಷನ್ ಕೂಡಾ ಅದ್ಭುತವಾಗಿದೆ. ಚಿತ್ರದ ಕಥೆ, ಸ್ಕ್ರೀನ್‌ಪ್ಲೇ ಮತ್ತು ಕ್ಲೈಮ್ಯಾಕ್ಸ್ ನನ್ನನ್ನು ಹೆಚ್ಚಾಗಿ ಕಾಡಿದ ಅಂಶಗಳು. ಈ ಚಿತ್ರ ನೋಡಿದ ಬಳಿಕ ಪ್ರಮೋದ್ ಬಹಳ ವರ್ಷಗಳ ಕಾಲ ಪ್ರೇಕ್ಷಕನ ಮನಸ್ಸಿನಲ್ಲಿ ಉಳಿಯುತ್ತಾನೆ ಎನ್ನುವ ನಂಬಿಕೆ ಇದೆ.

• ಬಹಳ ವರ್ಷಗಳ ನಂತರ ನಾಯಕನಾಗಿ, ಪೂರ್ಣಾವಧಿ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದೀರಿ. ಈ ಅವಧಿ ನಿಮ್ಮ ಮೇಲೆ ಬೀರಿದ ಪರಿಣಾಮವೇನು?

‘ಗೀತಾ ಬ್ಯಾಂಗಲ್ ಸ್ಟೋರ್’ ಹಾಗೂ ‘ಮತ್ತೆ ಉದ್ಭವ’ ಸಿನಿಮಾ ಕಮರ್ಷಿಯಲ್ ಆಗಿ ಹಿಟ್ ಆಗಲಿಲ್ಲ. ಆದರೆ ನನ್ನ ನಟನೆಗೆ ಅಂಕ ಲಭಿಸಿತು. ಹಣಕಾಸಿನ ವಿಚಾರದಲ್ಲಿ ಸಿನಿಮಾ ಸೋತರೆ ಕಲಾವಿದನೊಬ್ಬ ಎಷ್ಟೇ ಅದ್ಭುತವಾಗಿ ನಟಿಸಿದ್ದರೂ, ಮುಂದೆ ಪ್ರಾಜೆಕ್ಟ್‌ಗಳು ಲಭಿಸುವುದಿಲ್ಲ. ನನ್ನ ಪರಿಸ್ಥಿತಿ ಇದೇ ರೀತಿಯಾಗಿತ್ತು. ಬೆಳ್ಳಿತೆರೆಯಿಂದ ಕಿರುತೆರೆಗೆ ಮತ್ತೆ ಮರಳಿದ್ದೆ. ಈ ಸಂದರ್ಭದಲ್ಲಿ ದೊರೆತಿದ್ದು, ‘ಪ್ರೀಮಿಯರ್ ಪದ್ಮಿನಿ’ ಹಾಗೂ ‘ರತ್ನನ್ ಪ್ರಪಂಚ’. ‘ರತ್ನನ್...’ ಸಿನಿಮಾದಲ್ಲಿ ನನ್ನ ತೆರೆಯ ಅವಧಿ ಇದ್ದಿದ್ದು ಕೇವಲ 40 ನಿಮಿಷ. ಈ ಪಾತ್ರದಲ್ಲಿ ನನಗೆ ಎಲ್ಲ ಭಾವನೆಗಳನ್ನೂ ತೋರ್ಪಡಿಸುವ ಅವಕಾಶ ಲಭಿಸಿತು. ಆ ಪಾತ್ರವನ್ನು ನಾನು ಹೀರೊ ಮಟ್ಟಕ್ಕೇ ನೋಡಿದ್ದೇನೆ. ನನ್ನನ್ನು ಹೀರೊ ಆಗಿ ನೋಡಲು ಜನರು ಇಷ್ಟಪಡುತ್ತಿದ್ದರು. ಆದರೆ ನನಗೆ ಅವಕಾಶಗಳು ಒದಗಿಬರುತ್ತಿರಲಿಲ್ಲ. ಇದೀಗ ‘ಬಾಂಡ್ ರವಿ’ಯಲ್ಲಿ ನಾನು ಮತ್ತೊಮ್ಮೆ ಹೀರೊ ಆಗಿ ತೆರೆಗೆ ಬರುತ್ತಿದ್ದೇನೆ. ನನ್ನ ಒಂದು ಕೆಲಸ ನೋಡಿ ಮತ್ತೊಂದು ಕೆಲಸ ನೀಡಬೇಕು ಎನ್ನುವ ಆಸೆ ನನಗಿತ್ತು. ಅದು ಇದೀಗ ನನಸಾಗುತ್ತಿದೆ.

• ಸದ್ಯದ ನಿಮ್ಮ ಪ್ರಾಜೆಕ್ಟ್‌ಗಳು ಯಾವ ಹಂತದಲ್ಲಿವೆ?

‘ಬಾಂಡ್ ರವಿ’ ಬಿಡುಗಡೆಯಾದ ಬಳಿಕ ‘ಇಂಗ್ಲಿಷ್ ಮಂಜ’ ಸಿನಿಮಾ ರಿಲೀಸ್‌ಗೆ ಸಜ್ಜಾಗಿದೆ. ಗಿರೀಶ್ ಮೂಲಿಮನಿ ಅವರ ‘ಭುವನಂ ಗಗನಂ’ ಸಿನಿಮಾದ ಚಿತ್ರೀಕರಣ ಇನ್ನೂ ಇಪ್ಪತ್ತು ದಿನಗಳು ಬಾಕಿ ಇದೆ. ‘ಅಲಂಕಾರ್ ವಿದ್ಯಾರ್ಥಿ’ ಚಿತ್ರದ ಚಿತ್ರೀಕರಣ ಕೊನೆಯ ಹಂತದಲ್ಲಿದೆ. ಈ ಚಿತ್ರಕ್ಕಾಗಿ ತೂಕ ಇಳಿಸಿಕೊಂಡಿದ್ದೆ. ಈ ಚಿತ್ರದ ಕೊನೆಯ ಹಂತದ ಚಿತ್ರೀಕರಣ ಫೆಬ್ರುವರಿಯಲ್ಲಿ ನಡೆಯಲಿದೆ. ಈಗ ಹೆಚ್ಚಿಸಿಕೊಂಡಿರುವ ತೂಕವನ್ನು ಮತ್ತೆ ಇಳಿಸಬೇಕು. ‘ಸಲಾರ್’ ಚಿತ್ರದ ಶೂಟಿಂಗ್ ಮುಗಿದ ಬಳಿಕ, ಶ್ರುತಿ ನಾಯ್ಡು ಅವರ ‘ಪ್ರೀಮಿಯರ್ ಪದ್ಮಿನಿ’ ಚಿತ್ರತಂಡದ ಹೊಸ ಸಿನಿಮಾದಲ್ಲಿ ನಟಿಸಲಿದ್ದೇನೆ.

‘ಸಲಾರ್’ ದುನಿಯಾ ಹೇಗಿದೆ?

‘ರತ್ನನ್ ಪ್ರಪಂಚ’ ಸಿನಿಮಾ ಬಿಡುಗಡೆಯಾಗುವುದಕ್ಕೆ ವಾರದ ಮೊದಲೇ ಪ್ರಶಾಂತ್ ನೀಲ್ ಅವರು ಸಿನಿಮಾ ನೋಡಿದ್ದರು. ಬಳಿಕ ಸಹ ನಿರ್ದೇಶಕರ ಮೂಲಕ ನನ್ನನ್ನು ಸಂಪರ್ಕಿಸಿ, ‘ಸಲಾರ್’ ಸಿನಿಮಾದಲ್ಲಿ ಪಾತ್ರ ಮಾಡುವ ಬಗ್ಗೆ ಚರ್ಚಿಸಿದ್ದರು. ನಾನು ಒಪ್ಪಿಕೊಂಡಿದ್ದೆ. ಇದಾಗಿ ಸುಮಾರು ಎಂಟು ತಿಂಗಳು ಯಾವ ಕರೆಯೂ ಅವರ ಕಡೆಯಿಂದ ಬಂದಿರಲಿಲ್ಲ. ಹೀಗಾಗಿ ಆ ಪಾತ್ರವನ್ನು ಬೇರೆಯವರಿಗೆ ನೀಡಿದ್ದಾರೆ ಎಂದು ಅಂದುಕೊಂಡಿದ್ದೆ. ಕೆಲ ತಿಂಗಳ ಹಿಂದೆ ಅವರು ಮತ್ತೆ ಕರೆ ಮಾಡಿ ಸಿದ್ಧವಾಗುವಂತೆ ತಿಳಿಸಿದರು. ಹೈದರಾಬಾದ್‌ನಲ್ಲಿ ಫೋಟೊಶೂಟ್ ಮುಗಿಸಿ, ನೇರವಾಗಿ ಸೆಟ್‌ಗೆ ಕರೆದೊಯ್ದರು. ಹೀಗೆ ಕೆಲವು ಬೆಳವಣಿಗೆಗಳು ಜೀವನದಲ್ಲಿ ಅನಿರೀಕ್ಷಿತವಾಗಿ ಆಗಿಬಿಡುತ್ತವೆ.

‘ರತ್ನನ್ ಪ್ರಪಂಚ’ದಲ್ಲಿನ ನನ್ನ ಅಭಿನಯ ನೋಡಿ ‘ಸಲಾರ್’ನಲ್ಲಿ ಪ್ರಮುಖವಾದ ಪಾತ್ರವೊಂದನ್ನು ಪ್ರಶಾಂತ್ ನೀಲ್ ಅವರು ನೀಡಿದ್ದಾರೆ. ಇದು ಎನರ್ಜಿ ಕೇಳುವ ಪಾತ್ರ. ನಾನು ಈ ಪಾತ್ರವನ್ನು ಸಮರ್ಥವಾಗಿ ನಿಭಾಯಿಸಬಲ್ಲೆ ಎನ್ನುವ ದೃಢವಾದ ನಂಬಿಕೆ ನೀಲ್ ಅವರಿಗಿತ್ತು. ಈ ಪಾತ್ರಕ್ಕೆ ದೇಶದ ಯಾವುದೇ ಕಲಾವಿದನೊಬ್ಬನನ್ನು ಕರೆದು ಕೇಳಿದರೂ ಒಪ್ಪಿಕೊಳ್ಳುತ್ತಿದ್ದರು. ಆದರೆ ಅವರು ನೇರವಾಗಿ ನನ್ನನ್ನೇ ಇದಕ್ಕೆ ಆಯ್ಕೆ ಮಾಡಿದ್ದು ಅವರ ದೊಡ್ಡಗುಣ. ಇಲ್ಲಿ ನನ್ನದು ಒಂದು ಪಾತ್ರವಷ್ಟೇ. ಸದ್ಯ ಚಿತ್ರೀಕರಣದ ಎರಡು ಶೆಡ್ಯೂಲ್ ಪೂರ್ಣಗೊಂಡಿದ್ದು, ಇನ್ನೂ ಎರಡು ಶೆಡ್ಯೂಲ್ ಬಾಕಿ ಇದೆ. ಪ್ರಭಾಸ್ ಅವರ ಜೊತೆಗಿನ ನಟನೆಯ ಅನುಭವ ಅದ್ಭುತ. ಅವರಿಗೆ ‘ಬಾಂಡ್ ರವಿ’ ಸಿನಿಮಾದ ಸ್ಟೋರಿಲೈನ್ ಕೂಡಾ ಹೇಳಿದ್ದೆ. ಪರಭಾಷೆಯ ನಟರನ್ನು ಹೇಗೆ ಟ್ರೀಟ್ ಮಾಡಬೇಕು ಎನ್ನುವುದನ್ನು ಅವರನ್ನು ನೋಡಿ ಕಲಿಯಬೇಕು.



ವಿಜಯಾನಂದ
ನಿಹಾಲ್ ರಜಪೂತ್

1,200 ತೆರೆಗಳನ್ನು ತುಂಬಲಿದೆ ವಿಜಯಾನಂದ

ಇಂದು ಬಿಡುಗಡೆ

ಉದ್ಯಮಿ ವಿಜಯ ಸಂಕೇಶ್ವರ ಅವರ ಜೀವನಗಾಥೆಯ ಪ್ಯಾನ್ ಇಂಡಿಯಾ ಸಿನಿಮಾ ‘ವಿಜಯಾನಂದ’ ಇಂದು(ಡಿ. 9) ತೆರೆ ಕಾಣುತ್ತಿದೆ. ಜಗತ್ತಿನ 1,200 ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆಯಾಗಲಿದೆ.

1976ರಲ್ಲಿ ಒಂದು ಟ್ರಕ್‌ನಿಂದ ಪ್ರಾರಂಭಿಸಿ, ಪ್ರತಿಷ್ಠಿತ ಲಾಜಿಸ್ಟಿಕ್ಸ್ ಕಂಪನಿ ವಿಆರ್‌ಎಲ್ ಸ್ಥಾಪಿಸಿದ ವಿಜಯ ಸಂಕೇಶ್ವರ ಹಾಗೂ ಅವರ ಮಗ ಆನಂದ ಸಂಕೇಶ್ವರ ಅವರು ನಡೆದು ಬಂದ ಹಾದಿಯ ಕಥೆ ಈ ಚಿತ್ರದಲ್ಲಿದೆ. ಕನ್ನಡ, ತಮಿಳು, ತೆಲುಗು, ಹಿಂದಿ ಮತ್ತು ಮಲಯಾಳಂ ಭಾಷೆಗಳಲ್ಲಿ ಈ ಚಿತ್ರ ರಿಲೀಸ್ ಆಗಿದೆ.

ಈ ಹಿಂದೆ ‘ಟ್ರಂಕ್’ ಎಂಬ ಚಿತ್ರವನ್ನು ನಿರ್ದೇಶಿಸಿದ್ದ ರಿಷಿಕಾ ಶರ್ಮ, ‘ವಿಜಯಾನಂದ’ ಚಿತ್ರಕ್ಕೆ ಚಿತ್ರಕಥೆ ಬರೆಯುವುದರ ಜೊತೆಗೆ ನಿರ್ದೇಶನವನ್ನೂ ಮಾಡಿದ್ದಾರೆ. ನಟ ನಿಹಾಲ್ ರಜಪೂತ್ ವಿಜಯ ಸಂಕೇಶ್ವರ ಅವರ ಪಾತ್ರದಲ್ಲಿ ನಟಿಸಿದ್ದಾರೆ. ವಿಜಯ ಸಂಕೇಶ್ವರ ಅವರ ಮೂರು ಶೇಡ್‌ಗಳಲ್ಲಿ ಅವರು ಇಲ್ಲಿ ಕಾಣಿಸಿಕೊಂಡಿದ್ದಾರೆ. ಅನಂತನಾಗ್, ವಿ. ರವಿಚಂದ್ರ, ವಿನಯಾ ಪ್ರಸಾದ್, ಸಿರಿ ಪ್ರಹ್ಲಾದ್, ಅರ್ಚನಾ ಕೊಟ್ಟಿಗೆ, ಪ್ರಕಾಶ್ ಬೆಳವಾಡಿ, ಭರತ್ ಬೋಪಣ್ಣ, ಶೈನ್ ಶೆಟ್ಟಿ, ದಯಾಳ್ ಪದ್ಮನಾಭನ್, ರಮೇಶ್ ಭಟ್ ಮುಂತಾದವರು ಚಿತ್ರದ ತಾರಾಗಣದಲ್ಲಿದ್ದಾರೆ.

ವಿಆರ್‌ಎಲ್ ಪ್ರೊಡಕ್ಷನ್ಸ್‌ನಡಿ ಆನಂದ ಸಂಕೇಶ್ವರ ಅವರು ಈ ಚಿತ್ರ ನಿರ್ಮಿಸಿದ್ದಾರೆ. ಗೋಪಿ ಸುಂದರ್ ಸಂಗೀತ ಸಂಯೋಜಿಸಿದ್ದು, ಕೀರ್ತನ್ ಪೂಜಾರಿ ಅವರ ಛಾಯಾಗ್ರಹಣವಿದೆ.

ಭಿನ್ನ ಪ್ರಯೋಗದ ‘ರಾಘು’

ಸಿನಿಮಾ ಎಂದರೆ ಹತ್ತಾರು ಕಲಾವಿದರಿರುವುದು ಸಾಮಾನ್ಯ. ಆದರೆ ಈ ಸಾಂಪ್ರದಾಯಿಕ ಶೈಲಿಯನ್ನು ಬಿಟ್ಟು ನಿರ್ದೇಶಕ ಎಂ.ಆನಂದ್ ರಾಜ್ ತಮ್ಮ ಚೊಚ್ಚಲ ಚಿತ್ರದಲ್ಲಿ ಭಿನ್ನ ಪ್ರಯೋಗಕ್ಕೆ ಇಳಿದಿದ್ದಾರೆ.

ಆನಂದ್ ರಾಜ್ ನಿರ್ದೇಶನದಲ್ಲಿ ವಿಜಯ ರಾಘವೇಂದ್ರ ನಟಿಸುತ್ತಿರುವ ಸಿನಿಮಾ ‘ರಾಘು’. ಈ ಸಿನಿಮಾ ಮೂಲಕ ತಮ್ಮ ಸಿನಿಜೀವನದಲ್ಲಿ ಹೊಸದೊಂದು ಪ್ರಯೋಗಕ್ಕೆ ತಮ್ಮನ್ನು ತಾವು ಒಡ್ಡಿಕೊಂಡಿದ್ದಾರೆ ವಿಜಯ್. ‘ರಾಘು’ ಸೋಲೋ ಆ್ಯಕ್ಟಿಂಗ್(ಒಂದೇ ಪಾತ್ರ) ಸಿನಿಮಾವಾಗಿದೆ. ಕನ್ನಡದ ಮಟ್ಟಿಗೆ ಇದೊಂದು ಹೊಸ ರೀತಿಯ ಪ್ರಯೋಗವಾಗಿದ್ದು, ಥ್ರಿಲ್ಲರ್ ಕಥಾಹಂದರವನ್ನು ಇದು ಒಳಗೊಂಡಿದೆ. ಚಿತ್ರದ ಪೂರ್ತಿ ವಿಜಯ ರಾಘವೇಂದ್ರ ಒಬ್ಬರೇ ನಟಿಸಿದ್ದಾರೆ. ‘ಹೊಸ ತಂತ್ರಜ್ಞಾನವುಳ್ಳ ಕ್ಯಾಮೆರಾಗಳನ್ನು ಬಳಸಿ, ಅದ್ದೂರಿಯಾದ ಸೆಟ್ ನಿರ್ಮಾಣ ಮಾಡಿ ಚಿತ್ರೀಕರಣ ಮಾಡಲಾಗಿದೆ. ಸದ್ಯದಲ್ಲೇ ಸಿನಿಮಾ ಬಿಡುಗಡೆ ದಿನಾಂಕವನ್ನು ಘೋಷಿಸುತ್ತೇವೆ’ ಎಂದಿದ್ದಾರೆ ಆನಂದ್.

VRL FILM PRODUCTIONS

ANAND SANKESHWAR PRESENTS
A BIOPIC ON LEGENDARY VIJAY SANKESHWAR
AN INSPIRATIONAL STORY

ವಿಜಯಾನಂದ

KANNADA-HINDI-TELUGU-TAMIL-MALAYALAM
A FILM BY RISHIKA SHARMA A GOPI SUNDAR MUSICAL

PRODUCTION EXECUTION WELLDONE CINEMAS DOP KEERTAN POOJARY CREATIVE HEAD/EDITING HEMANTH KUMAR D DIALOGUES RAGHU NIDUVALLI STUNTS RAVI VARMA CHOREOGRAPHER IMRAN SARDHARIYA LYRICS YOGRAJBHAT NAGARJUN SHARMA DHANANJAY RANJAN MAKEUP PRAKASH GOKAK PRODUCTION HEAD PRABHU METIMATH VFX HEAD SANTHA KUMAR P ART EXECUTION ANIL KABIR DIRECTION TEAM SHAMSHEER SANTHOSH RAVI PRATEEK K U CHANDRASHEKHAR MADABHAVI STILLS DIGITAL SRINATH SHIVU KUMAR PRO SUDHEENDRA VENKATESH

ಇಂದಿನಿಂದ ಅಮೋಘ ಪ್ರಾರಂಭ

ಬೆಂಗಳೂರು : ಕೆ.ಜಿ.ರಸ್ತೆ ಸಂತೋಷ್
ಮಾಗಡಿ ರಸ್ತೆ ಪ್ರಸನ್ನ
Swagath SHANKARNAG M.G.ROAD

ಕಾಮಾಕ್ಷಿಪಾಳ್ಯ ವಿಕ್ಟರಿ ಸಿನಿಮಾಸ್, ರಾಜಾಜಿನಗರ ನವರಂಗ್, ಜೆ.ಪಿ.ನಗರ ಸಿದ್ದೇಶ್ವರ, ಆವಲಹಳ್ಳಿ ವೆಂಕಟೇಶ್ವರ, ಸುಂಕದಕಟ್ಟೆ ಮೋಹನ್, ರಾಜಗೋಪಾಲನಗರ ಮಾರುತಿ, ಕಮಲಾನಗರ ವೀರಭದ್ರೇಶ್ವರ, ಕೆಂಗೇರಿ ರಾಬಿನ್, ಗೌಡನಪಾಳ್ಯ ಶ್ರೀನಿವಾಸ, ಸಂಜಯನಗರ ವೈಭವ್, ಗೊಟ್ಟಿಗೆರೆ ಲಕ್ಷ್ಮಿ, ದೊಮ್ಮಸಂದ್ರ ಬಾಲಾಜಿ, ಕೊಡಿಗೇಹಳ್ಳಿ ರಾಜ್‌ಮುರಳಿ, ಜಾಲಹಳ್ಳಿ ಎಚ್.ಎಂ.ಟಿ, ಕೋಣನಕುಂಟೆ ಮಾನಸ, ಪೀಣ್ಯ ಭಾರತಿ, ಹೆಸರುಘಟ್ಟ ಎಸ್.ಎಲ್.ಎನ್, ಯಶವಂತಪುರ ಉಲ್ಲಾಸ್, ಗರುಡಾಚಾರ್‌ಪಾಳ್ಯ ವಿ.ಸಿನಿಮಾಸ್, ಕೋಣಪ್ಪನ ಅಗ್ರಹಾರ ವೆಂಕಟೇಶ್ವರ

PVR: ORION | AURA FORUM | GT VAISHNAVI REGALIA MARKETCITY VR | UPTOWN VEGACITY SPIRIT | ARENA
INOX: MANTRI CENTRAL SWAGATH GARUDA | RMZ YELAHANKA FORUM SBR HORIZON
Cinépolis: ETA | SJR MEENAKSHI FUN | ORION EAST SHANTINIKETAN
GOPALAN CINEMAS: ARCH | GRAND INNOVATION LEGACY SIGNATURE
ROCKLINE JALAHALLI
KIN CINEMAS SEEGEHALLI
MARATHHALLI

ಯಲಹಂಕ ಗಣೇಶ್, ಕಾಡುಗೋಡಿ ಶ್ರೀನಿವಾಸ, ಮಾರತ್‌ಹಳ್ಳಿ ವಿನಾಯಕ, ಅತ್ತಿಬೆಲೆ ಗೌರಿಶಂಕರ, ಹಾರೋಹಳ್ಳಿ ವಿನಾಯಕ, ಬಿಡದಿ ದೀಪಕ್, ಲಗ್ಗೆರೆ ಆಕಾಶ್, ಜಿಗಣಿ ನಂದೀಶ್ವರ, ವರ್ತೂರು ವಿನಾಯಕ, ತುಮಕೂರು INOX ಗಾಯತ್ರಿ, ದೊಡ್ಡಬಳ್ಳಾಪುರ ಸೌಂದರ್ಯಮಹಲ್

ನೆಲಮಂಗಲ ರೂಪ, ರಾಮನಗರ ಶಾನ್, ವಿಜಯಪುರ ಗೌರಿಶಂಕರ, ಮಾಲೂರು ಬಾಲಾಜಿ, ತಿಪಟೂರು ಗಣೇಶ್, ಕನಕಪುರ ಗೋಪಾಲಕೃಷ್ಣ, ಚನ್ನಪಟ್ಟಣ ಶ್ರೀಲಕ್ಷ್ಮಿ, ಹೊಸಕೋಟೆ ಅಲಂಕಾರ್, ಮಾಗಡಿ ಬಾಲಾಜಿ, ಕುಣಿಗಲ್ ಪದ್ಮ ಸಿನಿಮಾಸ್, ಮಧುಗಿರಿ ಶಾಂತಲಾ, ಕೊರಟಗೆರೆ ಶಿವಗಂಗ, ಗುಬ್ಬಿ ಚನ್ನಬಸವೇಶ್ವರ, ಶಿರಾ ಭಾಗ್ಯಲಕ್ಷ್ಮಿ, ಆನೇಕಲ್ ಲಕ್ಷ್ಮಿ ನರಸಿಂಹ, ತುರುವೇಕೆರೆ ಕೃಷ್ಣ, ಮೈಸೂರು ಆಡ್ಲೋ, PVR, INOX, DRC CINEMAS, VISION CINEMAS

ಮಂಡ್ಯ ಗುರುಶ್ರೀ, ಹಾಸನ ಎಸ್.ಬಿ.ಜಿ, ಚಾಮರಾಜನಗರ ಸಿಂಹ ಮೂವೀ, ಕೊಳ್ಳೇಗಾಲ ಶಾಂತಿ, ಚನ್ನರಾಯಪಟ್ಟಣ ಗಾಯತ್ರಿ, ಹೊಳೆನರಸೀಪುರ ಚನ್ನಾಂಬಿಕಾ, ಮಳವಳ್ಳಿ ಮಹಾಲಕ್ಷ್ಮಿ, ಮದ್ದೂರು ಸಂಜಯ, ಪಿರಿಯಾಪಟ್ಟಣ ಶಾರದ, ಯಳಂದೂರು ಮಹದೇಶ್ವರ, ಪಾಂಡವಪುರ ಕೋಕಿಲಾ, ಕೆ.ಆರ್.ನಗರ ಗೌರಿಶಂಕರ, ಕೆ.ಆರ್.ಪೇಟೆ ಬಸವೇಶ್ವರ, ಗುಂಡ್ಲುಪೇಟೆ ಸೂರ್ಯ, ಬನ್ನೂರು ಸೋಮೇಶ್ವರ, ಟಿ.ನರಸೀಪುರ ಮುರುಗನ್, ನಂಜನಗೂಡು ಶಾರದ, ಹುಣಸೂರು ಲೀಲಾ, ಹುಲ್ಲಹಳ್ಳಿ ವಿನಾಯಕ, ಸಾಲಿಗ್ರಾಮ ಪದ್ಮಾಂಬ

ಕೆ.ಎಂ.ದೊಡ್ಡಿ ಸುಮ, ಹೆಚ್.ಡಿ.ಕೋಟೆ ಮಂಜುನಾಥ, ಶ್ರೀರಂಗಪಟ್ಟಣ ಶ್ರೀದೇವಿ, ಅರಸೀಕೆರೆ ರತ್ನ, ಬೇಲೂರು ರೇಣುಕಾ, ಬೆಳ್ಳೂರು ಕ್ರಾಸ್ ಮಾರುತಿ, ಸಕಲೇಶಪುರ ತೇಜಸ್ವಿನಿ, ದಾವಣಗೆರೆ ಅಶೋಕ, MOVIE TIME CINEMAS, ಚಿತ್ರದುರ್ಗ ಪ್ರಸನ್ನ, ಬಳ್ಳಾರಿ ನಟರಾಜಕಾಂಪ್ಲೆಕ್ಸ್, ಹೊಸಪೇಟೆ ಲಕ್ಷ್ಮಿ, ಹಿರಿಯೂರು ನಂಜುಂಡೇಶ್ವರ, ಹಗರಿಬೊಮ್ಮನಹಳ್ಳಿ ಕೊಟ್ಟೂರೇಶ್ವರ, ಹರಿಹರ ಜಯಶ್ರೀ, ಹೊಸದುರ್ಗ ಜ್ಯೋತಿ, ಹೂವಿನಹಡಗಲಿ ಶಂಕರ್, ಸಂಡೂರು ಶ್ರೀನಿವಾಸ, ಕಂಪಿಲಿ ಲಕ್ಷ್ಮಿ, ಚಿಕ್ಕಜೋಗಿಹಳ್ಳಿ ಕೃಷ್ಣ

ಜಗಳೂರು ನಟರಾಜ, ಚಳ್ಳಕೆರೆ ಬಾಲಾಜಿ, ಕೊಂಡಲಹಳ್ಳಿ ಚನ್ನವೀರಭದ್ರೇಶ್ವರ, ಭರಮಸಾಗರ ವಿನಾಯಕ, ಶಿವಮೊಗ್ಗ ಹೆಚ್.ಪಿ.ಸಿ, Bharath Cinemas, ಭದ್ರಾವತಿ ನೇತ್ರಾವತಿ, ಕೊಪ್ಪ ಜೆ.ಎಂ.ಜೆ, ಚಿಕ್ಕಮಗಳೂರು ನಾಗಲಕ್ಷ್ಮಿ, ಕಡೂರು ವಿಜಯಲಕ್ಷ್ಮಿ, ತೀರ್ಥಹಳ್ಳಿ ವಿನಾಯಕ, ಶಿಕಾರಿಪುರ ಮಾಲತೇಶ್, ಚನ್ನಗಿರಿ ವೀರಭದ್ರೇಶ್ವರ, ಅನವೇರಿ ಶ್ರೀದೇವಿ, ಶಿರಾಳಕೊಪ್ಪ ಮಾರುತಿ, ಅನವಟ್ಟಿ ರೇಣುಕಾ, ಅಜ್ಜಂಪುರ ವೆಂಕಟೇಶ್ವರ, ಹೊನ್ನಾಳಿ ಶಾಂತ, ನ್ಯಾಮತಿ ಶ್ರೀಶೈಲ, ಸಂತೆಬೆನ್ನೂರು ವೆಂಕಟೇಶ್ವರ

ತರೀಕೆರೆ ವಿನಾಯಕ, ಮಂಗಳೂರು SP CINEMAS, PVR, Cinépolis, Bharath Cinemas, ಉಡುಪಿ ಆಶೀರ್ವಾದ್, ಪುತ್ತೂರು ಅರುಣ, ಮಣಿಪಾಲ INOX, Bharath Cinemas, ಸುರತ್ಕಲ್ ನಟರಾಜ, Cine Galaxy, ಕುಂದಾಪುರ ವಿನಾಯಕ, Bharath Cinemas, ಪಡುಬಿದ್ರಿ Bharath Cinemas, ಮೂಡಬಿದರೆ ಅಮರಶ್ರೀ, ಕಾರ್ಕಳ ಪ್ಲಾನೆಟ್, ಬೈಂದೂರು ಶಂಕರ್, ಸುಳ್ಯ ಸಂತೋಷ್, ಬೆಳ್ತಂಗಡಿ ಭರತ್, ಹುಬ್ಬಳ್ಳಿ ಅಪ್ಸರಾ, PVR, Cinépolis, ಧಾರವಾಡ ಪದ್ಮ, ಬಿಜಾಪುರ ಜಯಶ್ರೀ

ಗದಗ ಕೃಷ್ಣ, ಬೆಳಗಾವಿ ಚಿತ್ರಾ, INOX, KAPEEL, ಕಾರವಾರ ಅರ್ಜುನ್, ಶಿರಸಿ ನಟರಾಜ, ದಾಂಡೇಲಿ ಶ್ರೀಹರಿ, ಅಂಕೋಲಾ ಸಮರ್ಥ, ರಾಣೆಬೆನ್ನೂರು ಶಂಕರ್, ಬಾಗಲಕೋಟೆ ಶಕ್ತಿ, CHHOTU MAHARAJ, ಹಾವೇರಿ [illegible], CHHOTU MAHARAJ, ಇಳಕಲ್ ಶ್ರೀನಿವಾಸ, ಮುಧೋಳ ಶಿವಕಲ್ಯಾಣ, ಸೂರ್ಯವಂಶಿ, ಲಕ್ಷ್ಮೇಶ್ವರ ಕೃಷ್ಣ, ಸಿಂಧಗಿ ವಿನಾಯಕ, ಬ್ಯಾಡಗಿ ಶೋಭಾ, ನಿಡಗುಂದಿ ಯಲಗೂರೇಶ್ವರ, ತಾಳಿಕೋಟೆ ಅಮೀರ್, ಅಥಣಿ ದುರ್ಗಾಲಕ್ಷ್ಮಿ, ಬಾದಾಮಿ ಮಹಾಕೂಟೇಶ್ವರ, ಬೈಲಹೊಂಗಲ ಸಂಗಮ್, ಸಂಕೇಶ್ವರ ಸಾಯಿನಾಥ

ಗಜೇಂದ್ರಗಡ ಅಲಂಕಾರ್, ಹಳಿಯಾಳ ಬಸವರಾಜ, ಶಿಗ್ಗಾಂವ ರಾಜಶ್ರೀ, ಹಾನಗಲ್ ಭಾಗೀರಥಿ, ಅಣ್ಣಿಗೇರಿ ಜನತಾ, ಗೋಕಾಕ ಲಕ್ಷ್ಮಿ, ರಬಕವಿ ಶ್ರೀನಿವಾಸ, ಜಮಖಂಡಿ ಸುವರ್ಣ, ಹಾರೋಗೇರಿ ಚಂದ್ರಮ, ಅಷ್ಟಗಿ ಮಹಾಲಿಂಗೇಶ್ವರ, ರಾಯಭಾಗ ದತ್ತ, ಬೀಳಗಿ ಶ್ರೀನಿವಾಸ, ಭಟ್ಕಳ ಪುಷ್ಪಾಂಜಲಿ, ಮುದ್ದೇಬಿಹಾಳ ಗಿರಿಜಾಶಂಕರ್, ಬಸವನಬಾಗೇವಾಡಿ ಸತ್ಯನಾರಾಯಣ, ಹೊನ್ನಾವರ ಪದ್ಮಾಂಜಲಿ, ರಾಮದುರ್ಗ ವೆಂಕಟೇಶ್, ರೋಣ ಮಲ್ಲಿಕಾರ್ಜುನ, ಹಿರೇಕೆರೂರು ಮಂಜುನಾಥ, ಇಂಡಿ ಮಹಾವೀರ, ಯಾದವಾಡ ಬಸವೇಶ್ವರ, ಗುಳೇದಗುಡ್ಡ ಅಂಕಿತಾ, ಸವಣೂರು ಸಿದ್ಧಲಿಂಗೇಶ್ವರ

ನಲವತ್ವಾಡ ರಘುವೀರ, ಕಿತ್ತೂರು ಶಿವಶಕ್ತಿ, ಹೊಸರಿತ್ತಿ ಕೃಷ್ಣ, ನಿಪ್ಪಾಣಿ ರಾಜಶ್ರೀ, ಗುಲ್ಬರ್ಗ ಸಂಗಮ್, INOX, MIRAJ, SHETTY'S MULTIPLEX, ಗಂಗಾವತಿ ಶಿವೆ, ಕೊಪ್ಪಳ ಲಕ್ಷ್ಮಿ, ಬೀದರ್ ಸಪ್ನ, ರಾಯಚೂರು MIRAJ, ಷಹಪುರ ಜಯಶ್ರೀ, ಸಿಂಧನೂರು ಮಂಜುನಾಥ, ಕರಟಗಿ ಲಕ್ಷ್ಮಿ, ಲಿಂಗಸುಗೂರು ಎಂಪೈರ್, ದೇವದುರ್ಗ ಭರತ್, ಮಾನ್ವಿ ಅಪರ್ಣ, ಭಾಲ್ಕಿ ಅಮರ್, ಕುಷ್ಟಗಿ ಮಾರುತಿ, ಶಿರಾವಾರ ಶಿವಮಾತಾ, ಕನಕಗಿರಿ ರಾಧಿಕಾ, ಯಲಬುರ್ಗಾ ಪ್ರವೀಣ್, ಹುಣಸೋಗಿ ತ್ರಿಶೂಲ್, ಮಸ್ಕಿ ಶರಣಬಸವೇಶ್ವರ, ಪೋತ್ನಾಳ್ ಎಸ್.ಎ

UFO PVR

Entire Karnataka Distribution VRL FILM PRODUCTIONS through SHALINI ARTSS

‘ಆರ್ಯ ವೈಶ್ಯ ಆಹಾರ ವಾಹಿನಿ ಯೋಜನೆ ಜಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರ್ಯ ವೈಶ್ಯ ಅಭಿವೃದ್ಧಿ ನಿಗಮವು ಸಮುದಾಯದವರಿಗೆ ನೆರವಾಗಲು 2022-23ನೇ ಸಾಲಿಗೆ ‘ಆರ್ಯ ವೈಶ್ಯ ಆಹಾರ ವಾಹಿನಿ’ ಎಂಬ ಹೊಸ ಯೋಜನೆ ಜಾರಿಗೆ ತಂದಿದ್ದು, ಫಲಾನುಭವಿಗಳಿಗೆ ₹2 ಲಕ್ಷ ಸಹಾಯಧನ ನೀಡಲಾಗುವುದು’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘ಆರ್ಯ ವೈಶ್ಯ ಸಮುದಾಯದ ಜನರು ಪಾರಂಪರಿಕವಾಗಿ ತಿಂಡಿತಿನಿಸು ತಯಾರು ಮಾಡುವುದರಲ್ಲಿ ಪ್ರವೀಣರು. ತಿಂಡಿ ತಿನಿಸು ತಯಾರಿಸುವವರಿಗೆ ಪ್ರೋತ್ಸಾಹ ನೀಡಲು ಈ ಯೋಜನೆ ಜಾರಿಗೆ ತರಲಾಗಿದೆ’ ಎಂದರು.

‘ಆಹಾರ ವಾಹಿನಿ ಆರಂಭಿಸಲು ಫ್ರಾಂಚೈಸ್ ಪಡೆಯಲು ಅವಕಾಶವಿದೆ. ಈ ಬಗ್ಗೆ ನಿಗಮದ ವತಿಯಿಂದ ಉಚಿತ ತರಬೇತಿ ನೀಡಲಾಗುವುದು. ಯೋಜನೆಯ ಪ್ರಯೋಜನ ಪಡೆಯಲು 55 ವರ್ಷ ವಯೋಮಿತಿ ನಿಗದಿಪಡಿಸಲಾಗಿದ್ದು, ವಾರ್ಷಿಕ ವರಮಾನ ₹ 6 ಲಕ್ಷ ಮಿತಿಯೊಳಗಿರಬೇಕು. ಆನ್‌ಲೈನ್‌ನಲ್ಲಿ (kacdc.karnataka.gov.in) ಇದೇ 20ರವರೆಗೆ ಅರ್ಜಿ ಸಲ್ಲಿಸಬಹುದು’ ಎಂದು ಸಚಿವರು ತಿಳಿಸಿದರು.

‘ಕಂಪನಿ ಕಾಯ್ದೆಯನ್ವಯ 2019ರಲ್ಲಿ ಸ್ಥಾಪನೆಯಾಗಿರುವ ಈ ನಿಗಮವು, ಮೂರು ವರ್ಷಗಳಿಂದ ಹಿಂದುಳಿದ ವರ್ಗಗಳ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿತ್ತು. ಪ್ರಸ್ತುತ ಸಾಲಿನಿಂದ ಕಂದಾಯ ಸಚಿವಾಲಯದಡಿ ಕಾರ್ಯನಿರ್ವಹಿಸಲಿದೆ. ಸದ್ಯ ನಿಗಮಕ್ಕೆ ಅಧ್ಯಕ್ಷರಿಲ್ಲ. ಹೀಗಾಗಿ ನಾನೇ ಅಧ್ಯಕ್ಷನಾಗಿದ್ದೇನೆ. ಮುಂದಿನ ದಿನಗಳಲ್ಲಿ ಅಧ್ಯಕ್ಷರನ್ನು ನೇಮಿಸಲಾಗುವುದು’ ಎಂದು ಅವರು ಹೇಳಿದರು.

‘ನಿಗಮಕ್ಕೆ ₹ 21 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಒಟ್ಟು 2,013 ಫಲಾನುಭವಿಗಳಿಗೆ ಸಾಲ ನೀಡಿ ಶೇ 100ರಷ್ಟು ಪ್ರಗತಿ ಸಾಧಿಸಲಾಗಿದೆ. ಈ ನಿಗಮದಲ್ಲಿ ಮಾತ್ರ ಸಾಲ ನೀಡಿದ ಹಣ ವಾಪಸು ಬರುತ್ತಿದೆ. ಇತರ ನಿಗಮಗಳಿಂದ ಇದೇ ರೀತಿ ಆಗಬೇಕು. ನಿಗಮದಲ್ಲಿ ಎಲ್ಲ ಸೇವೆಗಳನ್ನು ಆನ್‌ಲೈನ್ ಮೂಲಕ ನೀಡಲಾಗುವುದು. ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲು ₹10 ಕೋಟಿ ಹೆಚ್ಚುವರಿ ಅನುದಾನ ನೀಡುವಂತೆ ಮುಖ್ಯಮಂತ್ರಿ ಬಳಿ ಬೇಡಿಕೆ ಸಲ್ಲಿಸಲಾಗಿದೆ’ ಎಂದು ಸಚಿವರು ವಿವರಿಸಿದರು.

ಆದೇಶ ಹೊರಡಿಸಲು ಸಚಿವ ಹಾಲಪ್ಪ ಆಚಾರ್ ಸೂಚನೆ

‘ದೇವದಾಸಿ ಮಕ್ಕಳಿಗೆ ತಂದೆ ಹೆಸರು ಕಡ್ಡಾಯವಲ್ಲ’

ಬೆಂಗಳೂರು: ‘ದೇವದಾಸಿ ಮಹಿಳೆಯರ ಮಕ್ಕಳು ಸರ್ಕಾರಿ ಸೌಲಭ್ಯ ಪಡೆಯಲು ತಂದೆಯ ಹೆಸರು ದಾಖಲಿಸುವುದು ಕಡ್ಡಾಯವಲ್ಲ, ಐಚ್ಛಿಕ’ ಎಂಬ ಆದೇಶ ಹೊರಡಿಸಲು ಸರ್ಕಾರ ನಿರ್ಧರಿಸಿದೆ.

ದೇವದಾಸಿ ಮಹಿಳೆಯರು ಮತ್ತು ಮಕ್ಕಳ ಕುಂದು ಕೊರತೆ ಪರಿಹಾರ ಸಂಬಂಧ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್ ಮತ್ತು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಶಾಲೆ, ಕಾಲೇಜಿಗೆ ಸೇರುವಾಗ, ಜಾತಿ, ಆದಾಯ ಪ್ರಮಾಣ ಪತ್ರ ಸೇರಿ ಯಾವುದೇ ದಾಖಲೆಗಳಲ್ಲಿ ತಂದೆಯ ಹೆಸರು ದಾಖಲಿಸುವುದು ಈ ಮಕ್ಕಳಿಗೆ ಕಡ್ಡಾಯ ಇರುವುದರಿಂದ, ಈಗ ಕೆಲವೆಡೆ ತಂದೆಯ ಹೆಸರು ದಾಖಲಿಸುವುದರಿಂದ ಮಕ್ಕಳು ಸರ್ಕಾರದ ಸೌಲಭ್ಯ ಪಡೆಯಲು ಸಾಧ್ಯವಾಗುತ್ತಿಲ್ಲ. ಈ ಕಾರಣ ನೀಡಿ ಅರ್ಜಿಗಳನ್ನು ತಿರಸ್ಕರಿಸುತ್ತಿರುವುದರಿಂದ ಮಕ್ಕಳಿಗೆ ಅವಮಾನವಾಗುತ್ತಿದೆ ಎಂದು ವಿಷಯದ ಬಗ್ಗೆ ಸಭೆಯಲ್ಲಿ ಗಂಭೀರವಾಗಿ ಚರ್ಚೆ ನಡೆಯಿತು.

‘ತಂದೆಯ ಹೆಸರು ನಮೂದಿಸುವುದು ಅಥವಾ ಕೈಬಿಡಲು ಅವಕಾಶ ಇರಬೇಕು. ಈ ಸಂಬಂಧ ಕೂಡಲೇ ಆದೇಶ ಹೊರಡಿಸಲು ಕ್ರಮ ಕೈಗೊಳ್ಳಬೇಕು’ ಎಂದು ಸಚಿವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

‘ದೇವದಾಸಿ ಮಹಿಳೆಯರ ಮಕ್ಕಳಿಗೆ ಉನ್ನತ ಶಿಕ್ಷಣ, ವಸತಿ ಶಾಲೆಗಳಲ್ಲಿ ಪ್ರಾಧಾನ್ಯತೆ ನೀಡಬೇಕು. ಅಂಕ ಅಥವಾ ಪರೀಕ್ಷೆ ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ಅರ್ಜಿ ಸಲ್ಲಿಸಿದ ಕಡೆ ಪ್ರವೇಶಕ್ಕೆ ಅವಕಾಶ ಸಿಗುವಂತಾಗಬೇಕು. ಸರ್ಕಾರದ ಸಮೀಕ್ಷೆಯಿಂದ ಹೊರಗುಳಿದಿರುವ ದೇವದಾಸಿ ಮಹಿಳೆಯರು ಮತ್ತವರ ಮಕ್ಕಳಿಗೆ ನಿವೇಶನ, ಮನೆ ಸೇರಿ ಯಾವುದೇ ಸವಲತ್ತುಗಳು ದೊರಕುತ್ತಿಲ್ಲ ಎಂಬ ದೂರುಗಳಿವೆ. ಆದ್ದರಿಂದ ಮರು ಸಮೀಕ್ಷೆ ನಡೆಸುವುದು ಸೂಕ್ತ. ದೇವದಾಸಿ ಪದ್ಧತಿಯನ್ನು ಸಂಪೂರ್ಣವಾಗಿ ತಡೆಯಲು ಅಧಿಕಾರಿಗಳಿಗೆ ಹೆಚ್ಚಿನ ಜವಾಬ್ದಾರಿ ನೀಡಬೇಕಾಗುತ್ತದೆ. ಈ ವಿಷಯಗಳಲ್ಲಿ ಅಗತ್ಯ ಎನಿಸಿದರೆ ಕಾನೂನು ತಿದ್ದುಪಡಿಗೂ ಸರ್ಕಾರ ಸಿದ್ಧವಿದೆ. ಬೆಳಗಾವಿ ಅಧಿವೇಶನದಲ್ಲೇ ಮಂಡಿಸಲು ಕ್ರಮ ಕೈಗೊಳ್ಳಿ’ ಎಂದು ಹಾಲಪ್ಪ ಆಚಾರ್ ತಿಳಿಸಿದರು.

ವಿಜಯನಗರ ಜಿಲ್ಲೆ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಗುರುವಾರ ನಡೆದ 31ನೇ ‘ನುಡಿಹಬ್ಬ’ದಲ್ಲಿ ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ (ವೈದ್ಯಕೀಯ ಕ್ಷೇತ್ರ), ಚೋಳನಾಯಕನಹಳ್ಳಿಯ ಸಾಹಿತಿ ಕೃಷ್ಣಪ್ಪ ಜಿ. (ಸಾಹಿತ್ಯ ಕ್ಷೇತ್ರ) ಹಾಗೂ ಚಿಕ್ಕಬಳ್ಳಾಪುರದ ತುಳವನೂರಿನ ಎಸ್. ಷಡಕ್ಷರಿ (ಸಾಹಿತ್ಯ–ಸಮಾಜ ಸೇವೆ ಕ್ಷೇತ್ರ) ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ‘ನಾಡೋಜ ಗೌರವ’ ಪದವಿ ಪ್ರದಾನ ಮಾಡಿದರು.

ವಾರಾಂತ್ಯದೊಳಗೆ ಟಿಇಟಿ ಫಲಿತಾಂಶ

ಬೆಂಗಳೂರು: ರಾಜ್ಯದಲ್ಲಿ ನ. 6ರಂದು ನಡೆದಿದ್ದ ಶಿಕ್ಷಕರ ಅರ್ಹತಾ ಪರೀಕ್ಷೆಯ (ಟಿಇಟಿ) ಫಲಿತಾಂಶವನ್ನು ಮುಂದಿನ ವಾರಾಂತ್ಯದಲ್ಲಿ ಪ್ರಕಟಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಮಾಹಿತಿ ನೀಡಿದ್ದಾರೆ.

1ರಿಂದ 5ನೇ ತರಗತಿಯ ಪ್ರಾಥಮಿಕ ಶಾಲಾ ಶಿಕ್ಷಕರು, 6ರಿಂದ 8ನೇ ತರಗತಿಯ ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿ ಪರೀಕ್ಷೆ ಕುಳಿತುಕೊಳ್ಳುವ ಅರ್ಹತೆ ಪಡೆಯಲು ಟಿಇಟಿ ಮಾನದಂಡವಾಗಿದೆ. ಕಳೆದ ತಿಂಗಳು 781 ಕೇಂದ್ರಗಳಲ್ಲಿ ನಡೆದಿದ್ದ ಪರೀಕ್ಷೆಗೆ 3,32,913 ಅಭ್ಯರ್ಥಿಗಳು ಹಾಜರಾಗಿದ್ದರು.

ಎಲ್ಲರಿಗೂ ಉನ್ನತ ಶಿಕ್ಷಣ ಎನ್‌ಇಪಿ ಉದ್ದೇಶ–ರಾಜ್ಯಪಾಲ ಗೆಹಲೋತ್

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ಎಲ್ಲರಿಗೂ ಉನ್ನತ ಶಿಕ್ಷಣ ಕೊಡುವುದು ಹೊಸ ಶಿಕ್ಷಣ ನೀತಿಯ (ಎನ್‌ಇಪಿ) ಮುಖ್ಯ ಉದ್ದೇಶ’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ತಿಳಿಸಿದರು.

ಗುರುವಾರ ನಡೆದ ಹಂಪಿ ಕನ್ನಡ ವಿಶ್ವವಿದ್ಯಾಲಯದ 31ನೇ ಘಟಿಕೋತ್ಸವದಲ್ಲಿ ನಾಡೋಜ ಗೌರವ ಹಾಗೂ ಡಿ.ಲಿಟ್., ಪಿಎಚ್.ಡಿ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ‘ಹೊಸ ಶಿಕ್ಷಣ ನೀತಿ ಉಜ್ವಲ ಭಾರತದ ಭವಿಷ್ಯಕ್ಕೆ ನಾಂದಿ ಹಾಡಲಿದೆ’ ಎಂದರು.

‘ಹೊಸ ಶಿಕ್ಷಣ ನೀತಿಯಿಂದ ಭಾರತವು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಲು ಸಹಕಾರಿಯಾಗಲಿದೆ. ಪ್ರತಿಯೊಬ್ಬರೂ ದೇಶದ ಹಿತಕ್ಕಾಗಿ ಚಿಂತಿಸಬೇಕು. ದೇಶವನ್ನು ವಿಶ್ವಗುರು ಆಗಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು’ ಎಂದು ಹೇಳಿದರು.

‘ಬಹು ಆಯಾಮಗಳಲ್ಲಿ ಕನ್ನಡದ ಪಾರಂಪರಿಕ ಜ್ಞಾನದ ಅಧ್ಯಯನಕ್ಕಾಗಿ 1991ರಲ್ಲಿ ಸರ್ಕಾರವು ಹಂಪಿ ಕನ್ನಡ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದೆ. ವಿಶೇಷ ಶೈಕ್ಷಣಿಕ ಶೈಲಿ ರೂಢಿಸಿಕೊಂಡು ಜ್ಞಾನಧಾರೆಯೆರೆಯುತ್ತಿದೆ. ಸಾಹಿತಿ ಚಂದ್ರಶೇಖರ ಕಂಬಾರ ಅವರು ಅದಕ್ಕೆ ಉತ್ತಮ ಅಡಿಪಾಯ ಹಾಕಿ ಶ್ರೇಷ್ಠ ಕೆಲಸ ಮಾಡಿದ್ದಾರೆ. ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿ ಐದು ಸಾವಿರ ಹಸ್ತಪ್ರತಿಗಳ ಸಂಗ್ರಹವಿದೆ ’ ಎಂದು ಅವರು ತಿಳಿಸಿದರು.

ಒಳಮೀಸಲಾತಿಗೆ ಆಗ್ರಹಿಸಿ 11ಕ್ಕೆ ಬೃಹತ್ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಒಳ ಮೀಸಲಾತಿ ಅನುಷ್ಠಾನಕ್ಕೆ ತರಬೇಕು ಎಂದು ಆಗ್ರಹಿಸಿ ಡಿ. 11ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ ತಿಳಿಸಿದೆ.

‘ರಾಜ್ಯ ಸರ್ಕಾರ ಸದಾಶಿವ ಆಯೋಗದ ವರದಿಯನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡಬೇಕು. ಕೇಂದ್ರ ಸರ್ಕಾರವು ಸಂವಿಧಾನದ ವಿಧಿ 341(3)ಕ್ಕೆ ತಿದ್ದುಪಡಿ ತರಬೇಕು. ತಮಿಳುನಾಡಿನಲ್ಲಿ ಆರುಂಧತಿಯರ್ ಸಮುದಾಯಕ್ಕೆ ಶೇ 2.84 ಮೀಸಲಾತಿ ನೀಡಲಾಗಿದೆ. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರುಣ್ ಮಿಶ್ರ ತೀರ್ಪಿನಂತೆ ರಾಜ್ಯ ಸರ್ಕಾರಕ್ಕಿರುವ ಅಧಿಕಾರವನ್ನು ಉಪಯೋಗಿಸಿ ಮಾದಿಗ–ಮಾದಿಗ ಸಂಬಂಧಿತ ಜಾತಿಗಳಿಗೆ ಪ್ರತ್ಯೇಕವಾಗಿ ಶೇ 6 ಮೀಸಲಾತಿಯನ್ನು ಒದಗಿಸಬೇಕು’ ಎಂದು ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟದ ಸಂಯೋಜಕ ಬಿ. ಗೋಪಾಲ್ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

‘ರಾಜಕೀಯ ಪಕ್ಷಗಳು ಪರಿಶಿಷ್ಟ ಜಾತಿಗಳಲ್ಲಿ ಮಾದಿಗರ ಜನಸಂಖ್ಯೆಗೆ ಅನುಗುಣವಾಗಿ ರಾಜಕೀಯ ಪ್ರಾತಿನಿಧ್ಯ ನೀಡಬೇಕು’ ಎಂದು ಹೇಳಿದರು.

‘ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆಗೆ ತಿದ್ದುಪಡಿ ತಂದು ಸುಗ್ರೀವಾಜ್ಞೆ ಹೊರಡಿಸಬೇಕು’ ಎಂದು ಡಿಎಸ್‌ಎಸ್ ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ ಅವರು ಆಗ್ರಹಿಸಿದರು. ‘ಬೇಡಿಕೆ ಈಡೇರಿಸದಿದ್ದರೆ ಅಹೋರಾತ್ರಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು’ ಎಂದು ಎಚ್ಚರಿಸಿದರು.

ಮಳಿಗೆ ತೆರೆಯಲು ಅವಕಾಶ

ಮೈಸೂರು: ಸುತ್ತೂರು ಕ್ಷೇತ್ರದಲ್ಲಿ ಜ.18 ರಿಂದ 23 ರವರೆಗೆ ನಡೆಯಲಿರುವ ಜಾತ್ರಾ ಮಹೋತ್ಸವದ ಅಂಗವಾಗಿ ವಸ್ತುಪ್ರದರ್ಶನ ಏರ್ಪಡಿಸಲಾಗಿದ್ದು, ಪ್ರದರ್ಶನ ಹಾಗೂ ಮಾರಾಟಕ್ಕೆ ಅವಕಾಶವಿದೆ. ಮಳಿಗೆ ತೆರೆಯುವವರು ದೂ.ಸಂ 0821–2548212 ಅಥವಾ ಮೊ.ಸಂ 9964096224,9900504023 ಸಂಖ್ಯೆಯನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿಯೋಜನೆ ಬೆಳಗಾವಿ (ಗ್ರಾಮೀಣ)
ದೂರವಾಣಿ ಸಂಖ್ಯೆ:0831–2476209 E-mail: cdpobelgaum@gmail.com
ಕ್ರಸಂ/ಶಿಅಯೋ/ಬೆಗ್ರಾ/ಮಮಅಇ/ಐಸಿಡಿಎಸ್/ಕೋಳಿ–ಮೊಟ್ಟೆ/ಮರುಟೆಂಡರ್/2022–23 ದಿನಾಂಕ:07/12/2022

: ಅಂಗನವಾಡಿ ಕೇಂದ್ರಗಳಿಗೆ ಕೋಳಿ ಮೊಟ್ಟೆ ಸರಬರಾಜು ಮರು ಇ–ಟೆಂಡರ್ ಪ್ರಕಟಣೆ :

2022–23 ನೇ ಸಾಲಿನಲ್ಲಿ ಬೆಳಗಾವಿ (ಗ್ರಾಮೀಣ) ತಾಲೂಕಿನ ಶಿಶು ಅಭಿವೃದ್ಧಿ ಯೋಜನೆಯಲ್ಲಿರುವ 674 ಅಂಗನವಾಡಿ ಕೇಂದ್ರಗಳಿಗೆ ಕೋಳಿ ಮೊಟ್ಟೆ ಸರಬರಾಜು ಮಾಡಲು ಅರ್ಹ ಟೆಂಡರ್‌ದಾರರಿಂದ ಸಂಖ್ಯೆ: DWCD:2022-23:IND:1821/CALL2 ದಿನಾಂಕ 07–12–2022 ರಂತೆ ಟಿ.ಟಿ.ಪಿ ಕಾಯ್ದೆಯನ್ವಯ ಇ–ಟೆಂಡರ್ ಮುಖಾಂತರ ವಿಳಾಸ WWW.eproc.karnataka.gov.in ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:06/01/2023 ರ ಸಂಜೆ:5.30 ಗಂಟೆ, ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಕಚೇರಿ ಬೆಳಗಾವಿ (ಗ್ರಾಮೀಣ) ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸ ಬಹುದಾಗಿದೆ ದೂರವಾಣಿಸಂಖ್ಯೆ: 0831–2476209.

ಸಹಿ/–ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಬೆಳಗಾವಿ (ಗ್ರಾಮೀಣ)
DIPR/BGM/RO-NO-1350/MCA/2022-23

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು – 560 001.
ದೂ.080–25586520/25589112 ಫ್ಯಾಕ್ಸ್ : 080–25886321
ಇ–ಮೇಲ್: contact@kspcb.gov.in ವೆಬ್‌ಸೈಟ್: https://kspcb.karnataka.gov.in

ಸಂ. ಕರಾಮಾನಿಮಂ/73/ಬಿಎಲ್‌ಡಿ/2022–23/6023 ದಿನಾಂಕ: 06/12/2022

ಟೆಂಡರ್‌ಗೆ ಆಹ್ವಾನ (ಅಲ್ಪಾವಧಿ)

(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ **www.eproc.karnataka.gov.in** ಮುಖಾಂತರ)
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕರಾಮಾನಿಮಂ) ಸದಸ್ಯ ಕಾರ್ಯದರ್ಶಿ ಅವರು ಅರ್ಹ ಟೆಂಡರ್‌ದಾರರಿಂದ ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ **www.eproc.karnataka.gov.in** ಮುಖಾಂತರ ಈ ಕೆಳಗಿನ ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು: ತೇಜಸ್ವಿನಿ ಆಡಿಟೋರಿಯಂ, 3ನೇ ಮಹಡಿ, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು ಇಲ್ಲಿ ರೈಟಿಂಗ್ ಪ್ಯಾಡ್‌ನೊಂದಿಗೆ ಆಡಿಟೋರಿಯಂ ಕುರ್ಚಿಗಳನ್ನು ಪೂರೈಸಲು ಮತ್ತು ಸರಿಪಡಿಸಲು ಟೆಂಡರ್. ಕಾಮಗಾರಿಯ ಅಂದಾಜು ಮೌಲ್ಯ: **ರೂ. 19.73 ಲಕ್ಷಗಳು**. ಟೆಂಡರ್ ವೆಚ್ಚ, ಇಎಂಡಿ ಇತ್ಯಾದಿಗಳಂತಹ ಎಲ್ಲಾ ಪಾವತಿಗಳನ್ನು ಇ–ಪಾವತಿ ವಿಧಾನದಲ್ಲಿ ಮಾತ್ರ ಮಾಡಬೇಕು.

ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://www.eproc.karnataka.gov.in** ಅನ್ನು ನೋಡಿ.

ಸಹಿ/–
ಸದಸ್ಯ ಕಾರ್ಯದರ್ಶಿ
DIPR/CP/3453/GREENFMC/2022-23

ನಮ್ಮೆಲ್ಲರ ಚಿತ್ತ, ನೈರ್ಗಿಕ ಸಂಪನ್ಮೂಲಗಳ ಮಿತಬಳಕೆಯತ್ತ; ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ
ಸಂ:ಶಿಮನಪಾಶಿ:ಆವಿ:ಸಿ.ಆರ್:71/2022-23 ದಿನಾಂಕ:07.12.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈ ಕೆಳಕಂಡ ಸೇವೆಯನ್ನು ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ನಿಯಮದನ್ವಯ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಸರಬರಾಜುದಾರರು ವಿವರಗಳನ್ನು ವೆಬ್‌ಸೈಟ್ **www.eproc karnataka.gov.in** ನಲ್ಲಿ ಪಡೆದುಕೊಳ್ಳಬಹುದು.

(1) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **16.12.2022 @ 5.00 PM.** (2) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ : **as per e-portal. (3) ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.**

ಕ್ರ. ಸಂ	ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ	ಅನುದಾನ
1	Providing the services of outsource Loaders for cleaning of conservency’s in Shivamogga City Corporation (29 nos).	80.00	1,60,000	ಪಾಲಿಕೆ ಸಾಮಾನ್ಯ ನಿಧಿ
2	Providing the services of outsource Manpower for upcoming legislative Assembly General election 2022-23 to Shivamogga City Corporation (18 nos).	49.00	1,22,500	ಪಾಲಿಕೆ ಸಾಮಾನ್ಯ ನಿಧಿ
3	RFP for “Appointment of Agency/Firm support for Swachh Survekshan 2023, SBM 2.0 and related works for the period of 6 months in Shivamogga Municipal Corporation.	30.00	75,000	ಪಾಲಿಕೆ ಸಾಮಾನ್ಯ ನಿಧಿ

ಸೂಚನೆ: ಯಾವುದೇ ತಿದ್ದುಪಡಿ ಅಥವಾ ಬದಲಾವಣೆಯನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ತಿಳಿಸಲಾಗುತ್ತದೆ.

ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ)
ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ.
ವಾ.ಸಾ.ಸಂ.ಇ./ಶಿ/ನಂ.62-12/ಝೇಂಕಾರ್/2022-23

INSTITUTE OF HOTEL MANAGEMENT CATERING TECHNOLOGY AND APPLIED NUTRITION
“An Autonomous Body under Ministry of Tourism, Govt. of India”
S.J.P. Campus, Seshadri Road, Bangalore 560 001.
www.ihmbangalore.kar.nic.in, E-mail: ihmbengaluru@gmail.com
Ph. 080-22262960 / 22268562

IHM Bangalore proposes to conduct destination based skill development programme under the aegis of Ministry of Tourism, Government of India, CBSP scheme for various segments of hospitality sector at Nandhibetta, Chikkamagalur, Shravanabelagola and Coorg. Applications are invited from reputed institutions / organizations for hiring of facilities and equipments for said programme. Interested organizations may visit www.ihmbangalore.kar.nic.in for details.

ಸಾರಿಗೆ ಇಲಾಖೆ
ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ, ಟಿ.ಟಿ.ಎಂ.ಸಿ., ಕಟ್ಟಡ, ಬಿ.ಎಂ.ಟಿ.ಸಿ. ಸಂಕೀರ್ಣ, ಶಾಂತಿನಗರ, ಬೆಂಗಳೂರು.
ಸಂ:ಸಾಆ/ಗಣಕ/ಎಲ್.ಟಿ.ಡಿ ಜಿ.ಇ.ಬಿ/ಪಿಆರ್–01/2018–19 ದಿನಾಂಕ: 07–12–2022

ಇ–ಟೆಂಡರ್ ಪ್ರಕಟಣೆ

ಸಾರ್ವಜನಿಕ ಸೇವಾ ವಾಹನಗಳಲ್ಲಿ ಪ್ರಯಾಣಿಕರ ಸುರಕ್ಷತೆ, ಮುಖ್ಯವಾಗಿ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ ಕಡ್ಡಾಯವಾಗಿ Vehicle Location Tracking Device & Emergency Panic Button ಅಳವಡಿಕೆ ಯೋಜನೆಯ ಅನುಷ್ಠಾನ ಏಜೆನ್ಸಿಗಳ ಆಯ್ಕೆಗಾಗಿ (Selection of Implementation Agency for "Vehicle Tracking Platform for Safety and Enforcement as per AIS-140 Standard) ಅರ್ಹ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ವೆಬ್‌ಸೈಟ್ ವಿಳಾಸ **www.eproc.karnataka.gov.in** ನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು/ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯನ್ನು ದೂರವಾಣಿ ಸಂಖ್ಯೆ: 080–25501216 / 25501227 ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು.

ಇ–ಪೋರ್ಟಲ್ ಮೂಲಕ ಟೆಂಡರ್ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 05–01–2023 ರಂದು ಸಮಯ ಸಂಜೆ 5.00 ಗಂಟೆಯವರೆಗೆ.** ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080–22235176 ಯನ್ನು ಸಂಪರ್ಕಿಸಬಹುದು.

ಸಹಿ/–
ಸಾರಿಗೆ ಆಯುಕ್ತರ ಪರವಾಗಿ, ಬೆಂಗಳೂರು.
DIPR/CP/VCPL/3439/2022-23

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಅರಭಾವಿ (ಕಚೇರಿ ಮೂಡಲಗಿ)
ದೂರವಾಣಿ ಸಂಖ್ಯೆ:08334–200367 E-mail:arabhavicdpo@gmail.com
ಕ್ರಸಂ:ಶಿಅಯೋಅ:ಮಮಅಇ::ಐಸಿಡಿಎಸ್:ಮೊಟ್ಟೆ ಟೆಂಡರ:22–23 ದಿನಾಂಕ:07–12–2022

ಅಂಗನವಾಡಿ ಕೇಂದ್ರಗಳಿಗೆ ಕೋಳಿ ಮೊಟ್ಟೆ ಸರಬರಾಜು ಮರು ಇ–ಟೆಂಡರ ಪ್ರಕಟಣೆ

2022–23 ನೇ ಸಾಲಿನ ಮೂಡಲಗಿ ತಾಲೂಕಿನ ಅರಭಾವಿ ಶಿಶು ಅಬಿವೃದ್ಧಿ ಯೋಜನಾ ವ್ಯಾಪ್ತಿಯ 411 ಅಂಗನವಾಡಿ ಕೇಂದ್ರಗಳ ಫಲಾನುಭವಿಗಳ ಉಪಯೋಗಕ್ಕಾಗಿ ಕೋಳಿ ಮೊಟ್ಟೆ ಸರಬರಾಜು ಮಾಡಲು ಅರ್ಹ ಟೆಂಡರುದಾರರಿಂದ ಸಂಖ್ಯೆ:DWCD/2022-23/IND 1815/CALL-2 ದಿನಾಂಕ:07–12–2022 ರಂತೆ ಕೆ.ಟಿ.ಟಿ.ಪಿ.ಕಾಯ್ದೆಯನ್ವಯ ಇ–ಟೆಂಡರ ಮುಖಾಂತರ ವಿಳಾಸ:WWW.eproc. karnataka.gov.in ನಲ್ಲಿ ಆಹ್ವಾನಿಸಲಾಗಿದೆ. ಟೆಂಡರ ಸಲ್ಲಿಸಲು ಕೊನೆಯ ದಿನಾಂಕ:06–01–2023 ರ ಸಂಜೆ:05–30 ಗಂಟೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಬಿವೃದ್ಧಿ ಯೋಜನಾಧಿಕಾರಿಗಳು ಅರಭಾವಿ ಕಛೇರಿ ಮೂಡಲಗಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ:08334–200367.

ಸಹಿ/–ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಅರಭಾವಿ.
DIPR/BGM/RO-NO-1345/MCA/2022-23

ನಗರಸಭಾ ಕಾರ್ಯಾಲಯ, ಚಳ್ಳಕೆರೆ. (ಚಿತ್ರದುರ್ಗ ಜಿಲ್ಲೆ)
ಫೋನ್ ನಂ. 08195–250958 ಸಹಾಯವಾಣಿ: 080–23108108
ಸಂಖ್ಯೆ:ಚ.ನ/ತಾಂತ್ರಿಕ/ಎಸ್.ಎಫ್.ಸಿ 7.25% &15ನೇ ಹ.ಮು.ಅ/2022–23/ ಟೆಂಡರ್–01/ಸಿಆರ್–1/2022–23/ ದಿನಾಂಕ: 05.12.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಚಳ್ಳಕೆರೆ ನಗರಸಭಾ ವ್ಯಾಪ್ತಿಯಲ್ಲಿ ನಗರಸಭಾ 2022–23ನೇ ಸಾಲಿನ ಎಸ್.ಎಫ್.ಸಿ. 7.25% ಹಾಗೂ 15ನೇ ಹಣಕಾಸು ಮುಕ್ತ ಯೋಜನೆಯ ಅನುದಾನದಡಿಯಲ್ಲಿ ಮಂಜೂರಾಗಿರುವ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ 2000, ಹಾಗೂ ಆರ್ಥಿಕ ಇಲಾಖೆಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ KW–1/2 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ನಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ ಹಾಗೂ ದಿನಾಂಕ: 15.12.2022 ರ ಸಂಜೆ 4:30 ಗಂಟೆ ವರೆಗೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ. www.challakerecity.mrc.gov.in ಮತ್ತು http://eproc.karnataka.gov.in ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು. ಕಾಮಗಾರಿಯ ವಿವರಗಳು:– 2022–23ನೇ ಸಾಲಿನ ಎಸ್.ಎಫ್.ಸಿ. ಶೇ.7.25ರ ಯೋಜನೆಯ ಅನುದಾನದಲ್ಲಿ (ರೂ.2.12 ಲಕ್ಷಗಳು) ಪರಿಶಿಷ್ಟ ಪಂಗಡದ ಗುತ್ತಿಗೆ/ಏಜೆನ್ಸಿದಾರರಿಗೆ ಮೀಸಲಿರಿಸಿದ ಅನುದಾನ. (1) ಚಳ್ಳಕೆರೆ ನಗರದ ವಾರ್ಡ್ ನಂ. 02ರಲ್ಲಿ ಉದಿಬಾಗಿಲು ಸಣ್ಣ ಅಜ್ಜಪ್ಪನ ಮನೆ ಮೂಲಕ ರಾಜಕಾಲುವೆವರೆಗೆ ಸಿ.ಸಿ. ಚರಂಡಿ ನಿರ್ಮಾಣ ಕಾಮಗಾರಿ. INDENT NO: DMA/2022-23/OW/WORK INDENT 134578/Call-4. ಅಂದಾಜು ಮೊತ್ತ:– 2.12 ಲಕ್ಷ.
2022–23ನೇ ಸಾಲಿನ 15ನೇ ಹಣಕಾಸು ಮುಕ್ತ ಅನುದಾನದಲ್ಲಿ (ರೂ. 66.50 ಲಕ್ಷಗಳು):– (2) ಪ್ಯಾಕೇಜ್ ನಂ. 4. ಚಳ್ಳಕೆರೆ ನಗರದ ವಾರ್ಡ್ ನಂ. 18, 10ರಲ್ಲಿ ಇಂಟರ್ ಲಾಕಿಂಗ್ ಪೇವರ್ಸ್ & ಸಿ.ಸಿ. ಚರಂಡಿ ನಿರ್ಮಾಣ ಕಾಮಗಾರಿ. INDENT NO: DMA/2022-23/OW/WORK INDENT 134582/Call-4. ಅಂದಾಜು ಮೊತ್ತ:– 35.00 ಲಕ್ಷ. (3) ಪ್ಯಾಕೇಜ್ ನಂ. 5. ಚಳ್ಳಕೆರೆ ನಗರದ ವಾರ್ಡ್ ನಂ. 16, 07ರಲ್ಲಿ ಇಂಟರ್ ಲಾಕಿಂಗ್ ಪೇವರ್ಸ್ ಅಳವಡಿಸುವ ಕಾಮಗಾರಿ. ಮತ್ತು ಚಳ್ಳಕೆರೆ ನಗರದ ವಾರ್ಡ್ ನಂ. 07ರಲ್ಲಿ ಸಿ.ಸಿ. ಚರಂಡಿ, ಡೆಕ್ ಸ್ಲ್ಯಾಬ್ ನಿರ್ಮಾಣ ಕಾಮಗಾರಿ. INDENT NO: DMA/2022-23/RD/WORK INDENT 134583/Call-4. ಅಂದಾಜು ಮೊತ್ತ:– 31.50 ಲಕ್ಷ.

ಸಹಿ/– **ಅಧ್ಯಕ್ಷರು,** ನಗರಸಭೆ, ಚಳ್ಳಕೆರೆ
ಸಹಿ/– **ಉಪಾಧ್ಯಕ್ಷರು** ನಗರಸಭೆ, ಚಳ್ಳಕೆರೆ
ಸಹಿ/– **ಸ್ಥಾಯಿ ಸಮಿತಿ ಅಧ್ಯಕ್ಷರು** ನಗರಸಭೆ, ಚಳ್ಳಕೆರೆ
DIPR/CTA/MCA/749/2022-23 ಸಹಿ/– **ಪೌರಾಯುಕ್ತರು**, ನಗರಸಭೆ, ಚಳ್ಳಕೆರೆ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.
ದೂರವಾಣಿ:08426–281027.ಇಮೇಲ್:dam_division@rediffmail.com
ಸಂ:ಕೃಭಾಜನಿನಿ/ಆಆವಿ/ಡಿ.ಬಿ/ಟೆಂಡರ್/2022–23/3034 ದಿನಾಂಕ:07.12.2022

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (RFP)-Call-3

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ **Outsourcing for Supplying, Operating and Maintenance of Battery operated vehicles/Buggies and existing Mini Train inside Landscape Garden of Almatti Dam Site for tourists/visitors for the period of Three years/Call-3 on Request for Proposal** ಶೇಕಡಾವಾರು ದ್ವಿಲಕೋಟೆಗಳಲ್ಲಿ ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–Cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್ಡದಾಗಿದ್ದು ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ 1.1 ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್ಡಾಗಿದ್ದು ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.

1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ **ದಿನಾಂಕ: 08.12.2022 ರಿಂದ 19.12.2022 ಸಾಯಂಕಾಲ 5.00 ಘಂಟೆಯವರೆಗೆ 2) ಪೂರ್ವಭಾವಿ ಸಭೆ ದಿನಾಂಕ: 15.12.2022 ಮುಂಜಾನೆ 11.00 ಘಂಟೆಗೆ. ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ ಕಚೇರಿಯಲ್ಲಿ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21.12.2022 ರಂದು ಮುಂಜಾನೆ 11.00 ಘಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 26.12.2022 ರಂದು ಮುಂಜಾನೆ 11.00 ಗಂಟೆಗೆ.**

ಟೆಂಡರಿಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರಿನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. http://www.eproc.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.
ವಾಸಾಸಂಇ/ವಿಜಯಪುರ/646/ಎಂಸಿಎ/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ರಾಜಾರಾಜೇಶ್ವರಿ ನಗರ ವಿಭಾಗ,
ಚೌಡೇಶ್ವರಿ ಬಸ್ ನಿಲ್ದಾಣದ ಹತ್ತಿರ, ಜೆ. ಪಿ. ಪಾರ್ಕ್, ಮತ್ತಿಕೆರೆ, ಬೆಂಗಳೂರು–560 054.
ಸಂಖ್ಯೆ:ಕಾಪಾಅ/ರಾರಾನವಿ/ಟೆಂಡರ್/10/2022-23 ದಿನಾಂಕ: 08-12-2022

ಟೆಂಡರ್ ಮುಂದೂಡಿಕೆ ಪ್ರಕಟಣೆ–3

ಉಲ್ಲೇಖ: 1) ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಕಾಅ/ರಾರಾನವಿ/ಟೆಂಡರ್/10/2022–23 ದಿನಾಂಕ: 07–11–2022
2) ಟೆಂಡರ್ ಮುಂದೂಡಿಕೆ ಪ್ರಕಟಣೆ–1, ದಿನಾಂಕ: 22–11–2022.
3) ಟೆಂಡರ್ ಮುಂದೂಡಿಕೆ ಪ್ರಕಟಣೆ–2, ದಿನಾಂಕ: 30–11–2022.

ಮೇಲ್ಕಡ ವಿಷಯಕ್ಕೆ ಸಂಬಂಧಿಸಿದಂತೆ ಈ ಕಛೇರಿಯಿಂದ ಹೊರಡಿಸಲಾದ ಉಲ್ಲೇಖಿತ ಟೆಂಡರ್ ಪ್ರಕಟಣೆಯಂತೆ ಟೆಂಡರ್‌ನ ಸಂಬಂಧ ಬಿಡ್ ಸಲ್ಲಿಸಲು ಹೆಚ್ಚಿನ ಕಾಲಾವಕಾಶ ಕಲ್ಪಿಸುವ ಸಲುವಾಗಿ ಟೆಂಡರ್ ಸಲ್ಲಿಸಲು ನಿಗದಿಪಡಿಸಲಾಗಿದ್ದ ಅವಧಿಯನ್ನು ವಿಸ್ತರಿಸಿ ಅಂತಿಮ ದಿನಾಂಕವನ್ನು ಮುಂದೂಡಲಾಗಿರುತ್ತದೆ. ಟೆಂಡರ್‌ಗೆ ಸಂಬಂಧಿಸಿದ ದಿನಾಂಕಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿರುತ್ತದೆ. ಉಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ.

ತಿದ್ದುಪಡಿ ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 26–12–2022 ರಂದು ಸಂಜೆ 4:00 ಗಂಟೆಗೆ. 2. ಬಿಡ್‌ಗಳನ್ನು ತೆರೆಯುವ ದಿನಾಂಕ: 27–12–2022ರ ಸಂಜೆ 4:30 ಗಂಟೆಗೆ.

ಸಹಿ/–, ಕಾರ್ಯಪಾಲಕ ಅಭಿಯಂತರರು, ರಾಜಾರಾಜೇಶ್ವರಿ ನಗರ ವಿಭಾಗ, ಬೃಬೆಂಮಪಾ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,
ರಾಮನಗರ ವಿಶೇಷ ವಿಭಾಗ, ರಾಮನಗರ

ಅಲ್ಪಾವಧಿ ಟೆಂಡರ್ ಪ್ರಕಟಣೆ

ಸಂಖ್ಯೆ: 12/2022–23 ದಿನಾಂಕ: 07.12.2022
ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2022–23ನೇ ಸಾಲಿನಲ್ಲಿ ಅರ್ಹ ಗುತ್ತಿಗೆದಾರರಿಂದ 03 ಸಂಖ್ಯೆಯ ಅಂದಾಜು ಮೊತ್ತ ರೂ. 120.00 ಲಕ್ಷಗಳಿಂದ 365.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇ.ಎಂ.ಡಿ ಮುಂತಾದ ಇತರ ಮಾಹಿತಿಗಳನ್ನು http://www.eproc.karnataka.gov.in ವೆಬ್‌ಸೈಟ್ ಮೂಲಕ ಅಥವಾ ಸದರಿ ಕಚೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

1. ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು ದಿನಾಂಕ : 07.12.2022 ರಿಂದ 21.12.2022 ರವರೆಗೆ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
2. ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ: 21.12.2022 ವೇಳೆ 16.00 ಗಂಟೆಯೊಳಗೆ ಸಲ್ಲಿಸುವುದು.
3. ಟೆಂಡರ್‌ಗಳನ್ನು ತೆರೆಯುವ ದಿನಾಂಕ : 22.12.2022 ವೇಳೆ 16.30 ಗಂಟೆ. (ಸಾಧ್ಯವಾದಲ್ಲಿ)

“ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು”.
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ರಾಮನಗರ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ (ಟ್ರಾಫಿಕ್ ಇಂಜಿನಿಯರಿಂಗ್ ಸೆಲ್), ನೆಲಮಹಡಿ,
ಅನೆಕ್ಸ್ ಕಟ್ಟಡ–3 (ಡಾ॥ ರಾಜಕುಮಾರ್ ಗಾಜಿನಮನೆ ಎದುರು), ನರಸಿಂಹರಾಜ ಚೌಕ, ಬೆಂಗಳೂರು–02
ಸಂಖ್ಯೆ: ಕಾಪಾಅ/ಟಿಇಸಿ/ಪಿಆರ್/560/2022–23 ದಿನಾಂಕ: 07.12.2022

ತಿದ್ದುಪಡಿ – 1

ವಿಷಯ: ಟೆಂಡರ್‌ನ ಸಮಯ ವಿಸ್ತರಣೆ
ಉಲ್ಲೇಖ: ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ಟಿಇಸಿ/ಟೆಂಡರ್/18/ 2022–23, ದಿನಾಂಕ 24.11.2022

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಕಾರಣ –ಗಳಿಂದಾಗಿ ಟೆಂಡರನ್ನು ಸಲ್ಲಿಸುವ ದಿನಾಂಕವನ್ನು ಈ ಕೆಳಕಂಡಂತೆ ವಿಸ್ತರಿಸಲಾಗಿದೆ. ಉಳಿದಂತೆ ಇತರೆ ಎಲ್ಲಾ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ –ನಲ್ಲಿ ದಿನಾಂಕ **12.12.2022**ರಿಂದ ಲಭ್ಯವಿರುತ್ತವೆ. (2) ವಿಚಾರಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **15.12.2022**ರ ಮಧ್ಯಾಹ್ನ **3:00** ಗಂಟೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **16.12.2022**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (4) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ **21.12.2022**ರ ಸಂಜೆ **4.00** ಗಂಟೆಯವರೆಗೆ. (5) ತಾಂತ್ರಿಕ ಬಿಡ್ಡನ್ನು ದಿನಾಂಕ **22.12.2020**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (6) ಆರ್ಥಿಕ ಬಿಡ್ ತೆರೆಯುವುದನ್ನು **ಟೆಂಡರುದಾರರಿಗೆ ತಿಳಿಸಲಾಗುವುದು.**

ಸಹಿ/–
ಕಾರ್ಯಪಾಲಕ ಅಭಿಯಂತರರು (ಟ್ರಾಫಿಕ್ ಇಂಜಿನಿಯರಿಂಗ್ ಸೆಲ್)

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಘ.ಎ.ದಂ.ಕಾ.ನಿ. ವಿಭಾಗ–3, ಬೀಳಗಿ ಫೋನ ನಂ: 08425 – 275228

ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

ಟೆಂಡರ ಪ್ರಕಟಣೆ ಸಂಖ್ಯೆ:ಕನೀನಿನಿ/ಜಿಎಲ್‌ಬಿಸಿ/ವಿ–3/ಡಿಬಿ/ಟಿಎನ್‌ಡಿ/2022–23/1804 ದಿನಾಂಕ:– 03–12–2022

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇಪ್ರೊಕ್ಯೂರ್‌ಮೆಂಟ್–ಪೋರ್ಟಾಲ್‌ನಲ್ಲಿ (http://eproc.karnataka.gov.in) 4701 ಎಸ್.ಸಿ.ಪಿ ಅಡಿಯಲ್ಲಿನ 01 ಕಾಮಗಾರಿಗಳಿಗೆ ಮೇಲ್ಕಾಣಿಸಿದ ಪ್ರಕಟಣೆಗಳಲ್ಲಿ ಅರ್ಹ ಗುತ್ತಿಗೆದಾರರಿಗೆ ಟೆಂಡರಗಳನ್ನು ಕರೆಯಲಾಗಿರುತ್ತದೆ. **ವಿವರ :** ಇ–ಪ್ರೊಕ್ಯೂರಮೆಂಟ ಇಂಡೆಂಟ ಸಂಖ್ಯೆ:KNNL/2022-23/BD/WORK_INDENt33564/CALL-2, ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ:489 Lakhs, ಇಎಂಡಿ ಮೊತ್ತ ರೂ:4.89 Lakhs, ಕಾರ್ಯನಿರ್ವಾಹಕ ಇಂಜಿನೀಯರರ, ಕನೀನಿನಿ, ಘಎದಂಕಾ ವಿಭಾಗ–03 ಬೀಳಗಿ ಕಛೇರಿಯಲ್ಲಿ ಪೂರ್ವ ಬಿಡ್ ಸಭೆ ದಿನಾಂಕ:06–12–2022 at 11.00 hrs, ಟೆಂಡರ ಕುರಿತ ಪ್ರಶ್ನೆಗಳಿಗಾಗಿ/ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ & ಸಮಯ:07–12–2022, Up to 17.00 hrs, ಭರ್ತಿ ಮಾಡಿದ ಟೆಂಡರಗಳನ್ನು ಇ–ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ & ಸಮಯ:12-12-2022 at 17.00 hrs, ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:14-12-2022 at 11.00 hrs.

ಕಾಮಗಾರಿಗಳ ಹೆಸರು/ಗುತ್ತಿಗೆದಾರರ ಅರ್ಹತೆ/ಟೆಂಡರಿನ ನಿಯಮ/ಟೆಂಡರ್ ಪ್ರೋಸೆಸಿಂಗ್ ಫೀ ಇತ್ಯಾದಿ ವಿವರಗಳಿಗೆ http://www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರು,
ಕನೀನಿನಿ, ಘಎದಂಕಾನಿ ವಿಭಾಗ–3, ಬೀಳಗಿ
DIPR/BGK/RO-NO-659/MCA/2022-23

ಕರಾಸಕೈಅನಿನಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560 010.
ದೂರವಾಣಿ: 080-23407011-25, ಫ್ಯಾಕ್ಸ್:91-080-23208970, ವೆಬ್‌ಸೈಟ್:www.kssidc.co.in
ಸಂಖ್ಯೆ:ಇಪಿ–69:ಇಎನ್‌ಜಿಜಿ:ಅಅ:ಪೀಣ್ಯ:4ನೇ ಫೇಸ್:ಮೂಭೂಸೌ:2022–23 ದಿನಾಂಕ:09–12–2022

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ) (ದ್ವಿ ಟೆಂಡರ್ ದಾಖಲೆ ಪದ್ಧತಿ)
ಅಧೀಕ್ಷಕ ಅಭಿಯಂತರರು, ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಟೆಂಡರ್ ಪ್ರಕಟಣೆ ನೀಡಿದ್ದು, ಟೆಂಡರ್ ಪ್ರಕಟಣೆ ಸಂಖ್ಯೆ: ಇಪಿ–69:ಇಎನ್‌ಜಿಜಿ:ಅಅ:ಪೀಣ್ಯ: 4ನೇ ಫೇಸ್: ಮೂಭೂಸೌ:2022–23 ದಿ: 09–12–2022 ರ ಪ್ರಕಾರ ಸೂಚಿಸಿರುವ ಪೀಣ್ಯ 4ನೇ ಫೇಸ್ ನಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಕರ್ನಾಟಕ PWD, CPWD, MES, NHAI, ರೈಲ್ವೇ ಮತ್ತು ರಾಷ್ಟ್ರೀಯ ಹೆದ್ದಾರಿ ಸಂಸ್ಥೆಗಳಲ್ಲಿ ನೊಂದಾಯಿಸಲ್ಪಟ್ಟ ಪರವಾನಗಿಯುಳ್ಳ, ಸೂಚಿಸಿದ ಆರ್ಥಿಕ ಸಾಮರ್ಥ್ಯ ಹಾಗೂ ತಾಂತ್ರಿಕ ಮಾನವಸಂಪನ್ಮೂಲವುಳ್ಳ ಮತ್ತು ಕಾಮಗಾರಿ ಕೆಲಸಗಳ ಅನುಭವವಿರುವ ಅರ್ಹ Class-1 ಗುತ್ತಿಗೆದಾರರು (ಸಿವಿಲ್) ಇವರಿಂದ ಐಟಂವಾರು ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿ (TWO TENDER DOCUMENT SYSTEM) ಪ್ರಕಾರ ಟೆಂಡರ್ ಕರೆಯಲಾಗಿದೆ.

ಆಸಕ್ತಿಯುಳ್ಳ ಅರ್ಹತೆ ಹೊಂದಿರುವ ಗುತ್ತಿಗೆದಾರರು ವಿವರವಾದ ಟೆಂಡರ್ ಪ್ರಕಟಣೆಯನ್ನು, ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://www.eproc.karnataka.gov.in (ವಾಣಿಜ್ಯ ಮತ್ತು ಕೈಗಾರಿಕೆ) ಮೂಲಕ **ದಿನಾಂಕ: 14–12–2022 ಬೆಳಿಗ್ಗೆ 10.00 ಗಂಟೆ ನಂತರ** ಪಡೆದುಕೊಳ್ಳಬಹುದು.

ಭರ್ತಿಮಾಡಲಾದ (Online submission) ಟೆಂಡರ್‌ನೊಡನೆ ಟೆಂಡರ್‌ಗೆ ಸಂಬಂಧಿಸಿದ ಶುಲ್ಕ ಮತ್ತು ಇ.ಎಂ.ಡಿ ಮೊತ್ತವನ್ನು ಆನ್‌ಲೈನ್ ಗೇಟ್‌ವೇ ಪೋರ್ಟಲ್ ವೆಬ್‌ಸೈಟ್ https://www.eproc.karnataka.gov.in (Commerce and Industries) ಇ–ಪೋರ್ಟಲ್ ಮೂಲಕ ದಿನಾಂಕ: **16–01–2023 ರ ಸಂಜೆ 5:30 ಗಂಟೆಯೊಳಗೆ** ಸಲ್ಲಿಸಲು ಕೋರಿದೆ.

ಹೆಚ್ಚಿನ ಮಾಹಿತಿಯನ್ನು ಈ ಕೆಳಸಹಿದಾರ ಅಧಿಕಾರಿಯವರ ಕಛೇರಿಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.karnataka.gov.in ಮುಖಾಂತರ ಪಡೆಯಲು ಕೋರಿದೆ.

ಟೆಂಡರ್ ನ ಕಾಲಮಿತಿ ವಿವರಗಳು:

- ಅಧೀಕ್ಷಕ ಅಭಿಯಂತರರ ಕಛೇರಿಯಲ್ಲಿ ಪೂರ್ವಭಾವಿ ಸಭೆ ದಿನಾಂಕ: **22–12–2022ರ 16.00 ಗಂಟೆಗೆ.**
- ಟೆಂಡರ್ ದಸ್ತಾವೇಜುಗಳನ್ನು (Online Submission) ಸಲ್ಲಿಸುವ ಕೊನೆಯ ದಿನಾಂಕ: **16–01–2023ರ 17.30 ಗಂಟೆಯವರೆಗೆ.**
- ತಾಂತ್ರಿಕ ಟೆಂಡರ್ Document ತೆರೆಯುವ ದಿನಾಂಕ: **18–01–2023ರ 11.30 ಗಂಟೆಗೆ.**
- ತಾಂತ್ರಿಕ ಟೆಂಡರ್ Document ತೆರೆಯುವ ಪ್ರಸ್ತಾವನೆ ಅನುಮೋದನೆ ನಂತರ ಆರ್ಥಿಕ ಟೆಂಡರ್ Document ಗಳನ್ನು ಇ–ಪೋರ್ಟಲ್ ಮುಖಾಂತರ ತೆರೆಯಲಾಗುವುದು.

ಸಹಿ/–
ಅಧೀಕ್ಷಕ ಅಭಿಯಂತರರು–ಪ್ರ
ವಾಸಾಸಂಇ/ವಾಪ್ರ/ಜೆಎ/3443/2022–23

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಬದಲಾವಣೆಯನ್ನು ತೆರೆದ ತೋಳುಗಳಿಂದ ಸ್ವಾಗತಿಸಿ,
ಆದರೆ ಅದಕ್ಕಾಗಿ ನಿಮ್ಮ ಮೌಲ್ಯಗಳನ್ನು ಬಲಿಗೊಡದಿರಿ.
-ದಲೈಲಾಮ

ಗುಜರಾತ್‌ನಲ್ಲಿ ಮೋದಿ ಛಾಪು ಕಾಂಗ್ರೆಸ್ ಕೈಹಿಡಿದ ಹಿಮಾಚಲ

ಗುಜರಾತ್‌ನಲ್ಲಿ ಬಿಜೆಪಿಯ ಅಭೂತಪೂರ್ವ ಗೆಲುವು ನಿರೀಕ್ಷಿತವೇ ಆಗಿತ್ತು. ಎಲ್ಲ ಅಂಶಗಳೂ ಬಿಜೆಪಿಗೆ ಅನುಕೂಲಕರವಾಗಿ ಕೆಲಸ ಮಾಡಿವೆ. ವಿರೋಧ ಪಕ್ಷ ಕಾಂಗ್ರೆಸ್‌ಗೆ ಪೂರಕವಾಗಿ ಯಾವುದೂ ನಡೆಯಲಿಲ್ಲ. ಆದರೆ, ಬಿಜೆಪಿಗೆ ಹಿಮಾಚಲ ಪ್ರದೇಶದಲ್ಲಿ ಹಿನ್ನಡೆ ಆಗಿದೆ. ಆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸರ್ಕಾರ ರಚಿಸಲು ಬೇಕಾದಷ್ಟು ಬಹುಮತ ಬಂದಿದೆ. ಗುಜರಾತ್‌ನಲ್ಲಿ ಮಾಧವಸಿಂಹ ಸೋಲಂಕಿ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವು 1985ರಲ್ಲಿ 182 ಕ್ಷೇತ್ರಗಳ ಪೈಕಿ 149 ಕ್ಷೇತ್ರಗಳಲ್ಲಿ ಗೆದ್ದು ದಾಖಲೆ ಬರೆದಿತ್ತು. ಈ ಬಾರಿಯ ಚುನಾವಣೆಯಲ್ಲಿ ಆ ದಾಖಲೆಯನ್ನು ಬಿಜೆಪಿ ಮುರಿದಿದೆ. ಹಿಮಾಚಲ ಪ್ರದೇಶದ ಮತದಾರರ ಯೋಚನಾ ಕ್ರಮದಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಅದನ್ನು ಈ ಬಾರಿಯೂ ಮುಂದುವರಿಸಿದ್ದಾರೆ. ಗುಜರಾತ್‌ನ ಅದ್ಭುತವಾದ ಗೆಲುವಿನ ಹೊಳಪಿನಲ್ಲಿ ಹಿಮಾಚಲ ಪ್ರದೇಶದ ಸೋಲಿನ ಕಹಿಯು ಮರೆಯಾಗಿದೆ. ಜೊತೆಗೆ, ಹಿಮಾಚಲ ಪ್ರದೇಶವು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಅಷ್ಟೊಂದು ಮಹತ್ವದ್ದಲ್ಲದ ಸಣ್ಣ ರಾಜ್ಯ. ಪ್ರಧಾನಿ ನರೇಂದ್ರ ಮೋದಿ ಅವರ ತವರು ರಾಜ್ಯವಾದ ಗುಜರಾತ್ ಹಿಂದುತ್ವವಾದದ ಪ್ರಯೋಗಶಾಲೆ. ಕಳೆದ 27 ವರ್ಷಗಳಿಂದ ಇಲ್ಲಿನ ಪ್ರಯೋಗವು ಬಿಜೆಪಿಗೆ ಫಲಪ್ರದ ಆಗಿದೆ. ಸತತ ಏಳನೇ ಬಾರಿಗೆ ಬಿಜೆಪಿಗೆ ಗೆಲುವು ಸಾಧ್ಯವಾಗಿದೆ.



ತಳಮಟ್ಟದ ಸಂಘಟನಾ ಚಾತುರ್ಯಕ್ಕೆ ಗುಜರಾತ್ ಸಾಕ್ಷಿಯಾದರೆ, ಆಡಳಿತ ವಿರೋಧಿ ಅಲೆಗೆ ಹಿಮಾಚಲ ಪ್ರದೇಶ ನಿದರ್ಶನವಾಗಿದೆ

ಗುಜರಾತ್‌ನಲ್ಲಿ ಮೋದಿ ಅವರಿಗೆ ಎಷ್ಟೊಂದು ಜನಪ್ರಿಯತೆ ಇದೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಈ ಹಿಂದಿನಂತೆ, ಈ ಬಾರಿಯೂ ಗೆಲುವಿನ ಶ್ರೇಯ ಮೋದಿ ಅವರಿಗೇ ಸಲ್ಲಬೇಕು. ಮತದಾನಕ್ಕೆ ತಿಂಗಳುಗಳ ಮೊದಲೇ ಮೋದಿ ಅವರು ಗುಜರಾತ್‌ನಲ್ಲಿ ಅಬ್ಬರದ ಪ್ರಚಾರ ಆರಂಭಿಸಿದ್ದರು. ಬಿಜೆಪಿಗೆ ಈ ರಾಜ್ಯದಲ್ಲಿ ಅತ್ಯಂತ ಬಲಯುತವಾದ ತಳಮಟ್ಟದ ಸಂಘಟನಾ ನೆಲೆ ಇದೆ. ಚುನಾವಣೆಗೆ ಒಂದು ವರ್ಷಕ್ಕೆ ಮೊದಲೇ, ಮುಖ್ಯಮಂತ್ರಿ ವಿಜಯ ರೂಪಾಣಿ ಸೇರಿದಂತೆ ಸಂಪೂರ್ಣ ಸಚಿವ ಸಂಪುಟವನ್ನು ಬದಲಾಯಿಸಿ ಆಡಳಿತವಿರೋಧಿ ಅಲೆಯನ್ನು ಸಕಾಲದಲ್ಲಿ ಚಿವುಟಿ ಹಾಕಲಾಗಿದೆ. ಬಿಜೆಪಿಯ ಬಹುದೊಡ್ಡ ಬೆಂಬಲ ನೆಲೆಯಾಗಿದ್ದ ಪಾಟೀದಾರ್ ಸಮುದಾಯವು 2017ರ ವಿಧಾನಸಭೆ ಚುನಾವಣೆಗೆ ಮುಂಚೆ ಮೀಸಲಾತಿಗಾಗಿ ಹೋರಾಟ ನಡೆಸಿತ್ತು. ಬಿಜೆಪಿಯೊಂದಿಗೆ ಮುನಿಸಿಕೊಂಡು ಪಕ್ಷದಿಂದ ದೂರ ಸರಿದಿತ್ತು. ಆದರೆ, ಪಕ್ಷದಿಂದ ಹೊರ ಹೋಗಿದ್ದ ಪಾಟೀದಾರ್ ಸಮುದಾಯದ ಮುಖಂಡರಲ್ಲಿ ಹಲವರು ಕಳೆದ ಐದು ವರ್ಷಗಳಲ್ಲಿ ಬಿಜೆಪಿಗೆ ಮರಳಿದ್ದಾರೆ. ಇದು ಬಿಜೆಪಿಯ ಅವಕಾಶಗಳನ್ನು ಹಿಗ್ಗಿಸಿತ್ತು. ಗೆಲುವಿಗಾಗಿ ಮಾಡಬೇಕಿದ್ದ ಏನನ್ನೂ ಆ ಪಕ್ಷವು ನಿರ್ಲಕ್ಷಿಸಲಿಲ್ಲ. ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಬಿಜೆಪಿಯ ಮುಖಂಡರಲ್ಲಿ ಹಲವರು ಕೋಮುವಾದಿಯಾದ ಹೇಳಿಕೆಗಳನ್ನು ನೀಡಿ ಧ್ರುವೀಕರಣದ ಯತ್ನವನ್ನು ಮಾಡಿದ್ದಾರೆ. ಕಳೆದ ಚುನಾವಣೆಯ ಬಳಿಕ ಪ್ರಬಲ ವಿರೋಧ ಪಕ್ಷವಾಗಿ ಹೊರಹೊಮ್ಮಿದ್ದ ಕಾಂಗ್ರೆಸ್ ಪಕ್ಷದ ಸ್ಥಿತಿಯು ಇಷ್ಟೊಂದು ಹೀನಾಯವಾಗಬಹುದು ಎಂದು ಯಾರೂ ಅಂದಾಜಿಸಿರಲಿಲ್ಲ. ಕಳೆದ ಚುನಾವಣೆಗೆ ಹೋಲಿಸಿದರೆ 60ಕ್ಕೂ ಹೆಚ್ಚು ಕ್ಷೇತ್ರಗಳನ್ನು ಕಾಂಗ್ರೆಸ್ ಕಳೆದುಕೊಂಡಿದೆ. ಅಧಿಕೃತ ವಿರೋಧ ಪಕ್ಷದ ಸ್ಥಾನ ಪಡೆದುಕೊಳ್ಳಲು ಬೇಕಾದಷ್ಟು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆದ್ದಿಲ್ಲ. ಆ ಪಕ್ಷದ ಚುನಾವಣಾ ಪ್ರಚಾರದಲ್ಲಿ ಉತ್ಸಾಹವೇ ಇರಲಿಲ್ಲ ಎಂಬುದು ಬಹಳ ಸ್ಪಷ್ಟವಾಗಿ ಗೋಚರಿಸಿತ್ತು. ಕಾಂಗ್ರೆಸ್‌ನ ವರಿಷ್ಠ ನಾಯಕರು ಅಲ್ಲಿ ವ್ಯಾಪಕವಾಗಿ ಪ್ರಚಾರ ಮಾಡಲಿಲ್ಲ. ರಾಜ್ಯ ಮಟ್ಟದಲ್ಲಿ ಕಾಂಗ್ರೆಸ್‌ಗೆ ಆಕರ್ಷಕ ಮತ್ತು ಪ್ರಭಾವಿ ನಾಯಕರು ಇಲ್ಲ. ಆಮ್ ಆದ್ಮಿ ಪಕ್ಷವು ಅಬ್ಬರದ ಪ್ರಚಾರ ನಡೆಸಿತ್ತು. ಈ ಪಕ್ಷವು ಕೆಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ ಮತಗಳನ್ನು ತನ್ನತ್ತ ಸೆಳೆದುಕೊಂಡಿದೆ. 'ಗೆದ್ದೇ ತೀರುತ್ತೇವೆ' ಎಂಬ ರೀತಿಯಲ್ಲಿ ಪ್ರಚಾರ ಮಾಡಿದ್ದ ಎಎಪಿಯ ಸಾಧನೆ ಕಳಪೆ ಏನಲ್ಲ. ಅಸ್ತಿತ್ವವೇ ಇಲ್ಲದಿದ್ದ ರಾಜ್ಯದಲ್ಲಿ ಪಕ್ಷವು ಶೇ 12.9ರಷ್ಟು ಮತಗಳನ್ನು ಪಡೆದುಕೊಂಡು ಐದು ಕ್ಷೇತ್ರಗಳಲ್ಲಿ ಗೆದ್ದಿದೆ. ಇದರಿಂದಾಗಿ ಎಎಪಿಗೆ ರಾಷ್ಟ್ರೀಯ ಪಕ್ಷ ಎಂಬ ಮಾನ್ಯತೆಯೂ ಸಿಕ್ಕಿದೆ.

ಆಡಳಿತ ವಿರೋಧಿ ಅಲೆಯ ಅತ್ಯುತ್ತಮ ನಿದರ್ಶನವಾಗಿ ಹಿಮಾಚಲ ಪ್ರದೇಶವು ನಿಲ್ಲುತ್ತದೆ. ಕಳೆದ ಕೆಲವು ದಶಕಗಳಿಂದ ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಅಲ್ಲಿನ ಜನರು ಪರ್ಯಾಯವಾಗಿ ಆಯ್ಕೆ ಮಾಡುತ್ತಾ ಬಂದಿದ್ದಾರೆ. ಈ ಎರಡೂ ರಾಷ್ಟ್ರೀಯ ಪಕ್ಷಗಳ ಸರ್ಕಾರವು ಅಲ್ಲಿನ ಜನರಿಗೆ ಸಂತೃಪ್ತಿ ನೀಡಿಲ್ಲ ಎಂಬುದನ್ನು ಇದು ಸೂಚಿಸುತ್ತದೆ. ಜನರಲ್ಲಿದ್ದ ಆಡಳಿತವಿರೋಧಿ ಮನೋಭಾವವು ತೀರಾ ಹೀನಾಯ ಸ್ಥಿತಿಯಲ್ಲಿರುವ ಕಾಂಗ್ರೆಸ್‌ಗೆ ಆಶಾಕಿರಣವಾಗಿ ಸಿಕ್ಕಿದೆ. ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್‌ಗೆ ಪ್ರಭಾವಿ ನಾಯಕತ್ವವೇನೂ ಇರಲಿಲ್ಲ. ಆದರೆ, ಕಾಂಗ್ರೆಸ್ ನೀಡಿದ್ದ ಹಳೆಯ ಪಿಂಚಣಿ ಯೋಜನೆ ಜಾರಿ ಮತ್ತು ಇತರ ಭರವಸೆಗಳು ಆ ಪಕ್ಷದ ಗೆಲುವಿಗೆ ನೆರವಾಗಿವೆ. ಸ್ಥಾನಗಳ ಸಂಖ್ಯೆ ಮತ್ತು ಮತ ಪ್ರಮಾಣ ಎರಡರಲ್ಲೂ ಉತ್ತಮ ಸಾಧನೆ ಮಾಡಿದೆ. ಆದರೆ, ಗೆಲ್ಲುವುದಷ್ಟೇ ಮುಖ್ಯವಲ್ಲ ಗೆಲುವನ್ನು ಉಳಿಸಿಕೊಳ್ಳುವುದು ಇನ್ನೂ ಹೆಚ್ಚು ಮುಖ್ಯವಾದುದು ಎಂಬುದು ಕರ್ನಾಟಕ, ಮಧ್ಯಪ್ರದೇಶದಲ್ಲಿ ಸಾಬೀತಾಗಿದೆ. ಇದರಿಂದ ಕಾಂಗ್ರೆಸ್ ಪಾಠ ಕಲಿತಿದ್ದರೆ ಹಿಮಾಚಲ ಪ್ರದೇಶದ ಸರ್ಕಾರ ಅವಧಿ ಪೂರ್ಣಗೊಳಿಸಬಹುದು.

ದಿನದ ಟ್ವೀಟ್

ಬದಲಾದ ನಿಲುವು

ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ (ಎನ್‌ಜೆಎಸಿ) ಕಾಯ್ದೆಯಂಥವುಗಳಿಗೆ ಸಂವಿಧಾನ ತಿದ್ದುಪಡಿಯ ಅಗತ್ಯವಿದೆ. ಹಾಗಾಗಿ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತ ಹಾಗೂ ಒಟ್ಟು ರಾಜ್ಯಗಳ ಪೈಕಿ ಅರ್ಧದಷ್ಟು ರಾಜ್ಯಗಳ ವಿಧಾನಸಭೆಗಳ ಸಮ್ಮತಿಯ ಅಗತ್ಯವಿರುತ್ತದೆ. ಎಲ್ಲ ಪಕ್ಷಗಳ ಬೆಂಬಲದಿಂದ ಎನ್‌ಜೆಎಸಿಯನ್ನು ಅಂಗೀಕರಿಸಲಾಯಿತು. ಆದರೆ ಸುಪ್ರೀಂ ಕೋರ್ಟ್ ಅದನ್ನು ರದ್ದುಪಡಿಸಿದ ಬಳಿಕ, ವಿರೋಧ ಪಕ್ಷಗಳು ತಮ್ಮ ನಿಲುವು ಬದಲಿಸಿವೆ.

ಜಿ.ಗೋಪಿಕೃಷ್ಣನ್, ಪತ್ರಕರ್ತ

ಕಿಡಿನುಡಿ

ಹಿಮಾಚಲ ಪ್ರದೇಶದಲ್ಲಿ ಬಿಜೆಪಿಯು 'ಆಪರೇಷನ್ ಕಮಲ'ಕ್ಕೆ ಮುಂದಾಗದೆ ಕಾಂಗ್ರೆಸ್‌ಗೆ ಸರ್ಕಾರ ರಚಿಸಲು ಅವಕಾಶ ನೀಡುವಂತೆ ತೋರುತ್ತಿದೆ. 40 ಸ್ಥಾನಗಳನ್ನು ಪಡೆದಿರುವುದು ಸ್ಪಷ್ಟ ಬಹುಮತ. ಹಾಗಾಗಿ, ರೆಸಾರ್ಟ್ ಕಾಯ್ದಿರಿಸುವಿಕೆಯನ್ನು ರದ್ದು ಮಾಡುವ ಕಾರ್ಯ ಆರಂಭವಾಗಿರಬಹುದು.



ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

---

25 ವರ್ಷಗಳ ಹಿಂದೆ
ಮಂಗಳವಾರ, 9-12-1997

- **ಲೋಕಸಭೆಯ ಎಲ್ಲಾ ಕ್ಷೇತ್ರಗಳಿಗೆ ಸಂಯುಕ್ತ ರಂಗ ಸ್ಪರ್ಧೆ**

ನವದೆಹಲಿ, ಡಿ. 8– ಸಂಯುಕ್ತ ರಂಗವು ಬರುವ ಲೋಕಸಭೆ ಮಧ್ಯಂತರ ಚುನಾವಣೆಯಲ್ಲಿ ಎಲ್ಲಾ ಸ್ಥಾನಗಳಿಗೂ ಸ್ಪರ್ಧೆ ಮಾಡುವುದಲ್ಲದೆ ಕಾಂಗ್ರೆಸ್ ಜತೆ ಯಾವುದೇ ರೀತಿಯ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳದಿರಲು ಇಂದು ನಡೆದ ರಂಗದ ಉನ್ನತ ನಿರ್ಧಾರಗಳ ಸಮಿತಿ ತೀರ್ಮಾನಿಸಿತು.

- **ಪಕ್ಷ ಬಿಟ್ಟವರಿಗೆ ಮರಳಲು ಬೊಮ್ಮಾಯಿ ಕರೆ**

ಬೆಂಗಳೂರು, ಡಿ. 8– ಜನತಾದಳ ಬಿಟ್ಟು ಹೋಗಿ ಬೇರೆ ಪಕ್ಷ ಮತ್ತು ಗುಂಪುಗಳನ್ನು ಕಟ್ಟಿಕೊಂಡಿರುವವರು ದಳದ ತತ್ವ, ಸಿದ್ಧಾಂತಗಳಲ್ಲಿ ನಂಬಿಕೆ ಇದ್ದಲ್ಲಿ ಮರಳಿ ಬರಲು ಜನತಾದಳದ ಮುಖಂಡ ಹಾಗೂ ಕೇಂದ್ರ ಮಾನವ ಸಂಪನ್ಮೂಲ ಖಾತೆ ಉಸ್ತುವಾರಿ ಸಚಿವ ಎಸ್.ಆರ್. ಬೊಮ್ಮಾಯಿ ಅವರು ಇಂದು ಇಲ್ಲಿ ಕರೆ ನೀಡಿದರು.

ಸಂಯುಕ್ತ ರಂಗ ಪುನಃ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು ಪೂರ್ಣಾವಧಿ ಯವರೆಗೆ ಇರುತ್ತದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

50 ವರ್ಷಗಳ ಹಿಂದೆ
ಶನಿವಾರ, 9-12-1972

- **ಸುವರ್ಣಾವತಿ ಕಟ್ಟೆ ಒಡೆದು ಐದು ಜನ ನೀರುಪಾಲು**

ಚಾಮರಾಜನಗರ, ಡಿ. 8– ಚಾಮರಾಜನಗರದಿಂದ 8 ಮೈಲಿ ದೂರದಲ್ಲಿ ಸುವರ್ಣಾವತಿ ನದಿಯ ಉಪನದಿಯಾದ ಎಣ್ಣೆಹೊಳೆಗೆ ಕಟ್ಟಲಾಗಿರುವ ಚಿಕ್ಕಹೊಳೆ ಸಣ್ಣ ನೀರಾವರಿ ಅಣೆಕಟ್ಟೆ ಇಂದು ಬೆಳಿಗ್ಗೆ ಒಡೆಯಿತು. ಅದರಿಂದ ನೂರಾರು ಎಕರೆ ಜಮೀನು ಮುಳುಗಡೆ ಆಗಿಹೋಗಿದೆ. ಹಲವಾರು ಗ್ರಾಮಗಳೂ ಮುಳುಗಿಹೋದವು.

ಈ ಪ್ರವಾಹಗಳಿಗೆ ಸಿಕ್ಕ ಸಿದ್ಧನಪುರ ಗ್ರಾಮದ ಏಳು ಮಂದಿ ಕುಟುಂಬದ ಐದು ಮಂದಿ ನೀರಿನಲ್ಲಿ ಕೊಚ್ಚಿಹೋದರು.

- **ಠಾಕೂರ್ ಚೌಕದಿಂದ ಪಾಕ್ ನಿರ್ಗಮನ: ಸ್ವರಣ್ ಪ್ರಕಟಣೆ**

ನವದೆಹಲಿ, ಡಿ. 8– ಠಾಕೂರ್ ಚೌಕದಿಂದ ಪಾಕ್ ಸೇನೆಯನ್ನು ಹಿಂತೆಗೆದುಕೊಳ್ಳಬೇಕೆಂಬ ಭಾರತದ ನಿಲುವಿಗೆ ಪಾಕಿಸ್ತಾನ ಒಪ್ಪಿಕೊಂಡಿದೆ. ಅದಕ್ಕೆ ಭಾರತದ ಸದ್ಭಾವನೆಯ ಕುರುಹಾಗಿ, ಜಮ್ಮು ಮತ್ತು ಕಾಶ್ಮೀರದ ಹತೋಟಿ ರೇಖೆಯಲ್ಲಿ 'ಸಣ್ಣ ಹೊಂದಾಣಿಕೆ'ಗಳಿಗೆ ಒಪ್ಪಿಕೊಳ್ಳಲಾಗಿದೆ ಎಂದು ವಿದೇಶಾಂಗ ಸಚಿವ ಸ್ವರಣ್ ಸಿಂಗ್ ಅವರು ಲೋಕಸಭೆಯಲ್ಲಿ ಇಂದು ತಿಳಿಸಿದರು.

ಪ್ರಜಾಪ್ರಭುತ್ವದ ಚಕ್ರ ಹಿಂದಕ್ಕೂ ಮುಂದಕ್ಕೂ ತಿರುಗುತ್ತಿರುವುದನ್ನು ಸೂಚಿಸುವ ಮೂರು ಫಲಿತಾಂಶಗಳು

ಮೂರು ಚುನಾವಣೆ: ಮೂರು ಸಂದೇಶ

ವಿಶ್ಲೇಷಣೆ

ನಟರಾಜ್ ಹುಳಿಯಾರ್

ಒಂದು ಮುನಿಸಿಪಲ್ ಕಾರ್ಪೊರೇಷನ್ ಚುನಾವಣೆ ರಾಜ್ಯಗಳ ಚುನಾವಣೆಗಳಿಗಿಂತ ಹೆಚ್ಚಿಗೆ ದೇಶದ ಗಮನ ಸೆಳೆದಿದ್ದು ಇದೇ ಮೊದಲ ಸಲವಿರಬೇಕು! ದೆಹಲಿ ಮುನಿಸಿಪಲ್ ಕಾರ್ಪೊರೇಷನ್ ಚುನಾವಣೆಯಲ್ಲಿ ಕೇಂದ್ರ ಮಂತ್ರಿಗಳ ದಂಡಿನ ಪ್ರಚಾರ, ಧನಬಲ, ಮಾಧ್ಯಮ ಬಲದ ನಡುವೆಯೂ ಆಮ್ ಆದ್ಮಿ ಪಕ್ಷವು ದೆಹಲಿ ಮುನಿಸಿಪಲ್ ಕಾರ್ಪೊರೇಷನ್ ಆಡಳಿತವನ್ನು ಬಿಜೆಪಿಯಿಂದ ಕಸಿದುಕೊಂಡಿದೆ. ಕಾಂಗ್ರೆಸ್ ದೆಹಲಿಯಲ್ಲಿ ಆಡಳಿತ ನಡೆಸುತ್ತಿದ್ದಾಗಲೂ ಕಾರ್ಪೊರೇಷನ್ ಹಿಡಿದುಕೊಂಡಿದ್ದ ಬಿಜೆಪಿ 15 ವರ್ಷಗಳ ನಂತರ ಅಧಿಕಾರ ಕಳೆದುಕೊಂಡಿದೆ.

ಎಎಪಿ ಈ ಚುನಾವಣೆ ಗೆಲ್ಲುವ ಮೂಲಕ, ಕೊಂಚ ತಟ್ಟಾಡುತ್ತಿದ್ದ ಭಾರತೀಯ ಪ್ರಜಾಪ್ರಭುತ್ವಕ್ಕೆ ಸ್ಪಷ್ಟ ಸಂದೇಶವನ್ನು ರವಾನಿಸಿದೆ: ತಾನು ಎಂಥ ಪ್ರಚಾರವನ್ನಾದರೂ ಎದುರಿಸಬಲ್ಲೆ, ಎಲ್ಲ ಕಿರುಕುಳಗಳನ್ನೂ ಎದುರಾಗಬಲ್ಲೆ ಎಂಬುದನ್ನೂ ತೋರಿಸಿಕೊಟ್ಟಿದೆ. ಹಿಂದೆ ದೆಹಲಿ, ಪಂಜಾಬ್ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನಿಂದ ಅಧಿಕಾರ ಕಸಿದುಕೊಂಡಿದ್ದ ಎಎಪಿ ಈಗ ಬಿಜೆಪಿಯಿಂದಲೂ ಅಧಿಕಾರ ಕಸಿಯಬಲ್ಲೆ ಎಂಬ ಸಂದೇಶವನ್ನೂ ರವಾನಿಸಿದೆ. ದೆಹಲಿ ಸಂದೇಶದಂತೆಯೇ ಹಿಮಾಚಲ ಪ್ರದೇಶ, ಗುಜರಾತ್ ಚುನಾವಣೆಗಳು ಕೂಡ ಮೂರು ಪಕ್ಷಗಳಿಗೆ ಮೂರು ವಿಭಿನ್ನ ಸಂದೇಶಗಳನ್ನು ಕೊಟ್ಟಿವೆ.

ಗುಜರಾತ್‌ನಲ್ಲಿ ಬಿಜೆಪಿಯನ್ನು ಕದಲಿಸುವುದು ತೀರಾ ಕಷ್ಟ ಹಾಗೂ ಎಎಪಿ ರೀತಿಯ ಅಬ್ಬರದ ಮಾಧ್ಯಮ ಪ್ರಚಾರದಿಂದಾಗಿ ವಿರೋಧಿ ಮತಗಳ ವಿಭಜನೆಯಷ್ಟೇ ಆಗುತ್ತದೆ ಎಂಬುದು ಮತ್ತೊಮ್ಮೆ ಸ್ಪಷ್ಟವಾಗಿದೆ. ಅತ್ತ ಹಿಮಾಚಲದಲ್ಲಿ, ಚುನಾವಣೆ ಯುದ್ಧಕ್ಕೂ ಪ್ರಿಯಾಂಕಾ ಗಾಂಧಿಯಂಥ ಯಾರಾದರೊಬ್ಬ ನಾಯಕಿ, ನಾಯಕ ಸಂಪೂರ್ಣ ಜವಾಬ್ದಾರಿ ಹೊತ್ತು ಕೆಲಸ ಮಾಡಿದರೆ ತಾನೂ ಗೆಲುವಿನ ಹಾದಿಗೆ ಮರಳಬಹುದು ಎಂಬ ಸಂದೇಶ ಕಾಂಗ್ರೆಸ್ಸಿಗೆ ಸಿಕ್ಕಿದೆ. ಪ್ರಧಾನಮಂತ್ರಿಯ ವರ್ಚಸ್ಸನ್ನು ಅತಿಯಾಗಿ ನಂಬಿದರೆ ತನಗೂ ಸೋಲಾಗಬಹುದು ಎಂಬುದು ಹಿಮಾಚಲದಲ್ಲಿ ಬಿಜೆಪಿಗೆ ಮುಟ್ಟಿರುವ ಸಂದೇಶ.

ಈ ಚುನಾವಣಾ ಫಲಿತಾಂಶಗಳ ಮತ್ತೊಂದು ಮಿಂಚಿನ ಪರಿಣಾಮ ವಿರೋಧ ಪಕ್ಷಗಳ ಏಕತೆಯ ಮೇಲೂ ಆಗಿದೆ. ಚುನಾವಣೋತ್ತರ ಸಮೀಕ್ಷೆಗಳು ಪ್ರಕಟವಾದ ದಿನವೇ ತೃಣಮೂಲ ಕಾಂಗ್ರೆಸ್ ಹಾಗೂ ಎಎಪಿ ಲೋಕಸಭಾ ಅಧಿವೇಶನಕ್ಕೂ ಮುನ್ನ ಕಾಂಗ್ರೆಸ್ ಕರೆದಿದ್ದ 'ಫ್ಲೋರ್ ಕೋ-ಆರ್ಡಿನೇಶನ್ ಸಭೆ'ಗೆ ಇದೇ ಮೊದಲ ಬಾರಿಗೆ ಹಾಜರಾದವು! 'ಯುನೈಟೆಡ್ ವಿ ಸ್ಟ್ಯಾಂಡ್, ಡಿವೈಡೆಡ್ ವಿ ಫಾಲ್' (ಒಟ್ಟಾಗಿದ್ದರೆ ಎದ್ದು ನಿಲ್ಲುವೆವು; ಒಡೆದುಹೋದರೆ ಕೆಳಗೆ ಬೀಳುವೆವು) ಎಂಬ ಹಳೆಯ ನಾಣ್ಣುಡಿ ಈಗ ಇವೆರಡೂ ಪಕ್ಷಗಳಿಗೆ ಅರ್ಥವಾದಂತಿದೆ. ಈವರೆಗೆ ವಿರೋಧ ಪಕ್ಷಗಳ ಏಕತೆಯ ವೇದಿಕೆಗಳಿಂದ ದೂರವೇ ಉಳಿದು ಠೇಂಕಾರ ಮಾಡುತ್ತಿದ್ದ ಟಿಎಂಸಿ, ಎಎಪಿಗೆ ಗೋಡೆಯ ಮೇಲಿನ ಬರಹ ನಿಚ್ಚಳವಾಗಿ ಕಂಡಂತಿದೆ.

ಗುಜರಾತ್ ಚುನಾವಣೆಯಲ್ಲಿ ಬಿಜೆಪಿಯ ಚುನಾವಣಾ ತಂತ್ರ, ಒಗ್ಗಟ್ಟಿನ ಜೊತೆಗೆ, ಅದು ಪ್ರಧಾನಮಂತ್ರಿ-ಗೃಹಮಂತ್ರಿಗಳ ವೈಯಕ್ತಿಕ ಪ್ರತಿಷ್ಠೆಯ ಚುನಾವಣೆಯೂ ಆಗಿ, ಪಕ್ಷಕ್ಕೆ ಸತತ ಏಳನೆಯ ಗೆಲುವು ದಕ್ಕಿದೆ. ಗೆಲುವಿನ ಹೊಸ ಇತಿಹಾಸ ಸೃಷ್ಟಿಯಾಗಿದೆ. ಆದರೆ ಅದೇ ವೇಳೆಗೆ, ಈ ಚುನಾವಣೆಯಲ್ಲಿ ಎಎಪಿ-ಬಿಜೆಪಿ ನಡುವೆ ಮಾತ್ರ ಹಣಾಹಣಿ ಎಂಬ ರಾಷ್ಟ್ರೀಯ ಮಾಧ್ಯಮಗಳ ಪ್ರಚಾರಕ್ಕೂ ಮತದಾರರು ಬಲಿಯಾದಂತಿದೆ. ಈ ಧ್ರುವೀಕರಣವೇ ನಿಜವೆಂದು ನಂಬಿದ್ದ ಅರವಿಂದ ಕೇಜ್ರಿವಾಲರ ಅತಿ ಆತ್ಮವಿಶ್ವಾಸ ಕೈಕೊಟ್ಟಿದೆ. ಗುಜರಾತಿನಲ್ಲಿ ಅಧಿಕಾರವಿಲ್ಲದೆ ಹತಾಶವಾಗಿರುವ ಕಾಂಗ್ರೆಸ್ಸಿನ ಜಡತೆಗೆ ಮದ್ದೇ ಕಾಣುತ್ತಿಲ್ಲ! ವಿರೋಧಿ ಮತಗಳು ಹಂಚಿಹೋಗದಂತೆ ಮಾಡದಿದ್ದರೆ ಕಾಂಗ್ರೆಸ್ ನೆಲೆ ಮತ್ತಷ್ಟು ಕುಸಿಯಬಹುದು. ಎಎಪಿಯಿಂದಾಗಿ ಕಾಂಗ್ರೆಸ್ ಮತ ಶೇಕಡ 27ಕ್ಕೆ ಇಳಿದಿದೆ; ಆದರೆ ಶೇ 12.9ರಷ್ಟು ಮತಗಳನ್ನು ಪಡೆದ ಎಎಪಿ ರಾಷ್ಟ್ರೀಯ ಪಕ್ಷದ ಮಾನ್ಯತೆ ಪಡೆದಿರುವುದು ಸಣ್ಣ ಸಾಧನೆಯೇನಲ್ಲ. ಆದರೆ ಎಎಪಿ ಬಗೆಗಿನ ಭ್ರಮೆಯಿಂದಾಗಿ ಅಲ್ಪಸಂಖ್ಯಾತರ ಅರ್ಧದಷ್ಟು ಮತಗಳು ಕಾಂಗ್ರೆಸ್ಸಿನಿಂದ ದೂರ ಸರಿದಿರುವ ಸಾಧ್ಯತೆ ಕೂಡ ಕಾಂಗ್ರೆಸ್ ಮತಗಳಿಗೆ ಹೊಡೆತ ಕೊಟ್ಟಿದೆ.

ಹಿಮಾಚಲದ ಗೆಲುವು ಕಾಂಗ್ರೆಸ್ ದೇಶದಾದ್ಯಂತ ಕೊಂಚ ಎದ್ದು ನಿಲ್ಲಲು ನೆರವಾಗಬಹುದು. ಹಿಮಾಚಲದಲ್ಲಿ ಸೇಬು ಬೆಳೆಗಾರರು ಆಡಳಿತ ಪಕ್ಷದ ನೀತಿ ಮತ್ತು ಹೊಸ ಮಾರ್ಕೆಟ್ ದಲ್ಲಾಳಿಗಳ ಬಗ್ಗೆ ಕಳೆದೆರಡು ವರ್ಷಗಳಿಂದ ಕುದಿಯುತ್ತಲೇ ಇದ್ದರು. ಜೊತೆಗೆ ಹಳೆಯ ಪೆನ್ಷನ್ ಯೋಜನೆಯನ್ನು ಮರಳಿ ಜಾರಿಗೆ ತರುವ ಬಗ್ಗೆ ಎರಡು ಲಕ್ಷಕ್ಕೂ ಹೆಚ್ಚು ಇರುವ ಸರ್ಕಾರಿ ನೌಕರರು ಒತ್ತಡ ಹೇರುತ್ತಲೇ ಇದ್ದರು. ಇದಾವುದಕ್ಕೂ ಕಿವಿಗೊಡದೆ, ತಾವೇ ಅಧಿಕಾರಕ್ಕೆ ಬರುತ್ತೇವೆಂಬ ಹಮ್ಮಿನಲ್ಲಿದ್ದ ಬಿಜೆಪಿಯ ಸ್ಥಳೀಯ ನಾಯಕರ ಜಗಳವೂ ಆ ಪಕ್ಷದ ಸೋಲಿಗೆ ಕಾರಣವಾಗಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ತಮ್ಮ ತವರು ರಾಜ್ಯದಲ್ಲಿ ಪಕ್ಷವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಮಾಡಿದ ಕಸರತ್ತು ಕೂಡ ಈ ಸೋಲಿಗೆ ಕಾರಣವಾಗಿದೆ. ಹಿಮಾಚಲದಲ್ಲಿ ಒಂದು ಸಲ ಅಧಿಕಾರದಲ್ಲಿದ್ದ ಪಕ್ಷ ಮತ್ತೊಂದು ಸಲ ಅಧಿಕಾರಕ್ಕೆ ಬರುವುದಿಲ್ಲ ಎಂಬುದು ಮತ್ತೆ ಸಾಬೀತಾಗಿದೆ.

ಈ ಮೂರೂ ಚುನಾವಣೆಗಳನ್ನು ಮತದಾರರ ದೃಷ್ಟಿಯಿಂದ ನೋಡಿದರೆ, ದೆಹಲಿ, ಹಿಮಾಚಲದಲ್ಲಿ ಮತದಾರರು ತಂತಮ್ಮ ಅನುಭವಗಳ ಹಿನ್ನೆಲೆಯಲ್ಲಿ ಮರುಯೋಚಿಸಿ, ಹಳೆಯ ಆಯ್ಕೆಗಳನ್ನು ಬದಲಿಸುತ್ತಿರುವ ರೀತಿ ಸ್ಪಷ್ಟವಾಗಿದೆ. ಆದರೆ ಗುಜರಾತಿನಲ್ಲಿ ಸ್ಥಳೀಯ ಆಡಳಿತದ ನಿರ್ಲಕ್ಷ್ಯ ಹಾಗೂ ಭ್ರಷ್ಟಾಚಾರದಿಂದಾಗಿ 135 ಜನ ಸತ್ತ ಮೊರ್ಬಿ ಸೇತುವೆಯ ಭೀಕರ ದುರಂತ ಮೊನ್ನೆ ತಾನೇ ನಡೆದಿದ್ದರೂ, ಮೊರ್ಬಿ ಕ್ಷೇತ್ರದ ಮತದಾರರು ಆ ಸಿಟ್ಟನ್ನು ಮತಗಳ ಮೂಲಕ ವ್ಯಕ್ತಪಡಿಸದೇ ಹೋಗಿರುವುದು ಅವರ ಜಡತ್ವಕ್ಕೆ ಸಾಕ್ಷಿಯಂತಿದೆ.

ಭಾರತದ ಪ್ರಜಾಪ್ರಭುತ್ವದ ದೃಷ್ಟಿಯಿಂದ ಈ ಚುನಾವಣಾ ಫಲಿತಾಂಶಗಳು ಸಣ್ಣ ಮಟ್ಟದಲ್ಲಾದರೂ ಹೊಸ ಸಾಧ್ಯತೆಯನ್ನು ತೆರೆದಿಟ್ಟಿವೆ. ಭಾರತದಲ್ಲಿ ಇನ್ನು ಮುಂದೆ ಬರಲಿರುವ ಚುನಾವಣೆಗಳು ಏಕಮುಖವಾಗಿ ಇರುವುದಿಲ್ಲ ಎಂಬುದರ ಮುನ್ಸೂಚನೆಗಳೂ ಇಲ್ಲಿ ಕಾಣುತ್ತಿವೆ. ರಾಜಕೀಯ ಪಕ್ಷಗಳ ಶಕ್ತಿ, ತಂತ್ರಗಳೇನೇ ಇರಲಿ, ಆತ್ಮಸಾಕ್ಷಿಯಿರುವ ಮಾಧ್ಯಮಗಳು ಎಲ್ಲ ಪಕ್ಷಗಳಿಗೂ ಸರಿಸಮಾನವಾದ ಅಖಾಡವನ್ನು ಸೃಷ್ಟಿಸಿದಾಗ ಮಾತ್ರ ಭಾರತದಲ್ಲಿ ಪ್ರಜಾಪ್ರಭುತ್ವ ಉಳಿಯಬಲ್ಲದು. ಯಾವುದೇ ಪಕ್ಷದ ಅಥವಾ ವ್ಯಕ್ತಿಯ ಸರ್ವಾಧಿಕಾರವನ್ನು ತಂತಮ್ಮ ಹಿತಾಸಕ್ತಿಗಳಿಗಾಗಿ ಬೆಂಬಲಿಸುವ ಮಾಧ್ಯಮಗಳ ಹುನ್ನಾರವನ್ನು ಮತದಾರರು ಹಾಗೂ ರಾಜಕೀಯ ಪಕ್ಷಗಳ ಕಾರ್ಯಕರ್ತರು ಗಂಭೀರವಾಗಿ ಅರಿತು ಅದನ್ನು ಎದುರಿಸಲೇಬೇಕಾಗಿದೆ; ಇಲ್ಲದಿದ್ದರೆ ಈಗಾಗಲೇ ಪ್ರಹಸನವಾಗಿರುವ ಪ್ರಜಾಪ್ರಭುತ್ವ ನಗೆಪಾಟಲಿಗೀಡಾಗುತ್ತದೆ. ಹೆಚ್ಚೆಚ್ಚು ಆಯ್ಕೆಗಳಿರುವುದೇ ಪ್ರಜಾಪ್ರಭುತ್ವವಾದಿ ರಾಜಕಾರಣದ ಮುಖ್ಯ ಲಕ್ಷಣ. ಅಂಥ ಆಯ್ಕೆಗಳೇ ಇಲ್ಲವಾದರೆ ಸರ್ವಾಧಿಕಾರಿ ವ್ಯವಸ್ಥೆ ಕಾಯಂ ಆಗುತ್ತದೆ.

ದೆಹಲಿಯಲ್ಲಿ ಹೇಳಹೆಸರಿಲ್ಲದಂತಾದರೂ, ಉಳಿದ ಎರಡು ರಾಜ್ಯಗಳಲ್ಲಿ ಒಂದನ್ನಾದರೂ ಗೆದ್ದಿರುವ ಕಾಂಗ್ರೆಸ್ ಪಕ್ಷಕ್ಕೆ ಈ ಗೆಲುವು ಹೊಸ ಜೀವ ತುಂಬಲೂಬಹುದು. ಹಿಂದೆ ಗೆದ್ದಿದ್ದ ಎರಡು ರಾಜ್ಯಗಳನ್ನು ಪಕ್ಷಾಂತರದ ದ್ರೋಹದಿಂದಾಗಿ ಕಳೆದುಕೊಂಡಿರುವ ಕಾಂಗ್ರೆಸ್ ಹಿಮಾಚಲದಲ್ಲಾದರೂ ಅಚಲವಾಗಿ ಉಳಿಯಬಹುದೆಂದು ನಿರೀಕ್ಷಿಸೋಣ! ಜೊತೆಗೆ, ಆಡಳಿತವಿರೋಧಿ ಅಲೆಯನ್ನು ನಿಖರವಾಗಿ ಅಂದಾಜು ಮಾಡುವ, ಅದನ್ನು ತಕ್ಕ ದಿಕ್ಕಿಗೆ ಕೊಂಡೊಯ್ಯುವ ಕಲೆಯನ್ನು ಕೂಡ ರಾಜಕೀಯ ಪಕ್ಷಗಳು ಕಲಿಯಬಲ್ಲವೆಂದು ಊಹಿಸೋಣ.

ಈ ಫಲಿತಾಂಶ ಕಂಡ ಮೇಲಾದರೂ, ಕರ್ನಾಟಕದಲ್ಲಿ ಅಧಿಕಾರದ ವಾಸನೆ ಸಿಕ್ಕ ತಕ್ಷಣ, ಮುಖ್ಯಮಂತ್ರಿ ಅಭ್ಯರ್ಥಿ ಕುರಿತು ಪಕ್ಷದ ಒಳಗೂ, ಮಾಧ್ಯಮಗಳಲ್ಲೂ ಅನಗತ್ಯ ಗುಲ್ಲೆಬ್ಬಿಸುತ್ತಿರುವ ಕಾಂಗ್ರೆಸ್ ತನ್ನ ಸಾಧ್ಯತೆಗಳ ಬಗ್ಗೆ ವಾಸ್ತವ ಪ್ರಜ್ಞೆ ಬೆಳೆಸಿಕೊಳ್ಳದಿದ್ದರೆ, ಆತ್ಮಹತ್ಯೆಯ ಹಾದಿಯಲ್ಲಿರುತ್ತದೆ.

ಇತ್ತ ಪ್ರಮುಖ ಸಾಮಾಜಿಕ- ಆರ್ಥಿಕ ಸಮಸ್ಯೆಗಳ ಬಗ್ಗೆ ತಲೆಕೆಡಿಸಿಕೊಳ್ಳುವುದನ್ನೇ ಕೈಬಿಟ್ಟು, ಗುಪ್ತ ಅಜೆಂಡಾದ ಚಾಲ್ತಿಗೆ ಟೊಂಕ ಕಟ್ಟಿ ನಿಂತಿರುವ ಕರ್ನಾಟಕದ ಮಂತ್ರಿಗಳು ಚಿಲ್ಲರೆ ಸಾಂಸ್ಕೃತಿಕ ಸಮಸ್ಯೆಗಳನ್ನು ಹುಟ್ಟು ಹಾಕುವ ಕೆಟ್ಟ ಚಾಳಿ ಕೈಬಿಟ್ಟು, ಜನರಿಗಾಗಿ ಕೆಲಸ ಮಾಡುವುದನ್ನು ಕಲಿಯಲಿ. ಗುಜರಾತಿನಲ್ಲಿ ಯಥಾಸ್ಥಿತಿಗೆ ಮತ ಹಾಕಿರುವ ಮತದಾರರು ಉಳಿದೆಡೆ ಬದಲಾವಣೆ ಯತ್ತ ಹಾತೊರೆಯುತ್ತಿದ್ದಾರೆ ಎಂಬುದನ್ನು ದೆಹಲಿ ಮತ್ತು ಹಿಮಾಚಲ ದನಿಯೆತ್ತಿ ಸಾರಿವೆ. ಈ ದನಿಗಳನ್ನು ಅಧಿಕಾರದ ಹಮ್ಮಿನಲ್ಲಿರುವವರೂ ಸೋತು ನಿರಾಶರಾಗಿರುವವರೂ ಸರಿಯಾಗಿ ಕೇಳಿಸಿಕೊಳ್ಳಬೇಕು.



ಚುರುಮುರಿ



ಕಾಲ್ಚೆಂಡಿನ ಲೀಲೆ

• ನಾರಾಯಣ ರಾಯಚೂರ್

'**ಗೋಲು** ಹೊಡೆದಂತೆ ಮರಡೋನಾ; ಮನೆಯ ಕಡೆ ನಾವು ಹೊರಡೋಣಾ'.

'ಫುಟ್ಬಾಲ್ ಮೇಲೂ ಕವನಾನ?'

'ನಂದಲ್ಲಾ... ವೈ.ಎನ್.ಕೆ. ಅವರ ಸಾಲು! ಕೈಲಾಸಂ ಕೂಡಾ ಒಳ್ಳೆ ಫುಟ್ಬಾಲ್ ಪಟು. ಲಂಡನ್‌ನಲ್ಲಿದ್ದಾಗ ಅಲ್ಲಿನ ಫುಟ್ಬಾಲ್ ಟೀಮ್ನಲ್ಲಿ 'ಲೆಫ್ಟ್-ಔಟ್' ಆಟಗಾರನಾಗಿದ್ದರಂತೆ. ಆಸಕ್ತಿ ಕಡಿಮೆಯಾಗಿ ಆಟಕ್ಕೆ ಹೋಗದೆಯಿದ್ದಾಗ ಟೀಮ್‌ನವರು ಇವರನ್ನ 'ಲೆಫ್ಟ್-ಔಟ್' ಮಾಡ್ಬಿಟ್ಟರಂತೆ!'

'ನಿಮ್ಮ ಕೈಲಾಸಂ ಬಿಡಿ, ಕೈಗೊಂದು ಜೋಕು, ಕಾಲಿಗೊಂದು ಜೋಕು... ತಗೊಳ್ಳಿ ತಿಂಡೀನ'.

'ಏನೇ ಇದು?! ನಿನಗೂ ಫುಟ್ಬಾಲ್ ಫೀವರಾ?! ಇಡ್ಲಿ ಫುಟ್ಬಾಲ್ ಥರಾನೇ ಕಾಣ್ತಿದೆ?'

'ಹೌದುರೀ, ಪ್ರಪಂಚದ ತುಂಬೆಲ್ಲ ಫುಟ್ಬಾಲ್ ಸುತ್ತಾಡ್ತಿರೋವಾಗ ನಾವೂ ನಮ್ಮ ಕೈಚಳಕ ತೋರ್ಸಲೇಬೇಕಲ್ಲವಾ? ಮೊನ್ನೆ ಪೇಪರಲ್ಲಿ ಹೊಸ ರುಚಿ ಅಂಕಣದಲ್ಲಿ ನೋಡಿದೆ'.

'ಅದಕ್ಕೆ... ನಮ್ಮ ಮೇಲೆ ಪ್ರಯೋಗವೋ?! ತಪ್ಪು ನಿಂದಲ್ಲ ಬಿಡು, ಫುಟ್ಬಾಲ್‌ದು. ಫುಟ್ಬಾಲ್ ಬ್ಯಾಗು, ಫುಟ್ಬಾಲ್ ಶರ್ಟು ಅಂತ ತಲೆ ತುಂಬಾ ಅದನ್ನೇ ತುಂಬಿಕೊಂಡು ಹೇರ್ ಕಟ್‌ಗೂ ಫುಟ್ಬಾಲ್ ಡಿಸೈನೇ ಬಂದ್ಬಿಟ್ಟಿದೆ!'

'ದೋಹಾದಲ್ಲಿನ ಈ ಫುಟ್ಬಾಲ್ ದಾಹ ವಿಪರೀತ, ಫೈನಲ್ಸ್ ಟಿಕೆಟ್ ಬೆಲೆ ಲಕ್ಷ ದಾಟಿದೆಯಂತೆ ರೀ'.

'ಐದು ವರ್ಷಕ್ಕೊಮ್ಮೆ ನಡೆಯೋ ಅಸೆಂಬ್ಲಿ ಟಿಕೆಟ್‌ಗೆ ಬರೀ ಅರ್ಜಿ ಸಲ್ಲಿಸುವುದಕ್ಕೇ ಎರಡು ಲಕ್ಷ, ಇನ್ನು ನಾಲ್ಕು ವರ್ಷಕ್ಕೊಮ್ಮೆ ನಡೆಯೋ ಫುಟ್ಬಾಲ್‌ಗೆ ಲಕ್ಷ ಜಾಸ್ತಿಯೇನಲ್ಲ ಬಿಡು'.

'ಬ್ರೆಜಿಲ್ಲೋ ಅರ್ಜೆಂಟೀನಾನೋ ಯಾರೋ ಹೊಡ್ಕೋತಾರೆ ಬಿಡಿ ವರ್ಲ್ಡ್ ಕಪ್, ನಾವಲ್ಲವಲ್ಲ?

'ಆದರೆ ನಮ್ಮಲ್ಲೂ ವರ್ಲ್ಡ್‌ಕಪ್ ಗುಂಗು ಕಡಿಮೆಯೇನಿಲ್ಲ. ಕೇರಳದಲ್ಲಿ ಎರಡು ಟೀಮಿನ ಅಭಿಮಾನಿಗಳು ಕಿತ್ತಾಡಿಕೊಂಡು ಒದೆ ತಿಂದ್ಕೊಂಡಿದಾರಂತಲ್ಲ. ಅದೇ ಒದೆ ಫುಟ್ಬಾಲ್‌ಗೆ ಕೊಡೋದು ಕಲಿತುಕೊಂಡ್ರೆ, ಫ್ರೀ-ಕಿಕ್ ಸಿಕ್ಕು, 'ಸ್ವಾಪ್ ನಾಟ್ ಟಿಲ್ ದ ಗೋಲ್ ಈಸ್ ರೀಚ್ಡ್' ಅಂದುಕೊಂಡಿದ್ರೆ, ನಮ್ಮವರೇ ಚಾಂಪಿಯನ್ ಆಗ್ತಿದ್ರೇನೋ. ಎಲ್ಲಾ, ಕಾಲ ಲೀಲೆ'

'ಕಾಲ್ಚೆಂಡಿನ ಲೀಲೆ ಎಂದೇ ಹೇಳಬೇಕು ಆ ಕ್ರೀಡಾಪಟು... ಪೆಲೆ!'

ಸಂಗತ

ಗದ್ದಲ- ಗೊಂದಲದ ಕಲಾಪೋಷಣೆ!

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನಸಹಾಯದ ಯೋಜನೆಯ ನಿಯಮಗಳು ಪ್ರತಿವರ್ಷ ಬದಲಾಗುತ್ತಾ ಕಲಾವಿದರಿಗೆ ಸಮಸ್ಯೆಗಳನ್ನು ಸೃಷ್ಟಿಸುತ್ತಿವೆ

• ಡಾ. ಕೆ.ಎಸ್.ಪವಿತ್ರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನಸಹಾಯದ ಬಗೆಗೆ ಮತ್ತೆ ಗದ್ದಲ- ಗೊಂದಲ ಎದ್ದಿದೆ. ಹಿಂದಿನಿಂದಲೂ ಇಲಾಖೆಯ ಧನಸಹಾಯ ಯೋಜನೆ ಹಾಗೂ ಸಂಸ್ಕೃತಿಯ ವಿಷಯದಲ್ಲಿ ಗದ್ದಲ-ಗೊಂದಲ ಪಕ್ಷಾತೀತವಾಗಿ ನಡೆದುಬಂದಿದೆ! 18 ವರ್ಷಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಯ ಜೊತೆಗೆ ಸ್ವತಃ ಕಲಾವಿದೆಯಾಗಿ ಕಲಾಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ನನಗೆ ಈ ಸ್ಥಿತಿ ಬಹುವಾದ ವ್ಯಥೆ ತರುತ್ತದೆ. ಕಲಾರಂಗ, ಕಲೆಯನ್ನು ಪೋಷಿಸಬೇಕಾದ ಆಡಳಿತ ವ್ಯವಸ್ಥೆ ಹಿಂದಿನ ಅನುಭವಗಳಿಂದ ಪಾಠ ಕಲಿಯದ ಬಗೆಗೆ ಅಚ್ಚರಿ ಮೂಡುತ್ತದೆ.

ಕಲಾವಿದರು ಕಲೆಯನ್ನು ಮಾತ್ರ ಚೆನ್ನಾಗಿ ಕಲಿತು, ಪ್ರದರ್ಶಿಸುವುದನ್ನು ರೂಢಿಸಿಕೊಂಡರೆ ಸಾಲದು. ಪ್ರತಿಯೊಂದನ್ನೂ ದಾಖಲಿಸುವ ಶಿಸ್ತನ್ನು ಪ್ರಯತ್ನಪೂರ್ವಕವಾಗಿ ಕಲಿಯಬೇಕು. ಅನುದಾನದ ಯೋಜನೆ ಯಾವುದೇ ಇರಲಿ, ಸರಿಯಾದ ದಾಖಲೆಗಳು, ಲೆಕ್ಕಪತ್ರಗಳು, ಸಂಸ್ಥೆಯ ದಾಖಲೆಗಳು ಕ್ರಮಬದ್ಧವಾಗಿರಬೇಕು. ನೃತ್ಯ-ಸಂಗೀತ-ನಾಟಕದ ಬಗ್ಗೆ ಯೋಚಿಸುವ ಬದಲು ಇವುಗಳನ್ನು ಮಾಡುತ್ತಾ ಕುಳಿತಿರಬೇಕೆ ಎನ್ನುವ ಹಾಗಿಲ್ಲ. ಈ ಶಿಸ್ತಿಗೆ ಬೇಕಾದ್ದಾದರೂ ಕೊಂಚ ಮನಸ್ಸು, ಸ್ವಲ್ಪ ಪರಿಶ್ರಮ. ಒಮ್ಮೆ ವ್ಯವಸ್ಥೆಯೊಂದಿಗೆ ಹೊಂದಿಕೊಂಡರೆ ಆಮೇಲೆ ಅದನ್ನು ಅನುಸರಿಸುವುದು ಸುಲಭ.

'ಅರ್ಜಿ ಹಾಕುವುದೇ ಇಲ್ಲ, ಬೇಕಾದರೆ ಅವರೇ ಗುರುತಿಸಲಿ' ಎನ್ನುವಂತಿಲ್ಲ. ಭಾರತದಂತಹ ಕಲಾಶ್ರೀಮಂತ ದೇಶದಲ್ಲಿ ಎಷ್ಟು ಜನ ಕಲಾವಿದರು, ಎಷ್ಟು ಕಲಾಸಂಸ್ಥೆಗಳಿವೆ, ಸರ್ಕಾರ ಯಾರನ್ನು ಗುರುತಿಸೀತು, ಯಾರಿಗೆ ಅರ್ಹರೆಂದು ಧನಸಹಾಯ, ಪ್ರಶಸ್ತಿ ನೀಡಬಹುದು?! ಹಾಗಾಗಿ ಕಲಾವಿದ ಕಾರ್ಯಕ್ರಮಗಳನ್ನು ಆಯೋಜಿಸಲು ಧನಸಹಾಯ ಪಡೆಯುವುದಕ್ಕೆ ಅರ್ಜಿ ಸಲ್ಲಿಸುವುದೂ ಸರಿಯಾದ ದಾಖಲೆಗಳನ್ನು ಇಟ್ಟುಕೊಳ್ಳುವುದೂ ಅಪೇಕ್ಷಣೀಯವೆ.

ಇಲಾಖೆ ಅಸ್ತಿತ್ವಕ್ಕೆ ಬಂದಾಗಿನಿಂದಲೂ 'ಕ್ರಿಯಾ ಯೋಜನೆ' ಎಂಬ ಹೆಸರಿನಿಂದ ಕಲಾಸಂಸ್ಥೆಗಳಿಗೆ ಧನಸಹಾಯ ನೀಡುತ್ತಲೇ ಬಂದಿದೆ. ಆದರೆ ಎಂದೂ ಇದು 'ಪಾರದರ್ಶಕ'ವಾಗಿ ನಡೆದದ್ದಿಲ್ಲ. ಅರ್ಧ-ಮುಕ್ಕಾಲು-ಒಂದು ಕೋಟಿ ಬಿಟ್ಟುಬಿಡೋಣ, ಪ್ರತೀ ತಿಂಗಳು ಕಾರ್ಯಕ್ರಮ ಮಾಡುವ ಸಂಸ್ಥೆಗೆ ವರ್ಷಕ್ಕೆ ₹ 15,000ದಿಂದ 2 ಲಕ್ಷದವರೆಗೆ ಅನುದಾನ ಬಂದರೂ ಹೆಚ್ಚಿನ ಕಲಾವಿದರು- ಸಂಸ್ಥೆಗಳು 'ಪಾಲಿಗೆ ಬಂದದ್ದು ಪಂಚಾಮೃತ' ಎನ್ನುವಂತೆ ತೃಪ್ತರೇ ಆದವರು. ಆಹ್ವಾನ ಪತ್ರಿಕೆಯಲ್ಲಿ ಸಹಕಾರ, ಪ್ರಾಯೋಜನೆ ಎಂದು ಇಲಾಖೆಯ ಹೆಸರಿದ್ದರೂ, 'ಇಲಾಖೆಯ ಹೆಸರಿಲ್ಲ' ಎಂಬ ಷರಾ ನಮೂದಿಸಿ ಅರ್ಜಿ ತಿರಸ್ಕೃತವಾದ ಅನೇಕ ಪ್ರಕರಣಗಳಿವೆ. ಅಂತಹ ಸಮಯದಲ್ಲಿ ಸ್ಥಳೀಯ ಶಾಖೆಗಳ ಉತ್ತರ 'ನಾವು ಸರಿಯಾಗಿಯೇ ಕಳಿಸಿದ್ದೇವೆ, ಬೆಂಗಳೂರಿನ ಮುಖ್ಯ ಕಚೇರಿಗೆ ಹೋಗಿ ಕೇಳಿ!' ಬೆಂಗಳೂರಿಗೆ ಹೋದರೆ, ಅಲ್ಲಿಯ ಅಗಾಧ ವ್ಯವಸ್ಥೆಯಲ್ಲಿ ಯಾರನ್ನು ಕೇಳುವುದು?! ಕಲಾವಿದ ಬೇಸತ್ತು, ಸಿಕ್ಕವರನ್ನು ಮಾತನಾಡಿಸಿ, ದೈನ್ಯದಿಂದ ತನ್ನ ಪಾಡು ವಿವರಿಸಿ, 'ಈ ವರ್ಷದ್ದು ಇನ್ನೇನು ಮಾಡೋಕ್ಕಾಗಲ್ಲ, ಮುಂದಿನ ವರ್ಷ ನೋಡೋಣ' ಎಂಬ ಉತ್ತರ ಪಡೆದು ಹಿಂದಿರುಗುವುದಷ್ಟೆ.

ಪ್ರತಿವರ್ಷ ಬದಲಾಗುವ ನಿಯಮಗಳು, ಕಲಾವಿದರು ಒಂದು ಕ್ರಮವನ್ನು ಅನುಸರಿಸಲು ಕಷ್ಟಪಡುವಂತೆ ಮಾಡುತ್ತಾ ಸಮಸ್ಯೆಗಳನ್ನು ಸೃಷ್ಟಿಸುತ್ತಿವೆ. ಈ ಬಾರಿಯಂತೂ ನಿಯಮಗಳನ್ನು ಮಾಡುವಾಗ ಕಲಾರಂಗದ ನೈಜಸ್ಥಿತಿಯನ್ನು ಗಣನೆಗೇ ತೆಗೆದುಕೊಂಡಿಲ್ಲ. ಜುಲೈಗಿಂತ ಮೊದಲು ನಡೆಸಿದ ಕಾರ್ಯಕ್ರಮಗಳು 'ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದಲ್ಲಿ ನಡೆದಿವೆ' ಎಂದು ಆಹ್ವಾನ ಪತ್ರಿಕೆಯಲ್ಲಿ ಅಚ್ಚಾಗಿದ್ದರೂ, ಹೊಸ ನಿಯಮಗಳ ಪ್ರಕಾರ ಈ ಕಾರ್ಯಕ್ರಮಗಳಿಗೆ ಇಲಾಖೆಯ ಸಹಕಾರ ದೊರಕದು. ನಿಯಮಗಳ ಅಸಂಗತತೆ ಹೇಗಿದೆಯೆಂದರೆ, ಆಯಾ ಜಿಲ್ಲೆಯ ಸಹಾಯಕ ನಿರ್ದೇಶಕರನ್ನು (ಏಕೆಂದರೆ ಕಲಾವಿದರ ಕೈಗೆ ಸಿಕ್ಕುವವರು ಅವರೇ!) ಕಲಾವಿದರು- ಮುಖ್ಯ ಕಚೇರಿಯ ನಡುವೆ ಅಡಕತ್ತರಿಯಲ್ಲಿ ಸಿಲುಕಿಸುವುದನ್ನು ಬಿಟ್ಟರೆ, ಮತ್ಯಾವ ರೀತಿಯಲ್ಲಿಯೂ ಕಲಾರಂಗದ ಉನ್ನತೀಕರಣಕ್ಕೆ, ಕಾರ್ಯಕ್ರಮಗಳ ಗುಣಮಟ್ಟಕ್ಕೆ ಸಹಾಯ ಮಾಡುವಂತೆ ಕಾಣುವುದಿಲ್ಲ.

ಹೆಚ್ಚಿನ ಕಲಾವಿದರಿಗೆ ನಿಯಮಾವಳಿಗಳ ಪ್ರತಿ ತಲುಪಿರುವುದು ಆಗಸ್ಟ್‌ನಲ್ಲಿ. ಜೂನ್‌ನಿಂದ ಜನವರಿವರೆಗೆ ನಿಯಮಾನುಸಾರವಾಗಿ ಕನಿಷ್ಠ ಮೂರು ಕಾರ್ಯಕ್ರಮಗಳನ್ನು ಮಾಡಿ, ದಾಖಲೆಗಳ ಸಹಿತ ಅಪ್‌ಲೋಡ್ ಮಾಡುವಂತೆ ಅದರಲ್ಲಿ ನಿರ್ದೇಶಿಸಲಾಗಿದೆ. ಸಹಾಯಕ ನಿರ್ದೇಶಕರ ಜೊತೆ ಜಂಟಿ ನಿರ್ದೇಶಕರನ್ನೂ ಅತಿಥಿಗಳಾಗಿ ಆಹ್ವಾನಿಸುವಂತೆ ಹೇಳಲಾಗಿದೆ. ಏಪ್ರಿಲ್-ಮೇ ತಿಂಗಳುಗಳಲ್ಲಿ ಕಾರ್ಯಕ್ರಮಗಳನ್ನು ಮಾಡಿ, ನಿರ್ದೇಶಕರಿಗೆ ಆಹ್ವಾನ ಪತ್ರಿಕೆಯನ್ನಷ್ಟೇ ನೀಡಿದ್ದರೆ ಅದು ಧನಸಹಾಯದ ನಿಯಮಾವಳಿಗಳ ಪ್ರಕಾರ ಸಿಂಧುವಲ್ಲ! ಅಷ್ಟೇ ಅಲ್ಲ ಮತ್ತೊಂದು ಗಮನಾರ್ಹ ನಿಯಮವೆಂದರೆ, ಸಂಸ್ಥೆಯೊಂದು ತನ್ನ ಕಲಾತಂಡವನ್ನು ಇಲಾಖೆಯ ಪ್ರಾಯೋಜನೆಯಿಂದ ಕಾರ್ಯಕ್ರಮ ನೀಡಲು ಕರೆದೊಯ್ದರೆ, ಬೇರೆ ಕಲಾವಿದರನ್ನು ತಾನು ಕರೆಸಿ ಕಾರ್ಯಕ್ರಮ ನಡೆಸಲು ಧನಸಹಾಯಕ್ಕೆ ಅರ್ಜಿ ಸಲ್ಲಿಸುವಂತಿಲ್ಲ! ಈ ಹಿಂದೆ, ಸಂಸ್ಥೆಯ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡರೆ ಧನಸಹಾಯ ಸಿಕ್ಕಲಾರದು ಎಂಬ ನಿಯಮವೂ ಇತ್ತು! ಎಷ್ಟೋ ಸಂಸ್ಥೆಗಳಲ್ಲಿ ಕಲಾವಿದರೇ ಸಂಸ್ಥೆಯನ್ನು ಮುನ್ನಡೆಸುವ ಮುಂದಾಳುಗಳೂ, ಆಯೋಜಕರೂ ಆಗಿರುತ್ತಾರೆ. ಈ ಬಾರಿ ಆ ನಿಯಮವಿಲ್ಲ ಎನ್ನುವುದೇ ಸಮಾಧಾನ!

ನಿಯಮಗಳು ಬೇಕು. ಆದರೆ ನಿಯಮಗಳನ್ನು ಮಾಡುವಾಗ ಕಲಾವಿದರ ಅಭಿಪ್ರಾಯ, ಕಲಾ ಆಯೋಜನೆಯ ಕಷ್ಟಗಳನ್ನು ಗಣನೆಗೆ ತೆಗೆದುಕೊಳ್ಳುವುದು ಸಂಸ್ಕೃತಿ ಕ್ಷೇತ್ರದ ಈ ಹೊತ್ತಿನ ತುರ್ತು.

ವಾಚಕರ ವಾಣಿ

ಕಾರ್ಯಕ್ಷಮತೆಗೆ ಸಿಕ್ಕ ಬೆಂಬಲ

ರಾಜಧಾನಿ ದೆಹಲಿಯು ದೇಶದ ಎಲ್ಲ ಭಾಗಗಳವರನ್ನೂ ಒಳಗೊಂಡಿರುವ ಕ್ಷೇತ್ರ. ಇಲ್ಲಿನ ಮಹಾನಗರಪಾಲಿಕೆಯಲ್ಲಿ 15 ವರ್ಷದಿಂದ ತಳವೂರಿದ್ದ ಬಿಜೆಪಿಯ ತೆಕ್ಕೆಯಿಂದ ಆಡಳಿತವನ್ನು ಆಮ್ ಆದ್ಮಿ ಪಕ್ಷ ಈಗ ಪಡೆದುಕೊಂಡಿರುವುದು ದೊಡ್ಡ ಸಾಹಸವೇ ಸರಿ. ಇದಕ್ಕೆ, ಅರವಿಂದ ಕೇಜ್ರಿವಾಲ್ ಅವರ ವರ್ಚಸ್ಸು ಮತ್ತು ದೆಹಲಿಯ ಸರ್ಕಾರವನ್ನು ನಡೆಸುವುದರಲ್ಲಿ ಅವರ ಕಾರ್ಯಕ್ಷಮತೆ ಕಾರಣ ಇದ್ದಿರಬಹುದು. ಜನರು ತಮ್ಮ ಅಪೇಕ್ಷೆಗೆ ಸ್ಪಂದಿಸಿದ ಆಡಳಿತವನ್ನು ಮೆಚ್ಚಿರುವುದರಿಂದಲೇ ಮಹಾನಗರಪಾಲಿಕೆ ಚುನಾವಣೆಯಲ್ಲೂ ಬೆಂಬಲ ಸೂಚಿಸಿದ್ದಾರೆ. ಇದು ಉಳಿದ ಪಕ್ಷಗಳ ಕಣ್ಣು ತೆರೆಸಿದರೆ ಅದು ದೊಡ್ಡ ಸಾಧನೆ.

ಬಿಜೆಪಿ, ಕಾಂಗ್ರೆಸ್ ಮತ್ತು ಇತರ ಕೆಲವು ಪಕ್ಷಗಳು ತಮ್ಮ ವಿರೋಧಿಗಳ ಬಗೆಗಿನ ವೈಯಕ್ತಿಕ ಟೀಕೆಗಳಿಗೇ ಸೀಮಿತವಾಗಿರುವುದರಿಂದ ಜನ ರೋಸಿಹೋಗಿದ್ದಾರೆ. ಇದನ್ನು ಈ ಪಕ್ಷಗಳು ಅರಿತರೆ ಉತ್ತಮ. ಜನರಿಗೆ ಬೇಕಿರುವುದು ಒಳ್ಳೆಯ ಆಡಳಿತ ಕೊಡುವ ಪಕ್ಷವೇ ವಿನಾ ಜನನಾಯಕರ ನಾಲಿಗೆಯ ಚಟದ ವಾಗ್ಝರಿಯಲ್ಲ ಎಂಬುದು ಈ ಚುನಾವಣಾ ಫಲಿತಾಂಶದಿಂದ ರುಜುವಾತಾಗಿದೆ.

ಕೆ.ಎನ್.ಭಗವಾನ್, ಬೆಂಗಳೂರು

ಸರಳ- ವಿರಳ

ಸಭೆ ಸಮಾರಂಭಗಳಲ್ಲಿ
ನಿತ್ಯ ಬಂದ್ಹೋಗುವರು
ಬುದ್ಧ ಬಸವ ಗಾಂಧಿ
ಅಂಬೇಡ್ಕರ್ ಕುವೆಂಪು
ಕೇಳಲು ಬಲು ಇಂಪು
ನಾಡೆಲ್ಲ ಹುಡುಕಿದರೂ
ಒಳಹೊಕ್ಕವರ ಕಾಣೆ
ಭಾಷಣ ಬಲು ಸರಳ
ಆಚರಣೆ ಬಹು ವಿರಳ.

ವೈ.ನರೇಶ ಬಾಬು, ಶಿರಾ

ಪ್ರಜಾಪ್ರಭುತ್ವದ ಗೆಲುವು, ಎಚ್ಚರಿಕೆಯ ಸಂದೇಶ

ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ, ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ದೆಹಲಿ ಮಹಾನಗರಪಾಲಿಕೆ ಚುನಾವಣೆಯಲ್ಲಿ ಎಎಪಿಯನ್ನು ಮತದಾರರು ಗೆಲ್ಲಿಸಿದ್ದಾರೆ. ಈ ಮೂಲಕ ಪ್ರಜಾಪ್ರಭುತ್ವ ಗೆದ್ದಿದೆ. ಜೊತೆಗೆ ಈ ಫಲಿತಾಂಶವು ಒಂದಲ್ಲ ಒಂದು ರೀತಿಯಲ್ಲಿ ಎಲ್ಲ ಪಕ್ಷಗಳಿಗೆ ಎಚ್ಚರಿಕೆಯ ಸಂದೇಶ ನೀಡುವಂತಿದೆ.

ಡಾ. ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಸೇಬು ಹಾರವಾಗದಿರಲಿ, ಆಹಾರವಾಗಲಿ

ಬರುವ ವಿಧಾನಸಭಾ ಚುನಾವಣೆ ಕಾರಣದಿಂದ ಯಾತ್ರೆ, ಸಮಾವೇಶದಂಥ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ರಾಜಕೀಯ ನಾಯಕರಿಗೆ ಬೆಂಬಲಿಗರು ಬೃಹತ್ ಸೇಬಿನ ಹಾರಗಳನ್ನು ಹಾಕಿ ಸ್ವಾಗತಿಸಿರುವುದು ವರದಿಯಾಗಿದೆ. ವಾಸ್ತವವಾಗಿ ಸೇಬುಹಣ್ಣು ತುಂಬಾ ಸೂಕ್ಷ್ಮ, ಮೃದುವಾಗಿದ್ದು, ಅದಕ್ಕೆ ಸೂಜಿ, ದಬ್ಬಣ ಹಾಕಿ ದಾರದಲ್ಲಿ ಪೋಣಿಸಿದರೆ ಕೆಲವೇ ಸಮಯದಲ್ಲಿ ಅದು ಕೆಡುತ್ತದೆ. ಇದರಿಂದ ಬಳಕೆಗೂ ಯೋಗ್ಯವಲ್ಲ, ಬೆಲೆಯೂ ಕೆ.ಜಿ.ಗೆ ಶತಕ ದಾಟಿಯೇ ಇರುತ್ತದೆ! ಎಷ್ಟೋ ಬಡವರು ಕೊಳ್ಳಲಾಗದೆ, ನೋಡಿಯೇ ಆಸೆಪಟ್ಟು ಸುಮ್ಮನಿರುತ್ತಾರೆ. ಇಂತಹ ಆಹಾರ ಪದಾರ್ಥವನ್ನು ವೃಥಾ ಪೋಲು ಮಾಡುವುದರ ಬದಲಾಗಿ, ಸಮಾವೇಶಕ್ಕೆ ತಾವೇ ಕರೆತರುವ ಬಡವರಿಗೆ ಹಂಚಿದರೆ ಖಂಡಿತ ಉಪಯೋಗವಾಗುತ್ತದೆ. ಒಂದು ಪಕ್ಷದವರು ತಮ್ಮ ನಾಯಕನ ಕೊರಳಿಗೆ ಹತ್ತು ಕೆ.ಜಿ. ತೂಕದ ಸೇಬಿನ ಹಾರ ಹಾಕಿದರೆಂದು ಮತ್ತೊಂದು ಪಕ್ಷದವರು ತಮ್ಮ ನಾಯಕನಿಗೆ ಅದಕ್ಕೂ ಮಿಗಿಲಾಗಿ ಸೇಬಿನ ಹಾರ ಹಾಕುತ್ತಾರೆ! ಸೇಬು ಪೋಲು ತಡೆಯುವ ಬಗ್ಗೆ ಎಲ್ಲ ಪಕ್ಷದವರು ಗಮನಹರಿಸುವುದು ಅಗತ್ಯ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಬೇಕು ಹೃದಯ ಬೆಸೆಯುವ ಸೇತುವೆ

ಹುಣಸೂರಿನ ಹನುಮಂತ ಉತ್ಸವದಲ್ಲಿ ಹನುಮಭಕ್ತರಿಗೆ ಮುಸ್ಲಿಂ ಯುವಕರು ಗುಲಾಬಿ ಹೂ, ಹಣ್ಣು ಮತ್ತು ಮಜ್ಜಿಗೆಯನ್ನು ನೀಡಿ ಶುಭ ಹಾರೈಸುವ ಮೂಲಕ ಕೋಮು ಸಾಮರಸ್ಯ ಮೆರೆದಿರುವುದು ಇತ್ತೀಚಿನ ದಿನಗಳಲ್ಲಿ ಕೇಳಿಬಂದ ಸಮಾಧಾನಕರ ವರದಿ. ದೇಶದಲ್ಲಿ ಸಂಘರ್ಷಮಯ ವಾತಾವರಣದ ಸುದ್ದಿಗಳೇ ಕೇಳಿಬರುತ್ತಿರುವ ಇಂದಿನ ಸಂಕಟಮಯ ಸನ್ನಿವೇಶದಲ್ಲಿ ಕೋಮುಸೌಹಾರ್ದದ ತಂಗಾಳಿ ಬೀಸುತ್ತಿರುವುದು ಶ್ಲಾಘನೀಯ. ಉಭಯ ಕೋಮುಗಳಲ್ಲಿನ ಪ್ರಜ್ಞಾವಂತ ಯುವಕರು ಕೂಡಲೇ ಮಾಡಲೇಬೇಕಾದಂತಹ ಕೆಲಸವಿದು.

ಮನಸ್ಸುಗಳನ್ನು ಬೆಸೆಯುವ ಕೆಲಸ ಈಗ ತುರ್ತಾಗಿ ಆಗಬೇಕಾಗಿದೆ. ಧಾರ್ಮಿಕ ಮುಖಂಡರು ಉದಾತ್ತ ಚಿಂತನೆಗಳನ್ನು ಜನರ ಎದೆಗಳಲ್ಲಿ ಬಿತ್ತಿ, ನಾಳಿನ ಭಾರತವನ್ನು ನಿಜವಾದ ಅರ್ಥದಲ್ಲಿ ಧರ್ಮನಿರಪೇಕ್ಷವಾಗಿಸಬೇಕಾಗಿದೆ. ಭವಿಷ್ಯದ ಬದುಕನ್ನು ಭಯಮುಕ್ತವಾಗಿಸಬೇಕಾಗಿದೆ.

ಮೋದೂರು ಮಹೇಶಾರಾಧ್ಯ, ಹುಣಸೂರು

ಭಾಷಾ ಸಂಘದೊಂದಿಗೆ ನಂಟು: ನಿಷೇಧ ಸಲ್ಲ

'ಧರ್ಮ, ಜನಾಂಗ, ಪ್ರದೇಶ, ಭಾಷೆ, ಕೋಮುವಾದ ಕೆರಳಿಸುವ ಸಂಸ್ಥೆ ಮತ್ತು ಸಂಘಟನೆಗಳ ಜೊತೆಗೆ ಸರ್ಕಾರಿ ನೌಕರರು ಕೈಜೋಡಿಸುವುದಕ್ಕೆ ನಿಷೇಧ ಹೇರಲು ಸರ್ಕಾರ ಮುಂದಾಗಿದೆ' ಎಂದು ವರದಿಯಾಗಿದೆ (ಪ್ರ.ವಾ., ಡಿ. 8). ಭಾಷೆಯೊಂದನ್ನು ಬಿಟ್ಟು ಬೇರೆಲ್ಲದರ ನಿಷೇಧ ಒಪ್ಪತಕ್ಕದ್ದೇ. ಆದರೆ, ಭಾಷೆಯ ವಿಚಾರದಲ್ಲಿ ರಾಜ್ಯದ ಅಧಿಕೃತವಾದ ಮತ್ತು ಆಡಳಿತ ಭಾಷೆಯಾದ ಕನ್ನಡದ ಸಂಘ ಸಂಸ್ಥೆ ಅಥವಾ ಕೆಲಸಗಳಲ್ಲಿ ಕೈಜೋಡಿಸಿದರೆ ತಪ್ಪೇನೂ ಆಗದು. ನಮ್ಮ ಭಾಷೆಯ ವಿಚಾರ ಕುರಿತಂತೆ ನಿರ್ಬಂಧ ಹೇರುವುದು ಸರಿಯಲ್ಲ. ಹಾಗೆ ಮಾಡಿದರೆ ಕನ್ನಡಪರ ಹೋರಾಟವೇ ನಿಂತುಹೋಗುತ್ತದೆ ಹಾಗೂ ಪರಭಾಷಾ ದಾಳಿ ಮತ್ತಷ್ಟು ಹೆಚ್ಚಾಗುವ ಸಂಭವ ಇದೆ.

ಸರ್ಕಾರಿ ಕಚೇರಿಗಳಲ್ಲಿ ಕನ್ನಡದಲ್ಲೇ ವ್ಯವಹರಿಸಬೇಕು ಮತ್ತು ಕಡತಗಳು ಸಹ ಕನ್ನಡದಲ್ಲೇ ಇರಬೇಕು ಎಂಬ ಆದೇಶವೇ ಇದ್ದರೂ ಅದರ ಅನುಷ್ಠಾನ ಪರಿಪೂರ್ಣವಾಗಿಲ್ಲ. ಸರ್ಕಾರದ ಅನೇಕ ಕಡೆ ಕನ್ನಡದ ವಾತಾವರಣ ಇದೆ ಎಂದರೆ ಅದಕ್ಕೆ ಕನ್ನಡ ಸಂಘಟನೆಗಳೇ ಕಾರಣ ಎಂಬುದು ಗಮನಾರ್ಹ. ಇದನ್ನು ಗಮನಿಸಿ, ಭಾಷಾ ಸಂಘಟನೆಗಳ ಜೊತೆ ನಂಟು ಹೊಂದುವುದಕ್ಕೆ ನಿರ್ಬಂಧ ಹೇರುವ ಪ್ರಸ್ತಾವವನ್ನು ಕೈಬಿಡಬೇಕು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್‌ನ 7ನೇ ರಾಜ್ಯ ಸಮ್ಮೇಳನ

‘ವೇತನ ಹೆಚ್ಚಿಸದಿದ್ದರೆ ಹೋರಾಟ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಮೂರು ವರ್ಷಗಳಿಂದ ತಡೆಹಿಡಿದಿರುವ ಸಾರಿಗೆ ನೌಕರರ ವೇತನ ಹೆಚ್ಚಿಸುವುದು, ಮುಷ್ಕರದಲ್ಲಿ ಪಾಲ್ಗೊಂಡಿದ್ದಕ್ಕೆ ಅಮಾನತು ಆಗಿರುವ 2,000 ಸಿಬ್ಬಂದಿಯನ್ನು ವಾಪಸ್ ಕೆಲಸಕ್ಕೆ ಸೇರಿಸಿಕೊಳ್ಳುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಕೂಡಲೇ ಕ್ರಮಕೈಗೊಳ್ಳಬೇಕು. ಇಲ್ಲದಿದ್ದರೆ ಬೀದಿಗಿಳಿದು ಹೋರಾಟ ಮಾಡುತ್ತೇವೆ’ ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಹಾಗೂ ಎಐಟಿಯುಸಿ ರಾಜ್ಯ ಸಮಿತಿ ಅಧ್ಯಕ್ಷ ಎಚ್‌.ವಿ.ಅನಂತ ಸುಬ್ಬರಾವ್ ಹೇಳಿದರು.

ಎಐಟಿಯುಸಿ ಸಹಯೋಗದಲ್ಲಿ ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್ ಗುರುವಾರ ಹುಬ್ಬಳ್ಳಿಯಲ್ಲಿ ಆಯೋಜಿಸಿದ 3 ದಿನಗಳ 7ನೇ ರಾಜ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

‘ಸಂಸ್ಥೆ ನಷ್ಟದಲ್ಲಿರುವುದರಿಂದ ನೌಕರರ ವೇತನ ಹೆಚ್ಚಿಸಲಾಗುವುದಿಲ್ಲ ಎಂದು ಸರ್ಕಾರ ಹೇಳುತ್ತದೆ. ಆದರೆ, ಶಾಸಕರು, ಸಂಸದರು ಪ್ರತಿವರ್ಷ ತಮ್ಮ ವೇತನವನ್ನು ಹೆಚ್ಚಿಸಿಕೊಳ್ಳುತ್ತಾರೆ. ಆಗ ಸರ್ಕಾರದ ಬಳಿ ಹೇಗೆ ಹಣ ಬರುತ್ತದೆ?’ ಎಂದು ಪ್ರಶ್ನಿಸಿದರು.

‘ಕೋವಿಡ್ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸುವಾಗ ಸಂಸ್ಥೆಯ 355 ಜನ ಮೃತರಾದರು. ಇವರ ಪೈಕಿ 4-5 ಜನರಿಗೆ ಮಾತ್ರ ₹ 30 ಲಕ್ಷ ಪರಿಹಾರ ನೀಡಿ ಸರ್ಕಾರ ಕೈತೊಳೆದುಕೊಂಡಿದೆ. ಇನ್ನುಳಿದವರಿಗೆ ಪರಿಹಾರ ನೀಡಬೇಕು. ಖಾಲಿಯಿರುವ 16 ಸಾವಿರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಳ್ಳಬೇಕು. ನಿವೃತ್ತ ಸಿಬ್ಬಂದಿಯ ಬಾಕಿ ಇರುವ ಗ್ರ್ಯಾಚುಟಿ ಹಣವನ್ನು ಕೂಡಲೇ ಬಿಡುಗಡೆಗೊಳಿಸಬೇಕು’ ಎಂದು ಒತ್ತಾಯಿಸಿದರು.

ಹುಬ್ಬಳ್ಳಿಯಲ್ಲಿ ಗುರುವಾರ ಎಐಟಿಯುಸಿ ಸಹಯೋಗದಲ್ಲಿ ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್ ಆಯೋಜಿಸಿದ 7ನೇ ರಾಜ್ಯ ಸಮ್ಮೇಳನಕ್ಕೂ ಮುಂಚೆ ಸಾರಿಗೆ ಸಿಬ್ಬಂದಿ ಮೆರವಣಿಗೆ ಮಾಡಿದರು

ಕೋಡಿಹಳ್ಳಿ ವಿರುದ್ಧ ಆಕ್ರೋಶ

‘ಕೋಡಿಹಳ್ಳಿ ಚಂದ್ರಶೇಖರ್ ಮತ್ತೊಂದು ಬಣ ಕಟ್ಟಿಕೊಂಡು ಕಳೆದ ವರ್ಷ ಮುಷ್ಕರ ನಡೆಸಿದ ನಂತರ ಸಾರಿಗೆ ಸಿಬ್ಬಂದಿ ಮನೋಬಲ ಕುಗ್ಗಿಹೋಗಿದೆ. ಸರ್ಕಾರಿ ನೌಕರರನ್ನಾಗಿಸುವ ಆಸೆ ತೋರಿಸಿ, ಹೋರಾಟದ ಹಾದಿಯನ್ನೇ ತಪ್ಪಿಸಿದರು. ನಮ್ಮ (ಎಐಟಿಯುಸಿ) ಸಂಘಟನೆಯ ಬಲಕುಗ್ಗಿಸಲು ಸಾರಿಗೆ ಇಲಾಖೆ ಅಧಿಕಾರಿಗಳೇ ಕೋಡಿಹಳ್ಳಿ ಅವರಿಗೆ ಮುಷ್ಕರ ನಡೆಸುವಂತೆ ಕುಮ್ಮಕ್ಕು ನೀಡಿದ್ದರು’ ಎಂದು ಎಚ್‌.ವಿ.ಅನಂತ ಸುಬ್ಬರಾವ್ ಆರೋಪಿಸಿದರು.

‘ತೆಲಂಗಾಣ, ಮಹಾರಾಷ್ಟ್ರ ಸೇರಿದಂತೆ ಯಾವ ರಾಜ್ಯದಲ್ಲೂ ಸಾರಿಗೆ ಸಿಬ್ಬಂದಿಯನ್ನು ಸರ್ಕಾರಿ ನೌಕರರೆಂದು ಪರಿಗಣಿಸಿಲ್ಲ. ನ್ಯಾಯಾಲಯಗಳು ಇದಕ್ಕೆ ಸಮ್ಮತಿ ಸೂಚಿಸಿಲ್ಲ. ಈ ವಿಷಯವನ್ನು ಹೋರಾಟ ಆರಂಭಿಸುವುದಕ್ಕೂ ಮೊದಲು ನಾವು ಕೋಡಿಹಳ್ಳಿಗೆ ಹೇಳಿದ್ದೆವು. ಆದರೂ, ಅವರು ಕಿವಿಗೆ ಹಾಕಿಕೊಳ್ಳಲಿಲ್ಲ. ಅವರ ಮುಷ್ಕರದಲ್ಲಿ ಪಾಲ್ಗೊಂಡು ಅಮಾನತಾಗಿರುವ ಸುಮಾರು 2,000 ಸಿಬ್ಬಂದಿ ಬೀದಿಯಲ್ಲಿದ್ದಾರೆ’ ಎಂದರು.

ಫೆಡರೇಷನ್‌ನ ಉಪಾಧ್ಯಕ್ಷ ಸಿದ್ದನಗೌಡ ಪಾಟೀಲ, ‘ಕಾಡಿನಲ್ಲಿರುವ ನಕ್ಸಲೀಯರನ್ನು ಮಾತುಕತೆಗೆ ಆಹ್ವಾನಿಸುವ ಸರ್ಕಾರ ನಮ್ಮೊಂದಿಗೆ ಮಾತುಕತೆ ನಡೆಸಲು ಸಿದ್ಧವಿಲ್ಲ. ಸಾರಿಗೆ ನೌಕರರ ಬೇಡಿಕೆಗಳನ್ನು ಆಲಿಸುತ್ತಿಲ್ಲ’ ಎಂದು ದೂರಿದರು.

‘ಟಿಪ್ಪು ನಿಜ ಕನಸುಗಳು’ ತಡೆ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ವಿರಚಿತ, ‘ಟಿಪ್ಪು ನಿಜ ಕನಸುಗಳು’ ಕೃತಿ ಮಾರಾಟ ಮತ್ತು ಹಂಚಿಕೆಗೆ ವಿಧಿಸಿದ್ದ ತಾತ್ಕಾಲಿಕ ತಡೆಯನ್ನು ನಗರದ 14ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ತೆರವುಗೊಳಿಸಿದೆ. ಈ ಸಂಬಂಧ ಜಿಲ್ಲಾ ವಕ್ಫ್ ಬೋರ್ಡ್ ಸಮಿತಿಯ ಮಾಜಿ ಅಧ್ಯಕ್ಷ ಹಾಗೂ ಬೆಂಗಳೂರಿನ ನಿವಾಸಿ ಬಿ.ಎಸ್‌. ರಫೀವುಲ್ಲಾ ದಾಖಲಿಸಿದ್ದ ಅಸಲು ದಾವೆಯಲ್ಲಿ ಮಧ್ಯಂತರ ಮನವಿಯ ವಿಚಾರಣೆ ನಡೆಸಿದ್ದ ನ್ಯಾಯಾಧೀಶ ಜೆ.ಆರ್‌. ಮೆಂಡೋನ್ಕಾ 2022ರ ನವೆಂಬರ್ 21ರಂದು ತಾತ್ಕಾಲಿಕ ತಡೆ ನೀಡಿದ್ದರು.

‘ಟಿಪ್ಪು ನಿಜ ಕನಸುಗಳು’ ಪುಸ್ತಕವನ್ನು ಆನ್‌ಲೈನ್ ಸೇರಿದಂತೆ ಎಲ್ಲಿಯೂ ಮಾರಾಟ ಮತ್ತು ಹಂಚಿಕೆ ಮಾಡದಂತೆ ತಾತ್ಕಾಲಿಕ ತಡೆ ನೀಡಿದ್ದರು. ವಿಸ್ತೃತ ಆದೇಶ ಇನ್ನಷ್ಟೇ ಹೊರಬೀಳಬೇಕಿದೆ.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಕಾಂಗ್ರೆಸ್ ಪಕ್ಷವು ಆಮ್ ಆದ್ಮಿ ಪಕ್ಷವನ್ನು ಹಗುರವಾಗಿ ಪರಿಗಣಿಸಿದ್ದೇ ತೊಡಕಾಯಿತೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಶ್ರೀಗುರುದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ/ಸಂಸ್ಥೆ ಅಂಗಳದಲ್ಲಿ ದತ್ತ ಜಯಂತಿ ಅಂಗವಾಗಿ ಹೋಮ, ಪೂಜೆ ಜರುಗಿದವು —ಪ್ರಜಾವಾಣಿ ಚಿತ್ರ

ದತ್ತ ಜಯಂತಿ: ಹೋಮ, ಹವನ

ಚಿಕ್ಕಮಗಳೂರು: ಇಲ್ಲಿನ ಶ್ರೀಗುರುದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ/ಸಂಸ್ಥೆ ಗುಹೆಯ ಮುಂಭಾಗದ ಆವರಣದಲ್ಲಿ ದತ್ತ ಜಯಂತಿ ನಿಮಿತ್ತ ಹೋಮ, ಹವನ ಕೈಂಕರ್ಯಗಳನ್ನು ಅರ್ಚಕರು ಗುರುವಾರ ನೆರವೇರಿಸಿದರು.

ಅರ್ಚಕರಾದ ಪಿ.ಎಂ. ಸಂದೀಪ್, ಕೆ. ಶ್ರೀಧರ, ಪ್ರದೀಪ್, ಪ್ರವೀಣ್ ಅವರು ಪೂಜಾವಿಧಿಗಳನ್ನು ನೆರವೇರಿಸಿದರು. ದತ್ತಪೀಠದಲ್ಲಿ ದತ್ತ ಪಾದುಕೆಗಳಿಗೆ ಪೂಜೆ, ಅಭಿಷೇಕ ಜರುಗಿದವು.

‘ರುದ್ರ ಹೋಮ, ದತ್ತಧಾರಕ ಹೋಮ, ಗುಹೆಯೊಳಗೆ ದತ್ತಪಾದುಕೆಗೆ ಏಕಾದಶಾವರ ರುದ್ರಾಭಿಷೇಕ, ಪೂಜೆ ನೆರವೇರಿಸಲಾಯಿತು’ ಎಂದು ಅರ್ಚಕ ಶ್ರೀಧರ ‘ಪ್ರಜಾವಾಣಿ’ಗೆ ತಿಳಿಸಿದರು.

ಉಸ್ತುವಾರಿ ಸಚಿವ ಬೈರತಿ ಬಸವರಾಜ, ಶಾಸಕ ಸಿ.ಟಿ.ರವಿ, ಜಿಲ್ಲಾಧಿಕಾರಿ ಕೆ.ಎನ್‌.ರಮೇಶ್ ಹೋಮದಲ್ಲಿ ಪಾಲ್ಗೊಂಡಿದ್ದರು.

ಕೊಡಿ ಹಬ್ಬ

ಕುಂದಾಪುರ ಸಮೀಪದ ಕೋಟೇಶ್ವರದ ಕೋಟಿಲಿಂಗೇಶ್ವರ ದೇವಸ್ಥಾನದಲ್ಲಿ ‘ಕೊಡಿ ಹಬ್ಬ’ದ ಅಂಗವಾಗಿ ಗುರುವಾರ ಭಕ್ತರ ಜಯಘೋಷದ ನಡುವೆ ಮನ್ಮಹಾರಥೋತ್ಸವ ನಡೆಯಿತು

‘ಮಹಿಳಾ ಕುಲಸಚಿವರು ಪಹಣಿ ಕೊಡಬಹುದು!’

ತುಮಕೂರು: ‘ನಮ್ಮ ಘನ ಸರ್ಕಾರ ಯಾರೋ ಕೊರಟಗೆರೆಯ ಮಹಿಳಾ ತಹಶೀಲ್ದಾರ್ ಒಬ್ಬರನ್ನು ತುಮಕೂರು ವಿಶ್ವವಿದ್ಯಾಲಯದ ಕುಲಸಚಿವರನ್ನಾಗಿ (ಆಡಳಿತ) ನೇಮಕ ಮಾಡಿದೆ. ಆ ಅಧಿಕಾರಿ ಇಲ್ಲಿಗೆ ಬಂದು ಪಹಣಿ, ಪಟ್ಟಾ, (ಭೂಮಿ ಹಕ್ಕುಪತ್ರ) ಖಾತೆ ಮಾಡಿಕೊಡುತ್ತಾರೋ ಏನೋ ನೋಡಬೇಕು’ ಎಂದು ಕುಲಸಚಿವ ಪ್ರೊ.ಶಿವಚಿತ್ತಪ್ಪ ಹೇಳಿದ್ದಾರೆ.

ತುಮಕೂರು ವಿಶ್ವವಿದ್ಯಾಲಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ‘ನನ್ನ ಸಾಹಿತ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಮಾನವ ಹಕ್ಕುಗಳ ಜಿಜ್ಞಾಸೆ’ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ನಾರಿ ಮುನಿದರೆ ಹೆಮ್ಮಾರಿ ಎಂಬ ಮಾತಿದೆ. ಅತ್ತಿ ಹಣ್ಣಿನ ಹೂವನ್ನಾದರೂ ನೋಡಬಹುದು. ಬಿಳಿ ಬಣ್ಣದ ಕಾಗೆಯನ್ನಾದರೂ ಕಾಣಬಹುದು. ನೀರಿನಲ್ಲಿ ಮೀನ ಹೆಜ್ಜೆಯನ್ನಾದರೂ ಗುರುತಿಸಬಹುದು. ಆದರೆ ಹೆಣ್ಣಿನ ಮನಸ್ಸು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ’ ಎಂದರು.

ಕೊರಟಗೆರೆ ತಹಶೀಲ್ದಾರ್ ನಾಹಿದಾ ಜಮ್ ಜಮ್ ಅವರನ್ನು ಸರ್ಕಾರ ಇತ್ತೀಚೆಗೆ ತುಮಕೂರು ವಿ.ವಿ ಕುಲಸಚಿವರನ್ನಾಗಿ (ಆಡಳಿತ) ವರ್ಗಾವಣೆ ಮಾಡಿದೆ. ವಿ.ವಿ ಇತಿಹಾಸದಲ್ಲಿ ಮೊದಲ ಬಾರಿಗೆ ಮಹಿಳಾ ಅಧಿಕಾರಿಯೊಬ್ಬರನ್ನು ಕುಲಸಚಿವರನ್ನಾಗಿ ನೇಮಕ ಮಾಡಲಾಗಿದೆ. ಅವರು ಇನ್ನಷ್ಟೇ ಅಧಿಕಾರ ವಹಿಸಿಕೊಳ್ಳಬೇಕಿದೆ. ಸದ್ಯ ಈ ಹುದ್ದೆಯಲ್ಲಿ ಪ್ರೊ.ಶಿವಚಿತ್ತಪ್ಪ ಕಾರ್ಯ ನಿರ್ವಹಿಸುತ್ತಿದ್ದಾರೆ.

‘ಅಂಗನವಾಡಿ: ಎಲ್‌ಕೆಜಿ, ಯುಕೆಜಿ ಪ್ರಾರಂಭಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗನವಾಡಿಗಳಲ್ಲಿ ಎಲ್‌ಕೆಜಿ, ಯುಕೆಜಿ ಪ್ರಾರಂಭಿಸಬೇಕು ಮತ್ತು ಕಾರ್ಯಕರ್ತೆಯರಿಗೆ ಮಾಸಿಕ ವೇತನ ನೀಡಬೇಕು ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ಒತ್ತಾಯಿಸಿದೆ.

ಈ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ಡಿ. 22ರಂದು ಬೆಳಗಾವಿ ಚಲೋ ಚಳವಳಿ ಹಮ್ಮಿಕೊಂಡಿದ್ದು, ಸುವರ್ಣಸೌಧ ಎದುರು ಪ್ರತಿಭಟಿಸಲಾಗುವುದು ಎಂದು ತಿಳಿಸಿದೆ.

‘ಈಗಿರುವ ವ್ಯವಸ್ಥೆಯನ್ನು ಬಲಪಡಿಸಲು ಎಲ್‌ಕೆಜಿ–ಯುಕೆಜಿ ತರಗತಿಗಳನ್ನು ಅಂಗನವಾಡಿ ಕೇಂದ್ರಗಳಲ್ಲೇ ಪ್ರಾರಂಭಿಸಬೇಕು ಮತ್ತು ಮಕ್ಕಳ ಕಲಿಕೆಗೆ ಪೂರಕವಾಗಿ ಅಂಗನವಾಡಿ ಕಾರ್ಯಕರ್ತೆಯರಿಗೆ ಸೂಕ್ತ ತರಬೇತಿ ಮತ್ತು ಪಠ್ಯಪುಸ್ತಕಗಳನ್ನು ಒದಗಿಸಬೇಕು. ಮಕ್ಕಳಿಗೆ ಸಮವಸ್ತ್ರ ಹಾಗೂ ವರ್ಗಾವಣೆ ಪತ್ರ ನೀಡುವ ಜವಾಬ್ದಾರಿಯನ್ನು ಅಂಗನವಾಡಿ ಕೇಂದ್ರಗಳಿಗೆ ವಹಿಸಬೇಕು’ ಎಂದು ಫೆಡರೇಷನ್ ಅಧ್ಯಕ್ಷ ಬಿ. ಅಮ್ಜದ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

‘ಅಂಗನವಾಡಿಗಳಲ್ಲಿ ಎನ್‌ಇಪಿ ಜಾರಿಗೊಳಿಸಬಾರದು. ಈ ವ್ಯವಸ್ಥೆ ಜಾರಿಯಾದರೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ (ಐಸಿಡಿಎಸ್) ಮೂಲ ಆಶಯಗಳಿಗೆ ಧಕ್ಕೆಯಾಗಲಿದೆ’ ಎಂದು ಅವರು ಆತಂಕ ವ್ಯಕ್ತಪಡಿಸಿದರು.

‘6 ವರ್ಷದೊಳಗಿನ ಮಕ್ಕಳು ಮತ್ತು ಗರ್ಭಿಣಿ–ಬಾಣಂತಿಯರ ಪೌಷ್ಟಿಕ ಆಹಾರ, ಆರೋಗ್ಯದ ಬಗ್ಗೆ ಕಾಳಜಿವಹಿಸಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳನ್ನು ಎನ್‌ಇಪಿ ಅಡಿಯಲ್ಲಿ ಶಾಲಾ ಪ್ರಾಂಗಣ ವ್ಯಾಪ್ತಿಗೆ ತಂದರೆ ಐಸಿಡಿಎಸ್ ಯೋಜನೆ ಅವಸಾನವಾಗಲಿದೆ. ಆಹಾರ ಭದ್ರತಾ ಕಾಯ್ದೆಯ ಸವಲತ್ತುಗಳಿಂದ ಮಕ್ಕಳು ಮಹಿಳೆಯರು ವಂಚಿತರಾಗಲಿದ್ದಾರೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಕಾರ್ಯಕರ್ತೆಯರಿಗೆ ಮಾಸಿಕ ಕನಿಷ್ಠ ₹31,500 ವೇತನ ಜಾರಿಗೊಳಿಸಬೇಕು. ಗ್ರ್ಯಾಚ್ಯುಟಿ ಸೌಲಭ್ಯ ನೀಡಬೇಕು. ಕಳಪೆ ಗುಣಮಟ್ಟದ ಮೊಬೈಲ್ ವಾಪಸ್ ಪಡೆದು ಮಿನಿ ಟ್ಯಾಬ್ ನೀಡಬೇಕು’ ಎಂದು ಪ್ರಧಾನ ಕಾರ್ಯದರ್ಶಿ ಜಯಮ್ಮ ಒತ್ತಾಯಿಸಿದರು.

‘ಕಾಯ್ದೆ ಪಾಲಿಸದೇ ವಜಾ ಮಾಡುವಂತಿಲ್ಲ’

ಕಂಪನಿಗಳಿಗೆ ಕೇಂದ್ರ ಕಾರ್ಮಿಕ ಸಚಿವ ಭೂಪೇಂದರ್ ಯಾದವ್ ಎಚ್ಚರಿಕೆ

ನವದೆಹಲಿ (ಪಿಟಿಐ): ‘ಕೈಗಾರಿಕಾ ವಿವಾದ ಕಾಯ್ದೆಯನ್ನು ಪಾಲಿಸದೇ ಕೆಲಸದಿಂದ ನೌಕರರನ್ನು ವಜಾಗೊಳಿಸಿದ್ದಲ್ಲಿ ಅದು ಕಾನೂನುಬಾಹಿರ’ ಎಂದು ಕೇಂದ್ರ ಕಾರ್ಮಿಕ ಸಚಿವ ಭೂಪೇಂದರ್ ಯಾದವ್ ಹೇಳಿದರು.

ಐ.ಟಿ ವಲಯ ಸೇರಿದಂತೆ ಹಲವು ಸಂಸ್ಥೆಗಳು ಸಿಬ್ಬಂದಿಯನ್ನು ಸಾಮೂಹಿಕವಾಗಿ ವಜಾಗೊಳಿಸುತ್ತಿವೆ ಎಂಬ ವರದಿಗಳ ಹಿಂದೆಯೇ ಕೇಂದ್ರ ಸಚಿವರು ಈ ಮಾತು ಹೇಳಿದ್ದಾರೆ.

ವಿವಿಧ ಬಹುರಾಷ್ಟ್ರೀಯ ಮತ್ತು ಭಾರತೀಯ ಕಂಪನಿಗಳು ಸಾಮೂಹಿಕವಾಗಿ ವಜಾ ಮಾಡುತ್ತಿವೆ ಎಂಬುದನ್ನು ಸರ್ಕಾರ ಗಮನಿಸಿದೆಯೇ ಎಂಬ ಪ್ರಶ್ನೆಗೆ ಸಚಿವರು ರಾಜ್ಯಸಭೆಯಲ್ಲಿ ಉತ್ತರಿಸಿದರು.

ಉದ್ಯಮಗಳಲ್ಲಿ ವಜಾ ಮತ್ತು ಹಿಂಬಡ್ತಿಗೆ ಸಂಬಂಧಿಸಿದ ವಿಷಯಗಳು 1947ರ ಕೈಗಾರಿಕಾ ವಿವಾದ ಕಾಯ್ದೆ ವ್ಯಾಪ್ತಿಗೆ ಬರಲಿವೆ ಎಂದರು.

ಕಾಯ್ದೆಯ ಪ್ರಕಾರ, 100 ಅಥವಾ ಅದಕ್ಕೂ ಹೆಚ್ಚು ಸಂಖ್ಯೆಯ ಸಿಬ್ಬಂದಿಯನ್ನು ಹೊಂದಿರುವ ಸಂಸ್ಥೆಗಳು, ಬೀಗಮುದ್ರೆ, ಹಿಂಬಡ್ತಿ ಅಥವಾ ವಜಾಗೊಳಿಸುವ ತೀರ್ಮಾನದ ಮೊದಲು ಸಂಬಂಧಿತ ಸಕ್ಷಮ ಪ್ರಾಧಿಕಾರಗಳ ಪೂರ್ವಾನುಮತಿ ಪಡೆಯುವುದು ಅಗತ್ಯ ಎಂದರು.

ಹಿಂಬಡ್ತಿ ಅಥವಾ ವಜಾ ಪ್ರಕ್ರಿಯೆಯಲ್ಲಿ ಕಾನೂನು ಪಾಲನೆ ಆಗದಿದ್ದಲ್ಲಿ ಅದು ನಿಯಮ ಬಾಹಿರವಾಗಲಿದೆ. ಇಂತಹ ಸಂದರ್ಭದಲ್ಲಿ ಕಾರ್ಮಿಕರು ಪರಿಹಾರ ಪಡೆಯಲು, ಮರುನೇಮಕಾತಿಗೆ ಅರ್ಹರಾಗಿದ್ದಾರೆ ಎಂದು ಹೇಳಿದರು.

ಪಿಎಫ್‌ಐ ಪ್ರಕರಣ: ಮೂರು ಕಡೆ ಎನ್‌ಐಎ ಶೋಧ

ನವದೆಹಲಿ (ಪಿಟಿಐ): ದೇಶದಲ್ಲಿ ಭಯೋತ್ಪಾದಕ ಕೃತ್ಯಗಳನ್ನು ನಡೆಸಲು ಪಿಎಫ್‌ಐ ನಡೆಸಿದ ಪಿತೂರಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಕೇರಳ ಮತ್ತು ಕರ್ನಾಟಕದ ಮೂರು ಸ್ಥಳಗಳಲ್ಲಿ ಗುರುವಾರ ಶೋಧ ನಡೆಸಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಕೇರಳದ ಕೊಯಿಕ್ಕೋಡ್ ಮತ್ತು ಕರ್ನಾಟಕದ ಕಲಬುರಗಿ ಜಿಲ್ಲೆಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಗಿದ್ದು, ಡಿಜಿಟಲ್ ಸಾಧನಗಳು ಹಾಗೂ ವಿವಿಧ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

ನಿಷೇಧಿತ ಪಾಪ್ಯೂಲರ್ ಫ್ರಂಟ್ ಆಫ್ ಇಂಡಿಯಾ ವಿರುದ್ಧ ಎನ್‌ಐಎ ಏಪ್ರಿಲ್ 13ರಂದು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ಶೋಧ ನಡೆಸಲಾಗಿದೆ ಎಂದು ಅವರು ಹೇಳಿದ್ದಾರೆ.

ಕೇರಳ, ತಮಿಳುನಾಡು, ಕರ್ನಾಟಕ, ಉತ್ತರ ಪ್ರದೇಶ, ದೆಹಲಿ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ಭಯೋತ್ಪಾದಕ ಕೃತ್ಯಗಳನ್ನು ಎಸಗಲು ಹಾಗೂ ಭಾರತ ಮತ್ತು ವಿದೇಶಗಳಲ್ಲಿ ಹಣವನ್ನು ಸಂಗ್ರಹಿಸಲು ಪಿಎಫ್‌ಐನ ಪದಾಧಿಕಾರಿಗಳು, ಸದಸ್ಯರು ಮತ್ತು ಕಾರ್ಯಕರ್ತರು ಕ್ರಿಮಿನಲ್ ಸಂಚು ರೂಪಿಸಿದ್ದರು ಎಂದು ಅವರು ತಿಳಿಸಿದ್ದಾರೆ.

ದೇಶದ ವಿವಿಧೆಡೆ ಭಯೋತ್ಪಾದಕ ಕೃತ್ಯಗಳನ್ನು ನಡೆಸಲು ಆರೋಪಿಗಳು ತಮ್ಮ ಕಾರ್ಯಕರ್ತರಿಗೆ ತರಬೇತಿ ಶಿಬಿರಗಳನ್ನು ನಡೆಸುತ್ತಿದ್ದರು ಎಂದೂ ವಕ್ತಾರರು ಹೇಳಿದ್ದಾರೆ.

ವೀರಭದ್ರಪ್ಪ, ಜಾಲಿ, ಬಿ.ಎಸ್‌.ರಾವ್‌ಗೆ ಗೌರವ ಡಾಕ್ಟರೇಟ್ ಪ್ರದಾನ ಇಂದು

ಬಳ್ಳಾರಿ: ಪ್ರಗತಿಪರ ಕೃಷಿಕ ಎಸ್‌.ಸಿ ವೀರಭದ್ರಪ್ಪ, ಬೆಳಗಾವಿಯ ಕೆಎಲ್‌ಇ ಸಂಸ್ಥೆಯ ಕ್ಯಾನ್ಸರ್ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಮಲ್ಲಿಕಾರ್ಜುನ ವಿ. ಜಾಲಿ, ಬಳ್ಳಾರಿ ಶಿಕ್ಷಕ ದಿವಂಗತ ಬಹದ್ದೂರ್ ಎಸ್‌. ಶೇಷಗಿರಿ ರಾವ್ ಅವರಿಗೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಶುಕ್ರವಾರ ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದೆ.

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಗೌರವ ಪದವಿ ಪ್ರದಾನ ಮಾಡುವರು. ಶೇಷಗಿರಿರಾವ್ ಅವರಿಗೆ ಮರಣೋತ್ತರವಾಗಿ ಗೌರವ ಪದವಿ ನೀಡಲಾಗಿದೆ ಎಂದು ಕುಲಪತಿ ಪ್ರೊ. ಸಿದ್ದು ಪಿ. ಅಲಗೂರ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಗೌರವ ಡಾಕ್ಟರೇಟ್ ಪಡೆಯಲಿರುವ ಮೂವರೂ ಸೇರಿದಂತೆ ಒಟ್ಟು ಆರು ಗಣ್ಯರ ಹೆಸರನ್ನು ರಾಜಭವನಕ್ಕೆ ಕಳಿಸಲಾಗಿತ್ತು. ರಾಜ್ಯಪಾಲರು ನೇಮಿಸಿದ್ದ ಶೋಧನಾ ಸಮಿತಿ ಮೂವರ ಹೆಸರು ಅಂತಿಮಗೊಳಿಸಿದೆ ಎಂದು ಕುಲಪತಿ ಸ್ಪಷ್ಟಪಡಿಸಿದರು.

ಸಚಿವ ಸುಧಾಕರ್‌ಗೆ ಜಾಮೀನು

ಚಿಕ್ಕಬಳ್ಳಾಪುರ: ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆರ್‌. ಆಂಜನೇಯ ರೆಡ್ಡಿ ದಾಖಲಿಸಿರುವ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅವರು ಮಂಗಳವಾರ (ಡಿ.6) ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದಿದ್ದಾರೆ.

ಸಚಿವ ಸುಧಾಕರ್ ವಿರುದ್ಧ ಮಾನನಷ್ಟ ಮೊಕದ್ದಮೆ ಶುಕ್ರವಾರ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆಗೆ ಬರಲಿದೆ.

ಡಾ.ಕೆ.ಸುಧಾಕರ್ ಕಾಂಗ್ರೆಸ್ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾಗಿದ್ದರು. ಅವರ ನೇಮಕ ಪ್ರಶ್ನಿಸಿ ಆಂಜನೇಯರೆಡ್ಡಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಆಗ ಸುಧಾಕರ್, ‘ರೈತರಿಗೆ ಕಳ್ಳಬಟ್ಟಿ ಕುಡಿಸಿ ಜೈಲು ಸೇರಿದ ವ್ಯಕ್ತಿ ನನ್ನ ವಿರುದ್ಧ ಹೋರಾಟ ಮಾಡುತ್ತಿದ್ದಾರೆ’ ಎಂದು ಆರೋಪಿಸಿದ್ದರು. ಅವರ ಈ ಹೇಳಿಕೆಯ ವಿರುದ್ಧ ಆಂಜನೇಯ ರೆಡ್ಡಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ನ್ಯಾಯಾಲಯವು ಸುಧಾಕರ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಸಮನ್ಸ್ ಜಾರಿ ಮಾಡಿತ್ತು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಸಮರ್ಥ ಗುರುವಿನ ಹುಡುಕಾಟ

ತರಣಿದರ್ಶನಕಿಂತ ಕಿರಣಾನುಭವ ಸುಲಭ |
ಪರಮಶಾಸ್ತ್ರಕ್ಕಿಂತ ಸರಿಯುದಾಹರಣೆ ||
ಪರಮತತ್ತ್ವದ ಕಂಡ ಗುರುವನರಸುವುದೆಲ್ಲಿ ? |
ದೊರೆತಂದು ನೀಂ ಧನ್ಯ – ಮಂಕುತಿಮ್ಮ || 774

||**ಪದ-ಅರ್ಥ:** ತರಣಿದರ್ಶನಕಿಂತ = ತರಣಿ(ಸೂರ್ಯ) + ದರ್ಶನಕಿಂತ, ಕಿರಣಾನುಭವ = ಕಿರಣ + ಅನುಭವ, ಸರಿಯುದಾಹರಣೆ- ಸರಿ + ಉದಾಹರಣೆ, ಗುರುವನರಸುವುದೆಲ್ಲಿ = ಗುರುವನ್ನು + ಅರಸುವುದು (ಹುಡುಕುವುದು) + ಎಲ್ಲಿ, ದೊರೆತಂದು = ದೊರೆತ + ಅಂದು.

ವಾಚ್ಯಾರ್ಥ: ಸೂರ್ಯನ ನೇರ ದರ್ಶನಕಿಂತ ಅವನ ಕಿರಣಗಳ ಅನುಭವ ಸುಲಭ. ಶ್ರೇಷ್ಠ ಶಾಸ್ತ್ರ ಪಾಠಗಳಿಗಿಂತ ಒಂದು ಸರಿಯಾದ ಮಾದರಿ ದೊಡ್ಡದು. ಪರಮತತ್ತ್ವವನ್ನು ಕಂಡಂತಹ ಗುರುವನ್ನು ಹುಡುಕುವುದೆಲ್ಲಿ? ಅಂಥ ಅವನು ದೊರೆತರೆ ನೀನು ಧನ್ಯ.

ವಿವರಣೆ: ಮನುಷ್ಯನ ಬದುಕಿನಲ್ಲಿ ಒಬ್ಬ ಗುರುವಿನ ಸ್ಥಾನ ತುಂಬ ದೊಡ್ಡದಾದದ್ದು. ಜೀವನಕ್ಕೆ ಸರಿಯಾದ ಮಾರ್ಗದರ್ಶನ ದೊರೆಯುವುದೇ ಸಮರ್ಥ ಗುರುವಿನಿಂದ. ಅದಕ್ಕೇ ತೈತ್ತರೀಯ ಉಪನಿಷತ್ತು ಹೇಳಿತು, ಆಚಾರ್ಯ: ಪೂರ್ವರೂಪಂ | ಅಂತೇವಾಸಿ ಉತ್ತರ ರೂಪಂ || ಆಚಾರ್ಯ ಪೂರ್ವರೂಪ, ಶಿಷ್ಯ ಉತ್ತರರೂಪ. ಅವರ ನಡುವಿನ ಚಿಂತನೆಯೇ ಅನುಸಂಧಾನ. ಗುರುನೀಡುವ ಜ್ಞಾನವೇ ಆತ್ಮವಿದ್ಯೆ. ಕಬೀರರೂ ಹೇಳಿದರು, “ಮನೆಯ ಮುಂದೆ ಭಗವಂತ ಮತ್ತು ಗುರು ಏಕಕಾಲದಲ್ಲಿ ಬಂದು ನಿಂತರೆ ನಾನುಗುರುವನ್ನೇ ಮೊದಲಿಗೆ ವಂದಿಸಿ ಒಳಗೆ ಕರೆಯುತ್ತೇನೆ, ಯಾಕೆಂದರೆ ಭಗವಂತನನ್ನು ಪಡೆಯುವ ದಾರಿಯನ್ನು ತೋರುವವನೇ ಗುರು”. ಬಸವಣ್ಣನವರೂ, “ಶಿವಪಥವನರಿವಡೆ ಗುರುಪಥವೇ ಮೊದಲು” ಎಂದರು. ಅಲೆಕ್ಸಾಂಡರ್ ಚಿಕ್ಕ ವಯಸ್ಸಿನಲ್ಲೇ ಅರ್ಧ ಪ್ರಪಂಚ ಗೆದ್ದವನು. ಅವನಿಗೆ ಗುರುವಾಗಿದ್ದವನು ಅರಿಸ್ಟಾಟಲ್. ಅವನಲ್ಲಿ ಸಂಪೂರ್ಣ ನಂಬಿಕೆ ಮತ್ತು ಗೌರವ. ಅವನನ್ನು ಒಬ್ಬರು ಕೇಳಿದರು, “ನಿಮ್ಮ ತಂದೆ ನಿಮಗೆ ಅಧಿಕಾರವನ್ನು, ಸಾಮ್ರಾಜ್ಯವನ್ನು ಕೊಟ್ಟರು. ಆದರೂ ನಿಮಗೆ ಗುರು ಅರಿಸ್ಟಾಟಲ್‌ನ ಬಗ್ಗೆ ಅಷ್ಟೊಂದು ಪೂಜ್ಯತೆ ಏಕೆ?” ಅಲೆಕ್ಸಾಂಡರ್ ಹೇಳಿದ, “ನನ್ನ ತಂದೆ ನನಗೆ ದೇಹವನ್ನು ಕೊಟ್ಟರು. ಆದರೆ ಈ ದೇಹ ಅಶಾಶ್ವತ. ಆದರೆ ಗುರು ಶಾಶ್ವತವಾದ ಜ್ಞಾನವನ್ನು ಕೊಟ್ಟ. ತಂದೆ ನನ್ನನ್ನು ಆಕಾಶದಿಂದ ಭೂಮಿಗೆ ತಂದರು. ಗುರು ನನ್ನನ್ನು ನೆಲದಿಂದ ಆಕಾಶಕ್ಕೆ ಏರಿಸಿದರು. ಅದಕ್ಕೇ ಅವರ ಬಗ್ಗೆ ಪೂಜ್ಯತೆ”. ಹೌದು. ಒಬ್ಬ ಸಮರ್ಥ ಗುರು ಏನೆಲ್ಲ ಮಾಡಬಲ್ಲ. ಕಗ್ಗದ ಸಾಲುಗಳು ಈ ವಿಷಯವನ್ನು ಒತ್ತುಕೊಟ್ಟು ಹೇಳುತ್ತವೆ. ಸೂರ್ಯನನ್ನು ನಾವು ಬರಿಗಣ್ಣಿನಿಂದ ನೇರವಾಗಿ ನೋಡಲಾರೆವು. ಆದರೆ ಸೂರ್ಯನ ಕಿರಣಗಳನ್ನು ಅನುಭವಿಸುವುದು ಸುಲಭ. ದೊಡ್ಡ ದೊಡ್ಡ ಶಾಸ್ತ್ರಗಳ ಓದುವಿಕೆಗಿಂತ ಬದುಕನ್ನುಬದಲಿಸುವ ಮಾದರಿ ಮೇಲು. ಆದರೆ ಹಾಗೆ ಪರಮಸತ್ಯವನ್ನು ಕಂಡು, ಬದುಕಿಗೆ ಮಾದರಿಯಾಗಬಲ್ಲ ಗುರು ನಮಗೆ ದೊರಕುವುದೆಲ್ಲಿ? ಅವನಿಗಾಗಿ ಜೀವನಪರ್ಯಂತ ಹುಡುಕಾಟ ನಡೆಯಲೇ ಬೇಕು. ಅಂಥವನು ನಮಗೆ ಒಂದು ವೇಳೆ ದೊರೆತರೆ ಬದುಕಿಗೆ ಧನ್ಯತೆ ಬರುತ್ತದೆ. ಅಂಥ ಗುರುವನ್ನುಪಡೆದ ಶಿಷ್ಯ ನಿಜವಾಗಿಯೂ ಧನ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಡಿಸೆಂಬರ್ 9, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಕೃಷ್ಣ ಪ್ರತಿಪದ್ ಗಂ. 11-35 ನಕ್ಷತ್ರ: ಮೃಗಶಿರ ಗಂ. 14-59 ಯೋಗ: ಶುಭ ಗಂ. 27-42, ಕರಣ: ಕೌಲವ ಗಂ. 11-35, ವೃಶ್ಚಿಕ ಮಾಸದ 22 ನೇ ದಿನ.

ರಾಹುಕಾಲ : ಬೆಳಿಗ್ಗೆ 10-30 -12-00

ಸೂರ್ಯೋದಯ : 06-46 ಸೂರ್ಯಾಸ್ತ : 06-00

ಮುಸ್ಲಿಂ ದಿನಾಂಕ : 14 ಜುಮಾದುಲ್ಲಾವಲ್

ಅದೃಷ್ಟ ಸಂಖ್ಯೆ : 4

ಮೇಷ: ಶುಭ ಮಂಗಲ ಕಾರ್ಯಗಳಿಗೆ ಅಡ್ಡಿ-ಆತಂಕ ಇರುವುದಿಲ್ಲ. ಜಟಿಲ ಸಮಸ್ಯೆಗಳು ಬಗೆ ಹರಿದು ಮನೆಯವರಿಗೆ ನೆಮ್ಮದಿ ಉಂಟಾಗುವುದು. ಮನೋಭಿಲಾಷೆಗೆ ಕುಟುಂಬ ವರ್ಗದವರು ಅಭಿವೃದ್ಧಿಯ ದಾರಿ ಕಲ್ಪಿಸುವರು.

ವೃಷಭ: ದಾಂಪತ್ಯದಲ್ಲಿ ಕಲಹ, ಕುಟುಂಬ ವರ್ಗದವರಲ್ಲಿ ಭಿನ್ನಾಭಿಪ್ರಾಯದಂತಹ ಸನ್ನಿವೇಶಗಳಿಂದ ಮನಸ್ಸಿಗೆ ನೋವಾಗಲಿದೆ. ವಿದ್ಯಾಭ್ಯಾಸದಲ್ಲಿ ಉದಾಸೀನತೆ ತೋರಿದರೆ ಹಿನ್ನಡೆ ಎದುರಿಸಬೇಕಾಗುವುದು.

ಮಿಥುನ: ಕರ್ಮನಿಷ್ಠೆ ಮತ್ತು ಪ್ರಾಮಾಣಿಕತೆಗೆ ತಕ್ಕ ಫಲ ಪಡೆಯುತ್ತೀರಿ. ಸರಳ ವ್ಯಕ್ತಿತ್ವ, ಸರಳ ಸ್ವಭಾವದಿಂದ ಹೆಚ್ಚಿನ ಮೆಚ್ಚುಗೆ ಗಳಿಸುವಿರಿ. ವರ್ಗಾವಣೆಯಿಂದಾಗಿ ಸಂಸಾರದಿಂದ ದೂರ ವಾಸಿಸುವ ಸಂದರ್ಭ ಬರಲಿದೆ.

ಕರ್ಕಾಟಕ: ನಿಮ್ಮ ನಡವಳಿಕೆ ಅಥವಾ ಮಾತಿನಿಂದ ಬೇರೆಯವರ ಮನಸ್ಸಿಗೆ ನೋವು ಉಂಟಾಗದಂತೆ ನೋಡಿಕೊಳ್ಳಿ. ಮಂಜುನಾಥನ ಸೇವೆ ಮಾಡುವುದರಿಂದ ಕೋರ್ಟು–ವ್ಯವಹಾರಗಳಲ್ಲಿ ಸುಲಭವಾಗಿ ಜಯ ಸಿಗಲಿದೆ.

ಸಿಂಹ: ಹೆಚ್ಚಿನ ಬುದ್ಧಿ ಶಕ್ತಿಯ ಬಲದಿಂದ ಮತ್ತು ಸ್ವಂತ ಅನುಭವದ ಜೊತೆಗೆ ವಿವಿಧ ಕಾರ್ಯಗಳು ಫಲಿತಗೊಂಡು, ಅನಿರೀಕ್ಷಿತವೆಂಬಂತೆ ಉತ್ತಮ ಅಭಿವೃದ್ಧಿಯನ್ನು ಅನುಭವಿಸುವ ಯೋಗ ನಿಮ್ಮದಾಗಲಿದೆ.

ಕನ್ಯಾ: ಮಾನಸಿಕ ನೆಮ್ಮದಿಗಾಗಿ ದೇವತಾ ಕಾರ್ಯಗಳನ್ನು ಅಥವಾ ಪುಣ್ಯಕ್ಷೇತ್ರಗಳ ದರ್ಶನವನ್ನು ಮಾಡಿ. ಸರ್ಕಾರಿ ಗುತ್ತಿಗೆದಾರರಿಗೆ ಬಹಳ ದಿನದಿಂದ ಬಾಕಿ ಇದ್ದ ಕಾಮಗಾರಿ ಹಣ ಮಂಜೂರಾಗಲಿದೆ. ಸಗಟು ಧಾನ್ಯ ವ್ಯಾಪಾರಿಗಳು ಲಾಭ.

ತುಲಾ: ಪಶುಸಂಗೋಪನೆ ಮಾಡುವವರಿಗೆ ಮನೆಯಲ್ಲಿ ಶಾಂತ ವಾತಾವರಣವಿದ್ದು ಮನಸ್ಸಿಗೆ ತುಸು ನೆಮ್ಮದಿ ಬರುವುದು. ಮೂಳೆಗೆ ಸಂಬಂಧಿಸಿದ ಸಮಸ್ಯೆ ನಿರ್ಲಕ್ಷಿಸಬೇಡಿ. ಶುಭಫಲಗಳ ಪ್ರಾಪ್ತಿಗೆ ನವಗ್ರಹರನ್ನು ಆರಾಧಿಸಿ.

ವೃಶ್ಚಿಕ: ಯಶಸ್ಸಿಗೆ ಇನ್ನೊಂದಿಷ್ಟು ಪೂರಕವಾದ ವಾತಾವರಣ ಮೂಡಿಬರಲಿದೆ. ವಾಹನ ಸಾಂಚಾರದಲ್ಲಿ ಮಿತ ವೇಗವು ಈ ದಿನ ಮುಖ್ಯವಾಗಿರಲಿ. ನಾಗದೇವರನ್ನು ಆರಾಧಿಸುವುದರಿಂದ ಆರೋಗ್ಯ ಪ್ರಾಪ್ತಿ.

ಧನು: ಮಾತಿನ ಕುಶಲತೆಯಿಂದ ಇತರರನ್ನು ಗೆಲ್ಲುವ ಅಥವಾ ಎದುರಾಳಿಯನ್ನು ಕಟ್ಟಿಹಾಕುವ ಸಾಮರ್ಥ್ಯ ನಿಮ್ಮಲ್ಲಿದೆ. ಈ ಅಸ್ತ್ರ ಉಪಯೋಗಿಸಿಕೊಳ್ಳಿರಿ. ರಾಜಕೀಯ ವರ್ಗದವರಿಗೆ ದೇವತಾನುಗ್ರಹದಿಂದ ಅದೃಷ್ಟ ಖುಲಾಯಿಸಲಿದೆ.

ಮಕರ: ತ್ಯಾಗದ ಮನೋಭಾವ ಬೆಳೆಸಿಕೊಳ್ಳುವಿರಿ. ಲೋಹ, ಪ್ಲಾಸ್ಟಿಕ್ ವಸ್ತುಗಳ ವ್ಯಾಪಾರ ನಡೆಸುವವರಿಗೆ ಅಧಿಕ ಮಾರಾಟ ಮತ್ತು ವ್ಯವಹಾರದಲ್ಲಿ ಲಾಭ ಇರಲಿದೆ. ನೆಂಟಸ್ತಿಕೆಯಲ್ಲಿ ವಿವಾಹಕ್ಕೆ ಸಂಬಂಧಗಳು ಕೂಡಿ ಬರಲಿದೆ.

ಕುಂಭ: ಪ್ರಯತ್ನಿಸಿದ ಕಾರ್ಯಗಳು ಆಪ್ತರ ಸಕಾಲಿಕ ನೆರವಿನಿಂದ ಕೈಗೂಡುವುದು. ನೂತನ ವಸ್ತುಗಳ ಖರೀದಿಗೆ ಈ ದಿನ ಸಮಯವಲ್ಲ. ಮೂಕಾಂಬಿಕೆಯನ್ನು ಧ್ಯಾನಿಸಿ ಅಭೀಷ್ಟ ನೆರವೇರುವುದು.

ಮೀನ: ಎಲ್ಲಾ ವಿಷಯದಲ್ಲೂ ಪ್ರಗತಿ ಕಾಣುವಿರಿ. ಯಾವುದೇ ಕೆಲಸಗಳಿಗೂ ಅಳುಕುವ ಪ್ರಮೇಯ ಈ ದಿನ ನಿಮಗೆ ಇರುವುದಿಲ್ಲ. ಹಿರಿಯರ ಆಶೀರ್ವಾದ ಪಡೆಯುವಿರಿ. ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಮುಂದುವರಿಯಲಿದೆ.

ಪದಬಂಧ 5163

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಡುವೆ ಕಸವಿದ್ದರೂ ಅರಳುವಿಕೆ! (4)
3.ಉತ್ತ ನೆಲವನ್ನು ಮಟ್ಟ ಮಾಡುವಸಾಧನ (3)
5.ಗಣಪತಿ ಚಿಕ್ಕದಾಗಿ ಮೂಡಿದ್ದಾನೆ (3)
7.ಉರು ಹೊಡೆಯುತ್ತಿರುವವನ ಶ್ವಾಸ! (3)
8.ಪ್ರೇಮಿಗಳ ಅಗಲಿಕೆಯ ಬೇಗೆ (5)
11.ನೆಲವನ್ನು ಗೋಮಯದಿಂದ ಸಾರಿಸುವಿಕೆ (3)
12.ಕಡೆದ ಮೊಸರಿದು (3)
15.ಬೆಟ್ಟದ ಗವಿ (3)
16.ಮಧ್ಯವಯಸ್ಸಿದು (4)

ಮೇಲಿಂದ ಕೆಳಕ್ಕೆ

1.ಯೋಗವಿದ್ದರೂ ಅಗಲುವಿಕೆ! (3)
2.ನಲ್ಲಿಯ ಹತ್ತಿರ ಕಾಣಿಸಿದ ಏಡಿ (2)
3.ಕೇಶದ ಬುಡದಲ್ಲಿನ ಚರ್ಮದ ಹೊಟ್ಟು (3)
4.ಶರೀರದ ಹಿಂಭಾಗವನ್ನು ಹೊಡೆದು ಪ್ರೋತ್ಸಾಹಿಸು! (4)
6.ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
7.ಕನ್ನಡಿಗ ನೀಡಿರುವ ಎಕ್ಸಾಂಪಲ್! (5)
9. ಇದು ತುಂಬಾ ಶ್ರೇಷ್ಠ (3)
10.ಈತ ಹಾಲು ಮಾರುವವನು (4)
11.ಹತ್ತು ನೂರಿದು (3)
13.ಗೆಳತಿಯೊಡನಿರುವ ಸ್ನೇಹಿತ (3)
14.ಅರಿವು ಹೀಗೆ ಬಂದಿದೆ (2)



5162ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬದ್ಧಕಂಕಣ 3.ಸಂಧಾನ 6.ಖಾಲಿ 7.ಯಜಮಾನ 10.ಪದವೀದಾನ 13.ಮನೋಗತ 16.ಅರಿ 17.ಯದೃಚ್ಛೆ 18.ವಾಚನಾಲಯ

ಮೇಲಿಂದ ಕೆಳಕ್ಕೆ: 1.ಬರಖಾಸ್ತು 2.ಕಮಠ 4.ನಸುನಗು 5.ಗಾಯ 8.ಜವಾನ 9.ಪ್ರವೀಣ 10.ಪತಂಗ 11.ಕಮನೀಯ 12.ಪರಿಣಯ 14.ತಮ್ಮ 15.ಎಡಚ

ಸುಡೊಕು 5549

2		8		7			6	
			4		2			1
	3	1		5		2		
6		4		3			5	
5	7	2	6		9			8
				2			4	
3				1			9	
		5	8		3	6		7
1				6				3

5548ಸುಡೊಕು

9	5	3	8	6	4	7	1	2
7	4	6	1	3	2	9	5	8
8	1	2	7	5	9	6	3	4
2	8	7	6	1	5	4	9	3
3	6	4	2	9	7	1	8	5
5	9	1	4	8	3	2	7	6
6	7	5	3	4	1	8	2	9
4	2	9	5	7	8	3	6	1
1	3	8	9	2	6	5	4	7

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಷೇರುಪೇಟೆ ವಹಿವಾಟು 160



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,560
ಇಂದಿನ ಅಂತ್ಯ	18,609
▲	49
ದಿನದ ಗರಿಷ್ಠ	18,625

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹555
12 ಮೊಟ್ಟೆಗೆ ₹72
ಮೈಸೂರು
100 ಮೊಟ್ಟೆಗೆ ₹555

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1515 (1515)
ಸೋಯಾ (ರಿಫೈನ್ಡ್)	₹1230 (1240)
ಸೂರ್ಯಕಾಂತಿ (ರಿಫೈನ್ಡ್)	₹1380 (1400)
ಪಾಮೋಲಿನ್	₹930 (940)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿ)

ಆರ್‌ಎಸ್‌ಎಸ್-4	₹140
ಆರ್‌ಎಸ್‌ಎಸ್-5	₹132
ಗುಡ್ ಲಾಟ್	₹125

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1500-2200
ಮಧ್ಯಮ	₹1000-1500
ಸಣ್ಣ	₹500-1000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಪ್ರ.ಕೆ.)	₹355-739
ದ್ವಿತಳಿ (ಪ್ರ.ಕೆ.)	₹412-809

ನಾಲ್ಕು ದಿನಗಳ ನಕಾರಾತ್ಮಕ ಓಟಕ್ಕೆ ತಡೆ

ಗಳಿಕೆ ಹಾದಿಗೆ ಮರಳಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆಯ ನಾಲ್ಕು ದಿನಗಳ ನಕಾರಾತ್ಮಕ ಓಟಕ್ಕೆ ಗುರುವಾರ ತೆರೆ ಬಿದ್ದಿತು. ಬ್ಯಾಂಕಿಂಗ್ ವಲಯದ ಕೆಲವು ಷೇರುಗಳು ಮತ್ತು ವಾಹನ ವಲಯದ ಷೇರುಗಳ ಮೌಲ್ಯ ಹೆಚ್ಚಳದಿಂದ ಸೂಚ್ಯಂಕಗಳು ಏರಿಕೆ ಕಂಡವು.

ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ದಾಖಲೆಯ ಗೆಲುವು ಕಂಡಿರುವುದು ಷೇರುಪೇಟೆಯಲ್ಲಿ ಸಕಾರಾತ್ಮಕ ವಹಿವಾಟಿಗೆ ಉತ್ತೇಜನ ನೀಡಿತು.

ವಿದೇಶಿ ಹೂಡಿಕೆದಾರರು ಮಾರಾಟಕ್ಕೆ ಗಮನ ನೀಡಿದ್ದು ಮತ್ತು ಜಾಗತಿಕ ಷೇರುಪೇಟೆಗಳ ಮಿಶ್ರ ವಹಿವಾಟಿನಿಂದಾಗಿ ಸೂಚ್ಯಂಕವು ಹೆಚ್ಚಿನ ಏರಿಕೆ ಕಾಣಲು ಸಾಧ್ಯವಾಗಲಿಲ್ಲ ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 160 ಅಂಶ ಹೆಚ್ಚಾಗಿ 62,570 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 49 ಅಂಶ ಹೆಚ್ಚಾಯಿತು.

ದಾಖಲೆ ಮಟ್ಟವನ್ನು ತಲುಪಿದ್ದ ದೇಶಿ ಷೇರುಪೇಟೆಗಳು ಜಾಗತಿಕ ಮಾರುಕಟ್ಟೆಗಳ ಅಸ್ಥಿರ ವಹಿವಾಟಿನ ಪರಿಣಾಮಕ್ಕೆ ಒಳಗಾಗಿವೆ. ಜಾಗತಿಕ ಆರ್ಥಿಕ ಮಂದಗತಿಯ ಬೆಳವಣಿಗೆ ಮತ್ತು ಫೆಡರಲ್ ರಿಸರ್ವ್‌ನಿಂದ ಬಡ್ಡಿದರ ಹೆಚ್ಚಳದ ಆತಂಕವು ವಹಿವಾಟಿನ ಮೇಲೆ ಪರಿಣಾಮ ಉಂಟುಮಾಡುತ್ತಿವೆ. ಆರ್ಥಿಕ ಹಿಂಜರಿತದ ಭೀತಿಯು ಐ.ಟಿ. ಮತ್ತು ಔಷಧ ವಲಯದ ಷೇರುಗಳ ಗಳಿಕೆ ತಗ್ಗಿಸಿದೆ, ಸರ್ಕಾರಿ ವಲಯದ ಬ್ಯಾಂಕ್‌ಗಳ ಗಳಿಕೆಯು ಸೂಚ್ಯಂಕದ ಏರಿಕೆಗೆ ಬೆಂಬಲ ನೀಡಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಮೆರಿಕದ ಫೆಡರಲ್ ರಿಸರ್ವ್ ಸಭೆಯ ನಿರ್ಧಾರಗಳು ಮತ್ತು ಅಮೆರಿಕದ ಹಣದುಬ್ಬರದ ಅಂಕಿ–ಅಂಶ ಮುಂದಿನ ವಾರ ಹೊರಬೀಳಲಿವೆ. ಹೀಗಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಅಸ್ಥಿರತೆಯು ಮುಂದುವರಿಯುವ ನಿರೀಕ್ಷೆ ಇದೆ ಎಂದೂ ತಿಳಿಸಿದ್ದಾರೆ.

ವಿಮಾನ ನವೀಕರಿಸಲಿರುವ ಏರ್ ಇಂಡಿಯಾ

ಮುಂಬೈ (ಪಿಟಿಐ): ಅಗಲ ದೇಹದ ಒಟ್ಟು 40 ವಿಮಾನಗಳನ್ನು ನವೀಕರಿಸುವ ಉದ್ದೇಶ ಇದೆ ಎಂದು ಏರ್ ಇಂಡಿಯಾ ಹೇಳಿದೆ. ಈ ಉದ್ದೇಶಕ್ಕಾಗಿ ಕಂಪನಿಯು ಒಟ್ಟು ₹ 3,295 ಕೋಟಿ ವೆಚ್ಚ ಮಾಡಲಿದೆ.

ನವೀಕರಣದ ಭಾಗವಾಗಿ ವಿಮಾನದ ಒಳಾಂಗಣವನ್ನು ಸಂಪೂರ್ಣವಾಗಿ ಬದಲಾಯಿಸಲಾಗುತ್ತದೆ, ಹೊಸ ತಲೆಮಾರಿನ ಆಸನಗಳನ್ನು ಅಳವಡಿಸಲಾಗುತ್ತದೆ, ಎಲ್ಲ ವರ್ಗಗಳ ಆಸನಗಳಲ್ಲಿ ಅತ್ಯುತ್ತಮ ಮನರಂಜನಾ ಸೌಲಭ್ಯ ಕಲ್ಪಿಸಲಾಗುತ್ತದೆ ಎಂದು ಏರ್ ಇಂಡಿಯಾ ಪ್ರಕಟಣೆ ತಿಳಿಸಿದೆ.

ನವೀಕರಣದ ಕೆಲಸಗಳಿಗಾಗಿ ಲಂಡನ್ ಮೂಲದ ಜೆಪಿಎ ಡಿಸೈನ್ಸ್ ಮತ್ತು ಟ್ರೆಂಡ್‌ವರ್ಕ್ಸ್ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಕಂಪನಿ ಹೇಳಿದೆ.

ಎಲ್‌ಐಸಿ ಸಿಇಒ: ಖಾಸಗಿ ವಲಯದಿಂದ ನೇಮಕ?

ಆಧುನೀಕರಣಗೊಳಿಸುವ ಪ್ರಯತ್ನ: ಮೂಲಗಳ ಹೇಳಿಕೆ

ಬೆಂಗಳೂರು (ರಾಯಿಟರ್ಸ್): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಆಗಿ ಖಾಸಗಿ ವಲಯದ ವ್ಯಕ್ತಿಯೊಬ್ಬರನ್ನು ನೇಮಿಸಲು ಸರ್ಕಾರ ಉದ್ದೇಶಿಸಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಐಪಿಒ ಮೂಲಕ ಕಂಪನಿಯು ಷೇರುಪೇಟೆಯ ಪ್ರವೇಶವು ಕೆಲವರ ನಿರೀಕ್ಷೆಯನ್ನು ತಲುಪಲು ವಿಫಲವಾಗಿದೆ. ಆ ಬಳಿಕ ಎಲ್‌ಐಸಿಯನ್ನು ಆಧುನೀಕರಣಗೊಳಿಸುವ ಪ್ರಯತ್ನದ ಭಾಗವಾಗಿ ಖಾಸಗಿ ವಲಯದ ವ್ಯಕ್ತಿಯೊಬ್ಬರನ್ನು ಸಿಇಒ ಹುದ್ದೆಗೆ ನೇಮಿಸಲು ಸರ್ಕಾರ ಮುಂದಾಗಿದೆ ಎಂದು ಹೇಳಿವೆ. ಹೀಗಾದಲ್ಲಿ ಕಂಪನಿಯ 66 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಖಾಸಗಿ ವಲಯದಿಂದ ನೇಮಕ ಆದವರು ಕಂಪನಿಯನ್ನು ಮುನ್ನಡೆಸುವಂತಾಗಲಿದೆ.

ಎಲ್‌ಐಸಿ ಸಿಇಒ ಹುದ್ದೆಗೆ ಖಾಸಗಿ ವಲಯದ ಅಭ್ಯರ್ಥಿ ಸಹ ಅರ್ಜಿ ಸಲ್ಲಿಸುವಂತೆ ಮಾಡಲು ಅರ್ಹತಾ ಮಾನದಂಡಗಳಲ್ಲಿ ಬದಲಾವಣೆ ತರಲು ಸರ್ಕಾರ ಯೋಜಿಸಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಈ ಕುರಿತು ಹಣಕಾಸು ಸಚಿವಾಲಯವು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಸದ್ಯ ಕಂಪನಿಯ ಕಾರ್ಯನಿರ್ವಹಣೆಯ ಹೊಣೆಗಾರಿಕೆ ಅಧ್ಯಕ್ಷರ ಮೇಲಿದೆ. ಹಾಲಿ ಇರುವ ಅಧ್ಯಕ್ಷರ ಅಧಿಕಾರ ಅವಧಿಯು ಮಾರ್ಚ್‌ಗೆ ಮುಗಿಯಲಿದ್ದು, ಆ ಬಳಿಕ ಕಂಪನಿಯಲ್ಲಿ ಅಧ್ಯಕ್ಷರ ಹುದ್ದೆಯನ್ನು ಕೈಬಿಡಲಾಗುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ನಿರ್ಧಾರದಿಂದ ಹೆಚ್ಚಿನ ಅವಕಾಶಗಳು ಲಭ್ಯವಾಗಲಿದ್ದು, ಷೇರುದಾರರಿಗೆ ಉತ್ತಮ ಸಂದೇಶ ರವಾನೆ ಆಗಲಿದೆ ಎಂದು ಇನ್ನೊಬ್ಬರು ಅಧಿಕಾರಿ ಹೇಳಿದ್ದಾರೆ.

ಖಾಸಗಿ ವಲಯದ ವ್ಯಕ್ತಿಯು ಎಲ್‌ಐಸಿಯನ್ನು ಮುನ್ನಡೆಸುವುದರಿಂದ ಯಾವುದೇ ಅಪಾಯ ಇಲ್ಲ. ವಿವೇಚನೆಯಿಂದ ಕೂಡಿದ ನಡೆ ಇದಾಗಿದೆ ಎಂದು ಮಾಜಿ ಹಣಕಾಸು ಕಾರ್ಯದರ್ಶಿ ಸುಭಾಷ್ ಚಂದ್ರ ಗರ್ಗ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಎಲ್‌ಐಸಿಯ ಷೇರು ಕಳೆದ ವರ್ಷದ ಮೇ ತಿಂಗಳಿನಿಂದ ಷೇರುಪೇಟೆಯಲ್ಲಿ ವಹಿವಾಟು ಆರಂಭಿಸಿದ್ದು, ನೀಡಿಕೆ ಬೆಲೆಗಿಂತಲೂ ಶೇ 30ರಷ್ಟು ಕಡಿಮೆಗೆ ವಹಿವಾಟು ನಡೆಸುತ್ತಿದೆ. ಹೂಡಿಕೆದಾರರ ಸಂಪತ್ತು ₹1.99 ಲಕ್ಷ ಕೋಟಿಯಷ್ಟು ಕರಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

3rd Year Remembrance



K.T ANKA REDDY
Founder :
Sri Saraswathi Vidya Mandira school, Kaggadasapura, C.V Raman Nagar
Death on : 09.12.2019
"Time has gone, but memories of you is still in our hearts."
- Wife Narayanamma, Sons, Daughters, Son-in-laws and Grand Childrens.

ಚಿನ್ನದ ನಾಣ್ಯ ಖರೀದಿಗೆ ಎಟಿಎಂ

ಮುಂಬೈ (ರಾಯಿಟರ್ಸ್): ಒಂದು ಬಟನ್ ಕ್ಲಿಕ್ ಮಾಡಿದರೆ ಚಿನ್ನದ ನಾಣ್ಯ ನೀಡುವ ಎಟಿಎಂ ಯಂತ್ರವು ಹೈದರಾಬಾದ್‌ನಲ್ಲಿ ಕಾರ್ಯ ಆರಂಭಿಸಿದೆ. ಇದು ನೋಡಲು, ನಗದು ನೀಡುವ ಎಟಿಎಂ ಯಂತ್ರದಂತೆಯೇ ಕಾಣುತ್ತದೆ.

ಈ ಯಂತ್ರವು 0.5 ಗ್ರಾಂನಿಂದ ಗರಿಷ್ಠ 100 ಗ್ರಾಂ ಇರುವ ಚಿನ್ನದ ನಾಣ್ಯವನ್ನು ಗ್ರಾಹಕರಿಗೆ ನೀಡುತ್ತದೆ. ಗೋಲ್ಡ್‌ಸಿಕ್ಕ ಕಂಪನಿ ಈ ಯಂತ್ರವನ್ನು ಅಳವಡಿಸಿದೆ.

'ಚಿನ್ನದ ನಾಣ್ಯ ಬೇಕಿರುವವರು ಆಭರಣ ಮಳಿಗೆಗಳಿಗೆ ಹೋಗುವ ಬದಲು ಈ ಎಟಿಎಂ ಯಂತ್ರ ಇರುವಲ್ಲಿಗೆ ಬಂದು ನಾಣ್ಯ ಪಡೆದುಕೊಳ್ಳಬಹುದು' ಎಂದು ಗೋಲ್ಡ್‌ಸಿಕ್ಕ ಕಂಪನಿಯ ಉಪಾಧ್ಯಕ್ಷ ಪ್ರತಾಪ್ ಹೇಳಿದ್ದಾರೆ.

ಈ ಯಂತ್ರವು ಕಳೆದ ಶನಿವಾರದಿಂದ ಸೇವೆಗೆ ಮುಕ್ತವಾಗಿದ್ದು ಒಂದು ಬಾರಿ ಗರಿಷ್ಠ ಐದು ಕೆ.ಜಿ. ಚಿನ್ನವನ್ನು ಇರಿಸಿಕೊಳ್ಳಬಲ್ಲದು.

ಭಾರತದ ಆರು ಲಕ್ಷ ಮಂದಿಯ ಮಾಹಿತಿ ಕಳವು

ಬೆಂಗಳೂರು (ರಾಯಿಟರ್ಸ್): ಜಾಗತಿಕವಾಗಿ ಒಟ್ಟು ಐವತ್ತು ಲಕ್ಷ ಜನರಿಗೆ ಸಂಬಂಧಿಸಿದ ದತ್ತಾಂಶಗಳನ್ನು ಕದಿಯಲಾಗಿದೆ. ಭಾರತದ ಆರು ಲಕ್ಷ ಮಂದಿಯ ದತ್ತಾಂಶಗಳನ್ನು ಕೂಡ ಕದಿಯಲಾಗಿದೆ. ಪ್ರತಿ ವ್ಯಕ್ತಿಯ ದತ್ತಾಂಶವನ್ನು ಸರಾಸರಿ ₹ 490ರಂತೆ ಮಾರಾಟ ಮಾಡಲಾಗಿದೆ ಎಂದು ವಿಪಿಎನ್ ಸೇವೆಗಳನ್ನು ಒದಗಿಸುವ ನಾರ್ಡ್‌ವಿಪಿಎನ್ ಕಂಪನಿ ಹೇಳಿದೆ.

ಬಳಕೆದಾರರ ಲಾಗಿನ್ ವಿವರ, ಕುಕಿ, ಸ್ಕ್ರೀನ್‌ಶಾಟ್‌ಗಳು ಮತ್ತು ಇತರ ಡಿಜಿಟಲ್ ಮಾಹಿತಿಗಳನ್ನು ಕಳ್ಳತನ ಮಾಡಲಾಗಿದೆ, ನಂತರ ಅವುಗಳನ್ನು ಮಾರಲಾಗಿದೆ. 2018ರ ನಂತರದ ದತ್ತಾಂಶಗಳನ್ನು ಪರಿಶೀಲಿಸಿ ನಾರ್ಡ್‌ವಿಪಿಎನ್ ಈ ವಿವರ ನೀಡಿದೆ. ಗೂಗಲ್, ಮೈಕ್ರೊಸಾಫ್ಟ್ ಹಾಗೂ ಫೇಸ್‌ಬುಕ್ ಖಾತೆಗಳ ಲಾಗಿನ್ ವಿವರಗಳು ಕೂಡ ಕದ್ದ ದತ್ತಾಂಶಗಳಲ್ಲಿ ಸೇರಿವೆ ಎಂಬುದನ್ನು ನಾರ್ಡ್‌ವಿಪಿಎನ್ ಅಧ್ಯಯನವು ಕಂಡುಕೊಂಡಿದೆ. ಬಾಟ್ ಮಾರ್ಕೆಟ್ ಮೂಲಕ ದತ್ತಾಂಶ ಮಾರಾಟ ಮಾಡಲಾಗಿದೆ. ವೆಬ್‌ಕ್ಯಾಮ್ ಮೂಲಕ ತೆಗೆದ ಚಿತ್ರಗಳು ಕೂಡ ಕದ್ದ ದತ್ತಾಂಶಗಳಲ್ಲಿವೆ.

ತೆಂಗಿನ ಮರ ಹತ್ತುವವರಿಗೆ ವಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆಂಗು ಅಭಿವೃದ್ಧಿ ಮಂಡಳಿಯು ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿಯ ಜೊತೆಗೂಡಿ, ತೆಂಗಿನ ಮರ ಹತ್ತುವವರಿಗೆ ವಿಮಾ ಸೌಲಭ್ಯ ಜಾರಿಗೆ ತಂದಿದೆ. ಇದರ ಅಡಿ ಅಪಘಾತ ಮತ್ತು ಸಾವಿಗೆ ₹ 5 ಲಕ್ಷದವರೆಗೆ ವಿಮಾ ರಕ್ಷೆ ಇರುತ್ತದೆ.

ಆಸ್ಪತ್ರೆಗೆ ದಾಖಲಾದರೆ ₹ 1 ಲಕ್ಷದವರೆಗೆ ನೆರವು ಸಿಗುತ್ತದೆ. ಮಂಡಳಿಯು ತನ್ನ 'ಫ್ರೆಂಡ್ಸ್ ಆಫ್ ಕೊಕೊನಟ್ ಟ್ರೀ' ಮತ್ತು ನೀರಾ ತಂತ್ರಜ್ಞ ತರಬೇತಿ ಯೋಜನೆಗಳ ಅಡಿ ತರಬೇತಿ ಪಡೆಯುತ್ತಿರುವವರಿಗೆ ಒಂದು ವರ್ಷದ ಅವಧಿಗೆ ವಿಮಾ ಸೌಲಭ್ಯವನ್ನು ಉಚಿತವಾಗಿ ಒದಗಿಸಲಿದೆ.

ವಿಮೆಯ ವಾರ್ಷಿಕ ಪ್ರೀಮಿಯಂ ಮೊತ್ತ ₹ 375. ಇದರಲ್ಲಿ ₹ 281ನ್ನು ಮಂಡಳಿ ಪಾವತಿಸಲಿದೆ. ಇನ್ನುಳಿದ ₹ 94ನ್ನು ಮಾತ್ರ ವಿಮೆ ಪಡೆಯುವವರು ಪಾವತಿಸಬೇಕು. ತೆಂಗಿನ ಮರ ಹತ್ತುವ ಕೆಲಸದಲ್ಲಿ ತೊಡಗಿಸಿಕೊಂಡಿರುವ, 18ರಿಂದ 65 ವರ್ಷ ವಯಸ್ಸಿನೊಳಗಿನವರು ಕೂಡ ವಿಮೆ ಪಡೆಯಲು ₹ 94 ಪಾವತಿಸಿದರೆ ಸಾಕು. ಈ ಮೊತ್ತವನ್ನು ಆನ್‌ಲೈನ್ ಮೂಲಕ ಪಾವತಿಸಬಹುದು ಅಥವಾ ಕೊಕೊನಟ್ ಡೆವಲಪ್‌ಮೆಂಟ್ ಬೋರ್ಡ್, ಎರ್ನಾಕುಲಂ ಹೆಸರಿನಲ್ಲಿ ಡಿ.ಡಿ. ಮೂಲಕ ಪಾವತಿಸಬಹುದು. ಹೆಚ್ಚಿನ ವಿವರಗಳಿಗೆ 0484-2377266 ದೂರವಾಣಿ ಸಂಖ್ಯೆಗೆ ಕರೆ ಮಾಡಬಹುದು ಅಥವಾ www.coconutboard.gov.in ವೆಬ್‌ಸೈಟ್‌ಗೆ ಭೇಟಿ ಕೊಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮುಂಬೈ ಧಾರಣೆ

ಶೇಂಗಾ

8–12-2022

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9950-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525 (1525)
ಒಂದು ವಾರದ ಡೆಲಿವರಿ	1520 (1520)
ಸೋಯಾ ಕಚ್ಚಾ	1170 (1160)
ಪಾಮ್ ವಾರದ ಡೆಲಿವರಿ	928 (938)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
53,650 (53,450)
ಬೆಳ್ಳಿ ಕೆ.ಜಿ 65.450 (64,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-54500
ಚಿತ್ರದುರ್ಗ	
ಆಪಿ	40119-40559
ಬೆಟ್ಟೆ	31129-31579
ಕೆಂಪುಗೋಟು	28000-28400
ರಾಶಿ	39639-40069
ಕಾರ್ಕಳ	
ಹೊಸತು	25000-37500
ಹಳತು	40000-54500
ಸಾಗರ	
ಬಿಳಿಗೋಟು	14110-30400
ಚಾಲಿ	31010-36600
ಕೋಕ	16189-27899
ಕೆಂಪುಗೋಟು	23786-31319
ರಾಶಿ	31699-41049
ಸಿಪ್ಪೆಗೋಟು	5189-20011
ಶಿವಮೊಗ್ಗ	
ಬೆಟ್ಟೆ	42699-49000
ಗೊರಬಲು	17000-31858
ಹೊಸತು	38532-41099
ರಾಶಿ	38509-44209
ಸರಕು	53159-77400
ಸಿದ್ದಾಪುರ	
ಬಿಳಿಗೋಟು	28609-33209
ಚಾಲಿ	35899-39549
ಕೋಕ	26019-27319
ಕೆಂಪುಗೋಟು	26819-31699
ರಾಶಿ	40099-42319
ತಟ್ಟಿಬೆಟ್ಟೆ	30879-36099
ಸಿದ್ದಾಪುರ	
ಬಿಳಿಗೋಟು	24899-35689
ಚಾಲಿ	37101-40629
ಕೋಕ	15891-28012
ಕೆಂಪುಗೋಟು	27399-32969
ರಾಶಿ	43099-50229
ತಟ್ಟಿಬೆಟ್ಟೆ	37050-42099
ಆಪಿ	51499-53799

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13100	12800	13000	162.60 ಸೆಂಟ್ಸ್
ಎಸಿ	6720	6600	6000	
ಆರ್‌ಪಿ	8500	8500	---	ಲಂಡನ್
ಆರ್‌ಸಿ	4530	4000	---	1888 ಡಾಲರ್ಸ್

ಅಫ್ಗಾನಿಸ್ತಾನದ ಚರಿಕಾರ್‌ನ ಫುಟ್‌ಬಾಲ್ ಸ್ಟೇಡಿಯಂನಲ್ಲಿ ಸಾರ್ವಜನಿಕವಾಗಿ 27 ಜನರಿಗೆ ಛಡಿಏಟು ನೀಡುವ ಸಂದರ್ಭದಲ್ಲಿ ಕಾವಲು ನಿಂತಿದ್ದ ತಾಲಿಬಾನ್ ಭದ್ರತಾ ಸಿಬ್ಬಂದಿ – ಎಎಫ್‌ಪಿ ಚಿತ್ರ

ಸಾರ್ವಜನಿಕವಾಗಿ 27 ಮಂದಿಗೆ ಛಡಿಯೇಟು

ಚರಿಕಾರ್, ಅಫ್ಗಾನಿಸ್ತಾನ (ಎಎಫ್‌ಪಿ): ವಿವಿಧ ಅಪರಾಧಗಳಿಗೆ ಸಂಬಂಧಿಸಿದಂತೆ ಮಹಿಳೆಯರೂ ಸೇರಿದಂತೆ 27 ಜನರಿಗೆ ತಾಲಿಬಾನ್ ಸಾರ್ವಜನಿಕವಾಗಿ ಗುರುವಾರ ಛಡಿಯೇಟು ನೀಡಿದೆ. ಸುಮಾರು ಒಂದು ಮೀಟರ್ ಉದ್ದ ಮತ್ತು ನಾಲ್ಕು ಬೆರಳುಗಳ ಅಗಲದ ಬೆತ್ತದಿಂದ 20 ರಿಂದ 39 ಹೊಡೆತಗಳನ್ನು ನೀಡಲಾಯಿತು ಎನ್ನಲಾಗಿದೆ.

ಪರ್ವಾನ್ ಪ್ರಾಂತ್ಯದ ರಾಜಧಾನಿ ಚರಿಕಾರ್‌ನ ಸ್ಟೇಡಿಯಂನಲ್ಲಿ ಈ ಘಟನೆ ನಡೆದಿದ್ದು, ಸಾವಿರಾರು ಸಾರ್ವಜನಿಕರು ಇದಕ್ಕೆ ಸಾಕ್ಷಿಯಾಗಿದ್ದರು. ಛಡಿಯೇಟಿಗೆ ಒಳಗಾದವರಲ್ಲಿ 9 ಜನ ಮಹಿಳೆಯರಿದ್ದು, ವಂಚನೆ, ನಕಲಿ, ಖೋಟಾ, ಡ್ರಗ್ಸ್ ಮಾರಾಟ ಮತ್ತು ಖರೀದಿ, ದುರಾಚಾರ, ಮನೆಯಿಂದ ತಪ್ಪಿಸಿಕೊಳ್ಳುವುದು, ಹೆದ್ದಾರಿ ದರೋಡೆ ಮತ್ತು ಅಕ್ರಮ ಸಂಬಂಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಶಿಕ್ಷೆ ವಿಧಿಸಲಾಗಿದ್ದು, ಪ್ರತಿಯೊಬ್ಬ ಆರೋಪಿಯು ಯಾವುದೇ ಒತ್ತಡ ಇಲ್ಲದೇ ಕೋರ್ಟ್‌ನಲ್ಲಿ ತಪ್ಪೊಪ್ಪಿಕೊಂಡಿದ್ದಾರೆ ಎನ್ನಲಾಗಿದೆ.

ಎಲ್ಲ ನ್ಯಾಯಾಧೀಶರು ಕಡ್ಡಾಯವಾಗಿ ಸಂಪೂರ್ಣವಾಗಿ ಇಸ್ಲಾಮಿಕ್ ಕಾನೂನನ್ನು ಪಾಲಿಸಬೇಕು ಎಂದು ತಾಲಿಬಾನ್ ಮುಖ್ಯಸ್ಥ ಹಿಬಾತುಲ್ಲಾ ಅಖುದ್ಜಾಂದಾ ಕಳೆದ ತಿಂಗಳು ಆದೇಶಿಸಿದ್ದ ಹಿನ್ನೆಲೆಯಲ್ಲಿ ಸಾರ್ವಜನಿಕವಾಗಿ ಶಿಕ್ಷೆ ನೀಡಲಾಗುತ್ತಿದೆ.

ಬುಧವಾರವಷ್ಟೇ ಅಪರಾಧಿಯೊಬ್ಬನನ್ನು ಸಾರ್ವಜನಿಕವಾಗಿ ಗಲ್ಲಿಗೇರಿಸಲಾಗಿತ್ತು.

ಬ್ರಿಟನ್ : ಚಾರ್ಲ್ಸ್ ಚಿತ್ರವಿರುವ 50 ಪೆನ್ಸ್ ನಾಣ್ಯ ಬಿಡುಗಡೆ

ಲಂಡನ್ (ಪಿಟಿಐ): ಬ್ರಿಟನ್ ರಾಜ 3ನೇ ಚಾರ್ಲ್ಸ್ ಚಿತ್ರವಿರುವ ಮೊದಲ 50 ಪೆನ್ಸ್ ನಾಣ್ಯಗಳನ್ನು ಗುರುವಾರ ಚಲಾವಣೆಗೆ ತರಲಾಗಿದೆ.

74 ವರ್ಷದ ರಾಜನ ಚಿತ್ರವಿರುವ ನಾಣ್ಯದ ಹಿಂಬದಿಯಲ್ಲಿ ರಾಣಿ 2ನೇ ಎಲಿಜಬೆತ್ ಅವರ ಜೀವನ ಮತ್ತು ಪರಂಪರೆಯನ್ನು ಚಿತ್ರಿಸಲಾಗಿದೆ.

ಒಟ್ಟು 96 ಲಕ್ಷ ಪೆನ್ಸ್ ನಾಣ್ಯಗಳನ್ನು ಬಿಡುಗಡೆ ಮಾಡಲಾಗಿದೆ. ರಾಜನ ಚಿತ್ರವನ್ನು ಖ್ಯಾತ ಬ್ರಿಟಿಷ್ ಶಿಲ್ಪಿ ಮಾರ್ಟಿನ್ ಜೆನ್ನಿಂಗ್ಸ್ ರಚಿಸಿದ್ದು, ಇದಕ್ಕೆ ವೈಯಕ್ತಿಕವಾಗಿ ಚಾರ್ಲ್ಸ್ ಅವರೇ ಅನುಮೋದನೆ ನೀಡಿದ್ದರು.

ಅಣ್ವಸ್ತ್ರ ಮೊದಲು ಬಳಸಲ್ಲ: ಪುಟಿನ್

ಮಾಸ್ಕೊ (ಎಎಫ್‌ಪಿ): 'ಉಕ್ರೇನ್ ಸಂಘರ್ಷದಲ್ಲಿ ಅಣ್ವಸ್ತ್ರ ಬಳಕೆಯ ಆತಂಕ ಹೆಚ್ಚುತ್ತಿದೆ. ಆದರೆ, ನಾವು ಯಾವುದೇ ಕಾರಣಕ್ಕೂ ಮೊದಲು ಅಣ್ವಸ್ತ್ರ ಬಳಸುವ ಗೋಜಿಗೆ ಹೋಗುವುದಿಲ್ಲ' ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಸ್ಪಷ್ಟಪಡಿಸಿದ್ದಾರೆ.

ಬುಧವಾರ ದೇಶದ ಮಾನವ ಹಕ್ಕುಗಳ ಮಂಡಳಿಯ ಸಭೆಯಲ್ಲಿ ಮಾತನಾಡಿದ ಪುಟಿನ್, 'ಉಕ್ರೇನ್ ಸಂಘರ್ಷವು ಇನ್ನಷ್ಟು ದೀರ್ಘಾವಧಿಗೆ ಮುಂದುವರಿಯಲಿದೆ. ಅಣ್ವಸ್ತ್ರದ ಬೆದರಿಕೆ ಹೆಚ್ಚುತ್ತಿರುವುದು ವಾಸ್ತವ. ಅದನ್ನು ಇಲ್ಲಿ ಮುಚ್ಚಿಡುವುದೇನಿಲ್ಲ. ಶತ್ರುವಿನ ದಾಳಿಗೆ ಪ್ರತ್ಯುತ್ತರ ನೀಡಲು ಮಾತ್ರ ಅಣ್ವಸ್ತ್ರ ಬಳಸುತ್ತೇವೆ' ಎಂದರು.

ಉಕ್ರೇನ್ ಮೇಲಿನ ಸೇನಾ ಕಾರ್ಯಾಚರಣೆ ಹತ್ತನೇ ತಿಂಗಳಿಗೆ ಕಾಲಿಟ್ಟಿರುವಾಗ ನಿರ್ದಿಷ್ಟ ಗುರಿ ಸಾಧಿಸಲು ವಿಫಲವಾಗಿರುವ ಕಾರಣಕ್ಕೆ ರಷ್ಯಾ ಅಣ್ವಸ್ತ್ರದ ಮೊರೆ ಹೋಗಬಹುದೆಂಬ ಆತಂಕ ಪಾಶ್ಚಿಮಾತ್ಯ ದೇಶಗಳಲ್ಲಿ ಹೆಚ್ಚುತ್ತಿದೆ. ಇಂತಹ ಸಂದರ್ಭದಲ್ಲಿ ಪುಟಿನ್ ಅವರಿಂದ ಈ ಹೇಳಿಕೆ ಹೊರಬಿದ್ದಿದೆ.

'ನಾವು ಎಂತಹದೇ ಸನ್ನಿವೇಶದಲ್ಲೂ ಮೊದಲು ಅಣ್ವಸ್ತ್ರ ಬಳಸುವುದಿಲ್ಲ. ಆದರೆ, ನಮ್ಮ ಮೇಲೆ ಅಣು ದಾಳಿ ನಡೆದರೆ ಪ್ರತಿ ದಾಳಿಗೆ ನಮ್ಮ ಬಳಿ ಇರುವ ಅಣ್ವಸ್ತ್ರ ಬಳಸುವುದಿಲ್ಲ ಎನ್ನಲಾರೆ. ಸದ್ಯ ಅವುಗಳ ಬಳಕೆ ಸಾಧ್ಯತೆಗಳು ತೀರಾ ಕಡಿಮೆ' ಎಂದು ಪುಟಿನ್ ಹೇಳಿದರು.

'ಅಣ್ವಸ್ತ್ರ ಬಳಕೆ ಕುರಿತು ಬಾಯಿಗೆ ಬಂದಂತೆ ಮಾತನಾಡುವುದು ಬೇಜವಾಬ್ದಾರಿತನವೆಂದು ನಾವು ಭಾವಿಸುತ್ತೇವೆ' ಎಂದು ಅಮೆರಿಕ ಪ್ರತಿಕ್ರಿಯೆ ನೀಡಿದೆ.

ಇರಾನ್‌ನಲ್ಲಿ ವಸ್ತ್ರಸಂಹಿತೆ ವಿರೋಧಿ ಹೋರಾಟ: ಮೊದಲ ಬಂಧಿತನಿಗೆ ಗಲ್ಲು

ದುಬೈ (ಎಪಿ): ಇರಾನ್‌ನಲ್ಲಿ ನಡೆಯುತ್ತಿರುವ ವಸ್ತ್ರಸಂಹಿತೆ ವಿರೋಧಿ ಹೋರಾಟದ ವೇಳೆ ಅಪರಾಧ ಕೃತ್ಯ ಎಸಗಿದ್ದ ಆರೋಪದ ಕಾರಣ ಬಂಧಿತನಾಗಿದ್ದ ವ್ಯಕ್ತಿಯನ್ನು ಗಲ್ಲಿಗೇರಿಸಲಾಗಿದೆ ಎಂದು ಅಲ್ಲಿಯ ಆಡಳಿತ ಗುರುವಾರ ತಿಳಿಸಿದೆ.

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಕ್ಕಾಗಿ ಬಂಧನಕ್ಕೊಳಗಾದ ಇತರ ಕೆಲವರಿಗೂ ಮರಣ ದಂಡನೆ ವಿಧಿಸಲಾಗಿದೆ. ಅವರನ್ನೂ ಸದ್ಯದಲ್ಲೇ ಗಲ್ಲಿಗೇರಿಸಲಾಗುವುದು ಎನ್ನಲಾಗಿದೆ.

ಗಲ್ಲಿಗೇರಿಸಲಾದ ವ್ಯಕ್ತಿಯನ್ನು ಮೊಹ್ಸೆನ್ ಶೇಕಾರಿ ಎಂದು ಗುರುತಿಸಲಾಗಿದೆ.

'ಮೊಹರೆಬೆಹ್ (ದೇವರ ವಿರುದ್ಧ ಯುದ್ಧ ಘೋಷಣೆ) ಆರೋಪದ ಮೇಲೆ ಅವರನ್ನು ಸೆಪ್ಟೆಂಬರ್ 25ರಂದು ಬಂಧಿಸಲಾಗಿತ್ತು. ನವೆಂಬರ್ 20ರಂದು ಅವರ ಮೇಲಿನ ಆರೋಪ ಸಾಬೀತಾಗಿತ್ತು. ಇರಾನ್‌ನ ಟೆಹರಾನ್ ಕ್ರಾಂತಿಕಾರಿ ಕೋರ್ಟ್ ಅವರಿಗೆ ಗಲ್ಲು ಶಿಕ್ಷೆ ವಿಧಿಸಿದೆ' ಎಂದು ಇರಾನ್‌ನ ಮಿಝಾನ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

1979ರಲ್ಲಿ ಇಸ್ಲಾಮಿಕ್ ಕ್ರಾಂತಿ ನಡೆದಾಗಿನಿಂದಲೂ 'ಮೊಹರೆಬೆಹ್' ಅಪರಾಧದ ಆಧಾರದ ಮೇಲೆ ಮರಣ ದಂಡನೆ ವಿಧಿಸುವ ಪರಿಪಾಠವನ್ನು ಇರಾನ್ ಪಾಲಿಸುತ್ತಿದೆ ಎಂದು ಮಿಝಾನ್ ವರದಿಯಲ್ಲಿ ಹೇಳಲಾಗಿದೆ.

22 ವರ್ಷದ ಯುವತಿ ಮಹ್ಸಾ ಅಮೀನಿ ಅವರು ಇಸ್ಲಾಂ ಧರ್ಮದ ವಸ್ತ್ರಸಂಹಿತೆ ಪಾಲಿಸಿರಲಿಲ್ಲ ಎಂಬ ಕಾರಣಕ್ಕೆ ಅಲ್ಲಿಯ ನೈತಿಕ ಪೊಲೀಸರು ಅವರನ್ನು ವಶಕ್ಕೆ ತೆಗೆದುಕೊಂಡಿದ್ದರು. ವಶದಲ್ಲಿದ್ದಾಗಲೇ ಅವರು ಮೃತಪಟ್ಟಿದ್ದರು. ಈ ಘಟನೆ ಹಿನ್ನೆಲೆಯಲ್ಲಿ ವಸ್ತ್ರಸಂಹಿತೆ ವಿರೋಧಿಸಿ ಇರಾನ್‌ನಲ್ಲಿ ಸೆಪ್ಟೆಂಬರ್ 16ರಿಂದ ಹೋರಾಟ ನಡೆಯುತ್ತಿದೆ.

ಖಂಡನೆ: ಮರಣದಂಡನೆ ವಿಧಿಸಿದ್ದಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಈ ಮರಣದಂಡನೆ ತೀರ್ಪಿನಿಂದಾಗಿ ಕನಿಷ್ಠ 12 ಮಂದಿ ಪ್ರತಿಭಟನಕಾರರ ಜೀವ ಅಪಾಯದಲ್ಲಿದೆ ಎಂದು ಮಾನವ ಹಕ್ಕುಗಳ ಆಯೋಗ ಎಚ್ಚರಿಸಿದೆ. ಬ್ರಿಟನ್ ಕೂಡ ಇದನ್ನು ಖಂಡಿಸಿದೆ.

ಗ್ರೀನ್ ಕಾರ್ಡ್ ಕೋಟಾ ರದ್ದು ಮಸೂದೆಗೆ ಬೆಂಬಲ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಗ್ರೀನ್ ಕಾರ್ಡ್ (ಶಾಶ್ವತ ನಿವಾಸಿ ಪತ್ರ) ನೀಡಲು ದೇಶ ಆಧಾರಿತ ಕೋಟಾ ನಿಯಮವನ್ನು ಕೈಬಿಡುವ ಪ್ರಸ್ತಾವ ಹೊಂದಿರುವ ಮಸೂದೆ ಜಾರಿ ಮಾಡಲು ಅಮೆರಿಕ ಸಂಸತ್ತಿಗೆ ಶ್ವೇತಭವನವು ಬೆಂಬಲ ಸೂಚಿಸಿದೆ. ಅಮೆರಿಕದ ಉದ್ಯೋಗದಾತರು ಉದ್ಯೋಗಿ ಆಯ್ಕೆ ವೇಳೆ ಅವರ ಹುಟ್ಟಿದ ಸ್ಥಳದ ಹೊರತಾಗಿ ಅರ್ಹತೆ ಆಧಾರದ ಮೇಲೆ ಆಯ್ಕೆ ಮಾಡಲು ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಈ ನಿಯಮ ರೂಪಿಸಲಾಗಿದೆ.

ಇದು ಜಾರಿಯಾದರೆ ಸಾವಿರಾರು ಭಾರತೀಯ ವಲಸಿಗರಿಗೆ ಅನುಕೂಲವಾಗಲಿದೆ ಎನ್ನಲಾಗಿದೆ. ಶಾಸನಬದ್ಧ ಉದ್ಯೋಗಕ್ಕಾಗಿ ಗ್ರೀನ್ ಕಾರ್ಡ್ ಪಡೆಯಲು ಸಮಾನ ಅವಕಾಶ (ಇಎಜಿಎಲ್‌ಇ) ಕಾಯ್ದೆ–2022ರ ಪರ ಮತ ನೀಡಲು ಅಮೆರಿಕ ಸಂಸತ್ತು ನಿರ್ಧರಿಸಿದೆ.

ವಲಸಿಗರ ವೀಸಾ ವ್ಯವಸ್ಥೆಯನ್ನು ಉನ್ನತೀಕರಿಸಲು ಮತ್ತು ವಲಸಿಗರ ವೀಸಾ ಬಾಕಿ ಉಳಿಸುವುದರಿಂದ ಆಗುವ ವ್ಯತಿರಿಕ್ತ ಪರಿಣಾಮವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಮಾಡಲಾಗುತ್ತಿರುವ ಪ್ರಯತ್ನಕ್ಕೆ ಆಡಳಿತವು ಬೆಂಬಲ ನೀಡಲಿದೆ ಎಂದು ಶ್ವೇತಭವನ ತಿಳಿಸಿದೆ.

ಕಡಿಮೆ ಜನಸಂಖ್ಯೆ ಹೊಂದಿರುವ ದೇಶಗಳು ವೀಸಾ ಪಡೆಯುವುದರಿಂದ ಹಿಂದೆ ಬೀಳಬಾರದು ಎಂಬ ಉದ್ದೇಶದಿಂದ ಈ ಬದಲಾವಣೆಯನ್ನು 9 ವರ್ಷಗಳ ಕಾಲ ಮುಂದುವರಿಸಲಾಗುವುದು. ಕಾನೂನು ತೊಡಕಿನ ಕಾರಣ ಇನ್ನೂ ಗ್ರೀನ್ ಕಾರ್ಡ್ ಪಡೆಯದ ಸಾವಿರಾರು ಭಾರತೀಯ ವಲಸಿಗರಿಗೆ ಈ ಮಸೂದೆಯಿಂದ ಭಾರಿ ಅನುಕೂಲವಾಗಲಿದೆ ಎಂದು ಇಂಡಿಯನ್ ಅಮೆರಿಕನ್ ಇಂಪ್ಯಾಕ್ಟ್ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕ ಮಖೀಜಾ ಅಭಿಪ್ರಾಯಪಟ್ಟಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

WANTED
B.Sc/ M.Sc. in Hydrology
B.Sc /M.Sc. in Agriculture / BSW /MSW /BA /MA in Social Science
BA /MA /SSLC /PUC/ Diploma /Data Entry
Interested Can Send Your CV and Marks card Convocation Certificate and photo to the below e-mail ID : mahatmagandhitrust@gmail.com
Place of work : Devanahalli, Nelamangala, Hosakote, Bangalore for 3 years Central GOVT. Project.
Interview held on : 13th to 15th Dec. 2022 @ 3:00 pm to 5:00 pm
Mahathma Gandhi Trust (R)
0821-2420374
99454 25447
www.mahatmagandhitrust.com

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲ್ಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡಿಗಿಯರು ಬೇಕಾಗಿದ್ದಾರೆ ಊಟ,ವಸತಿಯಿದೆ 10,000 -15,000, 8951315839, 9880545002

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/9611225344

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಟ್ಟೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

Travel

28.12.2022 13 ದಿನಗಳ ವಿಮಾನ/ A/C ರೂಂ/ A/C ಬಸ್ಸಿನಲ್ಲಿ ಕಚ್‌ಬುಜ್ ಸೋಮನಾಥ ದ್ವಾರಕ ಓಂಕಾರೇಶ್ವರ್ ಮಂಹಾಕಾಳೇಶ್ವರ್ 24.12.2022 9 ದಿನಗಳ ರಾಮೇಶ್ವರ,ಮದುರೈ ಕನ್ಯಾಕುಮಾರಿ ನವಗ್ರಹ ಸಮೇತ 25.12.2022 8 ದಿನಗಳ ಬುದ್ಧಗಯಾ ಅಲಹಾಬಾದ್ ನೈಮಿಶಾರಣ್ಯ 11.02.2023 ಮಹಾ ಶಿವರಾತ್ರಿ ನೇಪಾಳ ಪಶುಪತಿನಾಥ್ ದರ್ಶನ. ಸಂಪರ್ಕಿಸಿ. ವಿಷ್ಣನ್ ಟ್ರಾವೆಲ್ ಏಜೆನ್ಸಿ 26574131 8317446683 9448508708 9686708171

Part-Time Jobs

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

Drivers

HAEID REQUIRES Experienced Educated 4WH Automatic car Driver at Rajajinagar Bangalore. Attractive package & immediate placement Contact:+91 6366443134.

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

ಪ್ರವಾಸ

Pilgrimage Tours

29.12.2022 ಡಿಲಕ್ಸ್ ರೂಂ, ಊಟದೊಂದಿಗೆ ಕಾಶಿ, ದೆಹಲಿ, ಗಯಾ ವಿಮಾನ ಪ್ರವಾಸ: 8 ದಿನಗಳು. 09.01.2023 ತಮಿಳುನಾಡು 5 ದಿನಗಳು 08.02.2023 ಕೇರಳ 5 ದಿನಗಳು. ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್, ತುಮಕೂರು. ಫೊ: 8496044942.

ಹೊಸವರ್ಷಕ್ಕೆ_16.01.2023 6ದಿನಗಳು A/c.Bus, ವಿಮಾನದಲ್ಲಿ ಕಾಶಿ,ಗಯಾ ಬುದ್ಧಗಯಾ,ಅಯೋಧ್ಯ, ಅಲಹಾಬಾದ್_26000/ (ಕೆಲವೇ_ಸೀಟುಗಳಿವೆ) ಪ್ರತಿ_ತಿಂಗಳು ಹಡಗು/ವಿಮಾನದಲ್ಲಿ ಅಂಡಮಾನ್, ಹವಳದ್ವೀಪ "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" 9845560219/ 9739847429.

General

ಸುವರ್ಣಾವಕಾಶ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿಗಳಿಗೆ ಹಾಗು ಆಫೀಸ್‌ಗಳಿಗೆ ವಿದ್ಯಾರ್ಹತೆಯಿರುವ ಹಾಗು ಇಲ್ಲದ ಯುವಕ/ಯುವತಿಯರು ಬೇಕಾಗಿದ್ದಾರೆ, Salary+OT 15,800 to 29,000. ಸಂಪರ್ಕಿಸಿ: 7996055015

★16.02.2023 ಶಿವರಾತ್ರಿ★ ವಿಶೇಷ 9ದಿನ ಕಾಶಿಯಲ್ಲಿ ತಂಗುವುದು, 07.02.2023 16ದಿನ 95ದಿವ್ಯದೇಶ ಪ್ರವಾಸ. ಆರ್.ಗಾಂಧಿ ಟೂರ್ಸ್ (ರಿ) 9945445809, 9902433500

ಸುವರ್ಣಯಾತ್ರ 22/12/22 ಕಾಶಿ ಪ್ರವಾಸ, 06/01/23 ಮಧ್ಯಪ್ರದೇಶ.ಪ್ರವಾಸ, 25/01/23 ಗುಜರಾತ್ ಪ್ರವಾಸ, 21/02/23 ರಾಜಸ್ಥಾನ್.ಪ್ರವಾಸ. 9019462508, 9008381022

Book Your Classifieds Ads
Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್3/1/23 ಪೂರಿ ಜಗನ್ನಾಥ್, ಕೋನಾರ್ಕ್, ಭುನೇಶ್ವರ್ 4/1/23 ಕಾಶಿ ಯಾತ್ರೆ.18/1/23 ರಾಯಲ್ ರಾಜಸ್ಥಾನ 9964527782, 9591017782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕ್ವಾರ್ಟರ್ ಫೈನಲ್ ಪಂದ್ಯ ಇಂದು; ಮೋಡಿ ಮಾಡುವರೇ ನೇಮರ್?

ಕ್ರೊವೇಷ್ಯಾಗೆ ಬ್ರೆಜಿಲ್ 'ಭಯ'

ಲುಕಾ ಮಾಡ್ರಿಚ್ –ಎಎಫ್‌ಪಿ ಚಿತ್ರ

ದೋಹಾ (ರಾಯಿಟರ್ಸ್): 'ಕ್ವಾರ್ಟರ್ ಫೈನಲ್‌ನಲ್ಲಿ ನಮ್ಮ ಎದುರಾಳಿಯಾಗಿರುವ ಬ್ರೆಜಿಲ್ ತಂಡ ಭಯ ಹುಟ್ಟಿಸುವಂತಿದೆ' ಎಂಬುದು ಕ್ರೊವೇಷ್ಯಾ ತಂಡದ ಕೋಚ್ ಜ್ಲಾಟ್ಕೊ ಡಾಲಿಚ್ ಅವರ ಹೇಳಿಕೆ.

ಬ್ರೆಜಿಲ್ ತಂಡ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ 4–1 ರಲ್ಲಿ ದಕ್ಷಿಣ ಕೊರಿಯಾ ತಂಡವನ್ನು ಮಣಿಸಿದಾಗ ಅವರು ಈ ಹೇಳಿಕೆ ನೀಡಿದ್ದರು. ಅಲ್ ರಯಾನ್‌ನ ಎಜುಕೇಷನ್ ಸಿಟಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆಯಲಿರುವ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಮೊದಲ ಕ್ವಾರ್ಟರ್ ಫೈನಲ್‌ನಲ್ಲಿ ಕ್ರೊವೇಷ್ಯಾ ಆಟಗಾರರು ಭಯದಿಂದಲೇ ಬ್ರೆಜಿಲ್ ವಿರುದ್ಧ ಕಣಕ್ಕಿಳಿಯಲಿದ್ದಾರೆ.

ದಕ್ಷಿಣ ಕೊರಿಯಾ ವಿರುದ್ಧದ ಪಂದ್ಯದ ವೇಳೆ ಹೊಂದಿದ್ದ ಬಲವನ್ನು ಇನ್ನಷ್ಟು ಹೆಚ್ಚಿಸಿಕೊಂಡು ಬ್ರೆಜಿಲ್ ಆಡಲಿದೆ. ಏಕೆಂದರೆ ಗಾಯದ ಸಮಸ್ಯೆಯಿಂದ ಬಳಲಿದ್ದ ಎಲ್ಲ ಆಟಗಾರರೂ ಚೇತರಿಸಿಕೊಂಡಿದ್ದಾರೆ.

ಲೆಫ್ಟ್ ಬ್ಯಾಕ್‌ನಲ್ಲಿ ಆಡುವ ಡಿಫೆಂಡರ್ ಅಲೆಕ್ಸ್ ಸ್ಯಾಂಡ್ರೊ ಅವರು ಕ್ರೊವೇಷ್ಯಾ ವಿರುದ್ಧದ ಪಂದ್ಯಕ್ಕೆ ಲಭ್ಯರಾಗಿದ್ದು, ಕೋಚ್ ಟೀಟೆ ಅವರು ಪೂರ್ಣ ಸಾಮರ್ಥ್ಯದ ತಂಡವನ್ನೇ ಮೊದಲ ಇಲೆವೆನ್‌ನಲ್ಲಿ ಕಣಕ್ಕಿಳಿಸಲಿದ್ದಾರೆ. ಇದರಿಂದ ಕ್ರೊವೇಷ್ಯಾ ತಂಡಕ್ಕೆ ಕಠಿಣ ಸವಾಲು ಎದುರಾಗಲಿದೆ.

ಗಾಯದ ಕಾರಣ ಎರಡು ಲೀಗ್ ಪಂದ್ಯಗಳಿಂದ ಹೊರಗುಳಿದಿದ್ದ ನೇಮರ್ ಮತ್ತು ಡಿಫೆಂಡರ್ ಡ್ಯಾನಿಲೊ ಅವರು ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಆಡಿದ್ದರು. ಬಲಗಾಲಿಗೆ ಆಗಿದ್ದ ಗಾಯ, ಆಟಕ್ಕೆ ಸ್ವಲ್ಪವೂ ಅಡ್ಡಿ ಉಂಟುಮಾಡುತ್ತಿಲ್ಲ ಎಂಬುದನ್ನು ನೇಮರ್ ಕಳೆದ ಪಂದ್ಯದಲ್ಲಿ ತೋರಿಸಿಕೊಟ್ಟಿದ್ದರು. ಅಂಗಳದಲ್ಲಿ ಇದ್ದ 80 ನಿಮಿಷಗಳಲ್ಲೂ ಚುರುಕಿನ ಆಟವಾಡಿದ್ದರು.

ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಬ್ರೆಜಿಲ್ ಪರ ಅತಿಹೆಚ್ಚು ಗೋಲು ಗಳಿಸಿರುವ ದಿಗ್ಗಜ ಆಟಗಾರ ಪೆಲೆ (77 ಗೋಲು) ಅವರ ದಾಖಲೆ ಸರಿಗಟ್ಟಲು ನೇಮರ್‌ಗೆ ಇನ್ನೊಂದು ಗೋಲಿನ ಅಗತ್ಯವಿದೆ. ಆದ್ದರಿಂದ ಅವರು ಈ ಪಂದ್ಯದಲ್ಲಿ ಮತ್ತಷ್ಟು ಹುಮ್ಮಸ್ಸು, ಛಲದೊಂದಿಗೆ ಆಡುವ ಸಾಧ್ಯತೆಯಿದೆ.

ಐವರು ಘಟಾನುಘಟಿ ಆಟಗಾರರೊಂದಿಗೆ ಬ್ರೆಜಿಲ್ ನಡೆಸುವ ಆಕ್ರಮಣವನ್ನು ತಡೆಯಲು ಕ್ರೊವೇಷ್ಯಾಕ್ಕೆ ಭಾರೀ ಸಾಹಸ ಮಾಡಬೇಕಿದೆ. 2018ರ ಟೂರ್ನಿಯ ರನ್ನರ್ಸ್ ಅಪ್ ಆಗಿರುವ ಕ್ರೊವೇಷ್ಯಾ, ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ ಜಪಾನ್ ತಂಡವನ್ನು ಮಣಿಸಿತ್ತು.

ಅನುಭವಿಗಳಾದ ಲುಕಾ ಮಾಡ್ರಿಚ್, ಡೆಜಾನ್ ಲೊವ್ರೆನ್, ಇವಾನ್ ಪೆರಿಸಿಚ್ ಮತ್ತು ಮಾರ್ಸೆಲೊ ಬ್ರೊಜೊವಿಚ್ ಅವರನ್ನೊಳಗೊಂಡ ಕ್ರೊವೇಷ್ಯಾ ಅಚ್ಚರಿಯ ಫಲಿತಾಂಶದ ನಿರೀಕ್ಷೆಯಲ್ಲಿದೆ.

'ಬ್ರೆಜಿಲ್ ತಂಡ ವಿಶ್ವದ ಅತ್ಯಂತ ಬಲಿಷ್ಠ ತಂಡಗಳಲ್ಲಿ ಒಂದಾಗಿದ್ದು, ಗೆಲ್ಲುವ ಫೇವರಿಟ್ ಎನಿಸಿಕೊಂಡಿದೆ. ನಾವು ಕೂಡಾ ಗೆಲುವಿನ ವಿಶ್ವಾಸದೊಂದಿಗೆ ಕಣಕ್ಕಿಳಿಯುವೆವು' ಎಂದು ಕೋಚ್ ಜ್ಲಾಟ್ಕೊ ಡಾಲಿಚ್ ಹೇಳಿದ್ದಾರೆ.

ವಿಶ್ವಕಪ್‌ನಲ್ಲಿ ಇವೆರಡು ತಂಡಗಳು ಎರಡು ಸಲ ಪರಸ್ಪರ ಪೈಪೋಟಿ ನಡೆಸಿದ್ದು, ಎರಡೂ ಸಲ ಬ್ರೆಜಿಲ್ ಗೆದ್ದಿದೆ. 2006ರ ಟೂರ್ನಿಯಲ್ಲಿ 1–0 ರಲ್ಲಿ ಹಾಗೂ 2014ರ ಟೂರ್ನಿಯಲ್ಲಿ 3–1 ರಲ್ಲಿ ಜಯ ಸಾಧಿಸಿತ್ತು.

- ಬ್ರೆಜಿಲ್ ತಂಡ ಕಳೆದ ಎಂಟು ವಿಶ್ವಕಪ್ ಟೂರ್ನಿಗಳಲ್ಲಿ ಕನಿಷ್ಠ ಕ್ವಾರ್ಟರ್ ಫೈನಲ್‌ವರೆಗೆ ತಲುಪಿದೆ.
- 2014ರ ಟೂರ್ನಿಯಲ್ಲಿ ಕ್ರೊವೇಷ್ಯಾವನ್ನು 3–1 ರಲ್ಲಿ ಮಣಿಸಿದ್ದಾಗ ನೇಮರ್ ಎರಡು ಗೋಲುಗಳನ್ನು ಗಳಿಸಿದ್ದರು
- ವಿಶ್ವಕಪ್ ಟೂರ್ನಿಯಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ ಫಲಿತಾಂಶ ನಿರ್ಣಯಗೊಂಡ ತನ್ನ ಎಲ್ಲ ಮೂರೂ ಪಂದ್ಯಗಳನ್ನು ಕ್ರೊವೇಷ್ಯಾ ಗೆದ್ದುಕೊಂಡಿದೆ.

ಬಲಾಬಲ

ಒಟ್ಟು ಪಂದ್ಯ	4
ಬ್ರೆಜಿಲ್ ಗೆಲುವು	3
ಕ್ರೊವೇಷ್ಯಾ ಗೆಲುವು	0
ಡ್ರಾ	1
ಬ್ರೆಜಿಲ್ ಗೋಲು	7
ಕ್ರೊವೇಷ್ಯಾ ಗೋಲು	2

ನೇಮರ್ –ಎಎಫ್‌ಪಿ ಚಿತ್ರ

ಇಂದಿನ ಕ್ವಾರ್ಟರ್‌ಫೈನಲ್ ಪಂದ್ಯ

ಕ್ರೊವೇಷ್ಯಾ Vs ಬ್ರೆಜಿಲ್	ರಾತ್ರಿ 8.30
ನೆದರ್ಲೆಂಡ್ಸ್ Vs ಅರ್ಜೆಂಟೀನಾ	ತಡರಾತ್ರಿ 12.30

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನೆಮಾ ಆ್ಯಪ್

ನೆದರ್ಲೆಂಡ್ಸ್ ತಂಡದ ಮೆಂಫಿಸ್ ಡೆಪೆ (ಎಡ) ಹಾಗೂ ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ –ಎಎಫ್‌ಪಿ ಚಿತ್ರ

ಮೆಸ್ಸಿ ಬಳಗಕ್ಕೆ ಸೆಮಿ ಕನಸು

ಇಂದು ನೆದರ್ಲೆಂಡ್ಸ್ ವಿರುದ್ಧ ಎಂಟರಘಟ್ಟದ ಪೈಪೋಟಿ

ದೋಹಾ (ರಾಯಿಟರ್ಸ್/ ಎಎಫ್‌ಪಿ): ಲಯೊನೆಲ್ ಮೆಸ್ಸಿ ಎಂಬ ಆಟಗಾರನ 'ಮ್ಯಾಜಿಕ್ ಕಾಲು'ಗಳ ಮೇಲೆ ಭರವಸೆಯಿಟ್ಟಿರುವ ಅರ್ಜೆಂಟೀನಾ ಒಂದೆಡೆಯಾದರೆ, ಇತಿಹಾಸವು ತನ್ನೊಂದಿಗೆ ಇದೆ ಎಂಬ ಆತ್ಮವಿಶ್ವಾಸವನ್ನು ಹೊಂದಿರುವ ನೆದರ್ಲೆಂಡ್ಸ್ ತಂಡ ಮತ್ತೊಂದೆಡೆ.

ದೋಹಾದ ಲುಸೈಲ್ ಕ್ರೀಡಾಂಗಣದಲ್ಲಿ ಶುಕ್ರವಾರ ತಡರಾತ್ರಿ ಇವೆರಡು ತಂಡಗಳು ಫಿಫಾ ವಿಶ್ವಕಪ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಎದುರಾಗಲಿದ್ದು, ಫುಟ್‌ಬಾಲ್ ಪ್ರೇಮಿಗಳು ಮತ್ತೊಂದು ರೋಚಕ ಹೋರಾಟದ ನಿರೀಕ್ಷೆಯಲ್ಲಿದ್ದಾರೆ.

ವಿಶ್ವಕಪ್ ಟೂರ್ನಿ ಸೇರಿದಂತೆ ಒಟ್ಟಾರೆಯಾಗಿ ಇವೆರಡು ತಂಡಗಳು ಒಂಬತ್ತು ಸಲ ಮುಖಾಮುಖಿಯಾಗಿದ್ದು, ನೆದರ್ಲೆಂಡ್ಸ್ ತಂಡ ನಾಲ್ಕು ಗೆಲುವುಗಳನ್ನು ಪಡೆದು ಮೇಲುಗೈ ಹೊಂದಿದೆ. ಇತಿಹಾಸದ ಬಲ ತನ್ನೊಂದಿಗಿದ್ದರೂ, ಶುಕ್ರವಾರ ಗೆಲುವು ಸುಲಭವಲ್ಲ ಎಂಬುದರ ಅರಿವು ತಂಡಕ್ಕಿದೆ.

ಈ ಪಂದ್ಯವು ಫುಟ್‌ಬಾಲ್‌ನ ಸಾರ್ವಕಾಲೀಕ ಶ್ರೇಷ್ಠ ಫಾರ್ವರ್ಡ್ ಆಟಗಾರರಲ್ಲೊಬ್ಬರಾದ ಮೆಸ್ಸಿ ಮತ್ತು ಆಧುನಿಕ ಫುಟ್‌ಬಾಲ್‌ನ ಅತ್ಯುತ್ತಮ ಡಿಫೆಂಡರ್‌ಗಳ ನಡುವಿನ ಹೋರಾಟ ಎನಿಸಿಕೊಂಡಿದೆ. ಮೆಸ್ಸಿ ಅವರು ವರ್ಜಿಲ್ ವಾನ್ ಡೈಕ್ ನೇತೃತ್ವದ ನೆದರ್ಲೆಂಡ್ಸ್ ರಕ್ಷಣಾ ವಿಭಾಗದ ಜತೆ ಪೈಪೋಟಿ ನಡೆಸಲಿದ್ದಾರೆ.

ಬಲಾಬಲ

ಒಟ್ಟು ಪಂದ್ಯ	9
ನೆದರ್ಲೆಂಡ್ಸ್ ಗೆಲುವು	4
ಅರ್ಜೆಂಟೀನಾ ಗೆಲುವು	3
ಡ್ರಾ	2
ನೆದರ್ಲೆಂಡ್ಸ್ ಗೋಲು	13
ಅರ್ಜೆಂಟೀನಾ ಗೋಲು	6

ಅದೇ ರೀತಿ ಯುವ ಕೋಚ್ ಮತ್ತು ಅನುಭವಿ ಕೋಚ್ ನಡುವಿನ ಹೋರಾಟದಿಂದಲೂ ಪಂದ್ಯ ಮಹತ್ವ ಪಡೆದುಕೊಂಡಿದೆ. ಅರ್ಜೆಂಟೀನಾ ತಂಡದ ಕೋಚ್ 44 ವರ್ಷದ ಲಯೊನೆಲ್ ಸ್ಕಾಲೊನಿ ಮತ್ತು ನೆದರ್ಲೆಂಡ್ಸ್ ಕೋಚ್ 71 ವರ್ಷದ ಲೂಯಿಸ್ ವಾನ್ ಗಾಲ್ ಅವರು ಈ ಪಂದ್ಯವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ.

'ಮೆಸ್ಸಿ ಅತ್ಯಂತ ಅಪಾಯಕಾರಿ ಆಟಗಾರ ಎಂಬುದು ಗೊತ್ತಿದೆ. ಗೋಲು ಹೊಡೆಯುವ ಜತೆಗೆ ಗೋಲಿಗೆ ಅವಕಾಶ ಸೃಷ್ಟಿಸುವಲ್ಲೂ ಪಳಗಿದ್ದಾರೆ. ಆದರೆ ಚೆಂಡು ಅವರಿಗೆ ಸಿಗದಂತೆ ನೋಡಿಕೊಂಡರೆ ನಮಗೆ ಗೆಲ್ಲುವ ಅವಕಾಶವಿದೆ' ಎಂದು ವಾನ್ ಗಾಲ್ ಹೇಳಿದ್ದಾರೆ.

ಕಳೆದ ವರ್ಷ ಯೂರೋಪಿಯನ್ ಚಾಂಪಿಯನ್‌ಷಿಪ್‌ನಲ್ಲಿ ಸೋತ ಬಳಿಕ ಆಡಿದ 19 ಪಂದ್ಯಗಳಲ್ಲಿ ಅಜೇಯ ದಾಖಲೆಯನ್ನು ಹೊಂದಿರುವ ನೆದರ್ಲೆಂಡ್ಸ್ ತಂಡವು ಕೋಡಿ ಗಾಕ್ಪೊ ಮತ್ತು ಮೆಂಫಿಸ್ ಡೆಪೆ ಮೇಲೆ ಭರವಸೆಯಿಟ್ಟಿದೆ. ಇವರು ಅರ್ಜೆಂಟೀನಾ ರಕ್ಷಣಾ ವಿಭಾಗಕ್ಕೆ ಅಗ್ನಿಪರೀಕ್ಷೆ ಒಡ್ಡಲಿದ್ದಾರೆ.

ಅರ್ಜೆಂಟೀನಾ ತಂಡದ ಏಂಜೆಲ್ ಡಿ ಮರಿಯಾ ಗಾಯದಿಂದ ಚೇತರಿಸಿಕೊಂಡಿದ್ದರೂ, ಕ್ವಾರ್ಟರ್ ಫೈನಲ್‌ನಲ್ಲಿ ಆಡುವುದು ಖಚಿತವಾಗಿಲ್ಲ. ತೊಡೆಯ ಗಾಯಕ್ಕೆ ಒಳಗಾಗಿದ್ದ ಅವರು ಆಸ್ಟ್ರೇಲಿಯಾ ವಿರುದ್ಧ ಆಡಿರಲಿಲ್ಲ.

2014ರ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಇವೆರಡು ತಂಡಗಳು ನಿಗದಿತ ಹಾಗೂ ಹೆಚ್ಚುವರಿ ಅವಧಿಯ ಬಳಿಕ ಗೋಲುರಹಿತ ಡ್ರಾ ಸಾಧಿಸಿದ್ದವು. ಪೆನಾಲ್ಟಿ ಶೂಟೌಟ್‌ನಲ್ಲಿ ಅರ್ಜೆಂಟೀನಾ ಗೆಲುವು ಪಡೆದಿತ್ತು. ಆ ಸೋಲಿಗೆ ಮುಯ್ಯಿ ತೀರಿಸುವ ಅವಕಾಶ ನೆದರ್ಲೆಂಡ್ಸ್‌ಗೆ ದೊರೆತಿದೆ.

- ವಿಶ್ವಕಪ್ ಟೂರ್ನಿಯಲ್ಲಿ ಇವೆರಡು ತಂಡಗಳು ಆರನೇ ಬಾರಿ ಎದುರಾಗುತ್ತಿವೆ. ಕೊನೆಯ ಎರಡು ಪಂದ್ಯಗಳು ಗೋಲುರಹಿತ ಡ್ರಾದಲ್ಲಿ ಅಂತ್ಯಗೊಂಡಿದ್ದವು.
- 1978ರ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಅರ್ಜೆಂಟೀನಾ 3–1 ಗೋಲುಗಳಿಂದ ನೆದರ್ಲೆಂಡ್ಸ್ ತಂಡವನ್ನು ಮಣಿಸಿ ಚಾಂಪಿಯನ್ ಆಗಿತ್ತು.
- ಲಯೊನೆಲ್ ಮೆಸ್ಸಿ ಐದು ವಿಶ್ವಕಪ್ ಟೂರ್ನಿಗಳಲ್ಲಿ 23 ಪಂದ್ಯಗಳನ್ನು ಆಡಿದ್ದು, ಒಟ್ಟು 9 ಗೋಲು ಗಳಿಸಿದ್ದಾರೆ.

ಕ್ರಿಕೆಟ್: ಲಾಬುಷೇನ್, ಹೆಡ್ ಶತಕ

ಅಡಿಲೇಡ್: ಮಾರ್ನಸ್ ಲಾಬುಷೇನ್ (ಬ್ಯಾಟಿಂಗ್ 120) ಮತ್ತು ಟ್ರ್ಯಾವಿಸ್ ಹೆಡ್ (ಔಟಾಗದೆ 114) ಅವರ ಅಜೇಯ ಶತಕದ ನೆರವಿನಿಂದ ಆಸ್ಟ್ರೇಲಿಯಾ ತಂಡ, ವೆಸ್ಟ್ ಇಂಡೀಸ್ ವಿರುದ್ಧದ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಬೃಹತ್ ಮೊತ್ತದತ್ತ ದಾಪುಗಾಲಿಟ್ಟಿದೆ.

ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಆಸ್ಟ್ರೇಲಿಯಾ, ಮೊದಲ ದಿನವಾದ ಗುರುವಾರದ ಆಟದ ಅಂತ್ಯಕ್ಕೆ 3 ವಿಕೆಟ್‌ಗೆ 330 ರನ್ ಪೇರಿಸಿದೆ.

ಸಂಕ್ಷಿಪ್ತ ಸ್ಕೋರ್: ಆಸ್ಟ್ರೇಲಿಯಾ ಮೊದಲ ಇನಿಂಗ್ಸ್ 89 ಓವರ್‌ಗಳಲ್ಲಿ 3 ವಿಕೆಟ್‌ಗೆ 330 (ಡೇವಿಡ್ ವಾರ್ನರ್ 21, ಉಸ್ಮಾನ್ ಖವಾಜಾ 62, ಮಾರ್ನಸ್ ಲಾಬುಷೇನ್ ಬ್ಯಾಟಿಂಗ್ 120, ಟ್ರ್ಯಾವಿಸ್ ಹೆಡ್ ಔಟಾಗದೆ 114, ಜೇಸನ್ ಹೋಲ್ಡರ್ 42ಕ್ಕೆ 1)

ನಮ್ಮ ತಂಡದಲ್ಲಿ ಒಗ್ಗಟ್ಟಿದೆ: ರೊನಾಲ್ಡೊ

ದೋಹಾ (ಎಎಫ್‌ಪಿ): 'ಪೋರ್ಚುಗಲ್ ತಂಡದಲ್ಲಿ ಒಗ್ಗಟ್ಟು ಇದೆ. ಹೊರಗಿನ ಶಕ್ತಿಗಳು ತಂಡದಲ್ಲಿ ಒಡಕು ಉಂಟುಮಾಡಲು ಪ್ರಯತ್ನಿಸುತ್ತಿವೆ' ಎಂದು ಸ್ಟಾರ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಹೇಳಿದ್ದಾರೆ.

ಸ್ವಿಟ್ಜರ್ಲೆಂಡ್ ವಿರುದ್ಧದ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ರೊನಾಲ್ಡೊ ಅವರನ್ನು ಹೊರಗಿಡಲಾಗಿತ್ತು. ಇದರಿಂದ ಕೋಚ್ ಫೆರ್ನಾಂಡೊ ಸಂಟೋಸ್ ಜೊತೆ ವಾಗ್ವಾದ ನಡೆಸಿ ವಿಶ್ವಕಪ್ ಟೂರ್ನಿಯನ್ನು ಅರ್ಧದಲ್ಲೇ ಮೊಟಕುಗೊಳಿಸಿ ತವರಿಗೆ ಮರಳುವುದಾಗಿ ಅವರು ಬೆದರಿಕೆಯೊಡ್ಡಿದ್ದಾರೆ ಎಂದು ಪೋರ್ಚುಗಲ್‌ನ ಮಾಧ್ಯಮಗಳು ವರದಿ ಮಾಡಿದ್ದವು.

ಈ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಸ್ಪಷ್ಟೀಕರಣ ನೀಡಿರುವ ರೊನಾಲ್ಡೊ, 'ತಂಡದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಇದ್ದೇವೆ' ಎಂದಿದ್ದಾರೆ.

ರೊನಾಲ್ಡೊ ತಂಡ ತೊರೆಯುವ ನಿರ್ಧಾರ ತಳೆದಿದ್ದಾರೆ ಎಂಬ ವರದಿಯನ್ನು ಪೋರ್ಚುಗಲ್ ಫುಟ್‌ಬಾಲ್ ಸಂಸ್ಥೆ ಕೂಡಾ ಅಲ್ಲಗಳೆದಿತ್ತು.

ಪ್ರೀ ಕ್ವಾರ್ಟರ್‌ನಲ್ಲಿ ರೊನಾಲ್ಡೊ ಬದಲು ಆಡಿದ್ದ ಗೊನ್ಸಾಲೊ ರಾಮೋಸ್ ಹ್ಯಾಟ್ರಿಕ್ ಗೋಲು ಗಳಿಸಿ ಮಿಂಚಿದ್ದರು.

ನ್ಯಾಯಮೂರ್ತಿ ಎಸ್‌.ಕೆ. ಕೌಲ್ ನೇತೃತ್ವದ ಸುಪ್ರೀಂ ಕೋರ್ಟ್ ನ್ಯಾಯಪೀಠ ಅಭಿಪ್ರಾಯ

ನ್ಯಾಯಮೂರ್ತಿಗಳ ನೇಮಕ ವಿಳಂಬ: ನ್ಯಾಯಾಂಗಕ್ಕೆ ತೊಂದರೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ನಮ್ಮ ಕೆಲಸವೇನಿದ್ದರೂ ಕಾನೂನು ಜಾರಿಗೊಳಿಸುವುದಾಗಿದೆ. ಸುಪ್ರೀಂ ಕೋರ್ಟ್‌ನ ಉನ್ನತ ವ್ಯವಸ್ಥೆ ಕೊಲಿಜಿಯಂ ಶಿಫಾರಸು ಮಾಡಿದ ಹೆಸರುಗಳನ್ನು ಹಲವು ಸಮಯದಿಂದ ಕೇಂದ್ರ ಸರ್ಕಾರ ಬಾಕಿ ಉಳಿಸಿಕೊಂಡಿರುವುದರಿಂದ ತೊಂದರೆ ಆಗುತ್ತಿರುವುದು ನ್ಯಾಯಾಂಗಕ್ಕೆ' ಎಂದು ನ್ಯಾಯಮೂರ್ತಿ ಎಸ್.ಕೆ. ಕೌಲ್ ಅವರ ನೇತೃತ್ವದ ಪೀಠ ಗುರುವಾರ ಹೇಳಿದೆ.

ನೇಮಕಾತಿಗೆ ಶಿಫಾರಸು ಮಾಡಿರುವ ಹೆಸರುಗಳನ್ನು ಈ ರೀತಿ ದೀರ್ಘ ಸಮಯ ಬಾಕಿ ಇರಿಸುವುದು ಅರ್ಹರು ನ್ಯಾಯಮೂರ್ತಿಗಳ ಹುದ್ದೆ ಪಡೆಯುವುದನ್ನು ತಡೆದಂತಾಗುವುದಿಲ್ಲವೇ ಮತ್ತು ಸೇವಾ ಹಿರಿತನದ ಮೇಲೂ ಪರಿಣಾಮ ಬೀರುವುದಿಲ್ಲವೇ ಎಂದು ಪೀಠವು ಅಟಾರ್ನಿ ಜನರಲ್ ಅವರನ್ನು ಪ್ರಶ್ನಿಸಿತು.

'ಕೊಲಿಜಿಯಂ ವ್ಯವಸ್ಥೆಯ ಭಾಗವಾಗುವುದನ್ನು ನ್ಯಾಯಮೂರ್ತಿಗಳು ಗೌರವದ ಸ್ಥಾನವೆಂದು ಪರಿಗಣಿಸಿದ್ದರು. ಆದರೆ, ನ್ಯಾಯಮೂರ್ತಿಗಳ ಹುದ್ದೆಗಳಿಗೆ ಶಿಫಾರಸು ಮಾಡಿರುವ ಹೆಸರುಗಳನ್ನು ಕೇಂದ್ರ ಸರ್ಕಾರ ಬಾಕಿ ಇರಿಸಿಕೊಂಡು, ವಿಳಂಬ ಮಾಡುತ್ತಿರುವುದರಿಂದಾಗಿ ಕೊಲಿಜಿಯಂ ಪೀಠ ಅಲಂಕರಿಸಲು ಒಪ್ಪಿಗೆ ನೀಡಿದ್ದ ನ್ಯಾಯಮೂರ್ತಿಗಳು ತಮ್ಮ ಸಮ್ಮತಿ ಪತ್ರಗಳನ್ನು ಹಿಂಪಡೆಯುತ್ತಿದ್ದಾರೆ' ಎಂದು ಪೀಠ ತಿಳಿಸಿತು.

ಸೂಕ್ತ ಅಭ್ಯರ್ಥಿಗಳ ಆಯ್ಕೆ ಮಾಡುವಾಗ ಕೊಲಿಜಿಯಂ ವ್ಯವಸ್ಥೆಯಲ್ಲಿ ಮೀಸಲಾತಿ ಅಳವಡಿಸಿಕೊಳ್ಳುವಂತೆ ಸುಪ್ರೀಂ ಕೋರ್ಟ್‌ನ ಏಳು ನ್ಯಾಯಮೂರ್ತಿಗಳಿದ್ದ ಪೀಠ ನೀಡಿರುವ ತೀರ್ಪು ಮತ್ತು ಜ್ಞಾಪನಾ ಪತ್ರದ ಬಗ್ಗೆ ಅಟಾರ್ನಿ ಜನರಲ್ ಪ್ರಶ್ನೆ ಎತ್ತಿದಾಗ, ಮೊದಲು ಈ ವಿಷಯ ಬಗೆಹರಿಸುವಂತೆ ಪೀಠವು ಸೂಚಿಸಿತು.

ಸುಪ್ರೀಂ ಕೋರ್ಟ್ ಬಾರ್ ಅಸೋಸಿಯೇಷನ್ ಅಧ್ಯಕ್ಷ, ವಕೀಲ ವಿಕಾಶ್ ಸಿಂಗ್ ಅವರು ಕಾನೂನು ಸಚಿವರು ಮತ್ತು ಉಪರಾಷ್ಟ್ರಪತಿಯವರ ಇತ್ತೀಚಿನ ಹೇಳಿಕೆಗಳನ್ನು ಪ್ರಸ್ತಾಪಿಸಿದರು.

ಆಗ ಪೀಠವು, 'ನಾಳೆ, ಜನರು ಮೂಲ ರಚನೆಯು (ತಳಹದಿಯೇ) ಸಂವಿಧಾನದ ಒಂದು ಭಾಗವಲ್ಲ ಎಂದು ಹೇಳುತ್ತಾರೆ! ನಿಯಂತ್ರಣದಲ್ಲಿರಬೇಕೆಂದು ನೀವು ಅವರಿಗೆ ಹೇಳಬೇಕಾಗುತ್ತದೆ' ಎಂದು ಅಟಾರ್ನಿ ಜನರಲ್‌ಗೆ ಹೇಳಿತು.

ಕೇಂದ್ರ ಸರ್ಕಾರ ಈ ಹಿಂದೆ ವಾಪಸ್ ಕಳುಹಿಸಿದ್ದ ಎರಡು ಹೆಸರುಗಳನ್ನು ಸ್ವತಃ ಕೊಲಿಜಿಯಂ ತನ್ನ ಪಟ್ಟಿಯಿಂದ ಕೈಬಿಟ್ಟಿದೆ. ಈ ನಿದರ್ಶನವೇ ಕೊಲಿಜಿಯಂನ ಶಿಫಾರಸು ಪರಿಪೂರ್ಣವಲ್ಲವೆಂದು ಗ್ರಹಿಸಲು ಕಾರಣವಾಗಿದೆ ಎಂದು ಕೇಂದ್ರದ ನಿಲುವನ್ನು ಎ.ಜಿ ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರು.

ಇದನ್ನು ಒಪ್ಪದ ಪೀಠವು, ಇವೆಲ್ಲವೂ ಸಣ್ಣಪುಟ್ಟ ವಿದ್ಯಮಾನಗಳು. ಹಾಗಂತ ಸಾಂವಿಧಾನಿಕ ಪೀಠದ ತೀರ್ಪು ನಿರ್ಲಕ್ಷಿಸಲು ಸರ್ಕಾರಕ್ಕೆ ಅನುಮತಿ ಕೊಡುವುದಿಲ್ಲ. ಒಂದು ತೀರ್ಪು ಪ್ರಕಟವಾದ ಮೇಲೆ ಅಲ್ಲಿ ಬೇರೆ ರೀತಿಯ ಗ್ರಹಿಕೆಗೆ ಅವಕಾಶವೇ ಇಲ್ಲ. ಕೊಲಿಜಿಯಂ ತೀರ್ಮಾನವೇ ಅಂತಿಮ ಎಂದು ಸ್ಪಷ್ಟಪಡಿಸಿತು.

'ತಾತ್ಕಾಲಿಕ ನೇಮಕ ಪ್ರಕ್ರಿಯೆ ಸರಳವಾಗಿರಲಿ'

ನವದೆಹಲಿ (ಪಿಟಿಐ): 'ಹೈಕೋರ್ಟ್‌ಗಳಿಗೆ ತಾತ್ಕಾಲಿಕವಾಗಿ ನ್ಯಾಯಮೂರ್ತಿಗಳನ್ನು ನೇಮಿಸಲು ಕೇಂದ್ರ ಸರ್ಕಾರ ಸೂಚಿಸಿರುವ ಒಪ್ಪಂದ ಪ್ರಕ್ರಿಯೆಯು 'ತುಂಬಾ ತೊಡಕಿನದಾಗಿದೆ'. ನೇಮಕಕ್ಕೆ ಸರಳವಾದ ಪ್ರಕ್ರಿಯೆ ಅಳವಡಿಸಿಕೊಳ್ಳಬೇಕು' ಎಂದು ಸುಪ್ರಿಂ ಕೋರ್ಟ್ ಗುರುವಾರ ಅಭಿಪ್ರಾಯಪಟ್ಟಿತು.

ಸಂವಿಧಾನದ ವಿಧಿ 224ಎ ಅನ್ವಯ ಕೇಂದ್ರ ಸರ್ಕಾರ ಪ್ರಸ್ತಾಪಿಸಿರುವ ಸಲಹೆಯನ್ನು ಅಳವಡಿಸಿಕೊಂಡರೆ, ಅಂತಹ ಪರಿಸ್ಥಿತಿಯಲ್ಲಿ ಯಾರೊಬ್ಬರೂ ಕೆಲಸ ಮಾಡಲು ಬಯಸುವುದಿಲ್ಲ ಎಂದು ಹೇಳಿತು. ನ್ಯಾಯಮೂರ್ತಿಗಳಾದ ಸಂಜಯ್ ಕೃಷ್ಣನ್ ಕೌಲ್ ಮತ್ತು ಅಭಯ್ ಎಸ್.ಓಕಾ, ವಿಕ್ರಂನಾಥ್ ಅವರಿದ್ದ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿತು.

ಸಂವಿಧಾನದ ವಿಧಿ 224ಎ ಅನ್ವಯ ಹೈಕೋರ್ಟ್‌ಗಳಿಗೆ ಅಡ್ ಹಾಕ್ ನ್ಯಾಯಮೂರ್ತಿಗಳ ನೇಮಿಸಲು ಅವಕಾಶವಿದೆ. ಅದರಂತೆ, ಯಾವುದೇ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿ ಅವರು ಯಾವುದೇ ಸಂದರ್ಭದಲ್ಲಿ ರಾಷ್ಟ್ರಪತಿಗಳ ಪೂರ್ವಾನುಮತಿ ಆಧರಿಸಿ ಯಾವುದೇ ವ್ಯಕ್ತಿಗೆ ನ್ಯಾಯಮೂರ್ತಿಯಾಗಿ ಕಾರ್ಯನಿರ್ವಹಿಸಲು ಕೋರಬಹುದಾಗಿದೆ.

ಅಡ್ ಹಾಕ್ ನ್ಯಾಯಮೂರ್ತಿಗಳಾಗಿ ನೇಮಕಗೊಳ್ಳುವವರು ನಿವೃತ್ತರೇ ಆಗಿರುತ್ತಾರೆ. ನ್ಯಾಯಮೂರ್ತಿಗಳ ನೇಮಕ ಮಾಡುತ್ತಿದ್ದೇವೆ ಎಂಬುದನ್ನು ಮರೆತುಬಿಡಿ. ನೀವು ಅಡ್ ಹಾಕ್ ನ್ಯಾಯಮೂರ್ತಿಗಳನ್ನು ನೇಮಿಸುತ್ತಿದ್ದೀರಿ. ಶಿಫಾರಸು ಮಾಡಿದ ನಂತರ ನೇಮಕಾತಿ 2–3 ದಿನದಲ್ಲಿ ಆಗಬೇಕು. ಸುದೀರ್ಘ ಕಾಲ ಬಾಕಿ ಉಳಿಸಬಾರದು' ಎಂದು ಹೇಳಿತು.

'ಸುಪ್ರೀಂ' ಹಂತದಲ್ಲೇ ಶೇ 25ರಷ್ಟು ತಿರಸ್ಕೃತ

ನವದೆಹಲಿ: 'ಹೈಕೋರ್ಟ್ ನ್ಯಾಯಮೂರ್ತಿಗಳ ಸ್ಥಾನಕ್ಕೆ ಶಿಫಾರಸು ಮಾಡಲಾಗಿರುವ ಹೆಸರುಗಳಲ್ಲಿ ಶೇ 25ರಷ್ಟು ಸುಪ್ರೀಂ ಕೋರ್ಟ್ ಹಂತದಲ್ಲಿಯೇ ತಿರಸ್ಕೃತಗೊಳ್ಳುತ್ತಿವೆ. ಈ ಪ್ರಮಾಣವು ಅತ್ಯಧಿಕವಾಗಿದೆ' ಎಂದು ಕೇಂದ್ರ ಸರ್ಕಾರ ತಿಳಿಸಿದೆ.

'ಹೈಕೋರ್ಟ್‌ಗಳಿಂದ ಪ್ರಸ್ತುತ ನ್ಯಾಯಮೂರ್ತಿಗಳ ಸ್ಥಾನಕ್ಕಾಗಿ 146 ಹೆಸರುಗಳು ಶಿಫಾರಸು ಮಾಡಲಾಗಿದ್ದು, ಪರಿಶೀಲನೆ ಹಂತದಲ್ಲಿದೆ' ಎಂದು ಗುರುವಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ವಸ್ತುಸ್ಥಿತಿ ವರದಿಯಲ್ಲಿ ಕೇಂದ್ರ ಹೇಳಿದೆ.

ನವೆಂಬರ್ 30, 2022ರಲ್ಲಿ ಇದ್ದಂತೆ ಮಂಜೂರಾಗಿರುವ ಹೈಕೋರ್ಟ್ ನ್ಯಾಯಮೂರ್ತಿಗಳ ಹುದ್ದೆಗಳು 1,108. ಸದ್ಯ 776 ಸ್ಥಾನಗಳು ಭರ್ತಿಯಾಗಿವೆ. 332 ಸ್ಥಾನಗಳು ಖಾಲಿ ಇವೆ. ಈ ಪೈಕಿ ಶೇ 56 ಸ್ಥಾನಗಳಿಗೆ ಅಂದರೆ ಒಟ್ಟು 186 ನ್ಯಾಯಮೂರ್ತಿಗಳ ಸ್ಥಾನಗಳಿಗೆ ಹೈಕೋರ್ಟ್‌ಗಳು ಶಿಫಾರಸು ಮಾಡಬೇಕಾಗಿದೆ ಎಂದು ಹೇಳಿದೆ.

146 ಪ್ರಸ್ತಾವಗಳಲ್ಲಿ 92 (ವಕೀಲರ ಸಂಘದ ಕೋಟಾದಲ್ಲಿ ಖಾಲಿ ಇರುವುದು) ಮತ್ತು 54 (ಸೇವಾವಧಿ ಕೋಟಾದಲ್ಲಿ ಖಾಲಿ ಇರುವುದು) ಪ್ರಸ್ತಾವಗಳು ಸರ್ಕಾರ (118) ಮತ್ತು ಸುಪ್ರೀಂ ಕೋರ್ಟ್ (28) ಹಂತದಲ್ಲಿ ಪರಿಶೀಲನೆಯಲ್ಲಿವೆ ಎಂದು ಹೇಳಿದರು.

'ಸರ್ಕಾರದ ಮುಂದಿರುವ ಪ್ರಸ್ತಾವಗಳಲ್ಲಿ ಎಂಟನ್ನು ಸುಪ್ರೀಂ ಕೋರ್ಟ್ ಕೊಲಿಜಿಯಂ ಮೊದಲ ಬಾರಿಗೆ ಶಿಫಾರಸು ಮಾಡಿದೆ. 50 ಅನ್ನು ತಿರಸ್ಕರಿಸಿ ಹೈಕೋರ್ಟ್‌ಗಳಿಗೆ ಹಿಂದಿರುಗಿಸಿದೆ. ಹೈಕೋರ್ಟ್ ಕೊಲಿಜಿಯಂಗಳ 80 ಪ್ರಸ್ತಾವಗಳಿವೆ. 25 ಅನ್ನು ಮರುಪರಿಶೀಲಿಸುವಂತೆ ಸುಪ್ರೀಂ ಕೋರ್ಟ್ ಕೊಲಿಜಿಯಂ ತಿಳಿಸಿದ್ದು, ಮೂರನ್ನು ಮುಂದೂಡಿದೆ ಎಂದು ವಿವರಿಸಿದೆ.

9 ನ್ಯಾಯಮೂರ್ತಿಗಳ ನೇಮಕ ಪ್ರಸ್ತಾವ ಬಾಕಿ: ಕೊಲಿಜಿಯಂ ಮಾಡಿರುವ ಶಿಫಾರಸುಗಳಲ್ಲಿ ಸುಪ್ರೀಂ ಕೋರ್ಟ್‌ಗೆ ನ್ಯಾಯಮೂರ್ತಿ ನೇಮಕದ ಒಂದು ಪ್ರಸ್ತಾವ ಮತ್ತು ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳ ನೇಮಕದ ಎಂಟು ಪ್ರಸ್ತಾವ ಸರ್ಕಾರದ ಬಳಿ ಬಾಕಿ ಇವೆ ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಗುರುವಾರ ಲಿಖಿತ ಉತ್ತರ ನೀಡಿದ್ದಾರೆ.

ಉದ್ಧವ್ ಠಾಕ್ರೆ ವಿರುದ್ಧ ತನಿಖೆ ಹೈಕೋರ್ಟ್‌ಗೆ ಮಾಹಿತಿ

ಮುಂಬೈ (ಪಿಟಿಐ): ಆದಾಯ ಮೀರಿದ ಆಸ್ತಿ ಹೊಂದಿರುವ ದೂರಿಗೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಮತ್ತು ಅವರ ಪುತ್ರನ ವಿರುದ್ಧ ಪ್ರಾಥಮಿಕ ತನಿಖೆ ನಡೆಸಲಾಗಿದೆ ಎಂದು ಮುಂಬೈ ಪೊಲೀಸರು ಗುರುವಾರ ಬಾಂಬೆ ಹೈಕೋರ್ಟ್‌ಗೆ ತಿಳಿಸಿದ್ದಾರೆ.

ನ್ಯಾಯಮೂರ್ತಿಗಳಾದ ಧೀರಜ್ ಠಾಕೂರ್ ಮತ್ತು ವಾಲ್ಮೀಕಿ ಮೆನೆಜೆಸ್ ಅವರಿದ್ದ ದ್ವಿಸದಸ್ಯ ಪೀಠಕ್ಕೆ ಸರ್ಕಾರಿ ಅಭಿಯೋಜಕ ಅರುಣಾ ಕಾಮತ್ ಪೈ ಈ ಮಾಹಿತಿ ನೀಡಿದರು.

ಠಾಕ್ರೆ ಕುಟುಂಬದ ವಿರುದ್ಧ ಸಿಬಿಐ ಅಥವಾ ಇ.ಡಿ ತನಿಖೆ ಕೋರಿ ಗೌರಿ ಭಿಡೆ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ಆಧಾರರಹಿತವಾಗಿದ್ದು, ವಜಾ ಮಾಡಬೇಕು ಎಂದು ಠಾಕ್ರೆ ಕೋರಿದ್ದರು.

ದೋಣಿಗಳ ನಿಲುಗಡೆ

ಚಂಡಮಾರುತದಿಂದಾಗಿ ಭಾರಿ ಮಳೆ ಬೀಳುವ ಮುನ್ಸೂಚನೆ ಇರುವುದರಿಂದ ಮೀನುಗಾರರು ಚೆನ್ನೈನ ಕಡಲ ತೀರದಲ್ಲಿ ಗುರುವಾರ ದೋಣಿಗಳನ್ನು ನಿಲುಗಡೆ ಮಾಡಿದ್ದರು – ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

'ಟ್ವಿಟರ್‌ನಲ್ಲಿ ಸ್ಪೀಕರ್ ಬಗ್ಗೆ ಬರೆಯದಿರಿ'


ಓಂ ಬಿರ್ಲಾ

ನವದೆಹಲಿ (ಪಿಟಿಐ): ತಮ್ಮ ವಿರುದ್ಧ ಟ್ವಿಟರ್‌ನಲ್ಲಿ ಬರೆಯದಂತೆ ಸಂಸದರಿಗೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಎಚ್ಚರಿಕೆ ನೀಡಿದ್ದಾರೆ.

ಬಿರ್ಲಾ ಅವರು ಯಾವುದೇ ಸಂಸದರ ಹೆಸರನ್ನು ಉಲ್ಲೇಖಿಸಲಿಲ್ಲ. ಆದರೆ, ತೃಣಮೂಲ ಕಾಂಗ್ರೆಸ್ ಸದಸ್ಯೆ ಮಹುವಾ ಮೊಯಿತ್ರಾ ಅವರು ನಾಗರಿಕ ವಿಮಾನಯಾನ ಸಚಿವಾಲಯಕ್ಕೆ ಸಂಬಂಧಿಸಿದ ವಿಷಯವನ್ನು ಪ್ರಸ್ತಾಪಿಸುತ್ತಿದ್ದಂತೆ ಈ ಹೇಳಿಕೆ ನೀಡಿದ್ದಾರೆ.

'ಸದಸ್ಯರು ಕೆಲವೊಮ್ಮೆ ಟ್ವಿಟರ್‌ನಲ್ಲಿ ಸ್ಪೀಕರ್ ಮಾತನಾಡಲು ಅವಕಾಶ ನೀಡುವುದಿಲ್ಲ ಎಂದು ಬರೆಯುತ್ತಾರೆ. ಸ್ಪೀಕರ್ ಬಗ್ಗೆ ಸದಸ್ಯರು ಟ್ವಿಟರ್‌ನಲ್ಲಿ ಬರೆಯಬಾರದು ಎಂಬುದನ್ನು ದಯವಿಟ್ಟು ನೆನಪಿನಲ್ಲಿಡಿ' ಎಂದಿದ್ದಾರೆ.

ಸಂರಕ್ಷಿತಾರಣ್ಯ ಉತ್ತಮ ನಿರ್ವಹಣೆಯ ಕಾಯ್ದೆಗೆ ರಾಜ್ಯಸಭೆ ಒಪ್ಪಿಗೆ

ನವದೆಹಲಿ (ಪಿಟಿಐ): ಸಂರಕ್ಷಿತ ಅರಣ್ಯ ಪ್ರದೇಶದ ನಿರ್ವಹಣೆಯನ್ನು ಉತ್ತಮಗೊಳಿಸುವುದಕ್ಕಾಗಿ ಸಿದ್ಧಪಡಿಸಲಾಗಿರುವ ವನ್ಯಜೀವಿ (ಸಂರಕ್ಷಣೆ) ತಿದ್ದುಪಡಿ ಕಾಯ್ದೆ, 2021 ಅನ್ನು ಗುರುವಾರ ರಾಜ್ಯಸಭೆ ಅಂಗೀಕರಿಸಿದೆ. ಸಂರಕ್ಷಿತ ಅರಣ್ಯ ಪ್ರದೇಶಗಳಲ್ಲಿ ಜಾನುವಾರುಗಳನ್ನು ಮೇಯಿಸಲು ಮತ್ತು ಅರಣ್ಯ ಪ್ರದೇಶದಿಂದ ಕುಡಿಯಲು ಹಾಗೂ ಮನೆಬಳಕೆಗೆ ನೀರು ಪಡೆದುಕೊಳ್ಳಲು ಮಸೂದೆಯಲ್ಲಿ ಅವಕಾಶ ನೀಡಲಾಗಿದೆ. ರಾಜ್ಯಸಭೆಯಲ್ಲಿ ಈ ಮಸೂದೆಯನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು. ಲೋಕಸಭೆಯು ಮುಂಗಾರು ಅಧಿವೇಶನದಲ್ಲಿ ಈ ಮಸೂದೆಯನ್ನು ಅಂಗೀಕರಿಸಿತ್ತು. ಸಂಸದೀಯ ಸಮಿತಿಯು ಈ ಮಸೂದೆಯ ಪರಿಶೀಲನೆ ನಡೆಸಿದೆ. ಈ ಕಾಯ್ದೆಯಲ್ಲಿ 'ಸಂರಕ್ಷಣೆ' ಹಾಗೂ 'ನಿರ್ವಹಣೆ' ಎನ್ನುವ ಎರಡು ಪರಿಕಲ್ಪನೆಗಳನ್ನು ಸೇರಿಸಲಾಗಿದೆ.

ವನ್ಯಜೀವಿ (ಸಂರಕ್ಷಣೆ) ಕಾಯ್ದೆ 1972ರ ಪ್ರಕಾರ ಮಾಡಲಾದ ಸಸ್ಯ ಪ್ರಭೇದ ಹಾಗೂ ಪ್ರಾಣಿಗಳ ಪಟ್ಟಿಯನ್ನು ತರ್ಕಬದ್ಧವಾದ ರೀತಿಯಲ್ಲಿ ಮರುರೂಪಿಸಲು ತಿದ್ದುಪಡಿ ಕಾಯ್ದೆಯಲ್ಲಿ ಅವಕಾಶ ಕೊಡಲಾಗಿದೆ.

ಟಿಆರ್‌ಎಸ್ ಹೆಸರು ಬದಲಾವಣೆಗೆ ಒಪ್ಪಿಗೆ

ಹೈದರಾಬಾದ್ (ಪಿಟಿಐ): ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ಹೆಸರನ್ನು ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಎಂದು ಬದಲಿಸುವುದಕ್ಕೆ ಚುನಾವಣಾ ಆಯೋಗವು ಸಮ್ಮತಿ ಸೂಚಿಸಿದೆ.

ಈ ಕುರಿತು ಆಯೋಗವು ಗುರುವಾರ ಬಿಆರ್‌ಎಸ್ ಮುಖ್ಯಸ್ಥ ಹಾಗೂ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರಿಗೆ ಪತ್ರ ರವಾನಿಸಿದೆ.

ಟಿಆರ್‌ಎಸ್ ಪಕ್ಷಕ್ಕೆ ಬಿಆರ್‌ಎಸ್ ಎಂದು ಮರುನಾಮಕರಣ ಮಾಡಲು ಅನುಮತಿ ನೀಡುವಂತೆ ಪಕ್ಷವು ಅಕ್ಟೋಬರ್ 5ರಂದು ಪತ್ರ ಬರೆದಿತ್ತು.

ಜಲ್ಲಿಕಟ್ಟು: ತೀರ್ಪು ಕಾಯ್ದಿರಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಜಲ್ಲಿಕಟ್ಟು ಕ್ರೀಡೆಗೆ ತಮಿಳುನಾಡು ಸರ್ಕಾರ ಮತ್ತು ಎತ್ತಿನ ಗಾಡಿ ಓಟದ ಸ್ಪರ್ಧೆಗೆ ಮಹಾರಾಷ್ಟ್ರ ಸರ್ಕಾರ ಅವಕಾಶ ಕಲ್ಪಿಸಿರುವುದನ್ನು ಪ್ರಶ್ನಿಸಿರುವ ಅರ್ಜಿಗಳ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್ ಗುರುವಾರ ತನ್ನ ತೀರ್ಪು ಕಾಯ್ದಿರಿಸಿದೆ.

ನ್ಯಾಯಮೂರ್ತಿ ಕೆ.ಎಂ. ಜೋಸೆಫ್ ಅವರ ನೇತೃತ್ವದ ಐವರು ನ್ಯಾಯಮೂರ್ತಿಗಳಿದ್ದ ಸಾಂವಿಧಾನಿಕ ಪೀಠವು, ತಮಿಳುನಾಡು ಸರ್ಕಾರ ಪ್ರತಿನಿಧಿಸುತ್ತಿರುವ ಹಿರಿಯ ವಕೀಲ ಮುಕುಲ್ ರೋಹಟಗಿ ಸೇರಿ, ಈ ವಿಷಯ ಸಂಬಂಧ ಸಲ್ಲಿಕೆಯಾಗಿರುವ ಇತರರ ಅರ್ಜಿಗಳ ಪರ ವಕೀಲರ ವಾದಗಳನ್ನು ಆಲಿಸಿತು.

ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ, ಅನಿರುದ್ಧ ಬೋಸ್, ಹೃಷಿಕೇಶ್ ರಾಯ್, ಸಿ.ಟಿ. ರವಿಕುಮಾರ್ ಅವರು ಇರುವ ಸಾಂವಿಧಾನಿಕ ಪೀಠವು, ಒಂದು ವಾರದೊಳಗೆ ಲಿಖಿತವಾಗಿ ತಮ್ಮ ಸಮಗ್ರವಾದ ಕ್ರೋಡಿಕೃತ ಅಹವಾಲನ್ನು ಸಲ್ಲಿಸುವಂತೆ ಅರ್ಜಿದಾರರಿಗೆ ಸೂಚಿಸಿತು.

ಕಾಶ್ಮೀರಿ ಪಂಡಿತರ ಹತ್ಯೆ ತನಿಖೆ ಸಂಬಂಧ ಸಲ್ಲಿಸಲಾಗಿದ್ದ ಅರ್ಜಿ

ಕ್ಯುರೇಟಿವ್ ಅರ್ಜಿ ವಜಾ

ನವದೆಹಲಿ (ಪಿಟಿಐ): ಕಾಶ್ಮೀರ ಕಣಿವೆಯಲ್ಲಿ 1989 –1990ರಲ್ಲಿ ನಡೆದಿದ್ದ ಕಾಶ್ಮೀರಿ ಪಂಡಿತರ ಸಾಮೂಹಿಕ ಹತ್ಯೆ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ 2017ರ ಆದೇಶದ ಮರುಪರಿಶೀಲನೆ ಕೋರಿ ಸಲ್ಲಿಸಿದ್ದ ಅಂತಿಮ ಯತ್ನದ ಮೇಲ್ಮನವಿಯನ್ನು (ಕ್ಯುರೇಟಿವ್ ಅರ್ಜಿ) ಸುಪ್ರೀಂ ಕೋರ್ಟ್ ಗುರುವಾರ ವಜಾ ಮಾಡಿತು.

ಲಭ್ಯವಿರುವ ಎಲ್ಲ ಪ್ರಯತ್ನಗಳು ಮುಗಿದ ಮೇಲೆ ಅಂತಿಮ ಯತ್ನವಾಗಿ ಕ್ಯುರೇಟಿವ್ ಅರ್ಜಿ ಸಲ್ಲಿಸಲಾಗುತ್ತದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ಪೀಠವು ಈ ಅರ್ಜಿಯನ್ನು ವಜಾ ಮಾಡಿತು.

'ಮೇಲ್ಮನವಿ ಮತ್ತು ಸಂಬಂಧಿತ ದಾಖಲೆಗಳನ್ನು ಪರಿಶೀಲಿಸಿದ್ದೇವೆ. ರೂಪಕ್ ಅಶೋಕ್ ಹುರ್ರಾ ಮತ್ತು ಅಶೋಕ್ ಹುರ್ರಾ ಪ್ರಕರಣದ ಆದೇಶದ ಪರಿಮಿತಿಗೆ ಇದು ಒಳಪಡುವುದಿಲ್ಲ. ಹೀಗಾಗಿ ವಜಾ ಮಾಡಲಾಗಿದೆ' ಎಂದು ಪೀಠ ಹೇಳಿತು. ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್ ಮತ್ತು ಎಸ್.ಎ. ನಜೀರ್ ಪೀಠದ ಇತರ ಸದಸ್ಯರು.

ಕಾಶ್ಮೀರಿ ಪಂಡಿತರ ಸಂಘಟನೆ 'ರೂಟ್ಸ್ ಇನ್ ಕಾಶ್ಮೀರ್' ಅರ್ಜಿಯನ್ನು ಸಲ್ಲಿಸಿದ್ದು, ತನಿಖೆಗೆ ಕೋರಿದ್ದ ಅರ್ಜಿಯನ್ನು ಆರಂಭಿಕ ಹಂತದಲ್ಲಿಯೇ ವಜಾ ಮಾಡಿದ ಕ್ರಮ ಸಮರ್ಥನೀಯವಲ್ಲ ಎಂದು ಪ್ರತಿಪಾದಿಸಿತ್ತು.

ಸಂಘಟನೆಯು ಮೊದಲು ಸಾಮೂಹಿಕ ಹತ್ಯೆಗೆ ಸಂಬಂಧಿಸಿದಂತೆ ತನಿಖೆಗೆ ನಿರ್ದೇಶನ ಕೋರಿ ರಿಟ್ ಅರ್ಜಿ ಸಲ್ಲಿಸಿತ್ತು. 1989–90, 1997 ಮತ್ತು 1998ರಲ್ಲಿ ನಡೆದ ಕಾಶ್ಮೀರಿ ಪಂಡಿತರ ಹತ್ಯೆಯ ಎಲ್ಲ ಪ್ರಕರಣಗಳನ್ನು ಸಿಬಿಐ, ಎನ್‌ಐಎ ಅಂತಹ ಸ್ವತಂತ್ರ ತನಿಖಾ ಸಂಸ್ಥೆಗೆ ವರ್ಗಾಯಿಸಬೇಕು ಎಂದು ಕೋರಿತ್ತು.

2017ರಲ್ಲಿ ಮೊದಲು ರಿಟ್ ಅರ್ಜಿ ವಜಾ ಮಾಡಿದ್ದ ಸುಪ್ರೀಂ ಕೋರ್ಟ್, ಇದರ ಹಿಂದೆಯೇ ಮೇಲ್ಮನವಿಯನ್ನು ವಜಾ ಮಾಡಿತ್ತು. ಈ ತೀರ್ಮಾನ ಮರುಪರಿಶೀಲನೆ ಕೋರಿ ಈಗ ಕ್ಯುರೇಟಿವ್ ಅರ್ಜಿಯನ್ನು ಸಲ್ಲಿಸಲಾಗಿತ್ತು.

ಮುಖ್ಯಾಂಶಗಳು

- ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ತ್ರಿಸದಸ್ಯ ನ್ಯಾಯಪೀಠ
- 2017ರಲ್ಲಿ ಮೊದಲು ರಿಟ್ ಅರ್ಜಿ ವಜಾ ಮಾಡಿದ್ದ ಸುಪ್ರೀಂ

ಚಂಡಮಾರುತ: ತಮಿಳುನಾಡಿನಲ್ಲಿ ಭಾರಿ ಮಳೆ ಸಾಧ್ಯತೆ

ಚೆನ್ನೈ (ಪಿಟಿಐ): ಬಂಗಾಳ ಕೊಲ್ಲಿಯಲ್ಲಿ 'ಮಾಂಡೌಸ್' ಚಂಡಮಾರುತ ರೂಪುಗೊಂಡಿರುವ ಪರಿಣಾಮ ತಮಿಳುನಾಡಿನ ವಿವಿಧೆಡೆ ಭಾರಿ ಮಳೆ ಸುರಿಯುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಗುರುವಾರ ಮುನ್ಸೂಚನೆ ನೀಡಿದೆ.

ಚಂಡಮಾರುತವು ಡಿಸೆಂಬರ್ 9ರಂದು ರಾತ್ರಿ ಪುದುಚೇರಿ ಮತ್ತು ಆಂಧ್ರಪ್ರದೇಶದ ಶ್ರೀಹರಿಕೋಟಾದ ತೀರ ಪ್ರದೇಶಗಳನ್ನು ಹಾದುಹೋಗಲಿದೆ ಎಂದೂ ಹೇಳಿದೆ.

ಆಂಧ್ರದಲ್ಲೂ ಮುನ್ನೆಚ್ಚರಿಕೆ: ಚಂಡಮಾರುತ ಅಪ್ಪಳಿಸುವ ಸಾಧ್ಯತೆ ಇರುವುದರಿಂದ ಮುಂಜಾಗ್ರತೆ ವಹಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆಂಧ್ರಪ್ರದೇಶದ ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಸೂಚನೆ ನೀಡಿದ್ದಾರೆ.

ಅವರು ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಬಡ್ಡಿ: ಪ್ಲೇ ಆಫ್‌ಗೆ ದಬಾಂಗ್ ಅರ್ಹತೆ

ಹೈದರಾಬಾದ್ (ಪಿಟಿಐ): ನವೀನ್ ಕುಮಾರ್ ಅವರ ಸೊಗಸಾದ ಆಟದ ನೆರವಿನಿಂದ ದಬಾಂಗ್ ಡೆಲ್ಲಿ ತಂಡ ಪ್ರೊ ಕಬಡ್ಡಿ ಲೀಗ್‌ನಲ್ಲಿ 'ಪ್ಲೇ ಆಫ್'ಗೆ ಪ್ರವೇಶಿಸಿತು.

ದಬಾಂಗ್ ತಂಡ ಪ್ಲೇ ಆಫ್‌ಗೆ ಅರ್ಹತೆ ಪಡೆಯಬೇಕಾದರೆ ಕೊನೆಯ ಲೀಗ್ ಪಂದ್ಯದಲ್ಲಿ ಗೆಲುವು ಅಥವಾ 'ಟೈ' ಸಾಧಿಸಬೇಕಿತ್ತು. ಗಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಡೆಲ್ಲಿಯ ತಂಡ ಬೆಂಗಾಲ್ ವಾರಿಯರ್ಸ್ ಜತೆ 46-46 ರಲ್ಲಿ 'ಟೈ' ಮಾಡಿಕೊಂಡಿತು. ಈ ಮೂಲಕ ಒಟ್ಟು 66 ಪಾಯಿಂಟ್ಸ್‌ಗಳೊಂದಿಗೆ ಆರನೇ ತಂಡವಾಗಿ 'ಪ್ಲೇ ಆಫ್' ಪ್ರವೇಶಿಸಿತು.

16 ಪಾಯಿಂಟ್ಸ್ ಗಳಿಸಿದ ನವೀನ್ ಅವರು ದಬಾಂಗ್ ತಂಡದ ನೆರವಿಗೆ ನಿಂತರು. ವಾರಿಯರ್ಸ್ ತಂಡದ ಮಣಿಂದರ್ ಸಿಂಗ್ 18 ಪಾಯಿಂಟ್ಸ್ ತಂದಿತ್ತರು. ದಿನದ ಮತ್ತೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡ 50-33 ರಲ್ಲಿ ತೆಲುಗು ಟೈಟನ್ಸ್ ತಂಡವನ್ನು ಮಣಿಸಿತು.

ಇಂದಿನ ಪಂದ್ಯಗಳು

ಗುಜರಾತ್ ಜೈಂಟ್ಸ್– ಪ್ಯಾಂಥರ್ಸ್

ಪುಣೇರಿ ಪಲ್ಟನ್– ಯು.ಪಿ. ಯೋಧಾಸ್

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಜೈಪುರ	21	15	6	0	79
ಪುಣೇರಿ	21	14	5	2	79
ಬೆಂಗಳೂರು	21	13	7	1	73
ಯುಪಿ	21	11	8	2	66
ತಲೈವಾಸ್	21	10	7	4	66
ಡೆಲ್ಲಿ	22	10	10	2	63

ಭಾರತಕ್ಕೆ ಆಸ್ಟ್ರೇಲಿಯಾ ಸವಾಲು

ಮಹಿಳಾ ಕ್ರಿಕೆಟ್ ಸರಣಿ ಇಂದಿನಿಂದ: ವಿಶ್ವಕಪ್ ಟೂರ್ನಿಗೆ ಪೂರ್ವಾಭ್ಯಾಸ

ನವೀ ಮುಂಬೈ (ಪಿಟಿಐ): ಎರಡು ತಿಂಗಳುಗಳ ನಂತರ ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಗಾಗಿ ಭಾರತ ಮಹಿಳಾ ತಂಡಕ್ಕೆ ಶುಕ್ರವಾರ ಆರಂಭವಾಗಲಿರುವ ಆಸ್ಟ್ರೇಲಿಯಾ ಎದುರಿನ ಸರಣಿ ಪೂರ್ವಾಭ್ಯಾಸದ ವೇದಿಕೆಯಾಗಲಿದೆ.

ಐದು ಪಂದ್ಯಗಳ ಸರಣಿಯ ಮೊದಲ ಹಣಾಹಣಿಯು ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ನಡೆಯಲಿದೆ. ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡವು ಅಲೀಸಾ ಹೀಲಿ ಬಳಗದ ಎದುರು ಆಡಲಿದೆ. ಮೂರು ದಿನಗಳ ಹಿಂದಷ್ಟೇ ಭಾರತ ತಂಡದ ಮುಖ್ಯ ಕೋಚ್ ರಮೇಶ್ ಪೊವಾರ್ ಅವರನ್ನು ಎನ್‌ಸಿಎಗೆ ಬೌಲಿಂಗ್ ಕೋಚ್ ಆಗಿ ವರ್ಗಾವಣೆ ಮಾಡಲಾಗಿತ್ತು.

ಅವರನ್ನು ಏಕಾಏಕಿ ತಂಡದ ಕೋಚ್ ಹುದ್ದೆಯಿಂದ ಕೆಳಗಿಳಿಸಿದ ಕಾರಣ ಇನ್ನೂ ಬಹಿರಂಗವಾಗಿಲ್ಲ. ಮಾಜಿ ಕ್ರಿಕೆಟಿಗ ಹೃಷಿಕೇಶ್ ಕಾನಿಟ್ಕರ್ ಬ್ಯಾಟಿಂಗ್ ಕೋಚ್ ಆಟಗಾರ್ತಿಯರಿಗೆ ಮಾರ್ಗದರ್ಶನ ನೀಡಲಿದ್ದಾರೆ.

ಕಳೆದ ಅಕ್ಟೋಬರ್‌ನಲ್ಲಿ ಭಾರತ ತಂಡವು ಏಷ್ಯಾ ಕಪ್ ಗೆದ್ದಿತ್ತು. ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ಅವರು ಉತ್ತಮ ಆರಂಭ ನೀಡುವ ನಿರೀಕ್ಷೆ ಇದೆ. ಮುಂದಿನ ತಿಂಗಳು ನಡೆಯಲಿರುವ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ಶಫಾಲಿ ಭಾರತ ತಂಡದ ನಾಯಕಿಯಾಗಿದ್ದಾರೆ.

ಜೆಮಿಮಾ ರಾಡ್ರಿಗಸ್, ಹರ್ಲೀನ್ ಡಿಯೊಲ್ ಮತ್ತು ಯಷ್ಟಿಕಾ ಭಾಟಿಯಾ ಉತ್ತಮ ಲಯದಲ್ಲಿದ್ದಾರೆ. ಆಲ್‌ರೌಂಡರ್ ದೇವಿಕಾ ವೈದ್ಯ, ಮತ್ತು ಸ್ಪಿನ್ನರ್ ರಾಜೇಶ್ವರಿ ಗಾಯಕವಾಡ ಅವರ ಮೇಲೆ ಅಪಾರ ನಿರೀಕ್ಷೆ ಇದೆ.

ಆಸ್ಟ್ರೇಲಿಯಾ ತಂಡದ ನಾಯಕಿ ಅಲೀಸಾ ಹೀಲಿ ಮತ್ತು ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಟ್ರೋಫಿ ಪ್ರದರ್ಶಿಸಿದರು –ಎಎಫ್‌ಪಿ ಚಿತ್ರ

ತಂಡಗಳು: ಭಾರತ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಶಫಾಲಿ ವರ್ಮಾ, ಯಷ್ಟಿಕಾ ಭಾಟಿಯಾ, ಜೆಮಿಮಾ ರಾಡ್ರಿಗಸ್, ದೀಪ್ತಿ ಶರ್ಮಾ, ರಾಧಾ ಯಾದವ್, ರಾಜೇಶ್ವರಿ ಗಾಯಕವಾಡ, ರೇಣುಕಾ ಸಿಂಗ್ ಠಾಕೂರ್, ಮೇಘನಾ ಸಿಂಗ್, ಅಂಜಲಿ ಸರವಣಿ, ದೇವಿಕಾ ವೈದ್ಯ, ಎಸ್. ಮೇಘನಾ, ರಿಚಾ ಘೋಷ್, ಹರ್ಲೀನ್ ಡಿಯೊಲ್.

ಆಸ್ಟ್ರೇಲಿಯಾ: ಅಲೀಸಾ ಹೀಲಿ (ನಾಯಕಿ), ತಹಲಿಯಾ ಮೆಕ್‌ಗ್ರಾ (ಉಪನಾಯಕಿ), ಡಾರ್ಸಿ ಬ್ರೌನ್, ನಿಕೊಲಾ ಕ್ಯಾರಿ, ಆ್ಯಷ್ಲೆ ಗಾರ್ಡನರ್, ಕಿಮ್ ಗಾರ್ಥ್, ಹೀತರ್ ಗ್ರಹಾಂ, ಗ್ರೇಸ್ ಹ್ಯಾರಿಸ್, ಜೆಸ್ ಜಾನ್ಸನ್, ಅಲನಾ ಕಿಂಗ್, ಫೊಬೆ ಲಿಚ್‌ಫೀಲ್ಡ್, ಬೆತ್ ಮೂನಿ, ಎಲ್ಲೈಸ್ ಪೆರಿ, ಮೆಘನ್ ಶುಟ್, ಅನಾಬೆಲ್ ಸದರ್ಲೆಂಡ್

ಪಂದ್ಯ ಆರಂಭ: ಸಂಜೆ 7

ಬಾಂಗ್ಲಾದೇಶ ಎದುರು ಭಾರತದ ಸೋಲು; ಟೀಕೆ

ಹಳೆ ಶೈಲಿಯ ಆಟ ಬಿಡಿ: ವೆಂಕಿ

ನವದೆಹಲಿ (ಪಿಟಿಐ): ಬಾಂಗ್ಲಾದೇಶದ ಎದುರು ಏಕದಿನ ಕ್ರಿಕೆಟ್ ಸರಣಿಯನ್ನು ಸೋತಿರುವ ಭಾರತ ತಂಡವನ್ನು ಮಾಜಿ ಕ್ರಿಕೆಟಿಗರು ಟೀಕಿಸಿದ್ದಾರೆ.

'ಭಾರತ ತಂಡವು ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ದಶಕದಷ್ಟು ಹಳೆಯ ಶೈಲಿಯಲ್ಲಿಯೇ ಆಡುತ್ತಿದೆ. 2015ರಲ್ಲಿ ಇಂಗ್ಲೆಂಡ್ ತಂಡವು ವಿಶ್ವಕಪ್ ಟೂರ್ನಿಯ ಮೊದಲ ಸುತ್ತಿನಲ್ಲಿ ನಿರ್ಗಮಿಸಿತ್ತು. ಅದರ ನಂತರ ಹಲವಾರು ಕಠಿಣ ನಿರ್ಣಯಗಳನ್ನು ಕೈಗೊಂಡು ತಂಡವನ್ನು ಸುಧಾರಣೆ ಮಾಡಿತು. ಅಂತಹ ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವ ತುರ್ತು ಈಗ ಭಾರತಕ್ಕಿದೆ' ಎಂದು ಮಾಜಿ ಆಟಗಾರ ವೆಂಕಟೇಶ್ ಪ್ರಸಾದ್ ಹೇಳಿದ್ದಾರೆ.

ವೆಂಕಟೇಶ ಪ್ರಸಾದ್

ಸರಣಿ ಟ್ವೀಟ್ ಮಾಡಿರುವ ಅವರು, 'ಐಪಿಎಲ್ ಶುರುವಾದ ನಂತರ ಭಾರತವು ಟಿ20 ವಿಶ್ವಕಪ್ ಗೆದ್ದಿಲ್ಲ. ಕಳೆದ ಐದು ವರ್ಷಗಳಲ್ಲಿ ಏಕದಿನ ಮಾದರಿಯಲ್ಲಿಯೂ ಉತ್ತಮವಾಗಿ ಆಡುತ್ತಿಲ್ಲ. ಕೆಲವು ದ್ವಿಪಕ್ಷೀಯ ಸರಣಿಗಳಲ್ಲಿ ಗೆಲುವು ಸಾಧಿಸಿದೆ. ತಪ್ಪುಗಳಿಂದ ಪಾಠ ಕಲಿಯುತ್ತಿಲ್ಲ. ಲೋಪಗಳು ಪುನರಾವರ್ತನೆಯಾಗುತ್ತಿವೆ. ಬದಲಾವಣೆ ಬೇಕಿದೆ' ಎಂದಿದ್ದಾರೆ.

ಮಾಜಿ ಬ್ಯಾಟರ್ ವೀರೇಂದ್ರ ಸೆಹ್ವಾಗ್, 'ಕ್ರಿಪ್ಟೊ ಕರೆನ್ಸಿಗಿಂತಲೂ ವೇಗವಾಗಿ ಭಾರತ ಕ್ರಿಕೆಟ್ ತಂಡದ ಗುಣಮಟ್ಟ ಕುಸಿಯುತ್ತಿದೆ. ರೋಹಿತ್ ಶರ್ಮಾ ಮತ್ತು ಬಳಗವೇ ಎಚ್ಚೆತ್ತುಕೊಳ್ಳಿ' ಎಂದು ಟ್ವೀಟ್‌ನಲ್ಲಿ ಕುಟುಕಿದ್ದಾರೆ.

ಭಾರತದ ಏಕದಿನ ಕ್ರಿಕೆಟ್ ತಂಡವು ಈಚೆಗೆ ನ್ಯೂಜಿಲೆಂಡ್‌ನಲ್ಲಿಯೂ 0–1ರಿಂದ ಸರಣಿ ಸೋತಿತ್ತು. ಇದೀಗ ಬಾಂಗ್ಲಾದಲ್ಲಿ ಮೂರು ಪಂದ್ಯಗಳ ಸರಣಿಯ ಮೊದಲೆರಡೂ ಪಂದ್ಯಗಳಲ್ಲಿ ಪರಾಭವಗೊಂಡಿದೆ.

ಕ್ರೀಡಾಪಟುಗಳಿಗೆ ನೇರ ನೇಮಕಾತಿ: ಸಂಪುಟ ಅಸ್ತು

ಬೆಂಗಳೂರು: ಕ್ರೀಡಾ ಪಟುಗಳಿಗೆ ನೇರ ನೇಮಕಾತಿ ಮೂಲಕ ಸರ್ಕಾರಿ ಉದ್ಯೋಗ ನೀಡುವ ಪ್ರಸ್ತಾವನೆಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಪದಕ ವಿಜೇತ ಕ್ರೀಡಾಪಟುಗಳು ನಿರ್ದಿಷ್ಟ ಹುದ್ದೆಗೆ ಅಗತ್ಯವಿರುವ ಶಿಕ್ಷಣ ಅರ್ಹತೆಯನ್ನು ಪಡೆದಿರಬೇಕು. ಆದರೆ, ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುತ್ತದೆ. ಉಪವಿಭಾಗಾಧಿಕಾರಿ, ಸಹಾಯಕ ಆಯುಕ್ತರ ಹುದ್ದೆಗಳು ಸೇರಿ 9 ಇಲಾಖೆಗಳಲ್ಲಿ ತಲಾ 5 ರಂತೆ 45 ಗ್ರೂಪ್ ಎ ಹುದ್ದೆಗಳು, ತಹಶೀಲ್ದಾರ್ ಸೇರಿ 15 ಇಲಾಖೆಗಳಲ್ಲಿ 150 ಗ್ರೂಪ್ ಬಿ ವೃಂದದ ಹುದ್ದೆಗಳನ್ನು ಕಾಯ್ದಿರಿಸಲಾಗಿದೆ. ಕ್ರೀಡಾ ಇಲಾಖೆ ಹೆಚ್ಚುವರಿ ಮುಖ್ಯ-ಕಾರ್ಯದರ್ಶಿಗಳ ನೇತೃತ್ವದ ಆಯ್ಕೆ ಸಮಿತಿ ಮೂಲಕ ಕ್ರೀಡಾಪಟುಗಳಿಗೆ ನೇರ ನೇಮಕಾತಿ ಮಾಡಲಾಗುವುದು ಎಂದು ಕ್ರೀಡಾ ಸಚಿವ ನಾರಾಯಣಗೌಡ ತಿಳಿಸಿದ್ದಾರೆ.

ಫೆಬ್ರುವರಿಯಲ್ಲಿ ಬಾರ್ಡರ್–ಗಾವಸ್ಕರ್ ಟೆಸ್ಟ್ ಸರಣಿ

ನವದೆಹಲಿ (ಪಿಟಿಐ): ಮುಂದಿನ ವರ್ಷದ ಫೆಬ್ರುವರಿ ಮತ್ತು ಮಾರ್ಚ್‌ನಲ್ಲಿ ಭಾರತ ತಂಡವು ಆಸ್ಟ್ರೇಲಿಯಾ ಎದುರಿನ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಗೆ ಆತಿಥ್ಯ ವಹಿಸಲಿದೆ.

ಸರಣಿಯಲ್ಲಿ ನಾಲ್ಕು ಪಂದ್ಯಗಳು ನಡೆಯಲಿವೆ. ಮೊದಲ ಪಂದ್ಯವು ಫೆಬ್ರುವರಿ 9ರಿಂದ 13ರವರೆಗೆ ನಾಗಪುರದಲ್ಲಿ ಆಯೋಜನೆಗೊಳ್ಳಲಿದೆ. ಉಳಿದ ಪಂದ್ಯಗಳು ನವದೆಹಲಿ (ಫೆ 17-21), ಧರ್ಮಶಾಲಾ (ಮಾ 1-5) ಹಾಗೂ ಅಹಮದಾಬಾದ್ (ಮಾ 9-13) ನಗರಗಳಲ್ಲಿ ನಡೆಯಲಿವೆ. ಆಸ್ಟ್ರೇಲಿಯಾ ಎದುರಿನ ಏಕದಿನ ಸರಣಿಯ ಪಂದ್ಯಗಳು ಮುಂಬೈ (ಮಾ 17), ವಿಶಾಖಪಟ್ಟಣ (ಮಾ 19) ಮತ್ತು ಚೆನ್ನೈನಲ್ಲಿ (ಮಾ 22) ನಡೆಯಲಿವೆ.

ಜನವರಿಯಲ್ಲಿ ಶ್ರೀಲಂಕಾ ತಂಡದ ಎದುರಿನ ಟಿ20 ಹಾಗೂ ಏಕದಿನ ಸರಣಿಗೂ ಭಾರತ ಆತಿಥ್ಯ ವಹಿಸಲಿದೆ. ಮೂರು ಟಿ20 ಪಂದ್ಯಗಳು ಮುಂಬೈ (ಜ. 3), ಪುಣೆ (ಜ. 5) ಮತ್ತು ರಾಜಕೋಟ್ (ಜ.7) ನಲ್ಲಿ ನಡೆಯಲಿವೆ. ಏಕದಿನ ಪಂದ್ಯಗಳು ಗುವಾಹಟಿ (ಜ. 10), ಕೋಲ್ಕತ್ತ (ಜ. 12) ಮತ್ತು ತಿರುವನಂತಪುರಂ (ಜ. 15) ನಗರಗಳಲ್ಲಿ ನಡೆಯಲಿವೆ.

ನಂತರ ಭಾರತ ಪ್ರವಾಸ ಕೈಗೊಳ್ಳಲಿರುವ ನ್ಯೂಜಿಲೆಂಡ್ ತಂಡದ ಎದುರಿನ ಏಕದಿನ ಸರಣಿಯ ಪಂದ್ಯಗಳು ಹೈದರಾಬಾದ್ (ಜ. 18), ರಾಯಪುರ್ (ಜ. 21) ಮತ್ತು ಇಂದೋರ್ (ಜ.24) ಹಾಗೂ ಟಿ20 ಪಂದ್ಯಗಳು ರಾಂಚಿ (ಜ. 27), ಲಖನೌ (ಜ. 29) ಹಾಗೂ ಅಹಮದಾಬಾದ್ (ಫೆ.1) ನಗರಗಳಲ್ಲಿ ನಡೆಯಲಿವೆ ಎಂದು ಬಿಸಿಸಿಐ ಗುರುವಾರ ಪ್ರಕಟಿಸಿದೆ.

ಶಾರ್ಟ್‌ಕೋರ್ಸ್ ಈಜು: ಧ್ಯಾನ್, ಅದಿತಿ ಮಿಂಚು

ಮಂಡ್ಯ: ಬೆಂಗಳೂರಿನ ಗ್ಲೋಬಲ್ ಈಜು ಕೇಂದ್ರದ ಎಂ. ಧ್ಯಾನ್ ಮತ್ತು ಬಸವನಗುಡಿ ಈಜುಕೇಂದ್ರದ ಅದಿತಿ ಎನ್. ಮೂಲ್ಯಾ ಅವರು ಇಲ್ಲಿ ನಡೆಯುತ್ತಿರುವ ರಾಜ್ಯ ಶಾರ್ಟ್‌ಕೋರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕ ಹಾಗೂ ಮಹಿಳೆಯರ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದರು.

ಪಿ.ಇ.ಟಿ ಈಜುಕೇಂದ್ರದಲ್ಲಿ ಗುರುವಾರ ನಡೆದ ಸ್ಪರ್ಧೆಗಳ ಬಾಲಕರ ಮೊದಲ ಗುಂಪಿನ 100 ಮೀ ಬ್ಯಾಕ್‌ಸ್ಟ್ರೋಕ್ ಹಾಗೂ 50 ಮೀ ಬಟರ್‌ಫ್ಲೈ ವಿಭಾಗಗಳಲ್ಲಿ ಪ್ರಥಮ ಸ್ಥಾನ ಗಳಿಸಿದರು.

ಮಹಿಳೆಯರ 800 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಬಸವನಗುಡಿ ಈಜುಕೇಂದ್ರದ ಅದಿತಿ ಎನ್. ಮೂಲ್ಯಾ ಚಿನ್ನದ ಗಳಿಸಿದರು.

ಬೆಳಗಾವಿಯ ಸ್ವಿಮ್ಮರ್ಸ್ ಕ್ಲಬ್‌ನ ಅಮನ್ ಸುಣಗಾರ ಅವರು ಬಾಲಕರ 100 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಚಿನ್ನ ಜಯಿಸಿದರು.

ಫಲಿತಾಂಶಗಳು: ಪುರುಷರು: 25 ಮೀ ಫ್ರೀಸ್ಟೈಲ್: ಆದಿತ್ಯ ಭಂಡಾರಿ (ಬಸವನಗುಡಿ; 11.45ಸೆ)–1, ಮ್ಯಾಥ್ಯೂಸ್ ಕೋಶಿ (ಗ್ಲೋಬಲ್ ಸ್ವಿಮ್ ಸೆಂಟರ್)–2, ಎಸ್.ಎಸ್. ಪೃಥ್ವಿ ಗೌಡ (ಪಿಇಟಿ ಅಕ್ವೆಟಿಕ್ ಸೆಂಟರ್)–3

100 ಮೀ ಬ್ಯಾಕ್‌ಸ್ಟ್ರೋಕ್: ಬಿ. ಮನೋಜ್ ನಾಯಕ (ಬಸವನಗುಡಿ; 1ನಿ,2.73ಸೆ)–1, ಸ್ವರೂಪ್ ಸತೀಶ್ ಧನುಂಚೆ (ಬಸವನಗುಡಿ)–2, ಎಸ್. ಶಶಿಕಿರಣ (ಸೌಂದರ್ಯ ಎಸಿ)–3.

50 ಮೀ ಬಟರ್‌ಫ್ಲೈ: ಆದಿತ್ಯ ಭಂಡಾರಿ (ಬಸವನಗುಡಿ;26.84ಸೆ)–1, ಮ್ಯಾಥ್ಯೂಸ್ ಕೋಶಿ (ಗ್ಲೋಬಲ್ -ಗೆಸ್ಟ್)–2, ಎಂ.ಎಲ್. ಉದಯ್ (ಪಿಇಟಿ)–3.

ಬಾಲಕರು: ಮೊದಲ ಗುಂಪು: 100 ಮೀ ಬ್ಯಾಕ್‌ಸ್ಟ್ರೋಕ್: ಎಂ. ಧ್ಯಾನ್ (ಗ್ಲೋಬಲ್; 58.26ಸೆ)–1, ಆಕಾಶ್ ಮಣಿ (ಬಸವನಗುಡಿ)–2, ಮಮನ್ ಎಂ ಚೇನಿವಾರ್ (ಪಿ.ಎಂ. ಈಜುಕೇಂದ್ರ)–3.

800 ಮೀ ಫ್ರೀಸ್ಟೈಲ್: ಪವನ್ ಧನಂಜಯ (8ನಿ, 44.54ಸೆ)–1, ಸಾಹಿಲ್ ದಲಾಲ್ –2, ನೀಲೇಶ್ ದಾಸ್ –3 (ಮೂವರೂ ಬಸವನಗುಡಿ ಈಜುಕೇಂದ್ರ).

50 ಮೀ ಬಟರ್‌ಫ್ಲೈ: ಎಂ. ಧ್ಯಾನ್ (ಗ್ಲೋಬಲ್;26.03ಸೆ)–1, ರಿಷಭ್ ಸಿಂಗ್ ಧಡ್ವಾಲ್ (ಡಾಲ್ಫಿನ್)–2, ಎ. ಸ್ವಯಂ (ಬಸವನಗುಡಿ)–3.

200 ಮೀ ಬ್ರೆಸ್ಟ್‌ಸ್ಟ್ರೋಕ್: ಒ.ಆರ್. ಸೂರ್ಯ ಜೋಯಪ್ಪ (ಬಸವನಗುಡಿ; 2ನಿ,26.50ಸೆ)–1, ಸುಯೋಗ ಎಲ್ ಗೌಡ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–2, ಅಭಿಷೇಕ್ ಕನೂಜಿಯಾ (ಬಿಎಸ್‌ಸಿ ಎಂಇಜಿ)–3

ಎರಡನೇ ಗುಂಪು: 800 ಮೀ ಫ್ರೀಸ್ಟೈಲ್: ರೇಣುಕಾಚಾರ್ಯ ಹೊದ್ಮನಿ (ಬಸವನಗುಡಿ; 9ನಿ,1.06ಸೆ)–1, ಎಸ್. ದಕ್ಷಣ್ (ಬಸವನಗುಡಿ)–2, ಆಯುಷ್ ಕಣ್ಣನ್ ದತ್ತಾ (ಡಾಲ್ಫಿನ್)–3.

100 ಮೀ ಬ್ಯಾಕ್‌ಸ್ಟ್ರೋಕ್: ಅಮನ್ ಸುಣಗಾರ (ಸ್ವಿಮ್ಮರ್ಸ್ ಕ್ಲಬ್ ಬೆಳಗಾವಿ; 1ನಿ,01.02ಸೆ)–1, ರಾಘವ ಸ್ವಚ್ಛಂದಮ್ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–2, ಜೆ.ಟಿ. ಸೂರ್ಯ (ಬಸವನಗುಡಿ)–3

50 ಮೀ ಬಟರ್‌ಫ್ಲೈ: ಹರಿಕಾರ್ತಿಕ್ ವೇಲು (ಗೋಲ್ಡನ್ ಫಿನ್ಸ್; 28.11ಸೆ)–1, ಅಮನ್ ಸುಣಗಾರ (ಸ್ವಿಮ್ಮರ್ಸ್ ಕ್ಲಬ್, ಬೆಳಗಾವಿ)–2, ಅಕ್ಷತ್ ಠಾಕೂರಿಯಾ (ಡಾಲ್ಫಿನ್)–3.

200 ಮೀ ಬ್ರೆಸ್ಟ್‌ಸ್ಟ್ರೋಕ್: ದಕ್ಷ್ ಮಟ್ಟಾ (ಬಸವನಗುಡಿ; 2ನಿ,36.09ಸೆ)–1, ರಾಘವ್ ಸ್ವಚ್ಛಂದಮ್ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–2, ಅನ್ಷುಲ್ ಕುಮಾರ್ ನಿಶಾದ್ (ಬಿಎಸ್‌ಸಿ ಎಂಇಜಿ)–3

ಮೂರನೇ ಗುಂಪು:25 ಮೀ ಫ್ರೀಸ್ಟೈಲ್: ಕೃಷ್ಣ ನಂದಕುಮಾರ್ (ಪಿ.ಎಂ. ಈಜು ಕೇಂದ್ರ; 13.89ಸೆ)–1, ಎಸ್. ಕ್ರಿಷ್ (ಬಸವನಗುಡಿ)–2, ಜೆ. ಅರವ್ (ಬಸವನಗುಡಿ)–3.

100 ಮೀ ಬ್ಯಾಕ್‌ಸ್ಟ್ರೋಕ್: ಗಣಪತಿ ಭಾರದ್ವಾಜ್ (ಗೋಲ್ಡನ್ ಫಿನ್ಸ್; 1ನಿ,15.14ಸೆ)–1, ವಿ.ಎಂ. ಅದ್ವೈತ (ಬಸವನಗುಡಿ)–2, ಜೆ. ಅರವ್ (ಬಸವನಗುಡಿ)–3.

50 ಮೀ ಬಟರ್‌ಫ್ಲೈ:ಕೃಷ್ಣ ನಂದಕುಮಾರ್ (ಪಿ.ಎಂ. ಸ್ವಿಮ್ಮಿಂಗ್ ಸೆಂಟರ್; 32.05ಸೆ)–1, ದರ್ಶವೀರ್ ಸಿಂಗ್ ಜಬ್ಬಿ (ಡಾಲ್ಫಿನ್)–2, ಸುಬ್ರಹ್ಮಣ್ಯ ಜೀವಾಂಶ ಮಂಜುನಾಥ (ಡಾಲ್ಫಿನ್)–3

ಮಹಿಳೆಯರು:ಮೊದಲ ಗುಂಪು: 800 ಮೀ ಫ್ರೀಸ್ಟೈಲ್: ಅದಿತಿ ಎನ್ ಮೂಲ್ಯಾ (ಬಸವನಗುಡಿ; 9ನಿ, 40.67ಸೆ)–1, ಎಂ.ವಿ. ರಿಷಿಕಾ (ಸೌಂದರ್ಯ ಎಸಿ)–2, ಸಿಂಥಿಯಾ ಚೌಧರಿ (ಬಸವನಗುಡಿ)–3.

25 ಮೀ ಫ್ರೀಸ್ಟೈಲ್: ಝುರಾ ಇವಾ ವಿಲಿಯಮ್ಸ್ (ಡಾಲ್ಫಿನ್; 14.68ಸೆ)–1

100 ಮೀ ಬ್ಯಾಕ್‌ಸ್ಟ್ರೋಕ್: ಆರುಷಿ ಅಗರವಾಲ್ (ಡಾಲ್ಫಿನ್; 1ನಿ,06.19ಸೆ)–1, ನೈಷಾ ಶೆಟ್ಟಿ (ಡಾಲ್ಫಿನ್)–2, ಆಶ್ನಾ ಎ ಮಟ್ಟೂರ್ (ಬಸವನಗುಡಿ)–3.

200 ಮೀ ಬ್ರೆಸ್ಟ್‌ಸ್ಟ್ರೋಕ್: ಅನ್ನು ದೇಶಪಾಂಡೆ (ಡಾಲ್ಫಿನ್; 2ನಿ,50.56ಸೆ)–1, ವಿ. ಹಿತೈಷಿ (ವಿಜಯನಗರ ಎಸಿ)–2, ಮೇಘಾಂಜಲಿ (ಗ್ಲೋಬಲ್)–3.

4X50 ಮೀ ಫ್ರೀಸ್ಟೈಲ್: ತಂಡ ಎ (ಡಾಲ್ಫಿನ್; ನೂತನ ದಾಖಲೆ 1ನಿ,55.03ಸೆ).ಬಿಎಸಿ ಬಾಲಕಿಯರು ಎ (ಬಸವನಗುಡಿ)–2, ತಂಡ ಬಿ (ಡಾಲ್ಫಿನ್)–3.

ಬಾಲಕಿಯರು: ಮೊದಲ ಗುಂಪು: 50 ಮೀ ಬಟರ್‌ಫ್ಲೈ: ನೈಶಾ ಶೆಟ್ಟಿ (ಡಾಲ್ಫಿನ್; 30.14ಸೆ)–1, ಅವನಿ ವಿಶ್ವಾಸ್ (ಬಸವನಗುಡಿ)–2, ಕೆ.ಅರ್. ಧ್ರುತಿ (ಗ್ಲೋಬಲ್)–3.

ಎರಡನೇ ಗುಂಪು: 800 ಮೀ ಫ್ರೀಸ್ಟೈಲ್: ಶ್ರೀಚಾರಣಿ ತುಮು (ಗ್ಲೋಬಲ್ ಸ್ವಿಮ್ ಸೆಂಟರ್; 9ನಿ,42.49ಸೆ)–1, ಸಬಾ ಸುಹಾನಾ (ಡಾಲ್ಫಿನ್)–2, ಆಸರಾ ಸುಧೀರ್ (ಬಸವನಗುಡಿ)–3.

100 ಮೀ ಬ್ಯಾಕ್‌ಸ್ಟ್ರೋಕ್: ನೈಶಾ (1ನಿ,8.89ಸೆ)–1, ಎಂ.ಎನ್. ತಾನ್ಯಾ –2, ನಕ್ಷತ್ರ ಗೌತಮ್ –3 (ಮೂವರೂ ಬಸವನಗುಡಿ ಈಜುಕೇಂದ್ರ)

50 ಮೀ ಬಟರ್‌ಫ್ಲೈ: ಸುಹಾಸಿನಿ ಘೋಷ್ (ಡಾಲ್ಫಿನ್; 30.03ಸೆ)–1, ಮೊನ್ಯಾ ಕೌಸುಮಿ ಕೆ. (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–2, ತನೀಷಾ ವಿನಯ್ (ಬಸವನಗುಡಿ)–3.

200 ಮೀ ಬ್ರೆಸ್ಟ್‌ಸ್ಟ್ರೋಕ್: ಎಸ್. ತಾನ್ಯಾ (ಡಾಲ್ಫಿನ್; 2ನಿ,46.42ಸೆ)–1, ರಿಯಾನಾ ಧ್ರುತಿ ಫರ್ನಾಂಡಿಸ್ (ಡಾಲ್ಫಿನ್)–2, ಜಗಶ್ರೀ ಪೂಜಾ (ಬಸವನಗುಡಿ)–3.

4X50 ಫ್ರೀಸ್ಟೈಲ್: ತಂಡ ಎ (ಡಾಲ್ಫಿನ್; 1ನಿ,56.84ಸೆ)–1, ಬಿಎಸಿ ಎ (ಬಸವನಗುಡಿ)–2, ಬಿಎಸಿ ಬಿ (ಬಸವನಗುಡಿ)–3.

ಮೂರನೇ ಗುಂಪು: 25 ಮೀ ಫ್ರೀಸ್ಟೈಲ್: ಮೀರಾ ನಂಬಿಯಾರ್ (ಡಾಲ್ಫಿನ್; 14.90ಸೆ)–1, ಎಂ. ನೀರ್ವಿ ಪೂಣಚ್ಚ (ಬಸವನಗುಡಿ)–2, ಧನ್ಯಾ ನಾಯಕ ನಟರಾಜ್ (ಡಿಕೆವಿಎಸಿ)–3, ಖುಶಿ ವರ್ಮನ್ (ನಿಶಾ ಮಿಲೆಟ್ಸ್ ಈಜು ಅಕಾಡೆಮಿ)–3.

100 ಮೀ ಬ್ಯಾಕ್‌ಸ್ಟ್ರೋಕ್: ಆದ್ಯಾ ನಾಯರ್ (ಡಾಲ್ಫಿನ್; 1ನಿ,19.25ಸೆ)–1, ಧ್ರುತಿ ಕರಿಬಸವೇಶ್ವರ (ಝೀ ಸ್ವಿಮ್ ಅಕಾಡೆಮಿ)–2, ಮೀರಾ ನಂಬಿಯಾರ್ (ಡಾಲ್ಫಿನ್)–3. 50 ಮೀ ಬಟರ್‌ಫ್ಲೈ: ಜನನಿ ವೆಂಕಟೇಶ್ವರ ಪೆರುಮಾಳ (ಡಾಲ್ಫಿನ್; 33.36ಸೆ)–1, ಧನ್ಯಾ ನಾಯಕ ನಟರಾಜ್ (ಡಿಕೆವಿ)–2, ದ್ವಿಶಾ ಎನ್. ಶೆಟ್ಟಿ (ಡಾಲ್ಫಿನ್)–3.

ಪ್ರಣಯ್‌ಗೆ ಸೋಲು

ಬ್ಯಾಂಕಾಕ್ (ಪಿಟಿಐ): ಭಾರತದ ಎಚ್.ಎಸ್.ಪ್ರಣಯ್ ಅವರು ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸತತ ಎರಡನೇ ಸೋಲು ಅನುಭವಿಸಿದರು. ಇದರೊಂದಿಗೆ ಸೆಮಿಫೈನಲ್ ಪ್ರವೇಶಿಸುವ ಅವಕಾಶ ಕಳೆದುಕೊಂಡರು.

ಗುರುವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ ಪ್ರಣಯ್ 21-23, 21-17, 19-21 ರಲ್ಲಿ ಚೀನಾದ ಲು ಗುವಾಂಗ್ ಜು ಕೈಯಲ್ಲಿ ಪರಾಭವಗೊಂಡರು. 30 ವರ್ಷದ ಪ್ರಣಯ್, ಮೊದಲ ಸುತ್ತಿನಲ್ಲಿ ಜಪಾನ್‌ನ ಕೊದೈ ನರವೊಕಾ ವಿರುದ್ಧ ಸೋತಿದ್ದರು.

ಶುಕ್ರವಾರ ನಡೆಯುವ 'ಎ' ಗುಂಪಿನ ಕೊನೆಯ ಪಂದ್ಯದಲ್ಲಿ ಪ್ರಣಯ್ ಅವರು ಒಲಿಂಪಿಕ್ ಚಾಂಪಿಯನ್ ಮತ್ತು ವಿಶ್ವದ ಅಗ್ರ ರ್‍ಯಾಂಕ್‌ನ ಆಟಗಾರ ವಿಕ್ಟರ್ ಅಕ್ಸೆಲ್ಸನ್ ಅವರ ಸವಾಲು ಎದುರಿಸಲಿದ್ದಾರೆ.

ಭಾರತ 'ಎ' ತಂಡಕ್ಕೆ ಗೆಲುವಿನ ವಿಶ್ವಾಸ

ಸಿಲೆಟ್ (ಪಿಟಿಐ): ಭಾರತ ಎ ತಂಡವು ಇಲ್ಲಿ ನಡೆಯುತ್ತಿರುವ ಬಾಂಗ್ಲಾ ಎ ವಿರುದ್ಧದ 'ಟೆಸ್ಟ್' ಪಂದ್ಯದಲ್ಲಿ ಇನಿಂಗ್ಸ್ ಜಯ ಸಾಧಿಸುವ ನಿರೀಕ್ಷೆಯಲ್ಲಿದೆ.

ಬ್ಯಾಟರ್‌ಗಳ ಅಮೋಘ ಬ್ಯಾಟಿಂಗ್ ಫಲವಾಗಿ ಭಾರತ ಎ ತಂಡವು ಮೊದಲ ಇನಿಂಗ್ಸ್‌ನಲ್ಲಿ 147.1 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 562 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ನಾಯಕ ಅಭಿಮನ್ಯು ಈಶ್ವರನ್ ಶತಕ, ಪೂಜಾರ, ಶ್ರೀಕರ್ ಭರತ್, ಜಯಂತ್ ಯಾದವ್, ಸೌರಭ್ ಕುಮಾರ್ ಮತ್ತು ನವದೀಪ್ ಸೈನಿ ಅವರು ಅರ್ಧಶತಕಗಳನ್ನು ಗಳಿಸಿದರು. ಇದರಿಂದಾಗಿ ತಂಡವು 310 ರನ್‌ಗಳ ಮುನ್ನಡೆ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಾಂಗ್ಲಾದೇಶ ಎ: 80.5 ಓವರ್‌ಗಳಲ್ಲಿ 252; ಭಾರತ ಎ: 147.1 ಓವರ್‌ಗಳಲ್ಲಿ 9ಕ್ಕೆ562 ಡಿಕ್ಲೇರ್ಡ್ (ಅಭಿಮನ್ಯು ಈಶ್ವರನ್ 157, ಶ್ರೀಕರ್ ಭರತ್ 77, ಜಯಂತ್ ಯಾದವ್ 83, ಸೌರಭ್ ಕುಮಾರ್ 56, ನವದೀಪ್ ಸೈನಿ 50, ಸುಮನ್ ಖಾನ್ 119ಕ್ಕೆ2,, ಮುಷ್ಫಿಕ್ ಹಸನ್ 129ಕ್ಕೆ3) ಎರಡನೇ ಇನಿಂಗ್ಸ್: ಬಾಂಗ್ಲಾದೇಶ ಎ 30 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 49